ಕಳೆದುಕೊಳ್ಳುತ್ತಿರುವುದು ನಿರುತ್ಸಾಹಕಾರಿಯಾದ ಸಂಗತಿ. ಗಂಭೀರವಾದ ಸಾಹಿತ್ಯದಲ್ಲಿ ಅತ್ಯಲ್ಪ ಸಂಖ್ಯೆಯ ವಿದ್ಯಾರ್ಥಿಗಳಿಗೆ ಆಸಕ್ತಿ ಇದೆ. ಅನಾರೋಗ್ಯಕರವಾದ ಅಗ್ಗದ ಮತ್ತು ನವನಟಿಯರ ಆರಾಧನೆಯಲ್ಲಿ ತೊಡಗಿ ದೇಶಪ್ರೇಮಿಗಳು ಮತ್ತು ಜ್ಞಾನಿಗಳ ಕಡೆ ಮನಸ್ಸು ಹೋಗುತ್ತಿಲ್ಲ. ಇದನ್ನು ನೈತಿಕ ಶಿಕ್ಷಣದ ಮೂಲಕ ಸಾಧಿಸಬೇಕು.

ಆರೋಗ್ಯ ಶಿಕ್ಷಣ :

ದೇಹದ ಆರೋಗ್ಯವು ಮಾನಸಿಕ ಆರೋಗ್ಯದಷ್ಟೇ ಮುಖ್ಯವಾದುದು. ವಿದ್ಯಾರ್ಥಿಗಳಿಗೆ ಏನನ್ನು ಯಾವಾಗ ತಿನ್ನಬೇಕು ಎನ್ನುವುದೇ ಗೊತ್ತಿಲ್ಲ.

ಒಟ್ಟಿನಲ್ಲಿ ಎಲ್ಲಾ ಅಂಶಗಳು ನೈತಿಕ ಶಿಕ್ಷಣದಲ್ಲಿ ಜಾರಿಗೊಳ್ಳಲಿ. ಹಾಗೂ ಯುವಕರೆಲ್ಲ ಈ ನಿಟ್ಟಿನಲ್ಲಿ ಕೈಜೋಡಿಸುವಂತಾಗಲಿ.

ಒಮ್ಮತದ ಬಾಳ್ವೆ

ಪ್ರಸನ್ನ ಎಸ್.
ಪ್ರಥಮ ಬಿ.ಕಾಂ.

ಪ್ರಾಚೀನ ಕಾಲದಿಂದಲೂ ವೇದ ಪವಿತ್ರವೆಂದೂ, ಗೂಢವಾದ ಜ್ಞಾನವನ್ನೊಳಗೊಂಡಿದೆಯೆಂದೂ ಅಂಗೀಕೃತವಾಗಿದೆ. ವಿಶ್ವದಲ್ಲಿಂದು ಉಪಲಬ್ಧವಾಗಿರುವ ಆಧಾರಗಳಲ್ಲೆಲ್ಲಾ ಅತ್ಯಂತ ಪ್ರಾಚೀನವಾದ ವೇದಗಳು ಪ್ರಾಧಾನ್ಯವನ್ನು ಹೊಂದಿವೆ. ವೇದ ಅಪೌರುಷೇಯ, ನಿತ್ಯ ಮತ್ತು ಪರಮಪ್ರಮಾಣ. ವೇದವಾಙ್ಮಯದಲ್ಲಿ ಅತ್ಯಂತ ಪ್ರಾಚೀನವೂ ಆದುದು ಋಗ್ವೇದ ಸಂಹಿತೆ. तत्परिचरणा वितरौ वेदौ, ಎಂಬಂತೆ ಯಜುರ್ವೇದ, ಸಾಮವೇದಗಳು ಯಾಜ್ಞಿಕವಾದ ಪ್ರಾಧಾನ್ಯ ಹೊಂದಿ ಇದಕ್ಕೆ ಉಪಕಾರಕವಾಗಿವೆ. ಭಾರತೀಯ ಸಂಸ್ಕೃತಿ, ಧರ್ಮ, ನೀತಿ ಹಾಗೂ ದರ್ಶನಗಳ ಅಂಕುರಗಳನ್ನು ಋಗ್ವೇದ ಸಂಹಿತೆಯಲ್ಲಿ ನಾವು ಕಾಣುತ್ತೇವೆ. ಇದರ ಅಧ್ಯಯನವಾಗದೆ ಹಿಂದೂ ಧರ್ಮವನ್ನು ನಿಖರವಾಗಿ ತಿಳಿಯಲು ಸಾಧ್ಯವಿಲ್ಲ. ವೇದಗಳ ಮಹತ್ತ್ವ ಎಂದಿಗೂ ಕಡಿಮೆಯಾಗದು. ಇವುಗಳ ಉಪದೇಶ ಹೊಸ ಹೊಸ ಚೈತನ್ಯವನ್ನು ತುಂಬುವಂಥದು. ಅಂತಹ ಪವಿತ್ರ ವೇದದಲ್ಲಿ ಬರುವ ಒಂದು ಸೂಕ್ತ 'ಐಕಮತ್ಯ ಸೂಕ್ತ'. ಈ ಸೂಕ್ತದಲ್ಲಿ ಮನುಷ್ಯರಾದ ನಾವೆಲ್ಲಾ ಒಗ್ಗಟ್ಟಿನಿಂದ ಬಾಳಬೇಕು ಎಂಬುದಾಗಿ ತಿಳಿಸುತ್ತದೆ. ನಡೆನುಡಿ, ಮನೋಭಾವದಲ್ಲಿ ನಾವೆಲ್ಲರೂ ಸ್ವಾರ್ಥದ ಕೊಂಕಿಲ್ಲದೆ ಕೂಡಿ ಬಾಳಬೇಕೆಂಬುದನ್ನು ಒತ್ತಿಹೇಳುತ್ತಿದೆ.

संगच्छध्वम् संवदध्वं
संवो मनांसि जानताम् ।

देवा भागं यथा पूर्वे
संजानाना उपासते ॥

संगच्छध्वं = ನೀವು ಕೂಡಿ ನಡೆಯಿರಿ; संवदध्वं= ಕೂಡಿ ನುಡಿಯಿರಿ ವಿರೋಧವಿನಿತಿಲ್ಲದೆ. वः = ನಿಮ್ಮ; मनांसि = ಮನಸ್ಸುಗಳು; संजानताम्= ಏಕರೂಪವಾಗಿ ತಿಳಿಯಲಿ; यथा = ಹೇಗೆ; पूर्वे=ಪುರಾತನವಾದ; देवाः = ದೇವತೆಗಳು; संजानाना= ಐಕಮತ್ಯದಿಂದ ಕೂಡಿ; भागं= ಹವಿರ್ಭಾಗವನ್ನು, उपासते= ಸ್ವೀಕರಿಸುವರೋ ಹಾಗೇ ನೀವು ವೈಮತ್ಯವನ್ನು ಬಿಟ್ಟು ಧನವನ್ನು ಹಂಚಿಕೊಳ್ಳಿರಿ.

ವ್ಯಕ್ತಿ ತನ್ನ ಜೀವನವನ್ನು ಹಸನಾಗಿಸಿಕೊಂಡ ಮೇಲೆ ಹೇಗೆ ಸಮಾಜದ ಕ್ಷೇಮವನ್ನೂ ನೋಡಿಕೊಳ್ಳಬೇಕೆಂಬುದನ್ನು ಈ ಮಂತ್ರ ಹೇಳುತ್ತದೆ. ನಡೆನುಡಿಗಳಲ್ಲಿಯೂ ಮನೋಭಾವದಲ್ಲಿಯೂ ಸ್ವಾರ್ಥವಿಲ್ಲದೆ ಜನರು ಏಕರೂಪವಾಗಿ ಬಾಳಬೇಕು. ಪಡೆದ ಹಣವನ್ನು ಸಮಾಜದ ಹತ್ತು ಮಂದಿಗಳೂ ಸಮನಾಗಿ ಸಕಲರಿಗೂ ಅನುಕೂಲವಾಗುವಂತೆ ವಿಭಾಗಿಸಿಕೊಳ್ಳಬೇಕು. ಸಮಾಜ, ಸಮತಾವಾದದ ಅತ್ಯುತ್ತಮವಾದ ರೂಪವನ್ನಿಲ್ಲಿ ನಾವು ಕಾಣಬಹುದು. ನಮ್ಮ ಜನ ಹೇಗೆ ಉತ್ತಮವಾದ ಆದರ್ಶಗಳನ್ನು ರೂಪಿಸಿಕೊಂಡು ಅದರಂತೆ ನಡೆದು ಸರ್ವರ ಹಿತವನ್ನೂ ಸಾಧಿಸುತ್ತಿದ್ದರೆಂಬುದಕ್ಕೆ ಇದು ಸಾಕ್ಷಿ.

ನಾವೆಲ್ಲಾ ಭಗವಂತನಿಗೆ ಸೇರಿದವರೆಂಬ ಭಾವ ಎಲ್ಲರ ಮನಸ್ಸಿನಲ್ಲಿಯೂ ಉಂಟಾಗಲು ಸಮಾಜದಲ್ಲಿ ಒಬ್ಬೊಬ್ಬನೂ ಮತ್ತೊಬ್ಬನನನ್ನು ಹಿತೈಷಿಯಂತೆ ಕಾಣುವನು; ಭಗವದಂಶವನ್ನೇ ಕಾಣುವನು. ಇಂಥ ಜನರು ಸಕಲರಿಗೂ ಅನುಕೂಳ್ಯವನ್ನಾಚರಿಸಲು ತೊಡಗುವರು. ಪರಾರ್ಥಸಾಧಕರಾಗಿ ಈ ಪುಣ್ಯವಂತರು ಸಮಾಜದ ಮಂಗಳವನ್ನನುಷ್ಠಿಸಿ ಭಗವಂತನ ಪ್ರೀತಿಗೆ ಪಾತ್ರರಾಗುವರು. ಇಂಥವರು ಹೆಚ್ಚಬೇಕು. ಆಗ ಎಲ್ಲರೂ ಸಮರಸವಾಗಿ ಬಾಳಿ, ಏಕರೂಪವಾದ ನುಡಿನಡೆಗಳಿಂದ ನಡೆದು ಈ ಲೋಕವನ್ನೇ ಪರಮಪದವನ್ನಾಗಿ ಮಾರ್ಪಡಿಸಬಹುದು.

समानो मन्त्रः समितिः समानी
समानं मनः सह चित्तमेषाम् ।

समानं मन्त्रमभि मन्त्रये वः
समानेन वो हविषा जुहोमि ॥

एषां= ಕೆಲಸದಲ್ಲಿ ಪ್ರವೃತ್ತರಾದ ಇವರ मन्त्रः = ಸ್ತುತಿಯು समानः = ಏಕವಿಧವಾಗಿ ಆಗಲಿ. समितिः = ಸಮಾಲೋಚನೆಯು समानी= ಏಕರೂಪವಾಗಿ ಆಗಲಿ. ಹಾಗೆಯೇ ಇವರ मनः =ಅಂತಃಕರಣವೂ समानं = ಏಕವಿಧವಾಗಿ

ಆಗಲಿ चित्तं= ವಿಚಾರವನ್ನು ಬೆಳೆಸುವ ಬುದ್ಧಿಯೂ सह= ಸಹಿತವಾಗಿ, ಪರಸ್ಪರ ಒಂದೇ ಬಗೆಯಾಗಿ ಆಗಲಿ. ನಾನೂ वः= ನಿಮಗಾಗಿ समानं मन्त्रं =ಏಕವಿಧವಾದ ಮಂತ್ರವನ್ನು अभिमन्त्रये= ಏಕರೂಪತೆಯಾಗಿ ಹೇಳುವೆನು. ಹಾಗೆಯೇ वः= ನಿಮಗೆ समानेन=ಸಮಾನವಾದ हविषा= ಹವಿಸ್ಸಿನಿಂದ जुहोमि= ಹೋಮ ಮಾಡುತ್ತೇನೆ.

ಜನರೆಲ್ಲರೂ ಒಮ್ಮನಸ್ಸಿನಿಂದ ಬಾಳಬೇಕೆಂದೂ, ವಿರೋಧ ಇಲ್ಲದಿರಬೇಕೆಂದೂ ಈ ಮನಸ್ಸಿದ್ಧಿ ಭಗವಂತನ ಕರುಣೆಯಿಂದ ಆಗಬೇಕೆಂದೂ ಈ ಮಂತ್ರದಲ್ಲಿಯೂ ಹೇಳಲಾಗಿದೆ.

समानी व आकूतिः

समाना हृदयानि वः ।

समानमस्तु वो मनो

यथा वः सुसहासति ॥

यथा=ಹೇಗೆ वः ನಿಮ್ಮ सुसह= ಮಂಗಳಕರವಾದ ಸಮಾಗಮವು असति= ಆಗುವುದೋ ಹಾಗೆ वः=ನಿಮ್ಮ आकूतिः= ಸಂಕಲ್ಪವು समानी= ಏಕವಿಧವಾಗಿರಲಿ. वः=ನಿಮ್ಮ हृदयानि= ಹೃದಯಗಳು समाना= ಒಂದೇ ಬಗೆಯಾಗಿರಲಿ. ಹಾಗೆಯೇ वः= ನಿಮ್ಮ मनः= ಅಂತಃಕರಣಗಳು समानमस्तु= ಏಕರೂಪವಾಗಿರಲಿ.

ವಿಶಾಲವಾದ ಈ ಪ್ರಪಂಚದಲ್ಲಿ ಯಾವುದೋ ಭಾಗ್ಯದ ಕಾರಣ, ಋಣಾನುಬಂಧದ ಕಾರಣ ಒಬ್ಬ ಜೀವನಿನ್ನೊಬ್ಬನೊಡನೆ ಕೂಡಿ ನಡೆಯುವನು. ಹೀಗೆ ಜೀವರು ಜೀವರುಗಳಿಗೆ ಯಾವುದೋ ಅಜ್ಞಾತವಾದ ನಂಟು ಒಂದುಂಟು. ಇಂತಿರಲು ನಮ್ಮಲ್ಲಿ ಯಾರೊಬ್ಬರಿಗೂ ತೊಂದರೆ ಬಾರದಂತೆ, ಅಸುಖವಾಗದಂತೆ ನಡೆದುಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ನಮ್ಮ ದೇಹದ ಯಾವ ಅಂಗಕ್ಕೆ ನೋವಾದರೂ ನಾವು ಸುಖಿಸಲಾರೆವು. ಹಾಗೆಯೇ ಅನಂತವಿಭೂತಿಗಳಿಂದ ಕೂಡಿದ ಆ ಪರಮಾತ್ಮನಿಗೆ ಎಳ್ಳಷ್ಟೂ ನೋವಾಗಂತೆ ಹೆಚ್ಚಾದ ಸಂತಸವುಂಟಾಗುವಂತೆ ನಾವು ನಡೆದುಕೊಳ್ಳಬೇಕು. ಎಂದ ಮೇಲೆ ನಮ್ಮ ಪ್ರವೃತ್ತಿ ಸಕಲ ಜನ ಹಿತಕರವಾಗಬೇಕು.

ಉಪನಿಷತ್ತು. नवा अरे पत्युःकामाय पतिः प्रियो भवति आत्मनस्तु कामाय पतिः प्रियो भवति ಎಂದು ಹೇಳುತ್ತದೆ. ಅಂದರೆ ಲೋಕದಲ್ಲಿರುವ ಸಕಲ ಚೇತನಾಚೇತನ ಪದಾರ್ಥಗಳೂ ಆ ಪರಮಾತ್ಮನ ವಸ್ತುಗಳಾದ ಕಾರಣ, ಅವುಗಳೆಲ್ಲ ನಮಗೆ ಪ್ರಿಯವಾಗಬೇಕು. ಆ ಪರಮ ಪುರುಷನನ್ನು ನಾವು ಅತ್ಯರ್ಥವಾಗಿ ಪ್ರೀತಿಸುವುದರಿಂದ ಅವನಿಗೆ ಸೇರಿದ ಸರ್ವಸ್ವವೂ ನಮಗೆ ಪ್ರಿಯವಾಗಬೇಕು. ಅದರಿಂದ ಜನತೆಯ ಮಂಗಳ ಸರ್ವರ ಗುರಿಯಾಗಬೇಕು.

'ಸುಸಹ' ಎಂಬ ಪದ ಬಹಳ ಅರ್ಥಪೂರ್ಣವಾದುದು. ನಮ್ಮಪರಸ್ಪರ ಸಂಪರ್ಕಗಳು ಉಭಯತಃ ಮಂಗಳಕರವಾಗುವಂತೆ ನಮ್ಮ ಮನಸ್ಸು, ಹೃದಯ ಮತ್ತು ಸಂಕಲ್ಪಗಳು ಒಂದಾಗಿ ಏಕರೂಪತೆಯಿಂದ ಮುಂದುವರಿಯಲಿ ಎಂಬ ಬೇಡಿಕೆ ಜಗತ್ತಿನ ಮಂಗಳಕ್ಕೆ ಆತ್ಮರುಗಳೆಲ್ಲರ ಮಂಗಳಕ್ಕೆ ಅತ್ಯಂತ ಮುಖ್ಯವಾದುದು. ಇದರಂತೆ ಜನ ಅನುಷ್ಠಾನನಿಷ್ಠರಾಗಿ ಉದ್ಧಾರವಾಗಬೇಕು.

ಸೃಷ್ಟಿ ಪ್ರಕ್ರಿಯೆ

ಅನುಶ್ರೀ ಕೆ.
ಪ್ರಥಮ ಬಿ.ಎಸ್ಸಿ.

तस्माद्वा एतस्मादात्मन आकाशः संभूतः ।
आकाशाद्वायुः । वायोरग्निः । आग्नेरापः ।
अद्भ्यः पृथिवी । पृथिव्या ओषधयः ।
ओषधीभ्योन्नम् । अन्नात् पुरुषः ॥

ಆ ಆತ್ಮನಿಂದ (ಪರಮಾತ್ಮನಿಂದ) ಮೊದಲು ಆಕಾಶದ ಉತ್ಪತ್ತಿಯಾಯಿತು. ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ಜಲವೂ, ಜಲದಿಂದ ಭೂಮಿಯೂ, ಭೂಮಿಯಿಂದ ಸಸ್ಯಗಳೂ, ಸಸ್ಯಗಳಿಂದ ಅನ್ನವೂ ಉತ್ಪನ್ನವಾದವು. ಅನ್ನದಿಂದ ಮಾನವನ ಉತ್ಪತ್ತಿಯಾಯಿತು.

ಪಂಚಭೂತಗಳ ಪ್ರಕೃತಿಯನ್ನು ಅರಿತವನು ಮೇಲೆ ಹೇಳಿದ ಕ್ರಮವನ್ನು ಪ್ರಶಂಸಿಸುತ್ತಾನೆ. ಮಹಾಭೂತವು ತನ್ನ ಹಿಂದಿನ ಮಹಾಭೂತದ ಅಂಶಗಳನ್ನೊಳಗೊಂಡಿರುವುದನ್ನು ಹೀಗೆ ಸೂಚಿಸಲಾಗಿದೆ.

ಪಂಚಮಹಾಭೂತ	ಗುಣ
ಆಕಾಶ	ಶಬ್ದ
ವಾಯು	ಶಬ್ದ+ಸ್ಪರ್ಶ
ಅಗ್ನಿ	ಶಬ್ದ+ಸ್ಪರ್ಶ+ರೂಪ
ಜಲ	ಶಬ್ದ+ಸ್ಪರ್ಶ+ರೂಪ+ರಸ
ಪೃಥಿವೀ	ಶಬ್ದ+ಸ್ಪರ್ಶ+ರೂಪ+ರಸ+ಗಂಧ

ದಶಾವತಾರಗಳು :

ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹೋಥ ವಾಮನ ।
ರಾಮೋ ರಾಮಶ್ಚ ರಾಮಶ್ಚ ಕೃಷ್ಣಃ ಕಲ್ಕೀ ಚ ತೇ ದಶ ॥

ವಿಷ್ಣುವಿನ ಹತ್ತು ಅವತಾರಗಳೆಂದರೆ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಬಲರಾಮ, ಕೃಷ್ಣ ಮತ್ತು ಕಲ್ಕಿ

ವಿಷ್ಣುವಿನ ಮೊದಲ 6 ಅವತಾರಗಳು ಮಾನವ ರೂಪದವರೆಗಿನ ಭೌತಿಕ ವಿಕಾಸವನ್ನು ಪ್ರತಿನಿಧಿಸುತ್ತವೆ.

ಮತ್ಸ್ಯ	ಜಲಚರ
ಕೂರ್ಮ	ಜಲನೆಲಗಳಲ್ಲಿರುವುದು
ಹಂದಿ	ಪ್ರಾಣಿ ಭೂಚರ
ನರಸಿಂಹ	ನರ ಮೃಗ
ವಾಮನ	ಕುಳ್ಳ

ಪರಶುರಾಮ ಪೂರ್ಣವಿಕಸಿತನಾದ ಮಾನವ

ರಾಮ, ಬಲರಾಮ, ಕೃಷ್ಣ ಮತ್ತು ಕಲ್ಕಿ ಅವತಾರಗಳು ಮಾನವನ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಕಾಸಕ್ಕೆ ಸಂಬಂಧಿಸಿದುದಾಗಿವೆ. ಈ ವಿಕಾಸಕ್ಕೆ ಅವತಾರದಲ್ಲಿ ಅವರು ಹಿಡಿದಿರುವ ಆಯುಧಗಳೇ ಸಾಕ್ಷಿಯಾಗಿದೆ.

6ನೇಯ ಅವತಾರ– ಪರಶುರಾಮ..> ಕೊಡಲಿ

ಭೌತಿಕವಾಗಿ ಸಂಪೂರ್ಣವಾಗಿ ವಿಕಾಸ ಹೊಂದಿದ್ದರೂ ಪರಶುರಾಮನು ಅವನ ಜೀವನದಲ್ಲಿ (ತನ್ನ ತಾಯಿಯ ಮರಣದಿಂದ) ಅನಿಯಂತ್ರಿತ ಕ್ರೋಧಕ್ಕೆ ವಶನಾಗಿದ್ದನು. ತನ್ನ ಇಡೀ ಜೀವಮಾನವೆಲ್ಲಾ ಕ್ಷತ್ರಿಯರಿಗೆ ಬಾಧೆ ಕೊಡುವುದರಲ್ಲೇ ಕಳೆದನು. ರೂಪದಿಂದಷ್ಟೇ ಅವನು ಮಾನವನಾಗಿದ್ದನು

7ನೇಯ ಅವತಾರ– ರಾಮ ...> ಬಿಲ್ಲು

ರಾಮನು ಪಾಶವೀ ಕಾಮನೆಗಳನ್ನು ಗೆದ್ದ, ಸಂಪೂರ್ಣವಾಗಿ ವಿಕಾಸ ಹೊಂದಿದ ಮಾನವನಾಗಿದ್ದನು.

8ನೆಯ ಅವತಾರ ಬಲರಾಮ.....> ನೇಗಿಲು...> ಕೃಷಿ

ಬಲರಾಮನ ಆಯುಧವಾದ ನೇಗಿಲು ಬೇಟೆಯಾಡಿ ಆಹಾರ ಶೇಖರಿಸುವ ಜನಜಾತಿ ವರ್ಗದಿಂದ ಕೃಷಿ ಮಾಡಿ, ಆ ಮೂಲಕ ಗಳಿಸಿಕೊಂಡ ಆಹಾರದಿಂದ ಜೀವನ ಸಾಗಿಸುವ ವರ್ಗಕ್ಕೇರಿದ ಮಾನವ ಜನಾಂಗದ ವಿಕಾಸದ ಪ್ರತೀಕವಾಗಿದೆ.

9ನೆಯ ಅವತಾರ––> ಕೃಷ್ಣ ಕೊಳಲು...> ಕಲೆ

ವ್ಯವಸ್ಥಿತವಾದ ಕೃಷಿ, ವ್ಯಾಪಾರಗಳಿಂದ ಜೀವನ ಶಾಂತಿಯುತವಾಗಿ ಸಮೃದ್ಧವಾಗಿರಲು ಸಂಗೀತ ನೃತ್ಯದಂತಹ ಕಲೆಗಳಲ್ಲಿ ರುಚಿಯುಂಟಾದುದನ್ನು ಕೃಷ್ಣನ ಕೊಳಲು ಸೂಚಿಸುತ್ತದೆ.

10ನೆಯ ಅವತಾರ ..>

ಈ ಅವತಾರವು ಮನುಕುಲವು ತನ್ನ ನಾಶವನ್ನು ತಾನೇ ತಂದುಕೊಳ್ಳಬಲ್ಲದೆಂದು ಎಚ್ಚರಿಸುತ್ತದೆ.

ಆಕರಗ್ರಂಥ : ಹೆಮ್ಮೆಯ ಭಾರತ

ವ್ಯಕ್ತಿತ್ವ

ಶ್ವೇತಾ ಕಾಮತ್
ಪ್ರಥಮ ಬಿ.ಎಸ್ಸಿ.

"ವ್ಯಕ್ತಿತ್ವ ಎಂದರೆ ವ್ಯಕ್ತಿಯ ಪೂರ್ಣ ಸ್ವಭಾವ ಅಥವಾ ಚಾರಿತ್ರ್ಯವೇ ಅವನ ವ್ಯಕ್ತಿತ್ವ. ನೀವು ಎಂತಹ ವ್ಯಕ್ತಿಯಾಗಿರುವಿರೋ ಅದು ನಿಮ್ಮ ವ್ಯಕ್ತಿತ್ವ. ನಮ್ಮ ವರ್ತನೆ ಚಿಂತನೆಗಳು ಭಾವನೆ ಇವೆಲ್ಲವೂ ನಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತವೆ. ನಮ್ಮ ವರ್ತನೆ ಭಾವನೆ ಚಿಂತನೆಗಳು ಯಾವುದೋ ಒಂದು ಪರಿಸ್ಥಿತಿಯಲ್ಲಿ ನಾವು ಹೇಗೆ ನಡೆದುಕೊಳ್ಳುತ್ತೇವೆ ಹಾಗೆಯೇ ನಮ್ಮ ಮಾನಸಿಕ ಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ. ಬಾಹ್ಯನೋಟ ಹಾಗೂ ಮಾತುಗಾರಿಕೆ ಹಾವಭಾವಗಳು ವ್ಯಕ್ತಿತ್ವದ ಹೊರಪದರ ಅಷ್ಟೇ.

ನಮಗೆ ಏನೇನೋ ಮಾಡಬೇಕೆಂಬಾಸೆ. ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕೆಂದು, ದುಶ್ಚಟಗಳನ್ನು ಬಿಡಬೇಕೆಂದು ನಿರ್ಧರಿಸುತ್ತೇವೆ. ಏಕ್ರಾಗಚಿತ್ತರಾಗಿ ಏನಾದರೂ ಮಾಡಬೇಕೆಂದೂ ಅಂದುಕೊಂಡು ಕುಳಿತುಕೊಳ್ಳುತ್ತೇವೆ. ಆದರೆ, ಮನಸ್ಸು ಕೇಳುವುದಿಲ್ಲ ಅದು ಮುಷ್ಕರ ಹೂಡುತ್ತದೆ. ನಮ್ಮ ಕೆಲವು ಸಂಕಲ್ಪಗಳು ನಡೆಯದೇ ಇರುವ ಹಾಗೆ ಮಾಡುತ್ತದೆ. ಉದಾಹರಣೆಗೆ: ಒಂದು ಪುಸ್ತಕ ನಮ್ಮ ಮುಂದೆ ತೆರೆದಿರುತ್ತದೆ. ನಾವು ನಮ್ಮ ಕಣ್ಣುಗಳನ್ನು ತೆರೆದಿರುತ್ತೇವೆ. ಆದರೆ ಮನಸ್ಸು ಎಲ್ಲೋ ಇರುತ್ತದೆ. ಎಲ್ಲೋ ಅಲೆಯತೊಡಗುತ್ತದೆ. ಅತೀತ ಅನಾಗತ ವಿಷಯಗಳ ಬಗ್ಗೆ ಚಿಂತಿಸುತ್ತದೆ. ನಾವು ಪ್ರಾರ್ಥನೆ, ಜಪ, ಧ್ಯಾನ ಮಾಡುವಾಗಲೂ ಇದೇ ಪರಿಸ್ಥಿತಿ.

ಹಾಗಾಗಿ, ಸ್ವಾಮಿ ವಿವೇಕಾನಂದರೂ ಒಂದು ಮಾತನ್ನು ಸೊಗಸಾಗಿ ಹೇಳುತ್ತಾರೆ "ನಾವು ಸ್ವಾತಂತ್ರರೇ! ನಾವು ನಮ್ಮ ಮನಸ್ಸನ್ನು ಒಂದು ಕ್ಷಣಕಾಲ ಆಳಲಾರೆವು. ಒಂದು ವಿಷಯದ ಮೇಲೆ ಅದನ್ನು ನಿಲ್ಲಿಸಲಾರೆರು. ಒಂದು ಕ್ಷಣವಾದರೂ ಅದನ್ನು ನಿರ್ದಿಷ್ಟ ಕೇಂದ್ರದಲ್ಲಿ ಏಕಾಗ್ರಗೊಳಿಸಲಾರೆವು. ಆದರೂ ನಾವು ಸ್ವತಂತ್ರರು ಎಂದು ಹೇಳಿಕೊಳ್ಳುತ್ತೇವೆ! ಇದನ್ನು ಯೋಚಿಸಿನೋಡಿ" ಎಂದರು ಅದು ಸರಿಯೇ. ನಮಗೆ ನಮ್ಮ ಮನಸ್ಸನ್ನು ಒಂದು ಕಡೆ ಕೇಂದ್ರೀಕರಿಸಲಾಗದು ಒಂದು ವಿಷಯದ ಮೇಲೆ ನಿಲ್ಲಿಸಲಾಗದು ಮೊದಲು ನಮ್ಮ ಮನಸ್ಸನ್ನು ನಾವು ಹಿಡಿದಿಟ್ಟು ಕೊಳ್ಳಬೇಕು.

ಭಗವದ್ಗೀತೆಯ ಪ್ರಕಾರ ಅಪಕ್ವ ಮನಸ್ಸು ನಮ್ಮ ಶತ್ರುವಿನಂತೆಯೂ, ಪಳಗಿದ ಮನಸ್ಸು (ಒಳ್ಳೆಯ ಮನಸ್ಸು) ನಮ್ಮ ಮಿತ್ರನಂತೆಯೂ ವರ್ತಿಸುತ್ತದೆ. ಆದ್ದರಿಂದ ಮನಸ್ಸಿನ ಸ್ವರೂಪವನ್ನು ಸರಿಯಾಗಿ ತಿಳಿದುಕೊಳ್ಳುವುದು ಅವಶ್ಯಕ. ನಮಗೆ ವಿಧೇಯವಾಗಿರುವಂತೆ, ನಮ್ಮೊಡನೆ ಸಹಕರಿಸುವಂತೆ ನೋಡಿಕೊಳ್ಳಬೇಕು. ಹಾಗಾಗಿ, ಮನಸ್ಸು ನಮ್ಮ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯಕವಾಗುವುದು.

ಮನಸ್ಸು ಒಂದು ಕೇಂದ್ರ ಬಿಂದು. ನಮ್ಮನ್ನು ಜನರು ಗುರುತಿಸುತ್ತಾರೆ. ಮಾತನಾಡುತ್ತಾರೆ ಎಂದರೆ ಅದಕ್ಕೆ ಮೂಲ ಕಾರಣವೇ ಮನಸ್ಸು. ನಮ್ಮ ಈ ವ್ಯಕ್ತಿತ್ವ ಅವಲಂಬಿತವಾಗಿರುವುದೇ ನಮ್ಮ ಮನಸ್ಸಿನಿಂದ. ಹಾಗಾಗಿ ಮನಸ್ಸು ಒಳ್ಳೆಯದಿದ್ದರೆ, ನಮ್ಮ ವ್ಯಕ್ತಿತ್ವ ಒಳ್ಳೆಯದಿರುತ್ತದೆ. ಹಾಗಾಗಿ, ಆಂಗ್ಲಭಾಷೆಯಲ್ಲಿ ಹೇಳಿದಂತೆ "Do Good, Be Good" ಒಳ್ಳೆಯದನ್ನೇ ಯೋಚಿಸಿ, ಒಳ್ಳೆಯದನ್ನೇ ಮಾಡಿ, ಈ ಒಳ್ಳೆಯ ವ್ಯಕ್ತಿತ್ವ ನಿಮ್ಮದಾಗಲಿ.

ಇಂದಿನ ಸಮಾಜ, ಇಂದಿನ ವಿದ್ಯಾರ್ಥಿಗಳ ಸುತ್ತ ಒಂದು ಚಿತ್ತ

ಅರ್ಪಿತ ಶೇಟ್
ಪ್ರಥಮ ಬಿ.ಕಾಂ.

ನಮ್ಮ ಸಮಾಜ ಆಧುನಿಕತೆಗಳತ್ತ ದಾಪುಗಾಲನ್ನು ಹಾಕುತ್ತಾ ಮುನ್ನುಗ್ಗುತ್ತಿರುವ ಈ ಸಮಯದಲ್ಲಿ ಮನುಷ್ಯನೂ ಕೂಡಾ ಹೆಚ್ಚು ಹೆಚ್ಚು ಆಧುನಿಕನಾಗುತ್ತಿದ್ದಾನೆ. ಹೇಗೆ ಆಧುನಿಕನಾಗುತ್ತಾನೋ ಅದೇ ರೀತಿಯಲ್ಲಿ ಸಂಕುಚಿತಗೊಳ್ಳುತ್ತಿದ್ದಾನೆ. ಬದುಕೆಂದರೆ ಒಂದಿಷ್ಟು ಸಂಪತ್ತನ್ನು ಗಳಿಸುವ, ತನ್ಮೂಲಕವಾಗಿ ಒಂದಿಷ್ಟನ್ನು ಕೂಡಿಡುವ ಐಷಾರಾಮಿ ಎಂಬ ಸಾಗರದಲ್ಲಿ ಕ್ರೀಡಿಸುವ ಆಟ ಎಂದು ತಿಳಿದಿದ್ದಾನೆ. ಇಂದು ವಿಜ್ಞಾನಿ ದೇಶದ ಅತ್ಯಮೂಲ್ಯ ವಿಚಾರವನ್ನು ಹಣದ ಆಸೆಗೆ ಮಾರುತ್ತಿದ್ದಾನೆ. ರಾಜಕಾರಣಿ ತನ್ನ ಮನೆಯ ಮಹಡಿಯನ್ನು ಏರಿಸುತ್ತಾ ಬಂಗಾರದ ತಟ್ಟೆಯಲ್ಲಿ ಊಟಮಾಡುತ್ತಾ ಜನರ ಮೇಲೆ ಸವಾರಿ ಮಾಡುತ್ತಿದ್ದಾನೆ. ಇನ್ನೂ ದೊಡ್ಡ ದೊಡ್ಡ ಅಧಿಕಾರಿಗಳು ಕರ್ತವ್ಯ ಭ್ರಷ್ಟರಾಗಿ ಕುಳಿತಿದ್ದಾರೆ. ಇವೆಲ್ಲವನ್ನೂ ನೋಡಿದಾಗ ಮುಂದೆ ನಮ್ಮ ಸಮಾಜ ಏನಾಗಬಹುದು?? ಎತ್ತ ಸಾಗಬಹುದು?? !! ಎಂಬ ಪ್ರಶ್ನೆ ಪ್ರತಿಯೊಬ್ಬ ಮಾನವನಲ್ಲಿ ಮೂಡುವುದು ಸಹಜ. ಯಾಕಾಗಿ ನಮ್ಮ ಸಮಾಜ ಹೀಗಾಯಿತು? ಎಂಬ ಪ್ರಶ್ನೆಗೆ ಉತ್ತರ ಮೌಲ್ಯ ರಹಿತವಾದ ಶಿಕ್ಷಣ ಹಾಗೂ ವಿದ್ಯಾರ್ಥಿಗಳಿಗೆ ಮಾನವೀಯತೆಯನ್ನು ಕಲಿಸದ ಸಮಾಜ ಎಂದು ಸ್ಪಷ್ಟವಾಗಿ ಗೋಚರಿಸುತ್ತದೆ.

ಹೌದು, ಇಂದಿನ ಶಿಕ್ಷಣ ಹೇಗಾಗಿದೆ ಅಂದರೆ ಅದು ಒಂದು ಹೂವನ್ನು ಗುರುತಿಸಲು ಮಾತ್ರ ಹೇಳುತ್ತಿದೆಯೇ ಹೊರತು ಆ ಹೂವಿನ ಪರಿಮಳವನ್ನು ಆಸ್ವಾದಿಸಲು ಹೇಳುತ್ತಿಲ್ಲ. ನಾಲ್ಕು ಗೋಡೆಗಳ ಮಧ್ಯದಲ್ಲಿ ಅಧ್ಯಾಪಕರು ಹೇಳಿದ್ದನ್ನು ಕೇಳಿಸಿಕೊಂಡು ಅದನ್ನೇ ಬಾಯಿಪಾಠಮಾಡಿ ನಂತರ ಮೂರು ತಾಸಿನಲ್ಲಿ ಅದೇ ನಾಲ್ಕು ಗೋಡೆಗಳ

ಮಧ್ಯದಲ್ಲಿ ಹಾಳೆಯ ಮೇಲೆ ವಾಂತಿ ಮಾಡಿ 100% ಅಂಕಗಳಿಸಿ ಕೇವಲ ಪ್ರಮಾಣ ಪತ್ರದ ಗೀಳಿನಲ್ಲಿರುವ ವಿದ್ಯಾರ್ಥಿ ಸಮುದಾಯ ಮುಂದೆ ನೆಮ್ಮದಿಯ ಬದುಕನ್ನು ಹೇಗೆ ಹೊಂದಲು ಸಾಧ್ಯ !!! ಮಗುವಿಗೆ ಏನು ತಿಳಿಯದ ವಯಸ್ಸಿನಿಂದಲೂ ನೀನು ಮುಂದೆ ವೈದ್ಯನಾಗಬೇಕು. ಇಂಜಿನಿಯರ್ ಆಗಬೇಕು ಎನ್ನುವ ವಿಚಾರವನ್ನು ತಲೆಗೆ ತುಂಬಿ ಬೆಳೆಸಿದ ಪಾಲಕರು, ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವ ಸಮಯದಲ್ಲಿ ಆ ವಿದ್ಯಾರ್ಥಿಯಲ್ಲಿ ನೀನು ಮುಂದೆ ಏನಾಗುತ್ತೀಯಾ ಎಂಬ ಪ್ರಶ್ನೆ ಕೇಳಿದರೆ ಆ ಮಗುವು ಕೊಡುವ ಉತ್ತರ ಏನು? ನಾನು ಮುಂದೆ ವೈದ್ಯನಾಗುತ್ತೇನೆ. ಇಂಜಿನಿಯರ್ ಆಗುತ್ತೇನೆ ಎಂದು. ಯಾವ ವಿದ್ಯಾರ್ಥಿ ಕೂಡಾ ನಾನು ಮುಂದೆ ಒಬ್ಬ ಒಳ್ಳೆಯ ಪ್ರಜೆಯಾಗುತ್ತೇನೆ ಎಂದು ಹೇಳುವುದಿಲ್ಲ !!! ಯಾಕೋ ??? ನೀನು ಒಳ್ಳೆಯ ಪ್ರಜೆಯಾಗಬೇಕು ಎಂದು ಆತನ ಪಾಲಕರಾಗಲಿ, ಶಿಕ್ಷಣವಾಗಲಿ ಆತನಿಗೆ ಇಂದು ಹೇಳುತ್ತಿಲ್ಲ. ಮಗುವು ಚಿಕ್ಕ ವಯಸ್ಸಿನಿಂದಲೂ ಮೊಬೈಲ್ ದುರುಪಯೋಗ ಪಡಿಸಿಕೊಳ್ಳುತ್ತಾ ಬೆಳೆದು ಮುಂದೆ ಕಾಂಕ್ರೀಟ್ ಕಾಡಿನಲ್ಲಿ ಬಂಧಿತನಾಗುತ್ತಾ ಪ್ರಕೃತಿ ಶಿಕ್ಷಣ ಸಂಸ್ಕೃತಿ ಶಿಕ್ಷಣದಿಂದ ದೂರವಾಗುತ್ತದೆ. ಈ ಎಲ್ಲಾ ಕಾರಣದಿಂದಲೇ ಇರಬೇಕು ನಮ್ಮ ಸಮಾಜ ಇಂದು ಈ ರೀತಿಯಾಗಿರುವುದು.

ಈ ನಮ್ಮ ಸಮಾಜದಲ್ಲಿ ಯಾವಾಗ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಬದುಕಲು ಬೇಕಾದ ಮಾನವೀಯ ಗುಣ. ಸಾಹಿತ್ಯಿಕ ಅಭಿರುಚಿ. ಮೌಲ್ಯಬದ್ಧ ವಿಚಾರ, ಪ್ರಾಮಾಣಿಕತೆಯ ಸತ್ವ, ನೀತಿ ಭರಿತವಾದ ತತ್ತ್ವ ಇವುಗಳು ಸೇರಿಕೊಳ್ಳುತ್ತವೆಯೋ, ಆಗ ನಮ್ಮ ವಿದ್ಯಾರ್ಥಿಗಳಲ್ಲಿ ಒಳ್ಳೆಯ ವಿಚಾರಗಳು ಮೂಡಿ ಸುಂದರ ಸಮಾಜ ನಿರ್ಮಾಣವಾಗುತ್ತದೆ. ಹಿಂದೆಲ್ಲ ಕೂಡು ಕುಟುಂಬದಲ್ಲಿ ಮಕ್ಕಳಿಗೆ ಅವರ ಅಜ್ಜ, ಅಜ್ಜಿ, ದೊಡ್ಡಪ್ಪ, ದೊಡ್ಡಮ್ಮ ಇವರುಗಳು ಸಣ್ಣ ವಯಸ್ಸಿನಿಂದಲೂ ನೀತಿಯುತವಾದ ಕಥೆಗಳನ್ನು ಹೇಳಿ ಮಕ್ಕಳನ್ನು ಸರಿಯಾಗಿ ಬೆಳೆಸುತ್ತಿದ್ದರು. ಆದರೆ ಈಗ ಸಣ್ಣ ಕುಟುಂಬದಲ್ಲಿ ಮಗುವು ಸಂಬಂಧಗಳನ್ನು ಮರೆಯುತ್ತಾ ಇದೆ. ಇಷ್ಟೇ ಅಲ್ಲದೆ ಚಿಕ್ಕ ವಯಸ್ಸಿನಲ್ಲಿ ಅವಶ್ಯವಾಗಿ ಬೇಕಾದ ಯಾವುದನ್ನೂ ಪಾಲಕರು ತಿಳಿಸುತ್ತಿಲ್ಲ.

ಹೌದು ಸ್ನೇಹಿತರೇ, ಮಕ್ಕಳಿಗೆ ಬೇಕಾದ ಮೌಲ್ಯ ಶಿಕ್ಷಣವನ್ನು ಅವರ ಪಾಲಕರು ತಿಳಿಸಬೇಕು. ಆಗ ಮಾತ್ರ ಅವರು ಮುಂದೆ ಒಬ್ಬ ಸತ್ಪ್ರಜೆಗಳಾಗಿ ಮಾರ್ಪಾಡಾಗುತ್ತಾರೆ. ಸ್ವಾಮಿ ವಿವೇಕಾನಂದರು ಒಂದಡೆ ಹೇಳುತ್ತಾರೆ. "ಸಂಪೂರ್ಣ ವಿದ್ಯಾಭ್ಯಾಸ ಮುಗಿದ ಮೇಲೆ ನಮ್ಮಲ್ಲಿ ಏನು ಉಳಿಯುತ್ತದೆಯೋ ಅದೇ ನಿಜವಾದ ಶಿಕ್ಷಣ" ಎಂದು. ನಮ್ಮ ವಿದ್ಯಾಭ್ಯಾಸ ಮುಗಿದ ಮೇಲೆ ನಮ್ಮಲ್ಲಿ ಉಳಿಯುವುದು ಮಾನವೀಯ ಮೌಲ್ಯ. ಸದ್ಗುಣ ಹಾಗೂ ಸದಾಚಾರ. ಅಂದರೆ ಇವುಗಳೇ ನಿಜವಾದ ಶಿಕ್ಷಣ. ಆದರೆ ದುರದೃಷ್ಟವಶಾತ್ ಇಂತಹ ಶಿಕ್ಷಣವನ್ನು ನಮ್ಮ ಶಿಕ್ಷಣ ಪದ್ಧತಿಯಲ್ಲಿ ಹುಡುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಭವಿಷ್ಯತ್ತಿನ ಪ್ರಜೆಗಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಪ್ರಕೃತಿ ಶಿಕ್ಷಣ, ಸಂಸ್ಕೃತಿ ಶಿಕ್ಷಣ, ಮಾನವೀಯ ಶಿಕ್ಷಣವನ್ನು ನೀಡುವುದರ ಮೂಲಕ ವಿದ್ಯಾರ್ಥಿಗಳು ಮುಂದೆ ಈ ವಿಶಾಲವಾದ ಪ್ರಪಂಚದಲ್ಲಿ ಮರ್ಯಾದಾಪುರುಷೋತ್ತಮರಾಗಿ ಬಾಳಿ ಬದುಕಲು ಸಹಕರಿಸುವ ಬಹುದೊಡ್ಡ ಜವಾಬ್ದಾರಿ ಈ ಸಮಾಜದ ಮೇಲೆ ಹಾಗೂ ಪಾಲಕರ ಮೇಲೆ ಇದೆ. ಎನ್ನುವಂತಹ ಅಭಿಪ್ರಾಯವನ್ನು ತಿಳಿಸಲಿಚ್ಛಿಸುತ್ತೇವೆ.

ವನಾನಿ ದಹತೋ ವಹ್ನೇಃ ಸಖಾ ಭವತಿ ಮಾರುತಃ ।
ಸ ಏವ ದೀಪನಾಶಾಯ ಕೃಶೇ ಕಸ್ಯಾಸ್ತಿ ಸೌಹೃದಮ್ ॥

ಕಾಡುಗಳನ್ನು ಸುಡುವ ಬೆಂಕಿಗೆ ಗಾಳಿಯು ಗೆಳೆಯ. ಆದರೆ ದೀಪಕ್ಕಾಗುವಾಗ ಅದೇ ನಾಶಕ. ಬಡವಾದವನಿಗೆ ಯಾರು ಗೆಳೆಯ?

ಸತ್ಯಂ ಮನೋರಮಾ ರಾಮಾಃ ಸತ್ಯಂ ರಮ್ಯಾ ವಿಭೂತಯಃ ।
ಕಿಂತು ಮತ್ತಾಂಗನಾಪಾಂಗಭಂಗಲೋಲಂ ಹಿ ಜೀವಿತಮ್ ॥

ಸ್ತ್ರೀಯರು ಮನೋಹಾರಿಯರು ಎನ್ನುವುದು ಸತ್ಯ. ಈ ಸಂಪತ್ತುಗಳೂ ಕೂಡಾ ಮನೋಹಾರಿಗಳಾಗಿವೆ ಎನ್ನುವುದೂ ಸತ್ಯ. ಆದರೆ ಜೀವನ ಮಾತ್ರ ಕಾಮನಿಂದ ಮತ್ತಳಾದ ಸ್ತ್ರೀಯ ನೋಟದಂತೆ ಚಂಚಲವಾದುದು.

ಕೌಟಿಲ್ಯನ ಅರ್ಥಶಾಸ್ತ್ರ

ರಾಧಿಕಾ ಉಡುಪ
ದ್ವಿತೀಯ ಬಿ.ಎಸ್ಸಿ.

ಕ್ರಿ.ಪೂ. ಮೂರೇ ಶತಮಾನದಲ್ಲಿ ಜೀವಿಸಿದ್ದ ಕೌಟಿಲ್ಯನು ಭಾರತೀಯ ಇತಿಹಾಸದ ಅದ್ಭುತ ವ್ಯಕ್ತಿಗಳಲ್ಲೊಬ್ಬನಾಗಿದ್ದಾನೆ. ಆತನ ಪ್ರಧಾನ ಕೃತಿಯಾದ ಅರ್ಥಶಾಸ್ತ್ರವು ಎಲ್ಲರೂ ಅವರು ಆಡಳಿತಗಾರರಾಗಿರಲಿ, ವ್ಯವಹಾರೋದ್ಯಮಿಗಳಾಗಿರಲಿ ಅಥವಾ ಶೈಕ್ಷಣಿಕ ವಿದ್ವಾಂಸರೇ ಆಗಿರಲಿ ಓದಲೇಬೇಕಾದಂಥಹ ಕೃತಿಯಾಗಿದೆ.

ಅರ್ಥಶಾಸ್ತ್ರವು ಸುಮಾರು 2400 ವರ್ಷಗಳಷ್ಟು ಹಿಂದೆ ರಚಿಸಲಾಗಿದೆಯಾದರೂ ಅದು ಒಳಗೊಂಡಿರುವ ಆಳವಾದ ಒಳನೋಟಗಳು ಮತ್ತು ಅದರ ಪ್ರಸ್ತುತತೆಯಿಂದಾಗಿ ಅದನ್ನು ಇಂದೂ ಕೂಡ ಭಾರತದಲ್ಲಿ ಮಾತ್ರವಲ್ಲದೆ, ಜಗತ್ತಿನಾದ್ಯಂತ ಅಭ್ಯಸಿಸುವವರಿದ್ದಾರೆ. ಅರ್ಥಶಾಸ್ತ್ರದ ಮಹತ್ವವನ್ನು ನಿಜವಾಗಿ ಅರಿಯಬೇಕಾದಲ್ಲಿ,ನಾವು ಪ್ರಾಚೀನ ಭಾರತದ ಸಂಸ್ಕೃತಿಯನ್ನು ಅರಿಯಬೇಕು. ಇಂದಿನ ದಕ್ಷಿಣ ಬಿಹಾರದಲ್ಲಿ ಅಂದು ಮಗಧ ರಾಜ್ಯವಿತ್ತು. ಕೌಟಿಲ್ಯನು ಈ ಮಗಧ ರಾಜ್ಯದ ನಿವಾಸಿಯಾಗಿದ್ದನು. ಅಂದು ಮಗಧ ರಾಜ್ಯವು ಭಾರತದ ಅತ್ಯಂತ ದೊಡ್ಡ ರಾಜ್ಯಗಳಲ್ಲೊಂದಾಗಿತ್ತು ಕೌಟಿಲ್ಯನು (ಚಾಣಕ್ಯ ಅಥವಾ ವಿಷ್ಣುಗುಪ್ತ ಎಂದೂ ಕರೆಯಲ್ಪಡುತ್ತಿದ್ದನು) ಜಗತ್ತಿನ ಅತ್ಯಂತ ಪ್ರಾಚೀನ ವಿಶ್ವವಿದ್ಯಾಲಯಗಳಲ್ಲೊಂದಾದ ತಕ್ಷಶಿಲೆಯಲ್ಲಿ ಅಧ್ಯಯನ ಮಾಡಿದ್ದನು. ಅಲ್ಲಿ ರಾಜ್ಯಶಾಸ್ತ್ರ, ರಕ್ಷಣೆ, ವಾಸ್ತು ತಂತ್ರ, ವೈದ್ಯಕೀಯ ಮುಂತಾದ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಮೌರ್ಯರ ಆಳ್ವಿಕೆಯಲ್ಲಿ ಕೌಟಿಲ್ಯನು ಆಧುನಿಕ ಕಾಲದ ಪ್ರಧಾನಮಂತ್ರಿ ಹುದ್ದೆಗೆ ಸಮನಾದ ಮಹಾ ಅಮಾತ್ಯನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಹೀಗಾಗಿ ಆತನಿಗೆ ರಾಜಕೀಯ ಆಡಳಿತ ಮತ್ತು ರಕ್ಷಣಾ ವಿಷಯಗಳಿಗೆ ಸಂಬಂಧಿಸಿದಂತೆ ಸಮೃದ್ಧವಾದ ಜ್ಞಾನವಿತ್ತು. ಕಾಲಾನುಕ್ರಮದಲ್ಲಿ ಕೌಟಿಲ್ಯನು ಒಬ್ಬ ಮೇಧಾವಿಯಾಗಿ ಅಂಜಿಕೆಯಿಲ್ಲದ ಚಿಂತಕನಾಗಿ, ಸಮರ್ಥ ಕಾರ್ಯದರ್ಶಿಯಾಗಿ ಹಾಗೂ ಚಾಣಾಕ್ಷಮತಿಯ ರಾಜಕಾರಣಿಯಾಗಿ ಬೆಳೆದನು.

ನಂತರ ಆತನು ಸಕ್ರಿಯ ರಾಜಕಾರಣದಿಂದ ನಿವೃತ್ತನಾಗಿ ಅರ್ಥಶಾಸ್ತ್ರವನ್ನು ಬರೆಯುವ ಮಹಾನ್ ಕಾರ್ಯದಲ್ಲಿ ತೊಡಗಿಕೊಂಡನು. ಆಳವಾದ ಜ್ಞಾನಿಯಾಗಿದ್ದ ಕೌಟಿಲ್ಯನು ತನಗೆ ಲಭ್ಯವಿದ್ದ ತತ್ವಜ್ಞಾನ, ಧರ್ಮ, ರಾಜ್ಯಶಾಸ್ತ್ರ, ರಾಜನೀತಿ ಮುಂತಾದ ವಿವಿಧ ವಿಷಯಗಳನ್ನು ಅಭ್ಯಸಿಸಿದನು. ತದನಂತರ ಅರ್ಥಶಾಸ್ತ್ರದ ರಚನೆಯ ಮೂಲಕ ತನ್ನದೇ ಆದ ವೈಯಕ್ತಿಕ ವ್ಯಾಖ್ಯಾನ ಹಾಗೂ ಭಾಷ್ಯವನ್ನು ಹೊರತಂದನು. ಆತನ ಆ ಕೃತಿಯು ಕೇವಲ ಅರ್ಥಶಾಸ್ತ್ರವನ್ನು ಕುರಿತಾಗಿರದೆ, ವೈವಿಧ್ಯತೆಯನ್ನೊಳಗೊಂಡ ಬೃಹತ್ ಗ್ರಂಥವಾಗಿದೆ. ಕೌಟಿಲ್ಯನು ಈ ಕೃತಿಯಲ್ಲಿ ರಾಜ್ಯಾಡಳಿತ ಹಾಗೂ ರಾಜ್ಯರಕ್ಷಣಾ ವಿಧಾನಗಳನ್ನು ಕುರಿತಂತೆ ಸಮಗ್ರ ವಿವರಣೆ ನೀಡಿದ್ದಾನೆ. ಈ ಪ್ರಕ್ರಿಯೆಯಲ್ಲಿ, ಆತನು ಅರ್ಥವು (ಹಣಕಾಸು) ಮಾನವನ ಅಸ್ತಿತ್ವ ಹಾಗೂ ಬದುಕಿಗೆ ಆಧಾರವನ್ನು ಒದಗಿಸುವುದರಿಂದ, ಅರ್ಥಶಾಸ್ತ್ರವು ಸಾರ್ವಜನಿಕ ಬದುಕಿಗೆ ಅತ್ಯಗತ್ಯವಾದ ಅಂಶವಾಗಿದೆ. ಎಂಬ ತೀರ್ಮಾನಕ್ಕೆ ಬಂದಿದ್ದಾನೆ.

ಕೌಟಿಲ್ಯನು ತನ್ನ ಕಾಲಕ್ಕೆ ಸಮಂಜಸವಾಗಿದ್ದ ವಸ್ತುವಿಷಯಗಳಾದ ಕೃಷಿ, ಪಶುಸಂಗೋಪನೆ ಮತ್ತು ವ್ಯಾಪಾರಗಳನ್ನು ಕುರಿತು ವಿಶೇಷ ಗಮನ ಹರಿಸಿದ್ದಾನೆ. ಆಡಳಿತಕ್ಕೆ ಸಂಬಂಧಿಸಿದ ಇತರ ವಿಷಯಗಳನ್ನು ಕುರಿತು ಚರ್ಚಿಸುವಾಗ, ಕೌಟಿಲ್ಯನು ಆರ್ಥಿಕತೆಯ ಮೇಲೆ ಬಲವಾದ ಪ್ರಭಾವ ಬೀರುವ ವಿವಿಧ ಆಯಾಮಗಳನ್ನು ಕುರಿತಂತೆ ಉಲ್ಲೇಖ ಮಾಡಿದ್ದಾನೆ. ಸಾರ್ವಜನಿಕ ಹಣಕಾಸು,ತೆರಿಗೆ ನೀತಿ, ಸಾರ್ವಜನಿಕ ವೆಚ್ಚ, ಹೂಡಿಕೆಗಳು, ಮಂತ್ರಿಗಳ ನೇಮಕಾತಿ, ವಿವಿಧ ಹಂತದ ಅಧಿಕಾರಿಗಳ ನೇಮಕಾತಿ ಹಾಗೂ ರಾಜ್ಯಾಡಳಿತಕ್ಕೆ ಸಂಬಂಧಿಸಿದ ಇತರ ಹಲವಾರು ಅಂಶಗಳನ್ನು ಕುರಿತು ಕೌಟಿಲ್ಯನು ವಿವರವಾದ ವಿಶ್ಲೇಷಣೆ ಮಾಡಿದ್ದಾನೆ.

ಭಾರತೀಯ ಓದುಗರಿಗೆ ಸಾರ್ವಜನಿಕ ಸೊತ್ತುಗಳು ಹೇಗೆ ದುರ್ಬಳಕೆಯಾಗಬಹುದು ಹಾಗೂ ಅಂಥ ದುರಾಚರಣೆಗಳನ್ನು ಹೇಗೆ ತಡೆಗಟ್ಟಬಹುದು ಮತ್ತು ನಿಯಂತ್ರಿಸಬಹುದು ಎಂಬುದನ್ನು ಕುರಿತಂತೆ ಕೌಟಿಲ್ಯನು ನೀಡಿದ ವಿಸ್ತಾರವಾದ ವಿವರಣೆಗಳು ವಿಶೇಷ ಆಸಕ್ತಿ ಮೂಡಿಸಬಹುದು. ಕೃಷಿಗೆ ಸಂಬಂಧಿಸಿದಂತೆ,ಕೌಟಿಲ್ಯನು ಉಳುಮೆ, ಕೃಷಿಗಾರಿಕೆ, ಕೃಷೀ ಉತ್ಪನ್ನಗಳ ಮಾರಾಟ ಇತ್ಯಾದಿಗಳನ್ನು ಕುರಿತಂತೆ ಸೂಕ್ಷ್ಮ ವಿವರಣೆಗಳನ್ನು ನೀಡಿದ್ದಾನೆ.

ಶಿಕ್ಷಣವು ಎಲ್ಲ ವಿಧ'ದಲ್ಲೂ ಅಭಿವೃದ್ಧಿಯ ಮೂಲಾಂಶಗಳಲ್ಲೊಂದಾಗಿದೆ. ಮಾನವ ಸಂಪನ್ಮೂಲದ ಮೇಲೆ ಸಾಕಷ್ಟು ಬಂಡವಾಳ ಹೂಡದ ಯಾವ ದೇಶವೂ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲಾರದು. ಶಿಕ್ಷಣವು ತನ್ನನ್ನು ತಾನು ಅರಿಯಲು ಹಾಗೂ ಇಡೀ ಜಗತ್ತನ್ನು ಅರಿಯಲು ಅಗತ್ಯ ಎಂಬುದು ವಾಸ್ತವ್ಯ. ಶಿಕ್ಷಣವು ಜೀವನದ ಗುಣಮಟ್ಟವನ್ನು ಉತ್ತಮ ಪಡಿಸುತ್ತದಲ್ಲದೇ ವ್ಯಕ್ತಿ ಹಾಗೂ ಸಮಾಜಗಳಿಗೆ ಲಾಭದಾಯಕವಾಗಿದೆ. ಹತ್ತೊಂಬತ್ತನೇ ಶತಮಾನಕ್ಕೂ ಮುನ್ನ ಮಾನವ ಸಂಪನ್ಮೂಲದ ಮೇಲೆ ವ್ಯವಸ್ಥಿತವಾಗಿ ಬಂಡವಾಳ ಹೂಡುವುದು ಮಹತ್ವಪೂರ್ಣವೆಂದು ಯಾವ ದೇಶಗಳೂ ಭಾವಿಸಿರಲಿಲ್ಲ. ಶಾಲಾ ಶಿಕ್ಷಣ, ಕೆಲಸಕ್ಕೆ ಸಂಬಂಧಿಸಿದ ತರಬೇತಿ ಮತ್ತಿತರ ಮಾನವ ಸಂಪನ್ಮೂಲದ ಮೇಲಿನ ಬಂಡವಾಳ

ಹೂಡಿಕೆಗಳು ಅತ್ಯಲ್ಪ ಪ್ರಮಾಣದಲ್ಲಿದ್ದವು. ಈ ಧೋರಣೆಯು ಹತ್ತೊಂಬತ್ತನೆಯ ಶತಮಾನದಲ್ಲಿ ಬದಲಾಗತೊಡಗಿದವು. ಈ ಅವಧಿಯಲ್ಲಿ ಹೊಸ ಬಗೆಯ ವಸ್ತುಗಳ ಉತ್ಪಾದನೆಗೆ ವಿಜ್ಞಾನದ ಅನ್ವಯಿಕ ಮತ್ತು ಹೆಚ್ಚು ಸಮರ್ಥವಾದ ವಸ್ತು ಉತ್ಪಾದನಾ ವಿಧಾನಗಳು ಪರಿಚಯಿಸಲ್ಪಡುತ್ತಿದ್ದಂತೆ ಸಮಗ್ರ ಚಿತ್ರಣವೇ ಬದಲಾಗತೊಡಗಿದವು. ಈ ಅವಧಿಯಲ್ಲಿ ಹೊಸ ಬಗೆಯ ವಸ್ತುಗಳ ಉತ್ಪಾದನೆಗೆ ವಿಜ್ಞಾನದ ಅನ್ವಯಿಕೆ ಮತ್ತು ಹೆಚ್ಚು ಸಮರ್ಥವಾದ ವಸ್ತು ಉತ್ಪಾದನಾ ವಿಧಾನಗಳು ಪರಿಚಯಿಸಲ್ಪಡುತ್ತಿದ್ದಂತೆ ಸಮಗ್ರಚಿತ್ರಣವೇ ಬದಲಾಗತೊಡಗಿತು. ಕೃಷಿ ಕ್ಷೇತ್ರದಲ್ಲಿ ಕಂಡು ಬಂದಂತೆ, ಸುಶಿಕ್ಷಿತ ರೈತರು ಕೃಷಿ ಕಾರ್ಯಗಳಲ್ಲಿ ಹೊಸ ತಂತ್ರಜ್ಞಾನವನ್ನು ಬಳಸಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಸಫಲರಾದರು. ಆದರೆ, ಸಾಂಪ್ರದಾಯಿಕ ವಿಧಾನ ಬಳಸಿದವರು ಈ ದಿಕ್ಕಿನಲ್ಲಿ ಹೆಚ್ಚು ಪ್ರಗತಿ ಸಾಧಿಸಲಾಗಲಿಲ್ಲ.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ, ಶಿಕ್ಷಣದ ಮಹತ್ವ ಹಾಗೂ ಕಲ್ಯಾಣ ರಾಜ್ಯವನ್ನು ಸ್ಥಾಪಿಸುವಲ್ಲಿ ಬುದ್ದಿ ಜೀವಿಗಳ ಪಾತ್ರವನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಮೌರ್ಯರ ಆಡಳಿತಾವಧಿಯ ಪ್ರಾರಂಭಿಕ ಹಂತದಲ್ಲಿ ಅರ್ಥಶಾಸ್ತ್ರದ ತತ್ವಗಳ ಪರಿಚಯವಿದ್ದ ರಾಜಕೀಯ ಚಿಂತಕನು ಅರ್ಥಶಾಸ್ತ್ರದ ತತ್ವಗಳನ್ನು ಗ್ರಂಥರೂಪದಲ್ಲಿ ನೀಡಿದ್ದಾನೆ. ಕೌಟಿಲ್ಯನು ತನ್ನದೇ ಆದ ಗ್ರಂಥವನ್ನಾಗಲೀ ವೈಚಾರಿಕ ಪಂಥವನ್ನಾಗಲೀ ಹುಟ್ಟು ಹಾಕಿರಲಿಲ್ಲ. ಈ ಕಾರ್ಯವನ್ನೇ ಕೌಟಿಲ್ಯನ ಮರಣಾನಂತರದ ಅಲ್ಪಾವಧಿಯಲ್ಲೇ ಮಾಡಲಾಗಿದೆ ಎನ್ನಲಾಗಿದೆ.

ಕೌಟಿಲ್ಯನ ಅರ್ಥಶಾಸ್ತ್ರವು ತರಬೇತಿ ಹಾಗೂ ಕಲಿಯುವಿಕೆಗಳ ಮಹತ್ತ್ವವನ್ನು ಗುರುತಿಸಿದೆ. ತರಬೇತಿಯು ಶಿಸ್ತನ್ನು ಮೂಡಿಸುತ್ತದೆ ಎಂಬ ಮಾತನ್ನು ಅದು ಸ್ಪಷ್ಟವಾಗಿ ಹೇಳಿದೆ. ಕಲಿಯುವುದರಲ್ಲಿ ಆಸಕ್ತಿ ಹೊಂದಿದ, ಗಮನವಿಟ್ಟು ಕೇಳಿಸಿಕೊಳ್ಳುವ ಮನವಿರುವ, ಕಲಿಸಲ್ಪಡುತ್ತಿರುವುದನ್ನು ಗ್ರಹಿಸುವ ಸಾಮರ್ಥ್ಯವುಳ್ಳ, ನೆನಪಿನಲ್ಲಿಟ್ಟುಕೊಳ್ಳುವ ಸಾಮರ್ಥ್ಯವುಳ್ಳ, ವಿಷಯಗಳನ್ನು ಊಹಿಸಬಲ್ಲ, ಸತ್ಯಾಂಶಗಳನ್ನು ಪಾಲಿಸುವಂಥವರಿಗೆ ಮಾತ್ರ ಶಿಸ್ತಿನ ಪಾಠಗಳನ್ನು ಕಲಿಸಬಹುದಾಗಿದೆ. ಮಿಕ್ಕವರಿಗಲ್ಲ.

ತಾಜಾ ಆಗಿರುವ, ಕಟ್ಟಾ ಸ್ವರೂಪದ ವಸ್ತುವೊಂದು ತನ್ನ ಬಳಿ ಬರುವ ಎಲ್ಲವನ್ನು ಸೆಳೆದುಕೊಳ್ಳುವ ರೀತಿಯಲ್ಲಿ, ಯುವ ಬುದ್ಧಿಜೀವಿಯು ವೈಜ್ಞಾನಿಕ ಸ್ವರೂಪದ ಜ್ಞಾನವನ್ನು ಗ್ರಹಿಸಲು ಶಕ್ತನಾಗಿರುತ್ತಾನೆ. "ತಪ್ಪು ವಿಷಯಗಳನ್ನು ಕಲಿಸುವುದು" ಅರ್ಥಶಾಸ್ತ್ರದ ಪ್ರಕಾರ ಒಂದು ಅಪರಾಧವಾಗಿದೆ. ಆಯಾ ವಿಷಯ ಪರಿಣಿತ ಗುರುಗಳ ಮೂಲಕ ಅವರ ಅಧಿಕಾರದ ನಿಯಂತ್ರಣದಡಿಯಲ್ಲಿ ವಿವಿಧ ವಿಜ್ಞಾನಗಳನ್ನು ಕಲಿಯುವ ಮೂಲಕ ಶಿಸ್ತು ಹಾಗೂ ಸ್ವನಿಯಂತ್ರಣಗಳು ಸಾಧಿಸುತ್ತವೆ. ಕೌಟಿಲ್ಯನ ಪ್ರಕಾರ ಧರ್ಮ ಮಾರ್ಗ ಮತ್ತು ಸಂಪತ್ತಿನಲ್ಲಿ ಕೊನೆಗೊಳ್ಳುವ ಕಲಿಕೆಯೇ ನಿಜವಾದ ಕಲಿಯಾಗಿದೆ. ತಮ್ಮ ಜ್ಞಾನ, ಪಾಂಡಿತ್ಯ, ಶೌರ್ಯ ಮತ್ತು ಉತ್ತಮ ಕಾರ್ಯಗಳಿಂದ ಪ್ರಸಿದ್ಧಿಯಾದವರೇ ಇತರರಿಂದ ಪ್ರತ್ಯೇಕವಾಗಿರುತ್ತಾರೆ. ಕೌಟಿಲ್ಯನು ಹೇಳುವಂತೆ, ಶಿಕ್ಷಣವು ಧರ್ಮ ಮಾರ್ಗ ಪಾಲಿಸಲು, ಸಂಪತ್ತು ಗಳಿಸಲು ಹಾಗೂ ಐಹಿಕ ಭೋಗ ಪಡೆಯಲು ಮಾಧ್ಯಮವಾಗಿದೆ. ಅರ್ಥಶಾಸ್ತ್ರದ ಪ್ರಕಾರ ತರಬೇತಿ ಹಾಗೂ ಕಲಿಕೆಯು ಅಧರ್ಮ, ಬಡತನ ಹಾಗೂ ದ್ವೇಷಗಳನ್ನು ತಡೆಗಟ್ಟಲು ಸಹಾಯಕವಾಗಿದೆ.

ಕಲಿಕೆಯಿಂದ ಬುದ್ಧಿಶಕ್ತಿಯು ರೂಪುಗೊಳ್ಳುತ್ತದೆ. ಬುದ್ಧಿಶಕ್ತಿಯಿಂದ ಕ್ರಿಯೆ ಸಾಧ್ಯವಾಗುತ್ತದೆ. ಯೋಗದಿಂದ ಸ್ವನಿಯಂತ್ರಣ ಸಾಧ್ಯವಾಗುತ್ತದೆ. ಮೌರ್ಯರ ಆಡಳಿತಾವಧಿಯ ರಾಜ್ಯ ನೀತಿಯನ್ನು ಕುರಿತಂತೆ ನಮಗೆ ಬಹಳಷ್ಟು ಮಾಹಿತಿಯು ಅರ್ಥಶಾಸ್ತ್ರದ ಮೂಲಕವೇ ದೊರೆಯುತ್ತದೆ. ಅದು ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಬರೆಯಲ್ಪಟ್ಟಿದ್ದರೂ ಕೂಡ ಇಂದಿಗೂ ಪ್ರಸ್ತುತವಾಗಿದೆ. ಸಂಸ್ಕೃತ ಭಾಷೆಯಲ್ಲಿ ರಚಿತವಾದ ಈ ಗ್ರಂಥವು ಆದರ್ಶಮಯ ರಾಜ್ಯದ ಸಿದ್ಧಾಂತಗಳು ಮತ್ತು ತತ್ವಗಳನ್ನು ಚರ್ಚಿಸುವ ಕೃತಿಯಾಗಿದೆ. ಮೌರ್ಯರ ಆಡಳಿತ ದಾಖಲೆಯನ್ನು ಒಳಗೊಂಡಿಲ್ಲ.

ಕೌಟಿಲ್ಯನು ಹೇಳಿದಂತೆ, ಮಾನವ ಸಂಪನ್ಮೂಲದ ಮೇಲೆ ಅದರಲ್ಲೂ ವಿಶೇಷವಾಗಿ ಉನ್ನತ ಶಿಕ್ಷಣದ ಮೇಲೆ ಬಂಡವಾಳ ಹೂಡುವಿಕೆಯು ಅರ್ಥವ್ಯವಸ್ಥೆಯ ಬೆಳವಣಿಗೆ ಮತ್ತು ಅಭಿವೃದ್ಧಿಯ ಮೇಲೆ ಅಗಾಧವಾದ ಪರಿಣಾಮ ಬೀರುತ್ತದೆ.

ಬಹೂನಾಮಸಾರಾಣಾಂ ಸಂಹತಿಃ ಕಾರ್ಯಸಾಧಿಕಾ ।
ತೃಣೈರಾರಭ್ಯತೇ ರಜ್ಜುಃ ತಯಾ ನಾಗೋಽಪಿ ಬಧ್ಯತೇ ॥

ಬಹಳಷ್ಟು ನಿಸ್ಸಾರವಾದ ವಸ್ತುಗಳ ಸಮೂಹವು ಎಂತಹ ಕಾರ್ಯವನ್ನು ಕೂಡಾ ಸಾಧಿಸುತ್ತದೆ. ಹುಲ್ಲಿನಿಂದ ಮಾಡಿದ ಹಗ್ಗವು ಆನೆಯನ್ನು ಕೂಡಾ ಕಟ್ಟಿಹಾಕಬಲ್ಲದು.

ಉಪದೇಶೋ ಹಿ ಮೂರ್ಖಾಣಾಂ ಪ್ರಕೋಪಾಯ ನ ಶಾಂತಯೇ ।
ಪಯಃಪಾನಂ ಭುಜಂಗಾನಾಂ ಕೇವಲಂ ವಿಷವರ್ಧನಮ್ ॥

ಮೂರ್ಖರಿಗೆ ಉಪದೇಶವು ಕೋಪವನ್ನೇ ಉಂಟುಮಾಡುತ್ತದೆ, ಶಾಂತಿಯನ್ನಲ್ಲ. ಸರ್ಪಗಳು ಹಾಲನ್ನು ಕುಡಿಯುವುದರಿಂದ ವಿಷವೇ ಜಾಸ್ತಿಯಾಗುತ್ತದೆ.

ಯೇನಾತ್ಮಾ ಪಣ್ಯತಾಂ ನೀತಃ ಸ ಏವಾನ್ವಿಷ್ಯತೇ ಜನೈಃ ।
ಹಸ್ತೀ ಹೇಮಸಹಸ್ರೇಣ ಕ್ರೀಯತೇ ನ ಮೃಗಾಧಿಪಃ ॥

ಯಾರು ತನ್ನನ್ನೇ ಖರೀದಿಗೆ ಯೋಗ್ಯವಾದ ವಸ್ತುವಾಗಿ ಮಾಡಿಕೊಂಡಿದ್ದಾರೋ ಅಂತಹ ವಸ್ತುವನ್ನೇ ಜನರು ಹುಡುಕುತ್ತಿರುತ್ತಾರೆ. ಆನೆಯನ್ನು ಮಾತ್ರ ಸಾವಿರಾರು ಸುವರ್ಣನಾಣಕಗಳಿಂದ ಜನರು ಖರೀದಿಸುತ್ತಾರೆ ಹೊರತು ಸಿಂಹವನ್ನಲ್ಲ.

ಯಂತ್ರ–ಭೂಮಿಯ ಪ್ರತಿಕೃತಿ

ಚೇತನಾ ಪಿ.
ತೃತೀಯ ಬಿ.ಎಸ್ಸಿ.

ಸಂಸ್ಕೃತ ಸಾಹಿತ್ಯದಲ್ಲಿ ಯಂತ್ರಗಳು ಹಾಗೂ ಯಾಂತ್ರಿಕ ಸಾಧನಗಳ ಬಗ್ಗೆ ಪ್ರಾಚೀನ ವೇದಗಳಿಂದ ಆಧುನಿಕ ನಾಟಕಗಳವರೆಗೆ ಎಲ್ಲೆಡೆಯೂ ಉಲ್ಲೇಖಗಳು ಕಂಡುಬರುತ್ತವೆ.

ವೇದಗಳಲ್ಲಿ ಮೊಸರು ಕಡೆಯಲು, ಬೆಂಕಿ ತಯಾರಿಸಲು ಕೈಮಗ್ಗದಲ್ಲಿ ನೇಯಲು ಉಪಯೋಗಿಸುವ ಚಕ್ರಗಳ ಹಾಗೂ ಇತರ ಉಪಕರಣಗಳ ಕುರಿತಾದ ಹೇರಳ ನಿದರ್ಶನಗಳಿವೆ.

ರಾಜನೀತಿಯ ಮೇರುಕೃತಿಯಾದ ಕೌಟಿಲ್ಯನ ಅರ್ಥಶಾಸ್ತ್ರವು 32 ತರಹದ ಯಂತ್ರಗಳನ್ನು ಹೆಸರಿಸುತ್ತದೆ. ಕಲ್ಲುಗಳನ್ನು ಎಸೆಯುವ ಯಂತ್ರ ಹಾಗೂ ಅಸಮತೋಲನದ ತೂಕದ ಯಂತ್ರಗಳ ಪ್ರಸ್ತಾಪವು ತಾತ್ವಿಕ ಯಂತ್ರಶಾಸ್ತ್ರದ ಪ್ರಗತಿಯನ್ನೂ ಅದನ್ನು ಬಳಸಿಕೊಳ್ಳಬಲ್ಲ ಅತ್ಯುತ್ಕೃಷ್ಟ ತಾಂತ್ರಿಕತೆಯನ್ನೂ ಸಾರಿ ಹೇಳುತ್ತವೆ.

ದಂಡೈಶ್ಚಕ್ರೈಶ್ಚ ದಂತೈಶ್ಚ ಸರಣಭ್ರಮಣಾದಿಭಿಃ ।
ಶಕ್ತೇರುತ್ಪಾದನಂ ಕಿಂ ವಾ ಚಾಲನಂ ಯಂತ್ರಮುಚ್ಯತೇ ॥

ಚಾಲಕದಂಡಗಳ ಚಕ್ರಗಳ ಅಥವಾ ಬೆಣೆಗಳ ಸತತ ಗಮನ ಅಥವಾ ತಿರುಗುವಿಕೆಯಿಂದ ಶಕ್ತಿಯ ಉತ್ಪತ್ತಿಯನ್ನಾಗಲೀ, ಚಲನೆಯನ್ನಾಗಲೀ ಸಾಧಿಸಬಲ್ಲ ಉಪಕರಣಕ್ಕೆ 'ಯಂತ್ರ' ಎನ್ನುವರು.

ಕಾಷ್ಠಮಯಂ ಸಮವೃತ್ತಂ ಸಮಂತತಃ ಸಮಗುರುಂ ಲಘುಂ ಗೋಲಮ್
ಪಾರದ–ತೈಲ–ಜಲೈಸ್ತಂ ಭ್ರಮಯೇತ್ ಸ್ವಧಿಯಾ ಚ ಕಾಲಸಮಮ್ ॥

ಎಲ್ಲೆಡೆ ಸಮತೂಕವಾಗಿರುವ ಮರದ ಗೋಳವೊಂದನ್ನು ಅದರ ಅಕ್ಷದ ಮೇಲೆ ನಿಲ್ಲಿಸಿ ಪಾದರಸ, ತೈಲ ಹಾಗೂ ನೀರಿನಿಂದ ತನ್ನ ಸುತ್ತ ಪರಿಭ್ರಮಿಸುವಂತೆ ಮಾಡಬೇಕು. ದಕ್ಷಿಣೋತ್ತರವಾಗಿ ತನ್ನ ಅಕ್ಷದ ಮೇಲೆ ನಿಲ್ಲಿಸಲಾದ ಭೂಗೋಳದ ಪ್ರತಿಕೃತಿ ಇದಾಗಿದ್ದು, ತನ್ನ ಸುತ್ತ ಸುಲಲಿತವಾಗಿ ತಿರುಗಲು ಆಸ್ಪದ ಉಳ್ಳದ್ದಾಗಿದೆ. ಪೂರ್ವದಿಗಂತದಲ್ಲಿ ಮೇಷರಾಶಿ ಇದೆಯೆಂದು ಭಾವಿಸಿ ತದ್ವಿರುದ್ಧ ದಿಕ್ಕಿನಲ್ಲಿ ಭೂಮಧ್ಯರೇಖೆಯ ಮೇಲೆ ಒಂದು ಮೊಳೆ ಚುಚ್ಚಬೇಕು. ಇದನ್ನು ಕನ್ಯಾ ಹಾಗೂ ತುಲಾ ರಾಶಿಗಳ ಸಂಗಮ ಸ್ಥಾನವೆಂದು ಭಾಸ್ಕರಾಚಾರ್ಯರು ಗುರುತಿಸಿದ್ದಾರೆ. ಮೊಳೆಗೆ ದಾರದ ಒಂದು ತುದಿಯನ್ನು ಕಟ್ಟಿ, ಅಪ್ರದಕ್ಷಿಣಾಕಾರವಾಗಿ ಅದನ್ನು ಸುತ್ತಿಸಿ, ಇನ್ನೊಂದು ತುದಿಗೆ ಕುಂಬಳಕಾಯಿ ಕಟ್ಟಿ ನೇತುಬಿಡಬೇಕು. ದುಂಡಗಿನ ಆಳವಾದ ಮಡಕೆಯನ್ನು ಧ್ರುವಗಳಿಗೆ ಸಮಾನ ಅಂತರದಲ್ಲಿ ಪೂರ್ವದಿಕ್ಕಿನಲ್ಲಿ ಜೋಡಿಸಬೇಕು. ಆರು ಘಳಿಗೆಗಳಲ್ಲಿ ಒಳಗಿನ ನೀರನ್ನು ಖಾಲಿ ಮಾಡಬಲ್ಲ ಚಿಕ್ಕ ರಂಧ್ರ ಆ ಮಡಕೆಯ ತಳದಲ್ಲಿರುತ್ತದೆ. ನೀರು ತುಂಬಿಸಿ ತೇಲು ಮುಚ್ಚಳವನ್ನು ಸೂರ್ಯಸ್ತಕ್ಕೆ ನೀರಿನಲ್ಲಿ ಬಿಟ್ಟರೆ, ಮಡಕೆಯ ನೀರು ಸೋರಿದಂತೆಲ್ಲ, ಕೆಳಕ್ಕಿಳಿಯುವ ಆ ತೇಲು ಮುಚ್ಚಳವು ಭೂಗೋಳದ ಪ್ರತಿಕೃತಿಯನ್ನು ಸ್ವಯಂಚಾಲಿತವಾಗಿ ದಿನಕ್ಕೆ ಒಂದು ಪ್ರದಕ್ಷಿಣೆಯಂತೆ ತಿರುಗಿಸುತ್ತದೆ.

ಧರ್ಮ

ಅಮಿತಾ ರಾವ್
ದ್ವಿತೀಯ ಬಿ.ಕಾಂ.

ಧರ್ಮ ಎಂಬ ಪದವು 'ಧೃ' ಎಂಬ ಧಾತುವಿನಿಂದ ಉತ್ಪನ್ನಗೊಂಡಿದೆ. "ಧೃ" ಎಂದರೆ ಭದ್ರವಾಗಿ, ಬೀಳದಂತೆ ಹಿಡಿದುಕೋ, ಹೊಂದಿರು, ಇಟ್ಟುಕೋ ಎಂದರ್ಥ. ನಮ್ಮನ್ನು ಮತ್ತು ನಮ್ಮ ಪ್ರಪಂಚವನ್ನು ಹಿಡಿದಿಟ್ಟುಕೊಂಡಿರುವುದೇ ಧರ್ಮ.

ಧರ್ಮೋ ರಕ್ಷತಿ ರಕ್ಷಿತಃ' ಅಂದರೆ ಯಾವುದನ್ನು ಪಾಲಿಸಿದರೆ ಅದು ನಮ್ಮನ್ನು ಪಾಲಿಸುವುದೋ ಆ ನೀತಿನಿಯಮವೇ ಧರ್ಮ.

ಸತ್ಯಕ್ಕೆ ಪ್ರಮಾಣವಾದುದು ಧರ್ಮ. ಸರ್ವಹಿತಕರವಾದ ಲೋಕಕ್ಕೆ ಕ್ಷೇಮಕರವಾದ ಸತ್ಯದ ಕಾರ್ಯವಿಧಾನವೇ ಧರ್ಮ. ದೇವರು ಮತ್ತು ಧರ್ಮದಲ್ಲಿ ಜನ ವ್ಯತ್ಯಾಸ ಕಾಣುವುದಿಲ್ಲ. ಪುರುಷಾರ್ಥಗಳಲ್ಲಿ ಮೊದಲನೆಯ ಸ್ಥಾನ ಧರ್ಮಕ್ಕೆ. ಅಂತೆಯೇ ನಾಲ್ಕನೆಯದಾದ ಮೋಕ್ಷವೂ ಧರ್ಮಸ್ವರೂಪವುಳ್ಳದ್ದು. ಧರ್ಮಕ್ಕೆ ಜಯ ನಿಶ್ಚಿತ.

ವೇದಾಧ್ಯಯನ ಮುಗಿದ ಬಳಿಕ ಶಿಷ್ಯನಿಗೆ ಅನುಶಾಸನ ಮಾಡುತ್ತಾ ಗುರುವು ಮೊದಲು ಉಪದೇಶಿಸುವುದು **सत्यं वद** ಎಂದು. ಅನಂತರದ ಉಪದೇಶ **धर्मं चर** ಇಲ್ಲಿ ಧರ್ಮ ಅಂದರೇನು? ಜಗತ್ತಿನ ಅಭ್ಯುದಯಕ್ಕೆ ಕಾರಣೀಭೂತವಾದ ಗುಣವೇ ಧರ್ಮ. ಯಾವುದು ಆತ್ಮೋನ್ನತಿಗೆ ಕಾರಣವಾಗಿ ಮನುಷ್ಯನ ಹಿರಿಮೆಯನ್ನು ಎತ್ತಿಹಿಡಿಯುತ್ತದೆಯೋ ಅದು ಧರ್ಮ.

ಉಪನಿಷತ್ತುಗಳು ಧರ್ಮವನ್ನು ವರ್ಣಾಶ್ರಮದ ಪರಿಭಾಷೆಯಲ್ಲಿ ವಿವಿಧ ಜಾತಿಗಳ ಮತ್ತು ಶ್ರೇಣಿಗಳ ಸಾಮಾಜಿಕ ಕರ್ತವ್ಯಗಳೊಂದಿಗೆ ಗುರುತಿಸಿದೆ. ಮಹಾಭಾರತವು ಸಹ **राजधर्म, प्रजाधर्म, मित्रधर्म** ಗಳಂತಹ ಕರ್ತವ್ಯಗಳ ಸಂಕೀರ್ಣ ವ್ಯವಸ್ಥೆಯನ್ನು ಅಥವಾ ಕಾಲವನ್ನು ಧರ್ಮ ಎಂದು ಸೂಚಿಸುತ್ತದೆ.

ಧರ್ಮ ಮತ್ತು ವಿಜ್ಞಾನ ಪರಸ್ಪರ ಪೂರಕವಾಗಿರಬೇಕು. ವಿಜ್ಞಾನ ಮನುಷ್ಯನಿಗೆ ವೇಗ ನೀಡಿದರೆ, ಧರ್ಮವು ಮಾರ್ಗವನ್ನು ತೋರುತ್ತದೆ. ಜೀವನದಲ್ಲಿ ಧರ್ಮ ಮತ್ತು ವಿಜ್ಞಾನದ ಸಮತೋಲನ ಇಂದು ಅತಿ ಅವಶ್ಯಕವಾಗಿದೆ. ಇನ್ನೊಂದು ಮುಖ್ಯ ವಿಷಯ ನಿಮ್ಮ ಧರ್ಮದ ಜತೆಗೆ ನೆರೆಯವನ ಮನೆ ಸುಟ್ಟು ಹೋದರೆ ನಿಮ್ಮ ಮನೆಯೂ ಉಳಿಯುವುದಿಲ್ಲ. ಬಿದ್ದವರನ್ನು ಬೀಳುತ್ತಿರುವವರನ್ನು ಇನ್ನು ಮುಂದೆ ಬೀಳಲಿರುವವರನ್ನು ಮೇಲೆತ್ತಬೇಕಾದುದು ಮಾನವ ಧರ್ಮ. ಅಂತೆಯೇ ವಿಚಾರ ಸಿದ್ಧವಾದ ಸತ್ಯದ ಅನುಷ್ಠಾನವೇ ಮಾನವಧರ್ಮ. ಧರ್ಮವು ನಂಬಿಕೆ, ಆಚರಣೆ ಮತ್ತು ಪ್ರತೀಕದ ಆಧಾರದಲ್ಲಿ ನಿಂತಿವೆ.

ಭಾರತೀಯ ಯೋಗದ ಕುರಿತಂತೆ

ಶ್ರೀಹರ್ಷ ಎಂ.ಎನ್.
ಪ್ರಥಮ ಬಿ.ಕಾಂ.

ದೈಹಿಕ, ಮಾನಸಿಕ ಮತ್ತು ಭಕ್ತಿ ಅನುಸಂಧಾನಗೊಂಡ ಒಂದು ಆಚರಣೆಯೇ ಯೋಗ. ಯೋಗವೆಂದೆ ಕೇವಲ ವ್ಯಾಯಾಮ ರೂಪವಲ್ಲ. ಯೋಗ ಎಂಬುದಕ್ಕೆ ವಿಶಾಲ ಅರ್ಥವಿದೆ. ಯೋಗ ಎಂಬ ಪದ ಸಂಸ್ಕೃತದ युज् ಎಂಬ ಧಾತುವಿನಿಂದ ಬಂದಿದ್ದು ಅದಕ್ಕೆ ಸಂಯೋಜನೆ,ನಿಯಂತ್ರಣ ಎಂಬ ಅರ್ಥವಿದೆ. ಹಾಗಾಗಿ ಯೋಗ ಎಂದರೆ ಒಂದು ಆಧ್ಯಾತ್ಮಿಕ ಆಚರಣೆಯೂ ಹೌದು. ಯೋಗ ಎಂದರೆ ಸಾಧಕರು. ಆಸಕ್ತರ ಪಾಲಿಗೆ ಜೀವಾತ್ಮ–ಪರಮಾತ್ಮನನ್ನು ಸಂಪರ್ಕಿಸುವ ಕೊಂಡಿ. ಅದಕ್ಕೇ ಅದು ಒಗ್ಗಟ್ಟಾಗು,ಸಂಯೋಜಿಸು ಎಂಬ ಅರ್ಥವ್ಯಾಪ್ತಿಗಳನ್ನು ಹೊಂದಿದೆ. ಆಧ್ಯಾತ್ಮ ಸಾಧನೆಗೆ ಪಂಚೇಂದ್ರಿಯಗಳು ಬೇಕು. ಮನಸ್ಸು ಹೇಳಿದಂತೆ ದೇಹ ಕೇಳಬೇಕು. ಇದಕ್ಕಾಗಿ ಶರೀರವನ್ನು ರೂಪಿಸಬೇಕು. मनः प्रशमनोपायः योगः इत्यभिदीयते । ಅಂದರೆ ಮನಸ್ಸನ್ನು ಪ್ರಶಾಂತಗೊಳಿಸುವ ಕ್ರಮಬದ್ಧ ಉಪಾಯ. ಅದಕ್ಕಾಗಿ ದೇಹವನ್ನು ಸಿದ್ಧಪಡಿಸುವ ಪ್ರಕ್ರಿಯೆಗಳೇ ಆಸನಗಳು. ಇದರಿಂದ ಯೋಗಾಸನ ಎಂಬ ಪದ ಉತ್ಪತ್ತಿಯಾಗಿದೆ. ಆದ್ದರಿಂದ ಯೋಗ ಎಂದರೆ ದೈಹಿಕ ಮಾನಸಿಕ ಕ್ರಿಯೆ ಸಮ್ಮಿಳಿತಗೊಂಡ ವಿಶಿಷ್ಟ ಸ್ಥಿತಿ. ಧ್ಯಾನ ಆರಂಭದ ಮೂಲ, ಮುಕ್ತಿ ಸಾಧನೆಯ ಮಾರ್ಗ. ಯೋಗವು ಮುಕ್ತಿಯನ್ನು ಹೊಂದಲು ನೆರವಾಗುತ್ತದೆ.

3000 ವರ್ಷಕ್ಕೂ ಹಳೆಯದು :

ಯೋಗ ಈಶ್ವರಪ್ರಣೀತವಾದದ್ದು ಎಂಬ ನಂಬಿಕೆ ಇದೆ. ಧ್ಯಾನಸ್ಥ ಶಿವನ ಕಲ್ಪನೆ ಹಿಂದೂಗಳಲ್ಲಿ ಬಹಳ ಹಿಂದಿನಿಂದಲೇ ಇದೆ. ವೇದ ಉಲ್ಲೇಖಿಸಿರುವಂತೆ ತಪಸ್ವಿಗಳು ಧ್ಯಾನಸ್ಥರಾಗಿರುವುದು ಯೋಗವು ಬಹಳ ಪ್ರಾಚೀನವಾಗಿರುವುದನ್ನು ಸೂಚಿಸುತ್ತದೆ. ಇತಿಹಾಸಕಾರರ ಪ್ರಕಾರ ಯೋಗದ ಉಗಮ ಅನಿರ್ದಿಷ್ಟವಾಗಿದ್ದರೂ ಸಹ ಅದು ಕ್ರಿ.ಪೂ. 3000 ವರ್ಷಕ್ಕಿಂತ ಹಳೆಯದು ಎಂಬ ಅಭಿಪ್ರಾಯವಿದೆ. 6ನೇ ಶತಮಾನದಲ್ಲಿ ಯೋಗ ಶಬ್ದವನ್ನು ಸಂಸ್ಕೃತ ವ್ಯಾಕರಣಕ್ಕೆ ಸೂತ್ರಗಳನ್ನು ಬರೆದ ಪಾಣಿನಿ ಉಲ್ಲೇಖಿಸುತ್ತಾ ಅದು युजिर ಮತ್ತು युज ಧಾತುವಿನಿಂದ ಉತ್ಪತ್ತಿಯಾಗಿದ್ದು ಎನ್ನುತ್ತಾರೆ. ಅಲ್ಲದೇ ವ್ಯಾಸ ಮಹರ್ಷಿಗಳು ಬರೆದ ಯೋಗ ಸೂತ್ರ ಸಮಾಧಿ ಸ್ಥಿತಿಯ ಬಗ್ಗೆ ಹೇಳುತ್ತದೆ. ಧ್ಯಾನ ಪ್ರಜ್ಞೆಯ ಉನ್ನತ ಹಂತಗಳನ್ನು ಅನುಭವಿಸುವ ತಂತ್ರಗಳನ್ನು ಉಪನಿಷತ್ತು ಸಂಪ್ರದಾಯಗಳಲ್ಲಿ ಹೇಳಿದ್ದು ಕಂಡುಬರುತ್ತದೆ. ಹಿಂದೂ ಗ್ರಂಥಗಳ ಬಗ್ಗೆ ಹೇಳುವುದಾದರೆ, ವೇದಗಳಲ್ಲಿ ಋಗ್ವೇದ, ಶ್ವೇತಾಶ್ವತರೋಪನಿಷತ್ತು ಮತ್ತು ಕಠೋಪನಿಷತ್ತುಗಳಲ್ಲಿ ಯೋಗದ ಬಗ್ಗೆ ಹೇಳಲಾಗಿದೆ. ಪುರಾಣದ ಎಳೆಯನ್ನು ತೆಗೆದುಕೊಂಡರೆ, ಕೃಷ್ಣ ಅರ್ಜುನನಿಗೆ ಬೋಧಿಸುವುದು ಕರ್ಮಯೋಗ. ಮುಂದೆ ಕ್ರಿ.ಪೂ. 200 ರಿಂದ ಕ್ರಿ.ಪೂ. 300ರ ಅವಧಿಯಲ್ಲಿ ಪತಂಜಲಿ ಮಹರ್ಷಿ ಪ್ರಣೀತ ಯೋಗಸೂತ್ರ ಪ್ರಸಿದ್ಧವಾಗಿದ್ದು, ಇದು ಹಿಂದಿನ ಋಷಿಮುನಿಗಳ ವಿಚಾರವನ್ನು ಕಲೆಹಾಕಿ ಬರೆದದ್ದು ಎನ್ನಲಾಗುತ್ತದೆ.

ಪತಂಜಲೀ ಯೋಗ ಸೂತ್ರ :

ಚಿತ್ತವೃತ್ತಿಗಳನ್ನು ತಡೆಹಿಡಿಯುವುದು, ಬಾಹ್ಯದ ವಿವಿಧ ವೃತ್ತಿಗಳನ್ನು ದೂರ ಮಾಡಿದಾಗ ಮನಸ್ಸು ಅಂತರ್ಮುಖಿಯಾಗಿ ಚಿತ್ತಶುದ್ಧಿಯಾಗುತ್ತದೆ. ಇದು ಪತಂಜಲೀ ಮಹರ್ಷಿ ಪ್ರಣೀತವಾದ್ದರಿಂದ ಪತಂಜಲೀ ಯೋಗಸೂತ್ರ ಎಂದೇ ಹೆಸರಾಗಿದೆ. ಪತಂಜಲಿ ಮಹರ್ಷಿಗಳು 195 ಸೂತ್ರಗಳಮೂಲಕ ಅಷ್ಟಾಂಗ ಯೋಗ ವಿಧನವನ್ನು ವಿವರಿಸಿದ್ದಾರೆ. ಯೋಗ ಎಂದರೆ ಏನು ಎಂಬ ಬಗ್ಗೆ ಪತಂಜಲಿ ಮಹರ್ಷಿಗಳು योगः चित्तवृत्ति निरोधः ಎಂದು ಹೇಳುತ್ತಾರೆ. ಅಂದರೆ ಯೋಗವು ಸಂಚರಿಸುವ ಮನಸ್ಸನ್ನು ನಿಯಂತ್ರಿಸುವುದು. ಇಲ್ಲಿ ಚಿತ್ತ ಎಂದರೆ ಮನಸ್ಸು, ಬುದ್ಧಿ, ಅಹಂಕಾರ. ಇದು ಪ್ರಕೃತಿ ಪರಿಣಾಮದಿಂದಾಗುವುದು. ಅಂದರೆ ಪುರುಷ ಪ್ರಕೃತಿಯ ಪ್ರತಿಬಿಂಬದಂತೆ, ಸತ್ವ, ರಜೋ, ತಮೋ ಗುಣಗಳಿಂದ ಸೇರಿರುವುದು. ಇದರ ಪರಿಣಾಮದಿಂದ ತಮೋ ಗುಣಗಳಿಂದ ಸೇರಿರುವುದು. ಇದರ ಪರಿಣಾಮದಿಂದ ಚಿತ್ತ ಚೈತನ್ಯಶಾಲಿಯಾಗಿರುತ್ತದೆ. ಈ ಚಿತ್ತ ವಸ್ತುವನ್ನು ಸಂಪರ್ಕಿಸಿದಾಗ ಅದು ವಸ್ತುವಿನ ಆಕಾರ ಹೊಂದುತ್ತದೆ. ಅಂದರೆ ವೃತ್ತಿ. ಇದನ್ನು ನಮ್ಮ ಚೇತನದ ಮೂಲಕ ಬೆಳಗಿದಾಗ, ಜ್ಞಾನ ಸಿದ್ಧಿಸುತ್ತದೆ. ಇದರಿಂದ ಮನಸ್ಸಿನಲ್ಲಿ ಮೂಡುವ ಅಂಶಗಳೇ ತಾನು ತನ್ನದು ಎಂದು ತಿಳಿಯುತ್ತದೆ. ಇದನ್ನು ಸಾಧಿಸುವುದು ಯೋಗದ ಮೂಲಕ. ಆದ್ದರಿಂದಲೇ ಅದು ಚಿತ್ತವೃತ್ತಿ ನಿರೋಧಕ.

ಪತಂಜಲೀ ಅಷ್ಟಾಂಗಯೋಗದಲ್ಲಿ ಈ ಕೆಳಗಿನವುಗಳು ಅಂಗಗಳಾಗಿವೆ.

* ಯಮ – ಹಿಂಸೆ, ಅಸತ್ಯ, ಅತ್ಯಾಸೆ, ಕಳವು, ಕೆಟ್ಟದ್ದನ್ನು ನುಡಿಯುವುದು.
* ನಿಯಮ – ಪರಿಶುದ್ಧತೆ, ಸಂತುಷ್ಟಿ, ಸಂಯಮ, ಸ್ವಾಧ್ಯಾಯ, ದೈವದಲ್ಲಿ ಶರಣಾಗತಿ ಭಾವ.
* ಆಸನ – ವ್ಯಾಯಾಮದ ಪ್ರಕ್ರಿಯೆ, ಧ್ಯಾನಕ್ಕೆ ಪೂರಕವಾದ ಆಸನಗಳು
* ಪ್ರಾಣಾಯಾಮ – ಕ್ರಮಬದ್ಧ ಉಸಿರಾಟ, ಉಸಿರಾಟವನ್ನು ನಿಯಂತ್ರಣದಲ್ಲಿ ಇರಿಸುವುದು
* ಪ್ರತ್ಯಾಹಾರ – ಹೊರ ಜಗತ್ತಿನ ಪ್ರಭುತ್ವವನ್ನು ಭದ್ರಪಡಿಸುವ ಇಂದ್ರಿಯಗಳನ್ನು ನಮ್ಮ ಹಿಡಿತದಲ್ಲಿರಿಸುವುದು
* ಧಾರಣ – ಮನಸ್ಸಿನ ಗಮನವನ್ನು ಕೇಂದ್ರೀಕರಿಸುವುದು. ಇದಕ್ಕಾಗಿ ಸಂಕಲ್ಪ,ಸಂಕಲ್ಪದ ಮೂಲಕ ಕೇಂದ್ರೀಕರಣ.
* ಧ್ಯಾನ – ಕೇಂದ್ರೀಕೃತವಾದ ಸಂಗತಿಯ ಮೇಲೆ ಗಾಢ ಧ್ಯಾನ.
* ಸಮಾಧಿ – ಧ್ಯಾನದ ಗುರಿಯಲ್ಲಿಯೇ ತನ್ನನ್ನು ಮಗ್ನನಾಗಿಸಿಕೊಳ್ಳುವುದು, ಲೀನವಾಗುವ ಒಂದು ಸ್ಥಿತಿ.

ಸಂಸ್ಕೃತದ ಸಾರ

ಅಕ್ಷತಾ ಹೆಗಡೆ
ದ್ವಿತೀಯ ಬಿ.ಕಾಂ

ನಿನ್ನ ವಾಣಿಯ ಸಾರ ಸಾರಿತು
ಮನ ಹೊತ್ತಿಗೆಯೊಳ ಚಿತ್ತಾರ ಬರೆಯಿತು
ಭಾವ ಭಾವನೆಗಳ ತಾಕಿತಲ್ಲವೇ !
ಸತ್ಯದ ಸಾರಗಳ ಭಿತ್ತಿಯದು; ಮರೆವುದಾದರೂ ಹೇಗೆ
ನಿಂತ ಅಲೆಗಳೆ ಸಾಕ್ಷಿ ನಿನ್ನ ಸ್ವರ ರಂಗಣಕೆ,
ಹಲವು ಕಥೆಗಳೆ ಸಾಕು ಇತಿಹಾಸದಂಗಳಕೆ
ಭಾವ ನಲುಗಿತು ನೋಡ ನಿನ್ನ ಪಠಿಸಲು
ಚಿಗುರಿತು ಜೀವದ ಹಸಿರು, ಸಂಸ್ಕೃತವೇ ಸೋನೆಯಾಗಲು
ಸರಿದ ಪರದೆ ತೋರಿತು ಪಾಣಿನಿಯ ಚಿತ್ರ
ತುಂಬು ಬಿಂದಿಗೆ ಜ್ಞಾನ ನಿನ್ನದೇ ಸ್ವತ್ತು
ಸಂಸ್ಕೃತದ ಊಟ ನೀ ಬಿಡಿಸಿಹೆ ಕೇಳು
ಅಳೆದು ಕಳೆದರೂ ಮುಗಿಯದಾಯಿತು ನಿನ್ನ ಸುಜ್ಞಾನದ ಪರಿ
ವಿಜ್ಞಾನ ಪರಿಧಿಗೆ ಸಂಸ್ಕೃತದ ಹರಿವು
ಅರಿವು ಅರಳಿದ ಹಾಗೆ ಸಾಹಿತ್ಯ ಕುಡಿಯೊಡೆದ ಸುಳಿವು
ಕಬ್ಬುಕೊಲಿಗೆರಡು ತುದಿ; ಸಿಹಿವಾಣಿಯ ಸುಧೆ
ಮಾತುಮಾಣಿಕ್ಯವಾದ ಬಳಿಕ ಇದಕ್ಕೆಲ್ಲಿ ಸೋಲು?
ಕರಣ ಕರದಲಿ ಇವಳ ಹಾವಳಿ
ಜೀವ ಜಲಧಿಯಲಿ ಇವಳೆ ಸರಸಿ
ಸಲ್ಲದು ಇವಳಿಗೆ ಅಸಂಸ್ಕಾರದ ತುಣುಕು
ಇವಳಾಗಿರಲು ಇವಳ ಬಿಡುವವರೆ ಜನರು?
ಇವಳ ಸಂಸ್ಕಾರದ ಸಾರ ಅಗಾಧ, ಅನಂತ ಅವರ್ಣನೀಯ

ಪುರಾಣದಿಂದ ವಿಜ್ಞಾನದತ್ತ

ಐಶ್ವರ್ಯ ಕಾಮತ್
ಪ್ರಥಮ ಬಿ.ಎಸ್ಸಿ.

ಪುರಾಣವೆಂದರೆ ಅಸತ್ಯವೆಂದೇ ಸಾಮಾನ್ಯ ನಂಬಿಕೆ. ಪುರಾಣಗಳಲ್ಲಿ ಪ್ರಾಚೀನ ಉಪಾಖ್ಯಾನಗಳೂ ಮತ್ತು ವೀರರ ಕಥೆಗಳೂ ಇವೆ. ಪುರಾಣಗಳು ಗೂಡಾರ್ಥಗಳಿಂದ ಕೂಡಿರುತ್ತವೆ. ಪುರಾಣ ಶಬ್ದದ ಅರ್ಥವಾದರೋ 'ಪುರಾಪಿ ನವಮ್' ಎಂದು. ಪ್ರಾಚೀನವಾದರೂ ಇಂದಿಗೂ ಹೊಸದಾಗಿದ್ದು ಇಂದಿನ ಕಾಲಕ್ಕೆ ಹೊಂದುವಂತಹುದು.

ದುರದೃಷ್ಟಕರ ವಿಷಯವೆಂದರೆ, ಪಾಶ್ಚಾತ್ಯರು ತತ್ತ್ವವನ್ನು ಪುನಃ ಸ್ಥಾಪಿಸಿದ ನಂತರವಷ್ಟೇ ನಮ್ಮಲ್ಲಿ ಪ್ರಾಚೀನ ಗ್ರಂಥಗಳಲ್ಲಿರುವ ವಿಜ್ಞಾನವನ್ನು ಗುರುತಿಸುವ ಕಾರ್ಯವು ಪ್ರಾರಂಭವಾಯಿತು. ಪೌರಾಣಿಕ ಕಥೆಗಳಲ್ಲಿ ಪ್ರತಿಪಾದನೆಗಳ ದೊಡ್ಡ ಪಟ್ಟಿಯೇ ಇದೆ. ಅದರಲ್ಲಿ ಕೆಲವನ್ನು ವೈಜ್ಞಾನಿಕ ಅಂಶಗಳೆಂದು ಈಗ ಗುರುತಿಸಲಾಗುತ್ತಿದೆ. ಮತ್ತೆ ಕೆಲವು ಸಂಗತಿಗಳ ವೈಜ್ಞಾನಿಕತೆಯನ್ನು ಸಿದ್ಧಪಡಿಸುವ ಕೆಲಸ ಇಂದಿಗೂ ಆಗಿಲ್ಲ. ಅವುಗಳ ಬಗ್ಗೆ ಸರಿಯಾಗಿ ಸಂಶೋಧನೆಗಳು ನಡೆದಲ್ಲಿ ನಾಗರಿಕತೆಯ ಉತ್ಕೃಷ್ಟತೆ ಸಿದ್ಧವಾಗುವುದರ ಜೊತೆಗೆ ಇನ್ನೂ ಹೆಚ್ಚಿನ ಪ್ರಯೋಜನಗಳೂ ಆಗಬಹುದಾಗಿವೆ.

ಬ್ರಹ್ಮನ ಆಯಸ್ಸು :

ಕಾಷ್ಠಾಃ ಪಂಚದಶ ಖ್ಯಾತಾ ನಿಮೇಷಾ ಮುನಿಸತ್ತಮ ।
ಕಾಷ್ಠಾಸ್ತ್ರಿಂಶತ್ ಕಲಾ ತಾಸ್ತು ತ್ರಿಂಶನ್ಮೌಹೂರ್ತಿಕೋ ವಿಧಿಃ ॥
ತಾವತ್ಸಂಖ್ಯೈರಹೋರಾತ್ರಂ ಮುಹೂರ್ತೈರ್ಮಾನುಷ ಸ್ಮೃತಮ್ ।
ಅಹೋರಾತ್ರಾಣಿ ತಾವಂತಿ ಮಾಸಃ ಪಕ್ಷದ್ವಯಾತ್ಮಕಃ ॥
ತೈಃ ಷಡ್ಭಿರಯನಂ ವರ್ಷಂ ದ್ವೇಽಯನೇ ದಕ್ಷಿಣೋತ್ತರೇ ।

ದಿವ್ಯೈರ್ವರ್ಷಸಹಸ್ರ್ಯಸ್ತು ಕೃತತ್ರೇತಾದಿ ಸಂಜ್ಞಿತಮ್ ॥
ಚತುರ್ಯುಗಂ ದ್ವಾದಶಾಭಿಸ್ತದ್ವಿಭಾಗಂ ನಿಬೋಧ ಮೇ ।
ದಿವ್ಯಾಬ್ದಾನಾಂ ಸಹಸ್ರಾಣಿ ಯುಗೇಷ್ವಾಹುಃ ಪುರಾವಿದಃ ॥
ಕೃತಂ ತ್ರೇತಾ ದ್ವಾಪರಂ ಚ ಕಲಿಶ್ಚೈವ ಚತುರ್ಯುಗಮ್ ।
ಪ್ರೋಚ್ಯತೇ ತತ್ ಸಹಸ್ರಂ ಚ ಬ್ರಹ್ಮಣೋ ದಿವಸಂ ಮುನೇ ॥

15 ರೆಪ್ಪೆ ಬಡಿತಗಳು	= 1 ಕಾಷ್ಠಾ
30 ಕಾಷ್ಠೆಗಳು	= 1 ಕಲೆ
30 ಕಲೆಗಳು	= 1 ಮುಹೂರ್ತ
30 ಮುಹೂರ್ತಗಳು	= 1 ಹಗಲು ಮತ್ತು ರಾತ್ರಿ
30 ಹಗಲು ಮತ್ತು ರಾತ್ರಿ	= 1 ತಿಂಗಳು
6 ತಿಂಗಳುಗಳು	= 1 ಆಯನ
2 ಆಯನಗಳು	= 1 ವರ್ಷ
12,000 ದಿವ್ಯವರ್ಷಗಳು	= 4 ಯುಗಗಳು ಕೃತ, ತ್ರೇತಾ, ದ್ವಾಪರ ಮತ್ತು ಕಲಿ
1,000 ಚತುರ್ಯುಗಗಳು	= ಬ್ರಹ್ಮನ 1 ದಿನ

ಆಕರ

ವಿಷ್ಣುಪುರಾಣ, ಅಂಶ 1, ಅಧ್ಯಾಯ 3,ಶ್ಲೋಕ 8–11 ಮತ್ತು 15 ವ್ಯಾಸ (ವೇದೋತ್ತರ ಕಾಲ)

ಟಿಪ್ಪಣಿ

1ದಿವ್ಯವರ್ಷ = 360 ಮಾನವ ವರ್ಷಗಳು

12,000 ದಿವ್ಯವರ್ಷಗಳು= 4 ಅಬ್ಜ 32 ಕೋಟಿ (4,32,00,00,000) ಮಾನವ ವರ್ಷಗಳು

1000 ಚತುರ್ಯುಗಗಳು= ವಿಶ್ವದ ಸೃಷ್ಟಿಕರ್ತನಾದ ಬ್ರಹ್ಮನ ಒಂದು ದಿನ.

ಪಾಶ್ಚಾತ್ಯ ಉಲ್ಲೇಖ:

ಮಹಾಸ್ಫೋಟವು ವಿಶ್ವದಲ್ಲೇ ಅತಿ ಹೆಚ್ಚಿನ ಸಂಗ್ರಹವಾಗಿದೆ. ಮಹಾಸ್ಫೋಟದಿಂದಾದುದು ಅತಿ ದೊಡ್ಡ ವಿಶ್ವ. ಅದರಲ್ಲಿನ ಕಲ್ಪನಾತೀತವಾದ ಸಂಖ್ಯೆಗಳು ಮೂಡಿಸುವಂತಹವು. ಈ ತಂತ್ರವು ಕ್ರಿಸ್ತಶಕ 5ನೆಯ ಶತಮಾನದ ಖಗೋಳಶಾಸ್ತ್ರಜ್ಞರು ಮೊಟ್ಟಮೊದಲಿಗೆ ಪ್ರತಿಪಾದಿಸಿದುದು. ನಾಲ್ಕು ಬಿಲಿಯನ್ ವರ್ಷಗಳಿಗಿಂತ ಭೂಮಿಯ ಆಯುಸ್ಸು ಹೆಚ್ಚಿನದೆಂದು ಅಂದಾಜು ಮಾಡಿದವರಲ್ಲಿ ಭಾರತೀಯರೇ ಮೊದಲಿಗರು.

ಭಾಷೆ

ಸುಷ್ಮಾ ಭಟ್
ದ್ವಿತೀಯ ಬಿ.ಕಾಂ

ಭಾರತದ ನಾವೆಲ್ಲಾ ತಿಳಿದಂತೆ ವಿವಿಧತೆಯಲ್ಲಿ ಏಕತೆಯನ್ನು ಎತ್ತಿ ತೋರುವ ದೇಶ. ಹಲವಾರು ಭಾಷೆ, ಸಂಸ್ಕೃತಿ, ಧರ್ಮವನ್ನೊಳಗೊಂಡ ದೇಶ. ಅದರಂತೇ ನಮ್ಮ ದೇಶದ ಭಾಷೆಗಳ ನಡುವಿನ ಸಂಬಂಧವನ್ನು ಸ್ವಲ್ಪ ಮಟ್ಟಿಗೆ ಅರಿಯೋಣ.

ಪೃಥಿವಿಯಾ ಪ್ರಥಮ ಪ್ರಭಾತದಲಿ
ಇತಿಹಾಸ ದೃಷ್ಟಿಗಸ್ಪಷ್ಟ ಅಜ್ಞಾತ ಪ್ರಾಚೀನದಲ್ಲಿ
ಚಿರಧವಲ ಹಿಮಶೈಲ ಪೃಥುಲೋರುಪ್ರೇಂಖದಲಿ
ನವಜಾತ ಶಿಶುವಾಗಿ ನಲಿದ ಮಂಗಲಮಯಿ
ಆರ್ಯಮಾತೆಯ ಮೊದಲ ತೊದಲ ನಾಗರಿಕತೆಯ
ಸಾಮಗಾನದ ವಾಣಿಯಿಂದ ಮಾಡಿದ ಮೂರ್ತಿ
ನೀನೆಲಾ ಸಂಸ್ಕೃತದ ವಾಗ್ದೇವಿ !

ಕುವೆಂಪುರವರ ಮೇಲಿನ ಮಾತುಗಳೇ ತಿಳಿಸುವಂತೆ ಪೃಥ್ವಿಯ ಪ್ರಭಾತದಲ್ಲಿ ಅಂದರೆ ಉಗಮದಲ್ಲಿ ಪ್ರಥಮ ಭಾಷೆಯು ಸಂಸ್ಕೃತ. ಪ್ರಾಚೀನತೆಯು, ಇತಿಹಾಸವು ದೃಷ್ಟಿಗಸ್ಪಷ್ಟವಾದುದು. ನಾಗರೀಕತೆಯ ಮೊದಲ ತೊದಲ ನುಡಿಯು ಸಂಸ್ಕೃತವೇ ಆಗಿದೆ. ಇನ್ನು ಕನ್ನಡದ ಬಗ್ಗೆ ಕೂಡ ಕುವೆಂಪು ಅವರೇ ಹೇಳಿದ ಸಾಲುಗಳಿವು.

ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು
ಕಾಮಬಿಲ್ಲನು ಕಾಣುವ ಕವಿಯೊಳು
ಲೆಕ್ಕನೆ ಮನ ಮೈ ಮರೆಯುವುದು.

ಕನ್ನಡ ಎಂದಾಕ್ಷಣ ಕನ್ನಡಿಗರು, ಕನ್ನಡ ಪ್ರೇಮಿಗಳು ಒಮ್ಮೆ ರೋಮಾಂಚನಗೊಳ್ಳುವುದಂತೂ ನಿಜ. ಕನ್ನಡ ಹಾಗೂ ಸಂಸ್ಕೃತ ಈ ಎರಡೂ ಶ್ರೇಷ್ಠ ಭಾಷೆಗಳ ಬಾಂಧವ್ಯವನ್ನು ಒಂದಿಷ್ಟು ಹಂಚಿಕೊಳ್ಳುತ್ತೇನೆ.

ಪರ ರಾಷ್ಟ್ರಗಳಲ್ಲಿ ಭಾರತಕ್ಕೆ ಮೊದಲು ಗೌರವವನ್ನು ತಂದು ಕೊಟ್ಟಿದ್ದು ನಮ್ಮ ನಾಡಿನಲ್ಲಿ ಸಾವಿರಾರು ವರ್ಷಗಳ ಹಿಂದೆ. ಸಂಸ್ಕೃತದಲ್ಲಿ ಬರೆಯಲ್ಪಟ್ಟಿದ್ದ ವೇದ, ಉಪನಿಷತ್ತು ಮತ್ತು ಇತಿಹಾಸ, ಪುರಾಣ ಹಾಗೂ ಮಹಾಕಾವ್ಯಗಳೆಂಬುದು ಜಗತ್ತಿಗೇ ತಿಳಿದ ವಿಷಯ. ಸಂಸ್ಕೃತ ಭಾಷೆಗೂ ಇಂಡೋ ಯುರೋಪಿಯನ್ ಭಾಷೆಗಳಿಗೂ ನಿಕಟ ಸಂಬಂಧವಿರುವುದನ್ನು ಭಾಷಾ ಶಾಸ್ತ್ರವು ಮೊದಲು ಹೊರಗೆಳೆಯಿತು. ಅನಂತರ ತುಲನಾತ್ಮಕ ಸಂಶೋಧನೆಗಳಿಂದ ಭಾರತೀಯ ಭಾಷೆಗಳೆಲ್ಲವುಗಳಲ್ಲೂ ಅತ್ಯಂತ ನಿಕಟವಾದ ಸಂಬಂಧವಿರುವ ಸ್ವಾಭಾವಿಕತೆಯನ್ನು ಎತ್ತಿ ಹೇಳಲಾಯಿತು. ಸಂಸ್ಕೃತ ಹಾಗೂ ಗ್ರೀಕ್ ಬಾಷೆಗಳಲ್ಲಿಯ

ನಾಟಕಗಳ ಅಂಗಗಳಲ್ಲಿ ಸಾಮ್ಯಾಂಶಗಳಿರುವುದಕ್ಕಿಂತಲೂ ಹೆಚ್ಚು ಪ್ರಮಾಣದ ಸಾಮ್ಯಾಂಶಗಳು ನಮ್ಮ ಭಾಷೆಗಳಲ್ಲಿರುವುದನ್ನು ನಮ್ಮ ಜೀವನದಲ್ಲಿ ಇಂದಿಗೂ ಕಾಣುತ್ತೇವೆ.

गच्छत्वार्यः पुनर्दर्शनाय ಎಂಬ ಸಂಸ್ಕೃತದ ಬಳಕೆಗೆ 'ನಾವು ಹೋಗಿ ಬರುತ್ತೇವೆ' ಎಂಬ ಕನ್ನಡ ಸತ್‌ಸಂಪ್ರದಾಯವು ಸಮಾನವಾದದ್ದು. ಇಂಗ್ಲೀಷ್‌ನಂತೇ ಸಂಸ್ಕೃತವೂ ಒಂದು ಭಾಷೆ. ಇಂಗ್ಲೀಷ್ ಶಬ್ದಕೋಶದಲ್ಲಿ ಆಂಗ್ಲೇತರ ಪದಗಳನ್ನು ಹೇಗೆ ಸೇರಿಸಿಕೊಂಡು ಬರಲಾಗುತ್ತದೆಯೋ ಹಾಗೇ ಸಂಸ್ಕೃತವೂ ತನ್ನ ಬೆಳವಣಿಗೆಯಲ್ಲಿ ಸಂಸ್ಕೃತೇತರ ಭಾಷೆಗಳಲ್ಲಿ ಪ್ರಮುಖವಾದವುಗಳಿಂದ ಎಷ್ಟೋ ಪದಗಳನ್ನು ತೆಗೆದುಕೊಂಡಿರಲೇಬೇಕು ಎಂಬುದನ್ನು ಗೃಹೀತವೆಂದು ತಿಳಿದುಕೊಳ್ಳಲಾಗಿದೆ. ಸಂಸ್ಕೃತಕ್ಕೆ ಇತರ ಭಾರತೀಯ ಭಾಷೆಗಳು ಎಷ್ಟು ಋಣಿಗಳಾಗಿವೆಯೋ ಅಷ್ಟೇ ಸಂಸ್ಕೃತವೂ ಅವುಗಳಿಗೆ ಋಣಿಯಾಗಿದೆ, ಎನ್ನಲು ಸ್ಪಷ್ಟವಾದ ಆಧಾರಗಳ ಸಂಖ್ಯೆ ಅಧಿಕವಾಗಿರದಿದ್ದರೂ ಸಂಸ್ಕೃತಲೇಖಕರೆಲ್ಲರೂ ಭಾರತೀಯರೇ ಆಗಿರುವುದರಿಂದ ಅವರು ತಮ್ಮ ಹಾಗೂ ತಮ್ಮ ಸುತ್ತಮುತ್ತಲಿನ ಇತರ ಭಾಷಿಕರಿಂದ ತಮ್ಮ ಸಂಸ್ಕೃತ ಲೇಖನಗಳಿಗೆ ಬೇಕಾದ ವಿಚಾರ, ಪದ, ಪದ–ಸಂಹತಿ, ಮುಂತಾದವುಗಳನ್ನು ಪಡೆದಿರಲೇಬೇಕು ಎಂಬುದು ಸ್ವತಃ ಸಿದ್ಧ. ಪ್ರೊ. ಗುರುಪಾದ ಹೆಗಡೆ ಅವರೂ ತಮ್ಮ ಲೇಖನಗಳಲ್ಲಿ ಕನ್ನಡಿಗರು ಬರೆದ ಸಂಸ್ಕೃತ ಗ್ರಂಥಗಳನ್ನು ಉದಾಹರಿಸಿದ್ದಾರೆ. ಇನ್ನು ಒಂದು ಭಾಷೆಯು ಇನ್ನೊಂದರಿಂದ ಪದಗಳನ್ನು ತೆಗೆದುಕೊಳ್ಳುವಾಗ ಉಚ್ಚಾರಗಳ ಬದಲಾವಣೆಗಳಾಗುವುದು ಅನಿವಾರ್ಯ. ಆಂಗ್ಲರ ಬಾಯಲ್ಲಿ ಚಿತ್ರದುರ್ಗವು "ಚಿಟ್ಟಲ್ ಡ್ರಗ್" ಎಂಬುದಾಗಿಯೂ ವಿಶಾಖಪಟ್ಟಣವು "ವಿಜಾಗಪೆಟಾಮ್" ಎಂಬುದಾಗಿಯೂ, ಧಾರವಾಡವು "ಧಾರವಾರ್" ಎಂಬುದಾಗಿಯೂ ಪರಿವರ್ತನಹೊಂದಿದ್ದು ಸುವಿದಿತ. ಇಂತಹ ಸಾಧ್ಯತೆಯನ್ನು ಅಲ್ಲಗಳೆಯಲು ಸಾಧ್ಯವಾಗದುದರಿಂದಲೇ "ಬ್ರಹ್ಮ" ಎಂಬ ಪದದಿಂದ "ಎಬ್ರಹಾಮ್" ಮತ್ತು "ಇಬ್ರಹಾಮ್" ಎಂಬ ಪದಗಳು ಹುಟ್ಟಿದವೆಂದು ಹೇಳಿದ್ದುಂಟು. ಇಂಥ ಕೆಲ ಉದಾಹರಣೆಗಳು ವಿವಾದಸ್ಪದವಾಗಿಯೇ ಉಳಿಯುವವು ಎನ್ನಿಸಿದರೂ ಅವಿವಾದಾಸ್ಪದವಾದ ತದ್ಭವಗಳೆಷ್ಟೋ ದೊರಕುವುದೂ ಅಷ್ಟೇ ಸತ್ಯವಾಗಿದೆ. ತಮಿಳಿನ "ಪಂದಲ್" ಕನ್ನಡದಲ್ಲಿ "ಹಂದರ" ಇಂಗ್ಲೀಷ್‌ನಲ್ಲಿ "ಪೆಂಡಾಲ್' ಎಂದು ಬಳಸಲ್ಪಟ್ಟಿದೆ. ಸಂಸ್ಕೃತದಲ್ಲಿ ನೀರಿಗೆ 30ಕ್ಕೂ ಹೆಚ್ಚು ಪದಗಳಿದ್ದರೂ ಕನ್ನಡದ ನೀರ್ ಎಂಬ ಪದವನ್ನದು ತೆಗೆದುಕೊಂಡಿದೆ ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ. ಕನ್ನಡದಲ್ಲಿ ನೀರಿಗೆ "ನೀರು" ಎಂಬುದೊಂದೇ ಶಬ್ದವಿದೆ. ಆದರೆ ಗ್ರೀಕ್ ಸಮುದ್ರ ದೇವತೆಯನ್ನು "ನೇರಿಯಸ್" ಎಂದು ಕರೆದಿರುವುದು ಪುನಃ ಸಂದೇಹಕ್ಕೆ ಎಡೆಮಾಡಿಕೊಟ್ಟಿದೆ. ಹೀಗೆ ತಳುಕು ಹಾಕಿಕೊಂಡ ಭಾಷಾ ಸಮಸ್ಯೆಗಳು ಭಿನ್ನ ಭಾಷಿಕರ ನಿಕಟ ಸಂಪರ್ಕವನ್ನು ಎತ್ತಿ ತೋರಿಸುತ್ತದೆ. ಕನ್ನಡದ ದೊಡ್ಡ ಕವಿಯಾದ ರಾಘವಾಂಕನು ತನ್ನನ್ನು "ಉಭಯಕವಿ ಕಮಲ ರವಿ" ಎಂದು ಬಣ್ಣಿಸಿಕೊಂಡಿರುವುದು. ಅಂದಿನ ಕನ್ನಡಿಗರೆಲ್ಲರ ಸವ್ಯಸಾಚಿತ್ವಕ್ಕೆ ಉದಾಹರಣೆಯನ್ನು ನೀಡುತ್ತದೆ. ಈಗಲೂ ನಮ್ಮಲ್ಲಿ ಬಹುಭಾಷಾ ವಿದ್ವಾಂಸರು ಬಹುಭಾಷಾತಜ್ಞರಾದ ಕವಿಗಳೂ ಇದ್ದಾರೆ. ಅದರಲ್ಲೂ ಕನ್ನಡ, ಸಂಸ್ಕೃತಗಳ ಸಂಬಂಧವು ಕನ್ನಡ ಮತ್ತು ಇತರ ಭಾಷೆಗಳೊಳಗೆ ಇರುವ ಸಂಬಂಧಕ್ಕಿಂತ ಹೆಚ್ಚು ನಿಕಟವಾದುದೆಂಬುದನ್ನು ಈವರೆಗಿನ ಕನ್ನಡ ಗ್ರಂಥಗಳು ಉದಾಹರಿಸುತ್ತವೆ ಹೀಗೆ ಬಣ್ಣಿಸುತ್ತಾ ಹೋದರೆ ಮುಗಿಯದಷ್ಟು ವಿಷಯಗಳಿವೆ.

ನಮ್ಮ ಭಾಷೆಯನ್ನು ಉಳಿಸಿಬೆಳೆಸಿಕೊಂಡು ಹೋಗುವುದು ನಮ್ಮ ಕರ್ತವ್ಯ. ಆ ನಿಟ್ಟಿನಲ್ಲಿ ಇದೊಂದು ಸಣ್ಣ ಪ್ರಯತ್ನವಷ್ಟೆ. ಎಲ್ಲರೂ ನಮ್ಮ ಭಾಷೆ ಎಂಬ ಅಭಿಮಾನವನ್ನು ಹೊಂದಿರಬೇಕು. ಹೀಗೆ ನಮ್ಮ ಭಾಷೆಯನ್ನು ಉಳಿಸಿ ಬೆಳೆಸಿಕೊಂಡು ಹೋಗೋಣ.

मौनं कालविलंबश्च प्रयाणं भूमिदर्शनम् ।
भ्रुकुट्यन्यमुखी वार्ता नकारः षड्विधः स्मृतः ॥

ಮೌನ, ವಿಲಂಬಿಸುವುದು, ಹೊರಟುಹೋಗುವುದು, ಭೂಮಿಯನ್ನೇ ನೋಡುತ್ತಿರುವುದು, ಹುಬ್ಬನ್ನು ಓರೆಯಾಗಿಸಿಕೊಂಡಿರುವುದು ಮತ್ತು ಅನ್ಯರೊಂದಿಗೆ ಮಾತಾಡುತ್ತಿರುವುದು ಎಂಬುದಾಗಿ ನಷೇಧದ ಐದು ರೂಪಗಳು.

यश्च नंबं परशुना यश्चैनं मधुसर्पिषा ।
यश्चैनं गंधमाल्याद्यैः सर्वस्य कटुरेव सः ॥

ಯಾರು ಕಹಿಬೇವನ್ನು ಕೊಡಲಿಯಿಂದ ಕಡಿಯುತ್ತಾರೋ, ಯಾರು ತುಪ್ಪ, ಜೇನು ಮೊದಲಾದುವುಗಳಿಂದ ಸಿಂಪಡಿಸುತ್ತಾರೋ, ಯಾರು ಗಂಧ, ಮಾಲೆ ಮೊದಲಾದುವುಗಳಿಂದ ಪೂಜಿಸುತ್ತಾರೋ ಅವರೆಲ್ಲರಿಗೂ ಅದು ಕಹಿಯೇ ಆಗಿರುತ್ತದೆ. ಯಾರಿಗೂ ಸಿಹಿಯಾಗಿರುವುದಿಲ್ಲ.

ಗೀತೆಯ ಬೆಳಕಿನಲ್ಲಿ ವ್ಯಕ್ತಿತ್ವ ವಿಕಸನ

(ಯಶಸ್ಸಿಗೆ ಬೇಕು ಕೌಶಲದ ಜೊತೆ ಸಮತ್ವ)

ಅನುಶ್ರೀ ಎಲ್.ಎಸ್.
ದ್ವಿತೀಯ ಬಿ.ಎಸ್ಸಿ.

'ಯೋಗಃ ಕರ್ಮಸು ಕೌಶಲಂ' ಎಂಬುದು ಭಗವದ್ಗೀತೆಯ ಪ್ರಸಿದ್ಧ ಸೂಕ್ತಿಗಳಲ್ಲೊಂದು. ಅದರ ಅರ್ಥವ್ಯಾಪ್ತಿ ತುಂಬ ವಿಶಾಲವಾದುದು. ಅಧ್ಯಾತ್ಮಿಕ ಅರ್ಥಗಳನ್ನು ಬಿಟ್ಟು ವ್ಯಾವಹಾರಿಕ ಜೀವನಕ್ಕೆ ಅನ್ವಯಿಸುವ ಅರ್ಥವನ್ನೇ ತೆಗೆದುಕೊಂಡರೂ ಅದರ ಅರ್ಥ ಆಧುನಿಕ ಕಾಲದ ಜೀವನಕ್ಕೆ ನೂರಕ್ಕೆ ನೂರು ಅನ್ವಯಿಸುತ್ತದೆ.

ಆಧುನಿಕ ವ್ಯಕ್ತಿವಿಕಸನದ ಗುರುಗಳೂ, ನಿರ್ವಹಣಾತಜ್ಞರೂ, ಬಳಸುತ್ತಿರುವ Multi Efficiency, Effectiveness, Skill, Result oriented Action ಮುಂತಾದ ಪದಪುಂಜಗಳು ಹೇಳುವುದು ಇದನ್ನೇ. ಇಂದು ಇಡೀ ಪ್ರಪಂಚ ಬಯಸುತ್ತಿರುವುದು, ಆರಾಧಿಸುತ್ತಿರುವುದು ಉತ್ಕೃಷ್ಟತೆಯನ್ನು, ಕಾರ್ಯಕೌಶಲ್ಯವನ್ನು ಅರ್ಥಾತ್ ನಿರ್ದಿಷ್ಟ ಕಾಲಮಿತಿಯೊಳಗೆ, ನಿರ್ದಿಷ್ಟ ಕಾರ್ಯವನ್ನು ಪರಿಪೂರ್ಣತೆಯ ಪರಾಕಾಷ್ಠೆಯೊಂದಿಗೆ ಸಾಧಿಸುವುದು. ಇಂತಹ ಪರಮೋತ್ಕೃಷ್ಟತೆಯ ಸಿದ್ಧಿಗೆ ಬೇಕೇಬೇಕು ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಯುತ ಕೌಶಲ.

ಕೇವಲ ಇಚ್ಛೆಗೆ ಶಕ್ತಿಯಿಲ್ಲ. ಅದು ಸಂಕಲ್ಪ ಆಗಿ ಗಟ್ಟಿಯಾದಾಗ ಮಾತ್ರ ಅದರಲ್ಲಿ ಶಕ್ತಿ ಸನ್ನಿಹಿತವಾಗುತ್ತದೆ. ಜೀವನದಲ್ಲಿ ಅದ್ಭುತ ಯಶಸ್ಸನ್ನು ಗಳಿಸಬೇಕೆಂಬ ಇಚ್ಛೆ ಎಲ್ಲರಲ್ಲೂ ಇರುತ್ತದೆ. ಆದರೆ ಅದಿದ್ದ ಮಾತ್ರಕ್ಕೆ ಶಕ್ತಿ ಸಂಚಾರ ಆಗದು. There is no 'wish power', only will power', ಆದ್ದರಿಂದ ಮೊದಲು ಇಚ್ಛೆ ಎಂಬುದು ಇಚ್ಛಾಶಕ್ತಿಯ ರೂಪ ತಳೆಯಬೇಕು.

ಕಾರ್ಯವನ್ನು ಮಾಡಬೇಕೆಂಬ ಸಂಕಲ್ಪವೇನೋ ಇದೆ ಎಂದ ಮಾತ್ರಕ್ಕೆ ಯಶಸ್ಸು ಒಲಿಯುವುದೇ? ಇಲ್ಲಿ ಅದಕ್ಕೆ ಆ ಕಾರ್ಯವನ್ನು ಕೈಗೂಡಿಸುವ ಕುರಿತಾದ ಸೂಕ್ತ ಜ್ಞಾನ ಬೇಕು. ಇದು ಗುರಿಯನ್ನು ಸೇರುವ ದಾರಿಯ ತಿಳಿವಿನಂತೆಯೇ ಸೈ. ದಾರಿಯ ಬಗ್ಗೆ ಸರಿಯಾದ ತಿಳಿವಳಿಕೆ ಇದ್ದರೆ ಗುರಿ ಸೇರುವುದು ಹೇಗೆ ಸುಲಭವೋ ಹಾಗೆಯೇ ಇಚ್ಛಾಶಕ್ತಿಯ ಜೊತೆ ಜ್ಞಾನಶಕ್ತಿ ಇದ್ದಲ್ಲಿ ಸಾಧನೆ ಸುಗಮ.

ಇಚ್ಛಾಶಕ್ತಿ ಜ್ಞಾನಶಕ್ತಿಗಳಿದ್ದರೂ ಅವು ಕ್ರೀಯಾಶಕ್ತಿಯ ಸಾಂಗತ್ಯದಿಂದ ಕ್ರೀಯಾರೂಪಕ್ಕೆ ಬಾರದೇ ಹೋದರೆ ಅವುಗಳಿದ್ದು ಫಲವಿಲ್ಲ. ಕ್ರಿಯಾಶಕ್ತಿ ಏಕಾಗ್ರತೆ, ಶ್ರದ್ಧೆ, ಸೃಜನಶೀಲತೆಗಳನ್ನೆಲ್ಲ ಒಳಗೊಂಡಿರುತ್ತದೆ. ಅವೆಲ್ಲವೂ ಸೇರಿದಾಗ ಮಾಡಿದ ಕೆಲಸದಲ್ಲಿ ಪರಿಪೂರ್ಣತೆಯ ತುಡಿತ, ಉತ್ಕೃಷ್ಟತೆಯ ದಾಹ ಉಂಟಾಗುತ್ತದೆ. ಆದ್ದರಿಂದ ಕ್ರೀಡೆ ಇರಲಿ, ಕಲೆ ಇರಲಿ, ಉದ್ಯಮ ಇರಲಿ, ವಿಜ್ಞಾನ ಇರಲಿ, ವ್ಯಾಪಾರ ಇರಲಿ, ಉದ್ಯೋಗ ಇರಲಿ– ಅದರಲ್ಲಿ ಉತ್ಕೃಷ್ಟತೆಯನ್ನು ಸಾಧಿಸಲು, ಪರಿಪೂರ್ಣತೆಯ ಪರಾಕಾಷ್ಠೆಗೇರಲು ಬೇಕೇ ಬೇಕಾದ್ದೇ ಈ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳ ತ್ರಿವೇಣಿ ಸಂಗಮ. ಇಚ್ಛಾಶಕ್ತಿಯ ರಥಕ್ಕೆ ಕ್ರಿಯಾಶಕ್ತಿಯ ಕುದುರೆಗಳನ್ನು ಕಟ್ಟಿ ಜ್ಞಾನಶಕ್ತಿ, ಸಾರಥಿ ಆದಾಗಲೇ ಶ್ರೇಯಸ್ಸಿನ ಶಿಖರ ತಲುಪುವ ಅಥವಾ ಕಾರ್ಯಕೌಶಲದ ಪರಾಕಾಷ್ಠೆ ಸಾಧಿಸುವ ಸಾಮರ್ಥ್ಯ ವ್ಯಕ್ತವಾಗುತ್ತದೆ.

ಆದರೆ ಯಶಸ್ಸಿನ ಸಾಧನೆಗೆ ಈ ಕಾರ್ಯಕೌಶಲದ ಜೊತೆಜೊತೆಗೇ ಮೈಗೂಡಬೇಕಾದ ಮಹಾನ್ ಗುಣ ಒಂದಿದೆ– ಅದೇ ಸಮತ್ವ, 'ಸಮತ್ವಂ ಯೋಗ ಉಚ್ಯತೆ' ಎಂಬುದೇ ಅದರ ಹಿರಿಮೆ ಸಾರುವ ಗೀತಾ ವಾಕ್ಯ. ಈ ಸಮತ್ವ ಎಂದರೇನು?

ಸಮತ್ವ ಎಂಬ ಪದಕ್ಕೆ ಸಮಾನತೆ, ಸಮತೂಕ, ಸಮಚಿತ್ತ, ಸಮತೋಲನ, ಸ್ಥಿತಪ್ರಜ್ಞೆ ಮುಂತಾದ ಅರ್ಥಗಳಿವೆ. ಇದು ಕಾರ್ಯಕೌಶಲಕ್ಕೂ, ಅದರಿಂದುಂಟಾಗುವ ಫಲಕ್ಕೂ, ಆ ಫಲ ನಮ್ಮ ಮೇಲೆ ಉಂಟುಮಾಡುವ ಪರಿಣಾಮಕ್ಕೂ ಅನ್ವಯಿಸುತ್ತದೆ. ಮೊದಲನೆಯದಾಗಿ ಯಾವ ಕಾರ್ಯವನ್ನು ಮಾಡುವಾಗಲೂ ನಮ್ಮಲ್ಲಿ ಮಾನಸಿಕ ಸಮಚಿತ್ತ ಇರಬೇಕಾಗುತ್ತದೆ. ಅದಿಲ್ಲದಿದ್ದರೆ ಕಾರ್ಯಕೌಶಲಕ್ಕೇ ಧಕ್ಕೆ ಆಗುತ್ತದೆ. ಉದಾಹರಣೆಗೆ ನೀವು ಕಾರು ಡ್ರೈವ್ ಮಾಡಲು ಕಲಿಯುತ್ತಿದ್ದೀರೆಂದೆಣಿಸಿ, ಆರಂಭದಲ್ಲಿ ನಿಮ್ಮ ಮನಸ್ಸು ಉದ್ವಿಗ್ನವಾಗಿರುತ್ತದೆ.

ಹಾಗಾಗಿ ಸಮಚಿತ್ತ ಸಾಧ್ಯವಾಗಿರುವುದಿಲ್ಲ. ಆದರೆ ಕೆಲವು ವಾರಗಳಲ್ಲೇ ಮನಸ್ಸಿಗೆ ಸಮಸ್ಥಿತಿ ಬರುತ್ತದೆ. ಆಗ ಆತಂಕ, ಭಯ, ಉದ್ವೇಗ, ಟೆನ್‌ಶನ್ ಎಲ್ಲ ಮಾಯವಾಗುತ್ತದೆ. ಕಾರಿನಲ್ಲಿ ಕ್ಯಾಸೆಟ್ ಸಂಗೀತ ಕೇಳುತ್ತಲೋ ಅಥವಾ ಪಕ್ಕದಲ್ಲಿರುವವರೊಡನೆ ಮಾತಾಡುತ್ತಲೋ ವಾಹನ ಚಾಲನೆ ಸಲೀಸಾಗಿ ಮಾಡಲಾಗುತ್ತದೆ. ಇದು ಒಂದು ಬಗೆಯ ಸಮತ್ವ. ಇದು ನಾವು ಜೀವನದಲ್ಲಿ ಅಗತ್ಯವಾಗಿ ಸಾಧಿಸಬೇಕಾದ ಗುಣ. Enthusiasm without excitement ಎಂದೂ ಇದನ್ನು ಸ್ಪಷ್ಟೀಕರಿಸಬಹುದು.

ಸಮತ್ವದ ಇನ್ನೊಂದು ಅರ್ಥವೆಂದರೆ ಮಾಡಿದ ಕಾರ್ಯದ ಪರಿಣಾಮವನ್ನು ಸಮಾಧಾನದಿಂದ ಸ್ವೀಕರಿಸುವ ಮನೋಭಾವ, ಎಷ್ಟೇ ಕಾರ್ಯಕೌಶಲ ಇದ್ದರೂ ಕೆಲವೊಮ್ಮೆ ನಮ್ಮನ್ನು ಮೀರಿದ ಶಕ್ತಿಗಳಿಂದಾಗಿ ನಿರೀಕ್ಷಿತ ಪರಿಣಾಮ ಆಗದಿರಬಹುದು. ಆಗ ನಾವು ನಿರಾಶೆ, ಹತಾಶೆ, ಖಿನ್ನತೆಗಳಿಗೆ ಶರಣಾಗಬಾರದು. 100 ಅಂಕಗಳನ್ನು ನಿರೀಕ್ಷಿಸಿದ ವಿದ್ಯಾರ್ಥಿಗೆ 95 ಅಂಕಗಳು ಬಂದಾಗ ನಿರಾಶೆಯಾಗುವುದು ಸಹಜ. ಆದರೆ ಅದು ಆತ್ಮಹತ್ಯೆಯ ಮಟ್ಟಕ್ಕೆ ಅವನನ್ನು ಕೊಂಡೊಯ್ಯಬಾರದು. ಜೀವನದಲ್ಲಿ ಅನಂತ ಸಾಧ್ಯತೆಗಳಿವೆ, ಅಸಂಖ್ಯೆ ಅವಕಾಶಗಳಿವೆ ಎಂಬ ಪರಮ ಸತ್ಯವನ್ನು ನೆನಪಿಸಿಕೊಂಡು, ನಿರಾಶೆಯನ್ನು ಜೀರ್ಣಿಸಿಕೊಳ್ಳಬೇಕು. ಇದನ್ನು ನಿರ್ವಹಣಾ ಶಾಸ್ತ್ರದಲ್ಲಿ Frustration Tolerance ಎಂದು ಕರೆಯುತ್ತಾರೆ. ಇದು ಯಶಸ್ವೀ ನಾಯಕತ್ವದಲ್ಲಿ ಇರಲೇಬೇಕಾದ ಒಂದು ಪ್ರಧಾನ ಗುಣ. ಇದೇ ಮಾನಸಿಕ ಸಮತೋಲನ ಅಥವಾ ಸಮತ್ವ. ಆದ್ದರಿಂದ ವ್ಯಕ್ತಿತ್ವ ವಿಕಾಸಕ್ಕೆ ಅಥವಾ ಪ್ರಬುದ್ಧತೆಗೆ ಕಾರ್ಯಕೌಶಲದ ಜೊತೆ ಸಮತ್ವವೂ ಬೇಕು. ಕೌಶಲದಿಂದ ಪರಿಪೂರ್ಣತೆಯ ಕನಸು ನನಸಾದರೆ, ಸಮತ್ವದಿಂದ ಕೌಶಲದ ಪರಿಪಾಲನೆಗೆ ಸಾರನೀರೆರೆದಂತಾಗುತ್ತದೆ.

ಕಷ್ಟದ ನೆರೆಯಲ್ಲೂ ಗೆಲುವಿಗೆ ಕರೆ– ಈಸಬೇಕು, ಇದ್ದು ಜಯಿಸಬೇಕು.

ಧನ್ಯಶ್ರೀ ಕೆ. ಎಂ.
ದ್ವಿತೀಯ ಬಿ.ಎಸ್ಸಿ.

ಆಚಾರ್ಯ ಶ್ರೇಷ್ಠರಾದ ಶ್ರೀ ಮಧ್ವಾಚಾರ್ಯರು ಎಲ್ಲರ ಬಾಳಿಗೆ ನೀಡಿದ ಸಂದೇಶ

ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ
ಹರಿಪಾದವಿನಮ್ರಧಿಯಾ ಸತತಂ ।
ಹರಿರೇವ ಪರೋ ಹರಿರೇವ ಗುರು
ರ್ಹರಿರೇವ ಜಗತ್ ಪಿತೃಮಾತೃಗತಿಃ ॥

" ನಿನ್ನ ಪಾಲಿಗೆ ಬಂದ ಕೆಲಸವನ್ನು ಶ್ರದ್ಧೆಯಿಂದ ಮಾಡು, ನಿಷ್ಠೆಯಿಂದ ಮಾಡು, ಪ್ರೀತಿಯಿಂದ ಮಾಡು, ಸಮರ್ಥವಾಗಿ ಮಾಡು, ಅದ್ಭುತವಾಗಿ ಮಾಡು. ಹೀಗೆ ಮಾಡುವ ಕೆಲಸ, ಕೆಲಸ ಮಾಡಬಲ್ಲ ಕೈ ಹಾಗೂ ಮಾಡುವ ಅವಕಾಶ ಮಾಡಿಕೊಟ್ಟಿರುವ ಪರಮಾತ್ಮನಿಗೆ ಸದಾ ಕೃತಜ್ಞನಾಗಿರು. ತಂದೆ, ತಾಯಿ, ಗುರು ಸರ್ವವೂ ಆ ಪರಮಾತ್ಮನೇ.

ನೀನು ಕೆಲಸ ಮಾಡುವ ಸಂಕಲ್ಪ ಮಾಡಿದೊಡನೆಯೇ ಚೈತನ್ಯ ಒಡಮೂಡುತ್ತದೆ. ಕೆಲಸ ಮಾಡತೊಡಗಿದೊಡನೆಯೇ ಕೆಲಸ ಮಾಡುತ್ತಿರುವ ಕೈ ಕಲ್ಪವೃಕ್ಷವಾಗುತ್ತದೆ. ಕ್ರಿಯಾಶೀಲತೆ ದೇಹವನ್ನು, ಮನಸ್ಸನ್ನು ಹಗುರಾಗಿಸುತ್ತದೆ. ಕರ್ಮಯೋಗ ಉತ್ಕೃಷ್ಟವಾದ ಸಾಧನಾ ಮಾರ್ಗ, 'ಸಾಧನಶರೀರವಿದು ನೀ ದಯದಿ ಕೊಟ್ಟಿದ್ದು ಸಾಧಾರಣವಲ್ಲ ಸಾಧುಪ್ರಿಯನೇ ಎಂದರು ಹರಿದಾಸರು. ಸಾಧನೆಗೆ ಈ ದೇಹವೇ ಸಾಧನ. ಸಾಧನೆಯಿಂದಲೇ ಸಿದ್ಧಿ– ಇಷ್ಟಾರ್ಥಸಿದ್ಧಿ ಪ್ರಾಪ್ತಿಯಾಗುತ್ತದೆ. ಕಷ್ಟ ಕೋಟಲೆ ಕರಗಿ ಸುಖದ ಹೊಳೆ ಹರಿಯತೊಡಗುತ್ತದೆ.

ಕಷ್ಟದ ನೆರೆ ಉಕ್ಕಿ ಬಂದು ಮುಳುಗಿಸವಂತಿದ್ದರೂ, ಆ ದೇವರ ನಾಮ ಸ್ಮರಿಸುತ್ತಾ ಈಜುವ ಸಾಹಸಗೈದು ಗೆದ್ದೇ ತೀರುವೆ ಎಂಬ ಕೆಚ್ಚು ಭಕ್ತನಲ್ಲಿರಬೇಕು. ಇದನ್ನೇ ಪುರಂದರದಾಸರು ಹೇಳಿದರು– 'ಈಸಬೇಕು, ಇದ್ದು ಜಯಿಸಬೇಕು'. ನಾವು ಬಂದಿರುವುದು ಸೋಲುವುದಕ್ಕಲ್ಲ, ಸಾಲದೆನ್ನುವುದಕ್ಕಲ್ಲ, ಸತ್ವದ ಮೂಟೆ ಬತ್ತಿತೆನ್ನುವುದಕ್ಕಂತೂ ಅಲ್ಲವೇ ಅಲ್ಲ. ನಾವು ಬಂದಿರುವುದು ಬದುಕನ್ನು ಗೆಲ್ಲುವುದಕ್ಕಾಗಿ. ಕಷ್ಟನಷ್ಟ ಸಂಕಷ್ಟಗಳ ಅಗ್ನಿಪರೀಕ್ಷೆಯಲ್ಲಿ ಪುಟಕ್ಕಿಟ್ಟ ಚಿನ್ನದಂತೆ ಹೊರಬಂದು ದಿಗ್ವಿಜಯದ ಅನುಭವ ಪಡೆಯುವುದಕ್ಕಾಗಿ–ಸೋಲು ಎಂದರೆ ನಮ್ಮಲ್ಲಿ ನಮಗೇ ವಿಶ್ವಾಸವಿಲ್ಲದಿರುವುದು. ನಮ್ಮ ಗುರಿಯಲ್ಲಿ, ಧ್ಯೇಯದಲ್ಲಿ, ಶಕ್ತಿಯಲ್ಲಿ, ಸಾಹಸದಲ್ಲಿ ನಂಬಿಕೆ, ಭರವಸೆ ಇಡುವುದೇ ಗೆಲುವಿನ ಮೊದಲನೆಯ ಮೆಟ್ಟಿಲು. ಸೋಮಾರಿತನ, ಆಲಸ್ಯ, ಬೇಸರ, ವ್ಯರ್ಥ ಸಮಯಗಳೇ ನಮ್ಮ ಕಡುವೈರಿಗಳು. ಉದ್ಯಮಶೀಲತೆ, ಸಾಹಸ, ಧೈರ್ಯ, ಆತ್ಮಸ್ಥೈರ್ಯ, ವಿವೇಕ ಹಾಗೂ ಶಕ್ತಿ ಇದ್ದೆಡೆಗೆ ದೈವಸಹಾಯ ತಾನೇ ಒದಗಿ ಬರುವುದು. ಅಸಂಭವವಾದುದನ್ನು ಸಂಭವಿಸುವಂತೆ ಮಾಡುವುದೇ ನಮ್ಮ ಸಾಧನೆ. ಸತತ ಪರಿಶ್ರಮ, ದಣಿವರಿಯದ ದುಡಿಮೆ, ಸಾಧಿಸುವ ಛಲ– ಇವು ನಮ್ಮನ್ನು ಯಶಸ್ಸಿನ ತೀರಕ್ಕೆ ಕರೆದೊಯ್ಯಬಲ್ಲವು. ಉತ್ತಮ ಸಾಧನೆ ಮಾಡಬೇಕೆನ್ನುವ ಇಚ್ಛಾಶಕ್ತಿಯಿಂದ ಜಗತ್ತನ್ನೇ ಗೆಲ್ಲಬಹುದು. ಗೆದ್ದ ವ್ಯಕ್ತಿಗೂ, ಯಶಸ್ವೀ ಸಾಧಕರ, ಸಜ್ಜನ ಬಂಧುಗಳ ಆತ್ಮೀಯ ವಲಯದಲ್ಲಿರುವುದೇ ಗೆಲುವಿನ ಹಾದಿಯನ್ನು ಸುಗಮ ಮಾಡಬಲ್ಲದು. ಸಾಧನೆ ಮಾಡಿ, ಕಷ್ಟಪಟ್ಟು ದುಡಿದು, ಕಾಯಕವೇ ಕೈಲಾಸವೆಂದು ನಂಬಿರುವ ಜನರ ಸಹವಾಸ ನಮ್ಮ ಬದುಕಿಗೆ ಹೊಸ ಬೆಳಕನ್ನು ತಂದುಕೊಡಬಲ್ಲದು. ಬಲಿಷ್ಟರಾದ ಸ್ಫೂರ್ತಿಮೂರ್ತಿಗಳ ಬದುಕಿನ, ಆದರ್ಶಗಳ ನೆರಳಿನಲ್ಲಿ ತಂಪಿದೆ. ಪರಿಶುದ್ಧವಾದ, ಏನನ್ನು ಬೇಕಾದರೂ ಸಾಧಿಸಬಲ್ಲೆ ಎನ್ನುವ ಇಚ್ಛಾಶಕ್ತಿ ನಮಗೆಂದು ಬೇಕಾಗಿದೆ. ಅದಕ್ಕೆ ದಾಸರು ಹೇಳುತ್ತಾರೆ' ಅಂಜಬೇಡ ಬ್ಯಾಡೆಲೋ ಜೀವ, ಭವಭಂಜನ ಹರಿಶರಣರ ಕಾವ'. ಯಾರು ಅಂಜುವುದಿಲ್ಲವೋ, ಅಳುಕುವುದಿಲ್ಲವೋ ಅಂಥವರನ್ನು ದೈವವೂ ಕಾಪಾಡುತ್ತದೆ.

ಭಗವದ್ಗೀತೆ ನಮ್ಮ ಹೆಮ್ಮೆ

ಪೂಜಾ ಎಸ್.
ದ್ವಿತೀಯ ಬಿ.ಎಸ್ಸಿ.

ರಾಮಾಯಣ, ಮಹಾಭಾರತಗಳನ್ನು ಬಿಟ್ಟರೆ, ನಮ್ಮ ಜನರಲ್ಲಿ ಅತಿ ಪ್ರಸಿದ್ಧವಾದುದು, ಭಗವದ್ಗೀತೆ. ಸಾವಿರಾರು ವರ್ಷಗಳಿಂದ ನಮ್ಮ ದೇಶದ ಎಲ್ಲೆಡೆಗಳಲ್ಲಿ ಈ ಗ್ರಂಥದ ಪಾಠ, ಪ್ರವಚನ, ಅಧ್ಯಯನ, ಪಾರಾಯಣ, ಮನನ, ಅನುಸಂಧಾನಗಳು ನಡೆಯುತ್ತಲೇ ಇವೆ. ದೇಶದ ಎಲ್ಲಾ ಭಾಷೆಗಳಲ್ಲೂ ಇದರ ಅನುವಾದ, ವಿವರಣೆ, ಸಂಗ್ರಹ, ಸಮೀಕ್ಷೆಗಳು ಲೆಕ್ಕವಿರದಷ್ಟು ಸಂಖ್ಯೆಯಲ್ಲಿ ಕಾಣಿಸಿಕೊಂಡಿವೆ. ಒಂದೊಂದು ತಲೆಮಾರಿನಲ್ಲೂ ಲಕ್ಷಾಂತರ ಜನರು ಭಗವದ್ಗೀತೆಯಿಂದ ಬಾಳಿಗೆ ಬೆಳಕನ್ನು ಕಂಡುಕೊಂಡಿದ್ದಾರೆ; ಗೀತೆಯ ಉಪದೇಶವನ್ನು ಬದುಕಿನಲ್ಲಿ ಅನ್ವಯಿಸಿಕೊಂಡು ಕೃತಾರ್ಥರಾಗಿದ್ದಾರೆ.

ನಮ್ಮಲ್ಲಿ ಹಲವಾರು ಗೀತೆಗಳಿದ್ದರೂ ಗೀತೆಯೆಂದರೆ ಭಗವದ್ಗೀತೆಯೇ (ಗೀತೇತಿ ಭಗವದ್ಗೀತೈವ ಅಭಿಧೀಯತೇ) ಎಂದರೆ ಮುಖ್ಯವಾದು ಭಗವದ್ಗೀತೆ ಉಳಿಯದೆಲ್ಲ ಅಮುಖ್ಯ.

ನಮ್ಮಲ್ಲಿ ಬಹುಕಾಲದಿಂದ ತುಂಬ ಪರಿಚಿತವಾಗಿರುವ ಹಲವು ಮಾತುಗಳೂ ಅವುಗಳ ತಾತ್ಪರ್ಯವೂ ಗೀತೆಯಿಂದಲೇ ಹೊರಹೊಮ್ಮಿದವು. ಆತ್ಮ, ಬ್ರಹ್ಮ, ಧರ್ಮ, ಕರ್ಮ, ಯೋಗ, ಸಂನ್ಯಾಸ, ಗುಣ, ಬಂಧ, ಮೋಕ್ಷ, ಶಾಸ್ತ್ರ, ಶ್ರದ್ಧೆ, ಆಧ್ಯಾತ್ಮ ಪುಣ್ಯ, ಪಾಪ ಮೊದಲಾದ ಕಲ್ಪನೆಗಳು ಗೀತೆಯ ಮಡಿಲಲ್ಲಿ ಹುಟ್ಟಿ ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿದೆ. ಶುಭ–ಅಶುಭಕಾರ್ಯಗಳಲ್ಲಿ ಮನೆಮನೆಗಳಲ್ಲಿ ಗೀತೆಯ ಪಾರಾಯಣ ಮಾಡಿಸುವ ಪದ್ಧತಿಯಿದೆ. ಶಾಲೆಯ ಸ್ಪರ್ಧೆಗಳಲ್ಲಿ ಗೀತೆಯ ಶ್ಲೋಕಗಳ ಕಂಠಪಾಠವನ್ನು ಸೇರಿಸುವುದು ಎಲ್ಲೆಲ್ಲೂ ವಾಡಿಕೆ. ಗೀತೆಯ ಒಂದಾದರೂ ಪ್ರತಿಯಿಲ್ಲದ ಹಿಂದೂ ಮನೆಯೇ ಇಲ್ಲವೆನ್ನಬಹುದು.

ಭಗವದ್ಗೀತೆ ನಮ್ಮ ದೇಶದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲೂ ಖ್ಯಾತಿಗೊಂಡಿದೆ. ಭಗವದ್ಗೀತೆಯ ಅನೇಕ ಭಾಷೆಗಳಲ್ಲಿ ಅನುವಾದಗೊಂಡಿದೆ. ಬೈಬಲನ್ನು ಬಿಟ್ಟರೆ ಜಗತ್ತಿನ ಧರ್ಮಗ್ರಂಥಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಪ್ರಕಟಣೆಗಳಿರುವುದು ಗೀತೆಯನ್ನು ಕುರಿತಂತೆಯೇ. ವಿಶ್ವದಲ್ಲೆಲ್ಲ ಪಂಡಿತರು ಮಾತ್ರವಲ್ಲದೆ ಎಣಿಕೆಗೆ ಸಿಗದಂತೆ ಸಾಮಾನ್ಯ ಜನರೂ ಗೀತೆಯಿಂದ ಬೆಳಕನ್ನು ಕಂಡುಕೊಳ್ಳಲು ಹವಣಿಸುತ್ತಿದ್ದಾರೆ ಭಗವದ್ಗೀತೆ ಅನನ್ಯ ಸಾಧಾರಣವಾದುದು.

ಹೀಗೆ ಭಗವದ್ಗೀತೆಯ ಹಿರಿಮೆ ದೇಶದಲ್ಲಷ್ಟೇ ಅಲ್ಲ ವಿದೇಶಗಳಲ್ಲೂ ಮತ್ತು ಇಡೀ ವಿಶ್ವದೆಲ್ಲೆಡೆ ಹಬ್ಬಿದೆ.

ಗೀತಾವಾಣಿ

ಎನ್. ಗೌರಿಶ್ರೀ
ಪ್ರಥಮ ಬಿ.ಕಾಂ

कर्मण्येवाधिकारस्ते मा फलेषु कदाचन ।
मा कर्मफलहेतुर्भूमाते संगोस्त्वकर्मणि ॥

ಅರ್ಜುನ, ನಿನ್ನಂಥ ಜೀವರಿಗೆ ಕರ್ಮಾಚರಣೆಯ ವಿಷಯದಲ್ಲಿ ಮಾತ್ರ ಸಾಮರ್ಥ್ಯವಿದೆ ಹೊರತು ಫಲಸಂಪಾದನೆಯಲ್ಲಿ ಇಲ್ಲ. ಫಲವನ್ನು ಭಗವಂತನೆ ನೀಡಬೇಕು. ಜೀವಪರಮಾತ್ಮರ ಸಾಮರ್ಥ್ಯಗಳೊಳಗೆ ಇಷ್ಟು ಅಂತರವಿರುವುದರಿಂದ ಫಲ ನೀಡುವ ಪರಮಾತ್ಮನೂ ತಾನೇ ಎಂಬ ಅಭೇದಭಾವನೆಯನ್ನು ಮಾಡಬೇಕು. ಕೇವಲ ಭಗವಂತನ ಸ್ಮರಣೆ ಮಾಡುತ್ತಾ ಏನೂ ಕರ್ಮ ಮಾಡದೆ ಇರುವುದರಲ್ಲಿ ಮನಸ್ಸಿಡುವುದೂ ನಿನಗೆ ಸಲ್ಲದು. ಕರ್ಮ ಮಾಡದಿದ್ದರೆ ಪಾಪವಿದೆ.

या निशा सर्वभूतानां तस्यां जागर्ति संयमी ।
यस्यां जाग्रति भूतानि सा निशा पश्यतो मुनेः ॥

ಎಲ್ಲಾ ಅಜ್ಞಾನ ಜೀವಿಗಳಿಗೂ ರಾತ್ರಿಯಂತೆ ಅಂಧಕಾರಮಯವಾಗಿರುವುದು ಭಗವಂತನ ಸ್ವರೂಪ. ಅದರ ವಿಷಯದಲ್ಲಿ ಇಂದ್ರಿಯ ನಿಗ್ರಹಿಯಾದ ಜ್ಞಾನಿಯು ಮಾತ್ರ ಎಚ್ಚೆತ್ತಿರುತ್ತಾನೆ. ವಿಷಯ ಪ್ರಪಂಚದ ವಿಷಯದಲ್ಲಿ ಅಜ್ಞಾನಿ ಜೀವಿಗಳು ಎಚ್ಚೆತ್ತಿರುತ್ತಾರೆ. ಅಂಥ ವಿಷಯ ಪ್ರಪಂಚವು ಮನನಶೀಲನಾದ ಅಪರೋಕ್ಷಜ್ಞಾನಿಗೆ ರಾತ್ರಿಯಂತೆ ಇರುತ್ತದೆ.

नियतं कुरु कर्म त्वं कर्म ज्यायो ह्यकर्मणः ।
शरीरयात्रापि च ते न प्रसिध्येदकर्मणः ॥

ವರ್ಣಾಶ್ರಮವಿಹಿತವಾದ ಕರ್ಮವನ್ನು ನೀನು ಮಾಡು. ಏಕೆಂದರೆ ಕರ್ಮತ್ಯಾಗಕ್ಕಿಂತ ಕರ್ಮಾನುಷ್ಠಾನವೆಷ್ಟೋ ಉತ್ತಮವಾದುದು. ಇಷ್ಟು ಮಾತ್ರವೆ ಅಲ್ಲ, ಕರ್ಮ ಮಾಡದಿದ್ದರೆ ನಿನಗೆ ಶಾರೀರಿಕವಾದ ಯಾವ ವ್ಯವಹಾರವೂ ಸಾಧ್ಯವಾಗದೆ ಹೋದೀತು.

यद्यदाचरति श्रेष्ठस्तत्तदेवेतरो जनः ।
स यत्प्रमाणं कुरुते लोकस्तदनुवर्तते ॥

ಮಹಾತ್ಮನು ಏನೇನು ಕರ್ಮ ಆಚರಿಸುವನೋ ಅದನ್ನೇ ಬೇರೆ ಜನರೂ ಆಚರಿಸುತ್ತಾರೆ. ಅವನು ಯಾವುದನ್ನು ಪ್ರಮಾಣವೆಂದು ಲೋಕಕ್ಕೆ ತೋರಿಸುವನೋ ಅಥವಾ ಯಾವ ಪ್ರಮಾಣದಿಂದ ಸಿದ್ಧವಾದ ಕರ್ಮವನ್ನು ಮಾಡುವನೊ ಆ ಪ್ರಮಾಣವನ್ನೇ ಲೋಕವು ಅನುಸರಿಸುತ್ತದೆ.

मयि सर्वाणि कर्माणि सन्यस्याध्यात्मचेतसा ।
निराशीर्निर्ममो भूत्वा युध्यस्व विगतज्वरः ॥

ಶ್ರೀಹರಿಯು ಸರ್ವೋತ್ತಮ, ಅವನೆ ಸ್ವಾಮಿ ಎಂಬ ಭಾವನೆಯಿಂದ ಜ್ಞಾನ ಭಕ್ತ್ಯಾದಿಗಳನ್ನು ಹೊರತು ಏನ್ನನ್ನೂ ಆಶಿಸದೆ, ತಾನೆ ಸ್ವತಂತ್ರನಾಗಿ ಕರ್ಮ ಮಾಡುತ್ತೇನೆಂಬ ಅಭಿಮಾನವನ್ನೂ ತ್ಯಜಿಸಿ ವರ್ಣಾಶ್ರಮೋಚಿತವಾದ ಎಲ್ಲಾ ನಿತ್ಯ ನೈಮಿತ್ತಿಕ ಕರ್ಮಗಳನ್ನು ಶ್ರೀಹರಿಯೆ ತನ್ನಿಂದ ಮಾಡಿಸುವವನೆಂದೂ ಆ ಕರ್ಮಗಳೆಲ್ಲ ಶ್ರೀಹರಿಯ ಆರಾಧನೆ ಎಂದೂ ನನ್ನಲ್ಲಿ ಸಮರ್ಪಿಸಿ ಬಂಧುಶೋಕವನ್ನು ತ್ಯಜಿಸಿ ಯುದ್ಧಮಾಡು.

श्रेयान् स्वधर्मो विगुणः परधर्मात् स्वनुष्ठितात् ।
स्वधर्मे निधनं श्रेयः परधर्मो भयावहः ॥

ತನ್ನ ವರ್ಣಾಶ್ರಮೋಚಿತ ಧರ್ಮವನ್ನು ಸಾಂಗವಾಗಿ ಮಾಡಲಾಗದಿದ್ದರೂ ಅದು ಸಾಂಗವಾಗಿ ಮಾಡಿದ ಇತರ ವರ್ಣಾಶ್ರಮಧರ್ಮಕ್ಕಿಂತ ಮೇಲು. ತನ್ನ ವರ್ಣಾಶ್ರಮ ಧರ್ಮದಲ್ಲಿರುವವನಿಗೆ ಮರಣವೂ ಶ್ರೇಯಸ್ಕರವೆ. ಇತರ ವರ್ಣಾಶ್ರಮ ಧರ್ಮವು ನಿಷಿದ್ಧವಾದ್ದರಿಂದ ಅನರ್ಥಕಾರಿ. ಆದ್ದರಿಂದ ಯುದ್ಧದಲ್ಲಿ ರಾಗದ್ವೇಷಾದಿಗಳಿಗೆ ಆಸ್ಪದವಿದ್ದರೂ ಅದು ನಿನಗೆ ವಿಹಿತವಾದ ವರ್ಣಾಶ್ರಮ ಧರ್ಮ. ಅದನ್ನು ಬಿಟ್ಟು ಯತಿಧರ್ಮಾವನ್ನಾಶ್ರಯಿಸಬೇಡ.

यदा यदा हि धर्मस्य ग्लानिर्भवति भारत ।
अभ्युत्थानमधर्मस्य तदाऽऽत्मानं सृजाम्यहम् ॥

ಅರ್ಜುನ, ಧರ್ಮಕ್ಕೆ ಕ್ಷೀಣತೆಯೂ ಅಧರ್ಮಕ್ಕೆ ವೃದ್ಧಿಯೂ ಉಂಟಾದಾಗಲೆಲ್ಲ ನಾನು ನನ್ನನ್ನು ಪ್ರಾದುರ್ಭಾವಗೊಳಿಸುತ್ತೇನೆ.

श्रेयान् द्रव्यमयाद् यज्ञाज्ज्ञानयज्ञः परंतपः ।
सर्वं कर्माखिलं पार्थ ज्ञाने परिसमाप्यते ॥

ಅರ್ಜುನ, ಹಿಂದೆ ಹೇಳಿದ ದ್ರವ್ಯಯಜ್ಞ ಮುಂತಾದ ಎಲ್ಲ ಯಜ್ಞಗಳಿಗಿಂತಲೂ ಪರಮಾತ್ಮ ತತ್ತ್ವಜ್ಞಾನ ಸಂಪಾದನರೂಪವಾದ ಜ್ಞಾನಯಜ್ಞವೇ ಶ್ರೇಷ್ಠ. ಏಕೆಂದರೆ ಸಾಂಗವಾದ ಎಲ್ಲ ಕರ್ಮವೂ ಜ್ಞಾನ ಬಂದಾಗಲೆ ಸಫಲವಾಗುವುದು, ಎಷ್ಟೆ ಅಲ್ಪವಾದ ಕರ್ಮವೂ ಜ್ಞಾನದಿಂದ ಸಫಲವೆ ಆಗುವುದು.

नाहि ज्ञानेन सदृशं पवित्रमिह विद्यते ।
तत् स्वयं योगसंसिद्धः कालेनात्मनि विन्दति ॥

ಲೋಕದಲ್ಲಿ ಜ್ಞಾನಕ್ಕೆ ಸಮಾನವಾದ ಪಾವನ ವಸ್ತು ಇಲ್ಲ. ಜ್ಞಾನೋಪಾಯ ಸಂಪಾದನೆಯಲ್ಲಿ ಸ್ವಯಂ ಸಿದ್ಧಿ ಪಡೆದವನು ಬಹಳ ಕಾಲಾನಂತರ ಹೊಂದುತ್ತಾನೆ.

उद्धरेदात्मनाऽऽत्मानं नात्मानमवसादयेत् ।
आत्मैव ह्यात्मनो बन्धुरात्मैव रिपुरात्मनः ॥

ಜೀವನಿಗೆ ಮನವೆ ಬಂಧು, ಮನವೇ ಶತ್ರು. ಆದ್ದರಿಂದ ಜೀವನು ತನ್ನನ್ನು ಮನಸ್ಸಿನಿಂದ ಮೋಕ್ಷ ಸುಖಭಾಗಿಯನ್ನಾಗಿಸಬೇಕು. ದುಃಖಭಾಗಿಯನ್ನಾಗಿಸಕೂಡದು.

असंशयं महाबाहो मनो दुर्निग्रहं चलम् ।
अभ्यासेन तु कौंतेय वैराग्येण च गृह्यते ॥

ಅರ್ಜುನ, ಸ್ವಭಾವತಃ ಚಂಚಲವಾದ ಮನಸ್ಸನ್ನು ನಿಗ್ರಹಿಸುವುದು ನಿಶ್ಚಯವಾಗಿಯೂ ಕಷ್ಟವೆ. ಆದರೂ ಅದು ಯೋಗಾಭ್ಯಸಬಲದಿಂದಲೂ ವಿಷಯ ವೈರಾಗ್ಯದಿಂದಲೂ ವಶಕ್ಕೆ ಬರುತ್ತದೆ.

ಜ್ಯೋತಿಷ್ಯ

ಮನೋಜ್ ಎಂ. ಪ್ರಭು
ಪ್ರಥಮ ಬಿ.ಕಾಂ.

ಜ್ಯೋತಿಷ್ಯ ಶಾಸ್ತ್ರವು ಮಾನವನಿಗೆ ನಿತ್ಯೋಪಯುಕ್ತ ಶಾಸ್ತ್ರ. ಆತ ಇದನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಅವಲಂಬಿಸಿರುವುದನ್ನು ನಾವು ನೋಡಬಹುದು. ಭವಿಷ್ಯದ ಬಗೆಗೆ ಕುತೂಹಲ ಮಾನವ ಸಹಜವಾದುದರಿಂದ ಅದನ್ನು ತಿಳಿಯಲು ಆತನ ಶಾಸ್ತ್ರೀಯ ಪ್ರಯತ್ನ ಬಹಳಹಿಂದಿನ ಕಾಲದಿಂದಲೂ ನಡೆದುಬಂದಿದೆ. ನಿತ್ಯಜೀವನದ ಉಪಯುಕ್ತ ಅಂಗವಾದ ಇದರ ವ್ಯಾಪ್ತಿ ಗಹನ ಹಾಗೂ ಅಪಾರ. ಜ್ಯೋತಿಷ್ಯಶಾಸ್ತ್ರ, ಖಗೋಳದಲ್ಲಿರುವ ಗ್ರಹನಕ್ಷತ್ರಗಳ ಪರಿಚಯ. ಅವುಗಳ ಚಲನವಲನ, ಭೂಮಿಯಲ್ಲಿ ಅವುಗಳ ಪರಿಣಾಮ ಹಾಗೂ ಜೀವನದಲ್ಲಿ ನಡೆಯುವ ಘಟನೆಗಳನ್ನು ಈ ಶಾಸ್ತ್ರ ವಿವರವಾಗಿ ತಿಳಿಸುತ್ತದೆ. ಆದುದರಿಂದಲೇ ಈ ಶಾಸ್ತ್ರದ ಸ್ವರೂಪವನ್ನು 'ಜ್ಯೋತೀಂಷಿ ಗ್ರಹನಕ್ಷತ್ರಾಣಿ ತದಧಿಕೃತಂ ಶಾಸ್ತ್ರಂ ಜ್ಯೌತಿಷ್ಯಂ' ಎಂದು ವಿಶ್ಲೇಷಿಸಿದ್ದಾರೆ. ಯಾವ ಯಾವ ಕಾಲದಲ್ಲಿ ಯಾವ ಯಾವ ಕರ್ಮಗಳನ್ನು ಮಾಡಬೇಕೆಂದು ವಿಧಿಸಿ ವಿವರಿಸಿರುವ ಈ ಶಾಸ್ತ್ರವನ್ನು ಕಾಲವಿಧಾನ ಶಾಸ್ತ್ರವೆಂದೂ ಕರೆಯುತ್ತಾರೆ. ವೈದಿಕ ಕರ್ಮಗಳನ್ನು ಮಾಡುವವರು ಕಾಲಗಣನೆಯನ್ನು ವಿವರವಾಗಿ ತಿಳಿಯಬೇಕಾಗಿದ್ದಿತು. ಚಂದ್ರನ ಪಕ್ವಾಂತ ಚಾರಗಳು, ಸೂರ್ಯನ ಆಯನಗಳು, ಋತುಗಳು ಮತ್ತು 27 ಅಥವಾ 28 ನಕ್ಷತ್ರಗಳಿಂದಾದ

ಭಚಕ್ರ ರಾಶಿಗಳು ಇವೆಲ್ಲವೂ ಅದರಲ್ಲಿ ಸೇರುತ್ತಿದ್ದವು.

ಜ್ಯೋತಿಷ್ಯಶಾಸ್ತ್ರ ಮತ್ತು ಗಣಿತಶಾಸ್ತ್ರಗಳು ಭಾರತದಲ್ಲಿ ಖಗೋಳಶಾಸ್ತ್ರದ ಸಂಬಂಧದಲ್ಲಿ ಮಾತ್ರ ಬೆಳೆದಿರುವುದನ್ನು ನಾವು ನೋಡಬಹುದು. ಒಬ್ಬರೇ ಲೇಖಕರು ಫಲ ಜ್ಯೋತಿಷ್ಯಶಾಸ್ತ್ರ ಹಾಗೂ ಖಗೋಳ ಶಾಸ್ತ್ರಗಳೆರಡರ ಮೇಲೂ ಕೃತಿಗಳನ್ನು ರಚಿಸಿದ್ದಾರೆ. ಇದು ಖಗೋಳ ಶಾಸ್ತ್ರದೊಡನೆ ನಿಕಟವಾಗಿ ಸಂಬಂಧ ಹೊಂದಿರುವುದನ್ನು ಪ್ರಾರಂಭದಲ್ಲೇ ನಾವು ನೋಡಬಹುದು. ಖಗೋಳ, ಜ್ಯೋತಿಷ್ಯ ಹಾಗೂ ಗಣಿತ ಜ್ಯೋತಿಷ್ಯ ಶಾಸ್ತ್ರದ ಮೂರು ಮುಖಗಳು, ಖಗೋಳ ಗ್ರಹಗಳ ಚಲನೆಯನ್ನು ತಿಳಿಸುತ್ತದೆ. ಮಾನವ ಜೀವನದ ಮೇಲೆ ಈ ಚಲನೆ ಬೀರುವ ಪ್ರಭಾವ ತಿಳಿಸುವುದು ಜ್ಯೋತಿಷ್ಯ. ಇವುಗಳ ಫಲ ನಿರ್ಣಯ ಮಾಡುವುದು ಗಣಿತ ಮಾನವ ಜೀವನದ ಮೇಲೆ ಗ್ರಹಗಳ ಪ್ರಭಾವದಿಂದ ಉಂಟಾಗುವ ಪರಿಣಾಮವನ್ನು ಗಣನೆ ಮಾಡಿ ಭವಿಷ್ಯ ನಿರ್ಣಯಿಸುವುದೇ ಫಲ ಜ್ಯೋತಿಷ್ಯ. ಜ್ಯೋತಿಷ್ಯ ಶಾಸ್ತ್ರವು ಪ್ರಧಾನವಾಗಿ ಸಿದ್ಧಾಂತ, ಸಂಹಿತಾ ಮತ್ತು ಹೋರಾ ಎಂಬುದಾಗಿ ಮೂರು ಸ್ಕಂದ (ಅಂಗ)ಗಳಿಂದ ಕೂಡಿದೆ.

ಮೊದಲನೆಯದಾದ ಗಣಿತಸ್ಕಂದಕ್ಕೆ (ಸಿದ್ಧಾಂತ) ಹೆಚ್ಚಿನ ಪ್ರಾಧಾನ್ಯತೆ ಇದೆ. ಇದು ಖಗೋಳ–ಗಣಿತ, ಶಾಸ್ತ್ರೀಯ ಭಾಗ, ಇದು ಗಣನೆ ವಿಷಯಕ. ಖಗೋಳಶಾಸ್ತ್ರಕ್ಕೆ ಸೇರಿದ್ದು. ಈ ಗಣಿತ ಸ್ಕಂದದಿಂದ ತನ್ಮೂಲಕ ತಿಥ್ಯಾದಿಗಳು ಸಿದ್ಧಿಸುತ್ತವೆ. ಇಲ್ಲಿ ಗಣಿತದ ಮೂಲಕ ಆಕಾಶದಲ್ಲಿನ ಗ್ರಹನಕ್ಷತ್ರಗಳ ಸ್ಥಾನ, ಗತಿಗಳನ್ನು ನಿರ್ಧರಿಸಲಾಗುತ್ತದೆ. ಕಾಲಗಣನೆ, ಗ್ರಹಗತಿಗಣನೆ, ಪೃಥ್ವಿ ಮತ್ತು ನಕ್ಷತ್ರ, ಗ್ರಹ ಇತ್ಯಾದಿಗಳ ಸ್ಥಾನ ಮತ್ತು ಗ್ರಹವೇಧಕ್ಕೋಸ್ಕರ ಮಂತ್ರಗಳ ನಿರ್ಮಾಣ ನಿಯಮಗಳೂ, ವಿವೇಚಿಸಲ್ಪಟ್ಟಿವೆ. ಎರಡನೆಯದಾದ ಸಂಹಿತಾ ಅಥವಾ ಶಾಖಾ ಭಾಗವು ಭವಿಷ್ಯ ಕಥನವನ್ನು ವಿಶ್ಲೇಷಿಸುತ್ತದೆ. ಇಲ್ಲಿ ಗ್ರಹಗತಿಗಳ ನಿರೀಕ್ಷಣೆಯಿಂದ ಪ್ರಕೃತಿಯಲ್ಲಿ ನಡೆಯುವ ವಿಶೇಷ ಘಟನೆಗಳನ್ನು ವಿವೇಚಿಸಲಾಗಿದೆ. ಗ್ರಹಗಳ ತತ್ಕಾಲೀನ ಸ್ಥಿತಿಯಿಂದ ಸುಭಿಕ್ಷ, ದುರ್ಭಿಕ್ಷ ರಾಷ್ಟ್ರಕ್ಕೆ ಉಪಯೋಗವಾಗುವ ಶುಭಾಶುಭಗಳನ್ನು ಇಲ್ಲಿ ಸೂಚಿಸಲಾಗಿದೆ. ವರಾಹಮಿಹಿರನು ಈ ಭಾಗದಲ್ಲಿ ರಾಷ್ಟ್ರದ ಸಂವೃದ್ಧಿ ವಾಸ್ತು ವಿದ್ಯಾ ವೃಕ್ಷಾಯುರ್ವೇದ ಪ್ರಾಸಾದ ಲಕ್ಷಣ ಇತ್ಯಾದಿಗಳನ್ನು ತನ್ನ ಬೃಹತ್ಸಂಹಿತೆಯಲ್ಲಿ ಸವಿಸ್ತಾರವಾಗಿ ಪ್ರಸ್ತಾಪಿಸಿದ್ದಾನೆ. ಪ್ರಾಚೀನ ಕಾಲದಲ್ಲಿ ಈ ಭಾಗವೇ ಪ್ರಸಿದ್ಧವಾಗಿದ್ದು, ಲೋಕಪ್ರಿಯವಾಗಿತ್ತೆಂದು ತಿಳಿದುಬರುತ್ತದೆ. ಈ ಶಾಖಾ ಪ್ರವರ್ತಕರ ಸಂಖ್ಯೆ ಅಪಾರ. ವರಾಹಮಿಹಿರನ ಬೃಹತ್ಸಂಹಿತೆ ಈ ಸ್ಕಂದದ ಪ್ರಮುಖ ಗ್ರಂಥ.

ಮೂರನೆಯದಾದ ಹೋರಾಭಾಗವು ಫಲಭಾಗವನ್ನು ವಿವರಿಸುತ್ತದೆ. ಇಲ್ಲಿ ಜಾತಕ ಕುಂಡಲಿ ಪತ್ರಿಕೆಗಳ ಲೇಖನವನ್ನು ಸವಿಸ್ತಾರವಾಗಿ ನಿರೂಪಿಸಲಾಗಿದೆ. ಮನುಷ್ಯನು ಗ್ರಹ ನಕ್ಷತ್ರಾದಿಗಳನ್ನು ಕಾಲವನ್ನು ಅಳೆಯಲು ಸಾಧನವನ್ನಾಗಿ ಮಾಡಿಕೊಂಡ ಮೇಲೆ ಸುಖದುಃಖಗಳ ಅನುಭವ ಹೊಂದಲು ಕಾಲವಿಶೇಷವೇ ಕಾರಣವೆಂದು ತಿಳಿದನು. ಅದರಲ್ಲೂ ಜನ್ಮಕಾಲವು ಮುಖ್ಯವೆಂದು ಪರಿಗಣಿಸಿ ಆ ಕಾಲದಲ್ಲಿ ಗ್ರಹಾದಿಗಳ ಸ್ಥಾನಗಳನ್ನು ಜಾತಕ ಕುಂಡಲಿಗಳ ಮೂಲಕ ಬರೆದಿಡಲು ಪ್ರಾರಂಭಿಸಿದರು. ಇದರ ಆಧಾರದ ಮೇಲೆ ಒಬ್ಬ ವ್ಯಕ್ತಿಯ ಜನ್ಮಕಾಲವನ್ನು ತಿಳಿದಕೂಡಲೇ ಅವನ ಭವಿಷ್ಯವನ್ನು ಹೇಳಲು ಸಾಧ್ಯ. ಗ್ರಹಗಳ ಸ್ಥಾನಕ್ಕೂ ಮನುಷ್ಯನ ಸುಖದುಃಖಗಳಿಗೂ ಸಂಬಂಧವನ್ನು ಕಲ್ಪಿಸುವ ಈ ಭಾಗವೇ ಹೋರಾಶಾಸ್ತ್ರ. ಹೋರಾ ಶಬ್ದದ ವ್ಯುತ್ಪತ್ತಿಯಲ್ಲಿ ಭಿನ್ನಾಭಿಪ್ರಾಯಗಳಿವೆ. ಇಂಗ್ಲೀಷ್ ಭಾಷೆಯ ಹವರ್ ಎಂಬ ಘಂಟೆಯನ್ನು ಸೂಚಿಸುವ ಶಬ್ದದಿಂದ ಹೋರಾ ಶಬ್ದವು ಸಾದೃಶ್ಯವನ್ನು ಹೊಂದಿದೆ. ಆದರೆ ವರಾಹಮಿಹಿರನ ಅಭಿಪ್ರಾಯದಂತೆ ಈ ಶಬ್ದವು ಅಹೋರಾತ್ರ ಎಂಬ ಸಂಸ್ಕೃತ ಶಬ್ದದ ಪ್ರಥಮ ಹಾಗೂ ಅಂತ್ಯಾಕ್ಷರಗಳ ಲೋಪದಿಂದ ಪ್ರಚಾರಕ್ಕೆ ಬಂದಿದೆ. ಎರಡನೆಯ ಮತ್ತು ಮೂರನೆಯ ಸ್ಕಂದಗಳಿಗೆ ಈ ಶಾಸ್ತ್ರದಲ್ಲಿ ದ್ವಿತೀಯ ಸ್ಥಾನವನ್ನು ಕೊಟ್ಟಿದ್ದಾರೆ. ಅದೃಷ್ಟವಾದ ಈ ಎರಡು ಭಾಗಗಳಲ್ಲಿ ಪ್ರತ್ಯಕ್ಷವನ್ನು ಸಾಧಿಸುವುದು ಅತೀಂದ್ರಿಯ ಜ್ಞಾನಗಳಿಗೆ ಅಥವಾ ಸಿದ್ಧಮಂತ್ರರಿಗೆ ಸಾಧ್ಯ. ಊಹಾಪೋಹಪಟುಃ ಸಿದ್ಧ ಮಂತ್ರೋ ಜಾನಾತಿ ಜಾತಕಂ ಎನ್ನಲಾಗಿದೆ.

ಕೃಷ್ಣ ಚರಿತ್ರೆ

ದೀಪ್ತಿ
ದ್ವಿತೀಯ ಬಿಎ.

ಮಥುರೆಯಲ್ಲಿ ರಾಜನಾಗಿದ್ದ ಯಾದವ ಭೋಜ ವಂಶದ ಉಗ್ರಸೇನನ ಮಗ ಕಂಸ. ಸ್ವಭಾವದಲ್ಲಿ ದುಷ್ಟ. ಉಗ್ರಸೇನನ ಸೋದರ, ದೇವಕನ ಮಗಳು ದೇವಕಿ. ಇವಳ ಕೈಹಿಡಿದವನು ವೃಷ್ಣವಂಶದ ವಸುದೇವ. ಇವರ ಮಗ ಕೃಷ್ಣ. ವಸುದೇವನ ಇನ್ನೊಬ್ಬಳು ಹೆಂಡತಿ ರೋಹಿಣಿ ಅವಳ ಮಗ ಬಲರಾಮ. ಕೃಷ್ಣನಿಗಿಂತ ದೊಡ್ಡವನು. ದೇವಕಿಯ ಮಗನಿಂದ ತನಗೆ ಉಪದ್ರವವೆಂದು ಕಂಸ ತಿಳಿದು ದೇವಕಿಯನ್ನು ಮತ್ತು ವಸುದೇವನನ್ನು ನಿರ್ಬಂಧಿಸಿದ. ಇವನ ತೊಂದರೆಗೆ ಮಕ್ಕಳು ಸಿಲುಕಬಾರದೆಂದು ಅವರನ್ನು ಯಮುನಾ ನದಿಯ ಆಚೆ ದಡದಲ್ಲಿದ್ದ ನಂದಗೋಪನ ಮನೆಯಲ್ಲಿ ಗುಟ್ಟಾಗಿ ಬೆಳೆಯುವ ವಿರ್ಪಾಡಾಯಿತು. ಕಡೆಗೆ ಬಲರಾಮ–ಕೃಷ್ಣರು ಮಥುರೆಗೆ ಬಂದು ಕಂಸನನ್ನು ಕೊಂದರು. ಜನರಿಗೆ ಆತಂಕಕಾರಿಯಾಗಿದ್ದ ಕಂಸನನ್ನು ಕೊಂದು ರಾಮ–ಕೃಷ್ಣರು ಜನಪ್ರೀತಿಯನ್ನು ಗಳಿಸಿ ವೀರರೆನಿಸಿಕೊಂಡರು. ಮತ್ತೆ ಉಗ್ರಸೇನನಿಗೆ ಮಥುರೆಯ ಪಟ್ಟನ್ನು

ಕಟ್ಟಿ, ತಾವು ಅಲ್ಲಿಂದ ಹೊರಟು ಕಾಶಿಯಲ್ಲಿ ಸಾಂದೀಪಿನಿ ಎಂಬ ಋಷಿಯ ಬಳಿ ವಿದ್ಯಾಭ್ಯಾಸ ಮಾಡುತ್ತಾ ನಿಂತರು. ಅದಕ್ಕೆ ಮೊದಲು ಅವರಿಗೆ ಅಂಗೀರಸಗೋತ್ರದ ಗರ್ಗನೆಂಬ ಋಷಿಯಿಂದ ದೀಕ್ಷೆ ದೊರಕಿತ್ತು.

ಕಂಸವಧೆಯಿಂದ ಸಿಟ್ಟಿಗೆದ್ದವನು ಅವನ ಮಾವ ಜರಾಸಂಧ, ಮಗಧದ ರಾಜ, ಇಪ್ಪತ್ತು ಅಕ್ಷೋಹಿಣಿ ಸೈನ್ಯದ ಒಡೆಯ; ಸ್ವಭಾವದಲ್ಲಿ ದುಷ್ಟ, ಜನರನ್ನು ಹಿಂಸಿಸುತ್ತಿದ್ದವನು. ರಾಮ–ಕೃಷ್ಣರನ್ನು ದಂಡಿಸಲು ಮಥುರೆಯನ್ನು ದಾಳಿಮಾಡಿದನು. ಹದಿನೆಂಟು ಬಾರಿ ಮುತ್ತಿ ಯಾದವರ ಬಲವನ್ನೆಲ್ಲ ಉಡುಗಿಸಿದನು. ರಾಮ–ಕೃಷ್ಣರು ಅವನನ್ನು ಹಿಮ್ಮೆಟ್ಟಿಸಿದರಾದರೂ ಕಡೆಗೆ ಯಾದವರು ವಿಧಿಯಿಲ್ಲದೇ ಮಥುರೆಯನ್ನು ಬಿಟ್ಟು ದೂರದಲ್ಲಿ ಸಮುದ್ರದ ನಡುವೆ ದ್ವೀಪವಾಗಿದ್ದ ದ್ವಾರಕೆಗೆ ಹೋಗಬೇಕಾಯಿತು.

ವಿದರ್ಭರಾಜನಾದ ಭೀಷ್ಮಕನ ಮಗಳು ರುಕ್ಮಿಣಿ ಕೃಷ್ಣನಲ್ಲಿ ಅನುರಕ್ತಳಾದಳು. ಆದರೆ ಜರಾಸಂಧನ ಒತ್ತಾಯದಿಂದ ಭೀಷ್ಮಕನು ಮಗಳನ್ನು ಕೃಷ್ಣನಿಗೆ ಕೊಡಲೊಪ್ಪದೆ, ಕೃಷ್ಣನಿಗೆ ನೆಂಟನಾಗಿದ್ದರೂ ಹಗೆಯಾಗಿದ್ದ ಚೇದಿರಾಜ ಶಿಶುಪಾಲನಿಗೆ ಕೊಡುವುದೆಂದು ನಿಶ್ಚಯಿಸಿ ಮದುವೆಯನ್ನು ಬೆಳೆಸಲು ಏರ್ಪಾಟುಮಾಡಿದ. ಆದರೆ ರುಕ್ಮಿಣಿಯ ಅಪೇಕ್ಷೆಯಂತೆ ಕೃಷ್ಣನು ಅವಳನ್ನು ಹರಣ ಮಾಡಿ ಕೊಂಡೊಯ್ದು ಮದುವೆಯಾದನು. ಇದು ಜರಾಸಂಧನಿಗೆ ಎರಡನೆಯ ಸೋಲು.

ಕೃಷ್ಣ ಮಹಾಭಾರತದ ಕಥೆಯಲ್ಲಿ ಮೊದಲು ಕಾಣಿಸಿಕೊಳ್ಳುವುದು. ಪಾಂಚಾಲನಗರಿಯಲ್ಲಿ, ದ್ರೌಪದೀ–ಸ್ವಯಂವರದ ಸಂದರ್ಭದಲ್ಲಿ ದ್ರೌಪದಿಯು ಬ್ರಾಹ್ಮಣ ವೇಷದಲ್ಲಿದ್ದ ಅರ್ಜುನನನ್ನು ವರಿಸಿದ ಮೇಲೆ, ನೆರೆದಿದ್ದ ರಾಜರೆಲ್ಲರೂ ತಮಗೆ ಅವಮಾನವಾಯಿತೆಂದು ಸಿಟ್ಟಿಗೆದ್ದು ದ್ರುಪದರಾಜನ ಮೇಲೆ ಯುದ್ಧಕ್ಕೆ ಸಿದ್ಧರಾದರು. ಹೀಗೆ ಯುದ್ಧಮಾಡುವುದು ನ್ಯಾಯವಲ್ಲವೆಂದೂ ದ್ರೌಪದಿಯು ಸ್ವಯಂ ವರಿಸಿರುವುದು ಧರ್ಮವೇ ಆಗಿದೆಯೆಂದು ಹೇಳಿ ಯುದ್ಧವಾಗದಂತೆ ತಡೆದವನು ಕೃಷ್ಣ.

निवारायामास महीपतीम्स्तान् ।
धर्मेण लब्धेत्यनुनीया सर्वान् ।

ಈ ಸಂದರ್ಭ ಕೃಷ್ಣನ ವ್ಯಕ್ತಿತ್ವವನ್ನು ಎತ್ತಿತೋರಿಸುತ್ತದೆ. ಧರ್ಮಕ್ಕೆ ಕಟ್ಟುಬಿದ್ದು ನಡೆದುಕೊಳ್ಳಬೇಕು. ಸ್ವಾರ್ಥ, ಮಾನಾಪಮಾನ, ರಾಗ, ಕ್ರೋಧ, ದ್ವೇಷಾದಿಗಳಿಂದ ಪ್ರೇರಿತರಾಗಿ ಯುದ್ಧಕ್ಕೆ ತೊಡಗಬಾರದು. ತಾನೂ ಕ್ಷತ್ರಿಯನೇ ಆದರೂ, ಬ್ರಾಹ್ಮಣನೊಬ್ಬನು ಮತ್ಸ್ಯ ಯಂತ್ರವನ್ನು ಭೇದಿಸಿ ರಾಜಪುತ್ರಿಯನ್ನು ಪಡೆದುಕೊಂಡುದು ಕ್ಷತ್ರಿಯರಿಗೆಲ್ಲ ನಾಚಿಕೆಗೇಡಿನ ಪ್ರಸಂಗವಾದರೂ, ಇತರ ರಾಜರಂತೆ, ಅವನುಕೋಪಗೊಂಡು ಕದನಕ್ಕೆ ಸೊಂಟಕಟ್ಟಲಿಲ್ಲ. ಧರ್ಮದ ಕಡೆ ಅವನ ದೃಷ್ಟಿ ಎಂದು ಹೇಳಿ, ಸಿಟ್ಟಿಗೆದ್ದ ರಾಜರನ್ನೆಲ್ಲ ಸಮಾಧಾನ ಮಾಡಿದ.

ಮುಂದೆ ರಾಜಸೂಯ ಯಾಗ ನಡೆದಾಗ, ಜರಾಸಂಧನು ಭೀಮನಿಂದ ಹತನಾದನು. ರಾಜಸೂಯ ಯಾಗದಲ್ಲಿ ಅಗ್ರಪೂಜೆ ಯಾರಿಗೆ ಸಲ್ಲಬೇಕೆಂಬ ಪ್ರಶ್ನೆ ಬಂದಾಗ ಭೀಷ್ಮರು ಕೃಷ್ಣನ ಹೆಸರನ್ನು ಸೂಚಿಸಿದರು. ಚೇದಿರಾಜನಾದ ಶಿಶುಪಾಲನು ವಿರೋಧಿಸಿದಾಗ ಭೀಷ್ಮನು, 'ನಾನು ಕೃಷ್ಣನ ಹೆಸರನ್ನು ಸೂಚಿಸಿದ್ದು ಅವನಲ್ಲಿ ಎರಡು ಗುಣಗಳನ್ನು ಕಂಡು ಅವನ ವೇದವೇದಾಂಗ ವಿಜ್ಞಾನ ಮತ್ತು ಅತ್ಯಧಿಕವಾದ ಬಲ.

पूज्यातायां च गोविंदे हेतू द्वावपि संस्थितौ ।
वेदावेदांगविज्ञं बलं चाप्यधिकं तथा ॥

ಅಂತೂ ಕೃಷ್ಣನ ಹೆಗ್ಗಳಿಕೆ ಆಗಿನ ಲೋಕಕ್ಕೆಲ್ಲ ಪ್ರಕಟವಾಯಿತು. ಮಹಾಭಾರತದ ಕಥೆಯಲ್ಲಿ ಕೃಷ್ಣನ ಪಾತ್ರ ಹೆಚ್ಚುತ್ತ ಹೋಗುತ್ತದೆ. ಪಾಂಡವರು ಧರ್ಮಾತ್ಮರೆಂಬುದನ್ನೂ ಕೌರವರು ಅಧರ್ಮಿಗಳೆಂಬುದನ್ನು ಮನವರಿಕೆ ಮಾಡಿಕೊಂಡು, ಧರ್ಮ ಸಂಸ್ಥಾಪನೆಗಾಗಿ ಪಾಂಡವರ ಪಕ್ಷವನ್ನು ಹಿಡಿಯುತ್ತಾನೆ. ಮುಂದೆ ಎಲ್ಲ ಪ್ರಸಂಗಗಳಲ್ಲೂ ಅವನ ನಡವಳಿಕೆ, ಉಪದೇಶಗಳೆಲ್ಲವೂ ಲೋಕೋತ್ತರವಾದವು. ಆದರೆ ಲೋಕಾತೀತವೆನ್ನಲಾಗದು.

ಸಂಗ್ರಹ: ಶ್ರೀಕೃಷ್ಣನ ವ್ಯಕ್ತಿತ್ವ ಪ್ರೊ. ಎಸ್.ಕೆ.
ರಾಮಚಂದ್ರರಾವ್.

ಧನಕಃ ಶ್ರೋತ್ರಿಯೋ ರಾಜಾ ನದೀ ವೈದ್ಯಸ್ತು ಪಂಚಮಃ ।
ಪಂಚ ಯತ್ರ ನ ವಿದ್ಯಂತೇ ನ ತತ್ರ ದಿವಸಂ ವಸೇತ್ ॥

ಧನಕ, ವೇದಜ್ಞ, ರಾಜ, ನದೀ, ಐದನೆಯದಾಗಿ ವೈದ್ಯ ಈ ಐದು ಮಂದಿ ಎಲ್ಲಿ ಇಲ್ಲವೋ ಅಲ್ಲಿ ಒಂದು ದಿನವೂ ಕೂಡಾ ವಾಸಿಸಕೂಡದು.

ಸೂರ್ಯಂ ಪ್ರತಿ ರಜಃ ಕ್ಷಿಪ್ತಂ ಸ್ವಚಕ್ಷುಷಿ ಪತಿಷ್ಯತಿ ।
ಬುಧಾನ್ ಪ್ರತಿ ಕೃತಾವಜ್ಞಾ ಸಾ ತಥಾ ತಸ್ಯ ಭಾವಿನೀ ॥

ಸೂರ್ಯನತ್ತ ಎಸೆದ ಧೂಳು ನಮ್ಮ ಕಣ್ಣಿನ ಮೇಲೆಯೇ ಬೀಳುತ್ತದೆ. ಹಾಗೆಯೇ ಜ್ಞಾನಿಗಳನ್ನು ಕುರಿತು ಮಾಡಿದ ಅವಹೇಳನ ನಮ್ಮನ್ನೇ ಸ್ಪರ್ಶಿಸುತ್ತದೆ.

ಯಾಂತಿ ನ್ಯಾಯಪ್ರವೃತ್ತಸ್ಯ ತಿರ್ಯಂಚೋಽಪಿ ಸಹಾಯತಾಮ್ ।
ಅಪಂಥಾನಂ ತು ಗಚ್ಛಂತಂ ಸೋದರೋಽಪಿ ವಿಮುಂಚತಿ ॥

ನ್ಯಾಯದಲ್ಲಿರುವವನಿಗೆ ಪಶುಪಕ್ಷಿ ಮೊದಲಾದವುಗಳೂ ಕೂಡಾ ಸಹಾಯವನ್ನು ಮಾಡುತ್ತವೆ. ದಾರಿ ಬಿಟ್ಟು ಹೋಗುವವನನ್ನು ಸಹೋದರನು ಕೂಡಾ ಬಿಟ್ಟುಬಿಡುತ್ತಾನೆ.

ನಿರಂತರ ಸಂರಕ್ಷಣೆಯ ಚಿಂತೆ

जातेति कन्या महती हि चिन्ता,
कस्मै प्रदेयेति महान् वितर्कः ।
दत्ता सुखं पास्यानि वा नवेति;
कन्यापितृत्वं खलु नाम कष्टम् ।

सुभाषित रत्नभान्डागार

"ಮಗಳು ಹುಟ್ಟಿದಳು ಎಂದಾಕ್ಷಣವೇ ಹಿರಿದಾದ ಚಿಂತೆ ಆರಂಭ. (ಅವಳು ದೊಡ್ಡವಳಾದಾಗ) ಯಾರಿಗೆ ಕೊಡಬಹುದು ಎಂಬ ಚಿಂತೆ; ಮದುವೆ ಮಾಡಿಕೊಟ್ಟ ಬಳಿಕ ಸುಖವಾಗಿ ಇರುತ್ತಾಳೋ, ಇಲ್ಲವೋ ಎಂಬ ಯೋಚನೆ; ಒಟ್ಟಾರೆ **ಕನ್ಯಾಪಿತೃತ್ವ** ಎಂಬುದೇ ಬಲು ಕಷ್ಟ.

ಹಿಂದಿನಷ್ಟೇ ಇಂದೂ ಎಲ್ಲರ ಅನುಭವ ವೇದ್ಯವಾದ ತ್ರಿಕಾಲ ಸತ್ಯ ಈ ಪದ್ಯದಲ್ಲಿದೆ. ಹುಟ್ಟಿದ ಮಗು ಹೆಣ್ಣು ಎಂದಾಕ್ಷಣವೇ ಒಂದು ಬಗೆಯ ಚಿಂತೆ ಆರಂಭವಾಗುತ್ತದೆ. ಈ ಸ್ಥಿತಿ ಇಂದು ನಿನ್ನೆಯದಲ್ಲ. ಸುಮಾರು ನಾಲ್ಕುನೂರು ವರ್ಷಗಳ ಹಿಂದೆ ಇದ್ದ ಸಂಚೀ ಹೊನ್ನಮ್ಮ,

"ಹೆಣ್ಣಲ್ಲವೇ ನಮ್ಮನ್ನೆಲ್ಲಾ ಪಡೆದ ತಾಯಿ !
ಹೆಣ್ಣಲ್ಲವೇ ಹಡೆದವಳು;
ಹೆಣ್ಣು ಹೆಣ್ಣೆಂದೇತಕೆ ಬೀಳುಗಳೆವರು?
ಕಣ್ಣು ಕಾಣದ ಗಾವಿಲರು.

ಎಂದಿದ್ದನ್ನು ಸ್ಮರಿಸಿದಾಗ ಅಂದೂ ಈ ಸ್ಥಿತಿ ಇತ್ತೆಂಬುದರ ಅರಿವಾಗುತ್ತದೆ.

ಹುಟ್ಟುವುದು ಒಂದು ಮನೆಯಲ್ಲಾದರೆ, ಬಾಳುವುದು ಇನ್ನೊಂದು ಮನೆಯಲ್ಲಿ. ವಿಭಿನ್ನ ಸಂಪ್ರದಾಯ, ವಿಭಿನ್ನ ಅಭಿರುಚಿ, ವಿಭಿನ್ನ ವಾತಾವರಣ, ಎಲ್ಲಾ ಸರಿ ಹೋದರೆ ಏನೂ ಅನಿಸದು. ಸ್ವಲ್ಪ ಬಿರುಕು ಬಿಟ್ಟಿತೆಂದರೆ, ಬಾಳೆಲ್ಲ ಗೋಳು. ಹೀಗಿರುವಾಗ ತಂದೆ ತಾಯಿಗಳಿಗೆ ಹೆಣ್ಣು "ಹುಣ್ಣಿನಂತೆ" ಚಿಂತೆ.

माता यस्यगृहे नास्ति
भार्या च प्रियवादिनी ।
अरण्यं तेन गन्तव्यं,
यथारण्यं तथा गृहम् ॥

– पञ्चतन्त्र

ಯಾರಿಗೆ ಮನೆಯಲ್ಲಿ ವಾತ್ಸಲ್ಯಮಯಿಯಾದ ತಾಯಿಯಿಲ್ಲವೋ, ಪ್ರೀತಿಯಿಂದ ಮಾತನಾಡಲು ಪತ್ನಿಯಿಲ್ಲವೋ, ಅಂತವರು ಅರಣ್ಯಕ್ಕೆ ಹೋಗುವುದು ಲೇಸು. ಯಾಕೆಂದರೆ ಅವರ ಪಾಲಿಗೆ ಅರಣ್ಯವು ಹೇಗೋ ಮನೆಯೂ ಹಾಗೆ.

ಭಾರತೀಯ ಸಂಸ್ಕೃತಿಯಲ್ಲಿ ತಾಯಿಗೆ ಅತ್ಯುನ್ನತ ಸ್ಥಾನ. **मातृदेवो भव** ಎಂದ ಬಳಿಕವೇ **पितृदेवोभव** ಎಂದ ದೇಶ ನಮ್ಮದು.

ವಿವೇಕಾನಂದರು ವಿದೇಶಕ್ಕೆ ಹೋದಾಗ ವಿದೇಶಿ ಮಿತ್ರರೊಬ್ಬರು "ನಿಮ್ಮ ದೇಶದಲ್ಲಿ ಸ್ತ್ರೀಯರಿಗೆ ಸರಿಯಾದ ಸ್ಥಾನ ಮಾನವಿಲ್ಲ. ಅಲ್ಲವೇ? ಎಂದಾಗ, ಸ್ವಾಮೀ "ಹೌದು, ನೀವು ಇಲ್ಲಿ ಹೆಣ್ಣನ್ನು ಹೆಂಡತಿಯಂತೆ ಕಂಡರೆ, ನಾವು ಅವರನ್ನು ತಾಯಿಯಂತೆ ಕಾಣುತ್ತೇವೆ. ಇದೇ ನಮಗೂ ನಿಮಗೂ ಇರುವ ವ್ಯತ್ಯಾಸ. ಎಂದರಂತೆ! ಒಂದು ತಾಯಿಯಾಗಿ ಹೆಣ್ಣು ಸಮಾಜದಲ್ಲಿ ಈ ರೀತಿ ಬಿಂಬಿಸಲ್ಪಡುತ್ತಾಳೆ.

"ಮನೆಯೇ ಮೊದಲ ಪಾಠಶಾಲೆ ! ಜನನಿ ತಾನೆ ಮೊದಲ ಗುರುವು ಜನನಿಯಿಂದ ಪಾಠ ಕಲಿತ ಜನರೆ ಧನ್ಯರು ! ಘನತೆಯಿಂದಲವರು ಬಾಳ್ವೆರೆನುತ ನುಡಿವರು ॥

ಹೀಗೆ ಒಬ್ಬ ಹೆಣ್ಣು ಮಗಳು ತಾಯಿಯಾಗಿ, ತಂಗಿಯಾಗಿ, ಮಡದಿಯಾಗಿ ಸಂಬಂಧಕ್ಕೆ ಪರಿಪೂರ್ಣ ಬದ್ಧಳಾಗಿ ಇರುತ್ತಾಳೆ.

ಇಂಥ ಹೆಣ್ಣು ಬಡವರ ಮನೆಯಲ್ಲಿ ಹುಟ್ಟಿದರಂತೂ ಮುಗಿದೇ ಹೋಯ್ತು. ಅನೇಕ ಸಂದರ್ಭದಲ್ಲಿ ಬಡವರ ಮನೆಯ ಹೆಣ್ಣು ಮಕ್ಕಳು ನಿಸರ್ಗ ಸುಂದರಿಯಾಗಿ ಇರುವುದುಂಟು. ಜಾನಪದ ಕವಿ ಹೇಳುವಂತೆ.

"ಬಡವರ ಮಗಳಲ್ಲೇ ನಡುವೊಂದು ಹಿಡಿಯಲ್ಲೇ
ನಡೆದರೆ ಬಾಳೇ ಸುಳಿಯಲ್ಲೇ; ನೀನು
ನುಡಿದರೆ ಕೋಗಿಲೆ ದನಿಯಲ್ಲೇ"

ಎಂಬ ಮಾತು ಸತ್ಯವಾಗಿದ್ದರೂ, ಅವಳು ವನಸುಮದಂತೆ ಅರಳಿ ಅಲ್ಲಿಯೇ ಕಂದಿ, ಕುಂದಿ ಕಮರಿಹೋಗುವ ಸಂದರ್ಭಗಳೇ ಹೆಚ್ಚು.

ಇದನ್ನೆಲ್ಲಾ ಯಾರು ಕೇಳಬೇಕು? ಕುರುಡ ಕಾಂಚಾಣದ ಝಣ ಝಣ ಸದ್ದಿನ ಮುಂದೆ ನಮ್ಮ ಯುವಕರ ಕಣ್ಣು ಕೆಲವೊಮ್ಮೆ ಕುರುಡಾಗಿ ಬಿಡುತ್ತದೆ. ವರದಕ್ಷಿಣೆಗಾಗಿ ಕುರೂಪಿಯಾದ ಹೆಣ್ಣನ್ನು ಮಾಡಿಕೊಂಡು, ನಂತರ "ನಾನು ಅವಳ ಬಣ್ಣ ನೋಡಿಲ್ಲ, ಗುಣ, ಚಾರಿತ್ರ್ಯ, ಸಂಸ್ಕೃತಿ ನೋಡಿ ಆಯ್ಕೆ ಮಾಡಿದ್ದೇನೆ" ಎನ್ನುವ ಭೂಪರಿಗೂ ಕೊರತೆಯಿಲ್ಲ!

ಒಟ್ಟಾರೆ ಹುಟ್ಟಿದ ಹೆಣ್ಣು ಸರಿಯಾದ ಮನೆ ಸೇರಿ, ಸುಖವಾಗಿ ಸಂಸಾರ ನಡೆಸುವುದನ್ನು ಕಾಣುವ ತನಕ, ತಂದೆ ತಾಯಿಗಳಿಗೆ ಚಿಂತೆ ತಪ್ಪಿದ್ದಲ್ಲ. ಈ ದೃಷ್ಟಿಯಿಂದ **कन्यापितृत्वं खलु नाम कष्टं** ಎಂಬ ವಾಕ್ಯ ಹಿಂದೆಂದಿಗಿಂತಲೂ ಇಂದಿನ ವರದಕ್ಷಿಣೆಯ ವಿಜ್ಞಾನ ಯುಗಕ್ಕೆ ಹೆಚ್ಚು ಅನ್ವಯಿಸುತ್ತದೆ.

ಸಂಖ್ಯಾ ಪ್ರಪಂಚ

ಧನುಶ್ರೀ
ದ್ವಿತೀಯ ಬಿ.ಕಾಂ.

ಸಂಸ್ಕೃತ ಭಾಷೆಯಲ್ಲಿ ಸಂಖ್ಯೆಗಳನ್ನು ನಮೂದಿಸಲು ವಿಶಿಷ್ಟ ರೀತಿಯನ್ನು ಅನುಸರಿಸಲಾಗಿದೆ. ಪ್ರತಿಯೊಂದು ಸಂಖ್ಯಾವಾಚಕ ವಸ್ತುಗಳನ್ನು ಅನುಸರಿಸಿ ಅವುಗಳನ್ನು ಸೂಚಿಸಲಾಗುತ್ತದೆ. ಇದನ್ನು ಭೂತಸಂಖ್ಯೆ ಎನ್ನುವರು. ಅಕ್ಷರಕ್ಕನುಗುಣವಾಗಿ ಸಂಖ್ಯೆಯನ್ನು ತಿಳಿಸಿದರೆ ಅದನ್ನು ಅಕ್ಷರ ಸಂಖ್ಯೆ ಎನ್ನುವರು.

ಸಂಖ್ಯಾಪ್ರಧಾನ ವಿಷಯಗಳು:

ಏಕಂ– ಒಂದು (एकं)

ಏಕಮೇವಾದ್ವಿತೀಯಂ ಬ್ರಹ್ಮ= ದೇವರೊಬ್ಬನೇ

ದ್ವೇ–ಎರಡು (द्वे)

ಭೂಮಿಯ ಎರಡು ಚಲನೆಗಳು: ದೈನಂದಿನ, ವಾರ್ಷಿಕ

ಪಕ್ಷಗಳು: ಶುಕ್ಲಪಕ್ಷ, ಕೃಷ್ಣ ಪಕ್ಷ

ಆಯನಗಳು: ಉತ್ತರಾಯಣ, ದಕ್ಷಿಣಾಯನ

ತ್ರೀಣಿ– ಮೂರು (त्रीणि)

ತ್ರಿಮೂರ್ತಿಗಳು– ಬ್ರಹ್ಮ, ವಿಷ್ಣು, ಮಹೇಶ್ವರ

ತ್ರಿಮೂರ್ತಿಗಳ ಶಕ್ತಿ ದೇವತೆಗಳು– ಸರಸ್ವತಿ, ಲಕ್ಷ್ಮೀ, ಪಾರ್ವತಿ/ಮಹಾಕಾಳಿ, ಮಹಾಲಕ್ಷ್ಮೀ, ಮಹಾಸರಸ್ವತಿ,

ತ್ರಿಗುಣಗಳು– ಸತ್ವ, ರಜ, ತಮ

ತ್ರಿಸ್ಥಿತಿ– ಸೃಷ್ಟಿ, ಸ್ಥಿತಿ, ಲಯ

ತ್ರಿಲೋಕ– ಸ್ವರ್ಗ, ಮರ್ತ್ಯ, ಪಾತಾಳ

ತ್ರಿಧಾತು– ವಾತ, ಪಿತ್ತ, ಕಫ

ತ್ರಿವಿದ್ಯಾ– ತ್ರಯೀ, ವಾರ್ತಾ, ದಂಡನೀತಿ

ತ್ರಿಲಿಂಗ– ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕಲಿಂಗ

ತ್ರಿಕರಣಗಳು– ಕಾಯ, ವಾಕ್, ಮನಃ

ತ್ರಿಧಾಮಾ– ಶ್ವೇತದ್ವೀಪ, ಅನಂತಾಸನ, ವೈಕುಂಠ

ಚತ್ವಾರಿ – ನಾಲ್ಕು (चत्वारि)

ಉಪಾಯಗಳು– ಸಾಮ, ದಾನ, ಭೇದ, ದಂಡ

ಸ್ಥಿತಿಗಳು– ಜಾಗೃತ (ಎಚ್ಚರಿಕೆ) ,ಸಪ್ನ (ಕನಸು), ಸುಷುಪ್ತಿ (ವಿದ್ಯೆ), ತುರೀಯ (ಮೋಕ್ಷ)

ಆಶ್ರಮಗಳು– ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ

ವರ್ಣಗಳು– ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ

ಯುಗಗಳು– ಕೃತ, ತ್ರೇತ, ದ್ವಾಪರ, ಕಲಿ

ಯೋಗಗಳು– ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ, ರಾಜಯೋಗ

ವೇದಗಳು– ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ

ಪಂಚ– ಐದು (पञ्च)

ಪಂಚಪೀಠಗಳು– ಕೇದಾರ, ಕಾಶಿ, ಉಜ್ಜಯಿನಿ, ಶ್ರೀಶೈಲ, ರಂಭಾಪುರಿ

ಪಂಚಾಂಗಗಳು– ತಿಥಿ, ವಾರ, ನಕ್ಷತ್ರ, ಯೋಗ, ಕರಣ

ಪಂಚಭೂತಗಳು– ಭೂಮಿ, ನೀರು, ಬೆಳಕು, ಗಾಳಿ, ಆಕಾಶ/ಪೃಥ್ವಿ, ಅಪ್, ತೇಜಃ, ವಾಯು, ಆಕಾಶ

ಪಂಚವಿಷಯಗಳು: ಗಂಧ, ರಸ, ರೂಪ, ಸ್ಪರ್ಶ, ಶಬ್ದ

ಜ್ಞಾನೇಂದ್ರಿಯಗಳು– ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ

ಪಂಚಕೋಶ– ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ,

ಪಂಚಾಚಾರ್ಯರು– ರೇಣುಕಾಚಾರ್ಯ, ದಾರುಕಾಚಾರ್ಯ, ಏಕೋರಾಮಾಚಾರ್ಯ, ಪಂಡಿತಾರಾಧ್ಯ, ವಿಶ್ವಾರಾಧ್ಯ

ಪಂಚಪಾಂಡವರು– ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವ

ಷಟ್– ಆರು (षट्)

ಷಡೃತುಗಳು– ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ

ಷಡ್‌ವೈರಿಗಳು– ಕಾಮ, ಕ್ರೋಧ, ಮದ, ಮತ್ಸರ, ಲೋಭ, ಮೋಹ

ಷಡ್‌ರಸಗಳು– ಸಿಹಿ, ಕಹಿ, ಕಾರ, ಉಪ್ಪು, ಹುಳಿ, ಒಗರು

'ಡೋಷಿಕೆಗಳು– ಆಶನ, ಪಿಡಾಸ, ಶೋಕ, ಮೋಹ, ಜರಾ, ಮರಣ

ಸಪ್ತ– ಏಳು (सप्त)

ಸಪ್ತಋಷಿಗಳು– ಕಶ್ಯಪ, ಅತ್ರಿ, ಭಾರದ್ವಾಜ, ಗೌತಮ, ಜಮದಗ್ನಿ, ವಶಿಷ್ಟ,

ಸಪ್ತಸ್ವರಗಳು– ಸ–ಷಡ್ಜ, ರಿ– ರಿಷಭ, ಗ–ಗಾಂಧಾರ, ಮ–ಮಧ್ಯಮ, ಪ–ಪಂಚಮ, ದ– ದೈವತ, ನಿ– ನಿಷಾದ

ಸಪ್ತಚಿರಂಜೀವಿ– ಅಶ್ವತ್ಥಾಮ, ಬಲಿ, ವ್ಯಾಸ, ಹನುಮಂತ,

ಕೃಪ, ವಿಭೀಷಣ, ಪರಶುರಾಮ

ಸಪ್ತಮಹಾನದಿಗಳು– ಗಂಗಾ, ಯಮುನಾ, ಗೋದಾವರಿ, ಸರಸ್ವತಿ, ಬ್ರಹ್ಮಪುತ್ರ, ಸಿಂಧೂ, ಕಾವೇರಿ.

ಸಪ್ತಸಮುದ್ರಗಳು– ಲವಣ, ಇಕ್ಷು, ಸುರಾ, ಸರ್ಪಿ, ದಧಿ, ಕ್ಷೀರ, ಶುದ್ಧೋದಕ

ಅಷ್ಟ– ಎಂಟು (अष्ट)

ಅಷ್ಟದಿಕ್ಕುಗಳು– ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಆಗ್ನೇಯ, ನೈಋತ್ಯ, ವಾಯುವ್ಯ, ಈಶಾನ್ಯ

ಅಷ್ಟದಿಕ್ಪಾಲಕರು– ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈಶಾನ

ಅಷ್ಟಮದ– ಧನ, ಕುಲ, ರೂಪ, ಯೌವನ, ವಿದ್ಯಾ, ರಾಜ, ಅಧಿಕಾರ, ಅನ್ನ

ಅಷ್ಟೈಶ್ವರ್ಯ– ಅಣಿಮಾ, ಮಹಿಮಾ, ಲಘಿಮಾ, ಗಂಮಾ, ಈಶ್ವಿತಂ, ವಶಿತ್ವಂ, ಪ್ರಾಪ್ತಿ, ಪ್ರಾಕಾಮ್ಯಂ

ನವ– ಒಂಭತ್ತು

ನವರತ್ನಗಳು– ವಜ್ರ, ವೈಢೂರ್ಯ, ಗೋಮೇಧಕ, ಪುಷ್ಪರಾಗ, ಹವಳ, ಮರಕತ, ಮಾಣಿಕ್ಯ, ನೀಲ, ಮುತ್ತು

ನವಗ್ರಹಗಳು– ಸೂರ್ಯ, ಚಂದ್ರ, ಅಂಗಾರಕ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು

ನವರಸಗಳು– ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಭೀಭತ್ಸ, ರೌದ್ರ, ಶಾಂತ

ನವದುರ್ಗೆಯರು– ದುರ್ಗಾ, ಆರ್ಯಾ, ಭಗವತೀ, ಕುಮಾರಿ, ಮಹಿಷಾ, ವರ್ದಿನಿ, ಚಂಡಿಕಾ, ಸರಸ್ವತಿ, ವಾಗೀಶ್ವರೀ

ಸುಭಾಷಿತಗಳು

ಸೌಜನ್ಯ ಶೆಟ್ಟಿ
ಪ್ರಥಮ ಬಿ.ಕಾಂ.

तस्माद्धर्मं सहायार्थं नित्यं संचिनुयाच्छनैः ।
धर्मेण हि सहायेन तमस्तरति दुस्तरम् ॥

ಕಷ್ಟಕರವಾದ ದುಃಖದಿಂದ ಪಾರಾಗಲು ಧರ್ಮದ ಸಹಾಯವು ಬೇಕಾಗುತ್ತದೆ. ಆದುದರಿಂದ ಧರ್ಮಸಂಚಯವನ್ನು ಪ್ರತಿನಿತ್ಯ ಮಾಡಬೇಕು.

अयं निजः परोवेति गणना लघुचेतसाम् ।
उदारचरितानाम् तु वसुधैव कुटुंबकम्॥

ಇವನು ನನ್ನವನು, ಅವನು ನನ್ನವನಲ್ಲ– ಎಂದು ಯಾರು ಭಾವಿಸುತ್ತಾರೋ ಅವರು ಸಂಕುಚಿತ ಮನೋಭಾವದವರು. ವಿಶಾಲ ಹೃದಯದವರಿಗಾದರೋ ಸಂಪೂರ್ಣ ಜಗತ್ತೇ ಒಂದು ಕುಟುಂಬವೆನಿಸುತ್ತದೆ.

बलवानप्यरक्तोऽसौ धनवानपि निर्धनः ।
श्रुतवानपि मूर्खश्च यो धर्मविमुखो जनः ॥

ಧರ್ಮಕ್ಕೆ ವಿರೋಧವಾಗಿ ನಡೆಯುವವನು ಎಷ್ಟೇ ಶಕ್ತಿಯುಳ್ಳವನಾದರೂ ದುರ್ಬಲನಾಗುತ್ತಾನೆ: ಎಷ್ಟೇ ಶ್ರೀಮಂತನಾದರೂ ಬಡವನಾಗುತ್ತಾನೆ; ವೇದಶಾಸ್ತ್ರಾದಿಗಳನ್ನು ಅಧ್ಯಯನ ಮಾಡಿದವನಾದರೂ ಮೂರ್ಖವಂತನಾಗುತ್ತಾನೆ.

द्वाविमौ पुरुषौ लोके न भूतो न भविष्यति ।
प्रार्थितं कुरुते यश्च नार्थयते परम् ॥

ಎರಡು ವಿಧದ ಜನರು ಈ ಲೋಕದಲ್ಲಿ ಹಿಂದೆಯೂ ಹುಟ್ಟಿಲ್ಲ; ಮುಂದೆ ಹುಟ್ಟುವುದೂ ಇಲ್ಲ. ಒಬ್ಬರೂ ಕೇಳಿದ್ದೆಲ್ಲವನ್ನೂ ಕೊಡುವವರು; ಇನ್ನೊಬ್ಬರು ಬೇರೆಯವರಿಂದ ಏನನ್ನೂ ಸ್ವೀಕರಿಸದವರು.

पद्माकरं दिनकरो विकचीकरोति
चंद्रो विकासयति कैरवचक्रवालं ।
नाभ्यर्थितो जलधरोऽपि जलं ददाति
संतः स्वयं परहिते विहिताभियोगाः ॥

ಸೂರ್ಯನು ಕಮಲಗಳನ್ನು ಅರಳಿಸುತ್ತಾನೆ. ಚಂದ್ರನು ರಾತ್ರಿಯ ನೈದಿಲೆಗಳಿಗೆ ಜೀವ ತುಂಬುತ್ತಾನೆ. ಯಾರೂ ಬೇಡಿಕೊಳ್ಳದಿದ್ದರೂ ಮೋಡಗಳು ಸ್ವಪ್ರೇರಣೆಯಿಂದ ಮಳೆ ಸುರಿಸುತ್ತವೆ; ಭೂಮಿಯನ್ನು ತಂಪಾಗಿಸುತ್ತವೆ. ಸಜ್ಜನರು ತಮ್ಮಿಷ್ಟದಿಂದಲೇ ಲೋಕಕಲ್ಯಾಣಕ್ಕಾಗಿ ಹಗಲಿರುಳು ಶ್ರಮಿಸುತ್ತಾರೆ.

विद्याभ्यासो विचारश्च समयोरेव शोभते ।
विवादश्च विवाहश्च समयोरेव शोभते ॥

ವಿದ್ಯಾಭ್ಯಾಸ, ವಿಚಾರ–ವಿನಿಯಮಗಳು ಸಮಾನವಾದ, ಸಮವಯಸ್ಕರಾದ ಇಬ್ಬರಲ್ಲಿ ನಡೆದರೆ ಚೆನ್ನ, ಮದುವೆ, ವಾಗ್ವಾದ ಕೂಡ ಸಮಾನಸ್ಕಂದರಲ್ಲಿಯೇ ಶೋಭಿಸುತ್ತದೆ.

शनैः पंथाः शनैः कंथाः शनैः पर्वतमस्तके ।
शनैर्विद्या शनैर्वित्तं पंचैतानि शनैः शनैः ॥

ನಿಧಾನವಾಗಿ ದಾರಿ ಸವೆಸಬೇಕು; ನಿಧಾನವಾಗಿ ಯಾಚಿಸಬೇಕು;

ನಿಧಾನವಾಗಿ ಬೆಟ್ಟ ಹತ್ತಬೇಕು; ನಿಧಾನವಾಗಿ ವಿದ್ಯಾರ್ಜನೆ ಹಾಗೂ ಧನಾರ್ಜನೆ ಮಾಡಬೇಕು; ಸಾವಧಾನದಿಂದ ಅಷ್ಟಷ್ಟಾಗಿ ಮಾಡಿದಾಗಲೇ ಈ ಐದು ಸಂಗತಿಗಳು ಸಿದ್ಧಿಸುತ್ತದೆ.

ಅಗಜಾನನಪದ್ಮಾರ್ಕಂ ಗಜಾನನಮಹರ್ನಿಶಮ್।
ಅನೇಕದಂ ತಂ ಭಕ್ತಾನಾಮೇಕದಂತಮುಪಾಸ್ಮಹೇ ॥

ಪರ್ವತರಾಜ ಹಿಮವಂತನಮಗಳಾದ ಪಾರ್ವತಿಯ ಮುಖಕಮಲವನ್ನು ಅರಳಿಸುವ ಸೂರ್ಯನಂತಿರುವ ಹಾಗೂ ಆನೆಯ ಮುಖವುಳ್ಳ ಮತ್ತು ಭಕ್ತ ಜನರ ಸಕಲ ಇಷ್ಟಾರ್ಥಗಳನ್ನು ಈಡೇರಿಸುವ ಏಕದಂತವಾದ ಗಣಪತಿಯನ್ನು ನಾವು ಪೂಜಿಸುತ್ತೇವೆ.

ಸುಭಾಷಿತರಸಾಸ್ವಾದಬದ್ಧ ರೋಮಾಂಚಕಂಚುಕಾಃ ।
ವಿನಾಪಿ ಕಾಮಿನೀಸಂಗಂ ಕವಯಃ ಸುಖಮಾಸತೇ ॥

ಸುಭಾಷಿತಗಳು ರಸಾನುಭವದಲ್ಲಿ ತಲ್ಲೀನರಾದ ಕವಿಗಳು ಕಾಮಿನಿಯರ ಸಹವಾಸ ಮಾಡದೆ ಸುಖಾನುಭವವನ್ನು ಪಡೆಯುತ್ತಾರೆ.

ದ್ರಾಕ್ಷಾ ಮ್ಲಾನಮುಖೀ ಜಾತಾ ಶರ್ಕರಾ ಚಾಶ್ಮತಾಂ ಗತಾ ।
ಸುಭಾಷಿತ ರಸಸ್ಯಾಗ್ರೇ ಸುಧಾ ಭೀತಾ ದಿವಂಗತಾ ॥

ಸುಭಾಷಿತದ ಸವಿಯ ಮುಂದೆ ದ್ರಾಕ್ಷಿಯ ಬಾಡಿಹೋಯಿತು ಸಕ್ಕರೆ ಕಲ್ಲಾಯಿತು. ಅಮೃತವಂತೂ ಹೆದರಿ ದೇವಲೋಕಕ್ಕೆ ಹೊರಟು ಹೋಯಿತು

ಕೋ ಧರ್ಮೋ ದಯಯಾ ಹೀನಃ ಕಾ ದಯಾ ಧರ್ಮವರ್ಜಿತಾ ।
ದಯಾಧರ್ಮಾದಿಕಂ ಸರ್ವಂ ತಸ್ಮಾತ್ ಜ್ಞಾನೇ ಪ್ರತಿಷ್ಠಿತಮ್ ॥

ದಯೆಯಿಲ್ಲದ ಧರ್ಮವಾವುದು? ಧರ್ಮವಿಲ್ಲದ ದಯೆ ಇದ್ದೇನು ಪ್ರಯೋಜನ? ದಯೆ, ಧರ್ಮ ಮುಂತಾದುವೆಲ್ಲ ಜ್ಞಾನದಲ್ಲಿ ನೆಲಸಿವೆ.

ಧೃತಿಃ ಕ್ಷಮಾ ದಮೋಸ್ತೇಯಂ ಶೌಚಮಿಂದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥

ಧೈರ್ಯ, ಕ್ಷೇಮ, ಮನಸ್ಸಿನ ಹಿಡಿತ, ಕದಿಯದಿರುವಿಕೆ, ಶುಚಿತ್ವ, ಇಂದ್ರಿಯನಿಗ್ರಹ, ಬುದ್ಧಿ, ಆತ್ಮಜ್ಞಾನ, ಸತ್ಯ ಮತ್ತು ಕೋಪರಾಹಿತ್ಯವೆಂಬ ಈ ಹತ್ತು ಗುಣಗಳೇ ಧರ್ಮದ ಲಕ್ಷಣ.

ಶ್ರೂಯತಾಂ ಧರ್ಮಸರ್ವಸ್ವಂ ಶ್ರುತ್ವಾಚೈವಾವಧಾರ್ಯತಾಮ್ ।
ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್ ॥

ಧರ್ಮದ ಸರ್ವಸ್ವವನ್ನೂ ಕೇಳಿರಿ ಮತ್ತು ಅನುಸರಿಸಿರಿ. ತನಗೆ ಕೆಡುಕೆನಿಸುವಂಥದ್ದನ್ನು ಪರರಿಗೂ ಮಾಡಬಾರದು.

ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಾಃ ।
ನಿತ್ಯಂ ಸಂನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ ॥

ದೇಹಗಳು ನಶ್ವರವಾದವು. ಸಂಪತ್ತು ಶಾಶ್ವತವಲ್ಲ. ಸಾವು ಸದಾ ಸಮೀಪದಲ್ಲೇ ಇರುತ್ತದೆ. ಆದ್ದರಿಂದ ಒಳ್ಳೆಯ ಕೆಲಸಗಳನ್ನು ಹೆಚ್ಚಾಗಿ ಮಾಡಬೇಕು.

ಅಕುರ್ವನ್ ವಿಹತಂ ಕರ್ಮ ನಿಂದಿತಂ ಚ ಸಮಾಚರನ್ ।
ಪ್ರಸಕ್ತಶ್ಚೇಂದ್ರಿಯಾರ್ಥೇಷು ಪ್ರಾಯಶ್ಚಿತ್ತೀಯತೇ ನರಃ ॥

ಮಾಡಬೇಕಾದ ಕರ್ತವ್ಯವನ್ನು ಮಾಡದೆ, ನಿಂದಿತವಾದ ಕೆಲಸ ಮಾಡುತ್ತಾ, ಇಂದ್ರಿಯಲೋಲುಪನಾದ ಮನುಷ್ಯನು ಪ್ರಾಯಶ್ಚಿತ್ತಮಾಡಿಕೊಳ್ಳಬೇಕು.

ಪಿತಾ ರತ್ನಾಕರೋ ಯಸ್ಯ ಲಕ್ಷ್ಮೀರ್ಯಸ್ಯ ಸಹೋದರೀ ।
ಶಂಖೋ ರೋದಿತಿ ಭಿಕ್ಷಾರ್ಥಿ ನಾದತ್ತಮುಪತಿಷ್ಠತೇ ॥

ಶಂಖದ ತಂದೆ ರತ್ನಾಕರನಾದ ಸಮುದ್ರ, ಲಕ್ಷ್ಮೀದೇವಿಯೇ ಸೋದರಿ. ಆದರೂ ಶಂಖವು ಭಿಕ್ಷೆಗಾಗಿ ಅಳುತ್ತದೆ. ದಾನಮಾಡದಿದ್ದುದು ಎಂದಿಗೂ ತನಗೆ ದೊರೆಯುವುದಿಲ್ಲ.

ದಾನಂ ಯಜ್ಞಾಃ ಸತಾಂ ಪೂಜಾ ವೇದಧಾರಣಮಾರ್ಜನಂ
ಏಷ ಧರ್ಮಃ ಪರೋ ರಾಜನ್ ಬಲವಾನ್ ಪ್ರೇತ್ಯ ಚೇಹ ಚ ।

ದಾನ, ಯಜ್ಞ, ಸತ್ಪುರುಷರ ಪೂಜೆ, ವೇದಾಭ್ಯಾಸ, ಸರಳತೆ ಇವುಗಳು ಉತ್ತಮವಾದ ಧರ್ಮಗಳು ಹಾಗೂ ಈ ಲೋಕದಲ್ಲಿ ಮತ್ತು ಪರಲೋಕದಲ್ಲಿಯೂ ಬಲಿಷ್ಠವಾದವುಗಳು.

ಆಚಾರಃ ಪರಮೋ ಧರ್ಮಃ ಶ್ರುತ್ಯುಕ್ತಃ ಸ್ಮಾರ್ತ ಏವ ಚ ।
ತಸ್ಮಾದಸ್ಮಿನ್ ಸದಾ ಯುಕ್ತಃ ನಿತ್ಯಂ ಸ್ಯಾದಾತ್ಮವಾನ್ನರಃ ॥

ವೇದಗಳಲ್ಲಿ, ಸ್ಮೃತಿಗಳಲ್ಲಿ ಹೇಳಿರುವ ಸದಾಚಾರವು ಶ್ರೇಷ್ಠವಾದ ಧರ್ಮ. ಆದುದರಿಂದ ಮಾನವನು ಅವುಗಳನ್ನು ಸದಾ ಕಾಪಾಡಿಕೊಂಡು ಆತ್ಮಜ್ಞಾನವನ್ನು ಪಡೆಯಬೇಕು.

ಅನುದ್ವೇಗತರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।
ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ ॥

ನೋವನ್ನುಂಟುಮಾಡದ, ಸತ್ಯವೂ, ಪ್ರಿಯವೂ, ಹಿತಕರವೂ ಆದ ಮಾತನಾಡುವಿಕೆ, ಸದಾ ಓದುತ್ತಿರುವುದು, ಓದಿದ್ದರ ಮನನ ಇವೇ ವಾಙ್ಮಯ ತಪಸ್ಸು.

ವಿತ್ತಂ ಬಂಧುರ್ವಯಃ ಕರ್ಮ ವಿದ್ಯಾ ಭವತಿ ಪಂಚಮೀ ॥
ಏತಾನಿ ಮಾನ್ಯಸ್ಥಾನಾನಿ ಗರೀಯೋ ಯದ್ಯದುತ್ತರಮ್ ।

ಹಣ, ಬಂಧು, ವಯಸ್ಸು, ಕರ್ಮ ಮತ್ತು ವಿದ್ಯೆ ಇವಿಷ್ಟು ಯೋಗ್ಯತೆಯ ಸ್ಥಾನಗಳು. ಆದರೆ ಇವುಗಳಲ್ಲಿ ಉತ್ತರೋತ್ತರ ಶ್ರೇಷ್ಠವಾದದ್ದು.

ದೇವರು

ಸುಧೀಂದ್ರ ಆಚಾರ್ಯ
ಪ್ರಥಮ ಬಿ.ಬಿ.ಎ.

ಯಾವುದೋ ಒಂದು ವಾಸ್ತವಿಕ ಇಲ್ಲವೆ ಕಾಲ್ಪನಿಕ ಆಕೃತಿಯನ್ನು ಒಂದು ಮಾಧ್ಯಮದ ಮೂಲಕ ರೂಪಿಸುವ ಕಲೆಗೆ ಶಿಲ್ಪಕಲೆ. ಶಿಲ್ಪಕಲೆಗಳನ್ನು ಹೊಸತೇ ಆದೊಂದ ಆಕೃತಿಯನ್ನು ರೂಪಿಸಬಹುದು. ಅಂತಹ ಕೆಲಸ ಮಾಡುವ ಕಾಲದಲ್ಲಿ ಮನುಷ್ಯ, ತಾನು ನಿತ್ಯ ಜೀವನದಲ್ಲಿ ಕಾಣುವ ಪ್ರಾಣಿ, ಮನುಷ್ಯ, ಮೊದಲಾದ ಜೀವಿಗಳ ಆಕಾರಗಳನ್ನು ಅನುಕರಣೆಯನ್ನು ಮಾಡುವುದುಂಟು. ಯಾವುದೇ ಜೀವಿ ವಿರಮಿಸುತ್ತಿರುವಾಗಲೂ ಕೂಡ ಅದರಲ್ಲಿ ನಾವು ಒಂದಲ್ಲ ಒಂದು ಬಗೆಯ ಚಲನೆ ಇಲ್ಲವೆ ಚಟುವಟಿಕೆಯನ್ನು ನೋಡುತ್ತೇವೆ. ಆದರೆ ಮನುಷ್ಯ ನಿರ್ಮಿಸಲ್ಪಡುವ ಪ್ರತಿಮೆ, ಗೊಂಬೆ, ಮೂರ್ತಿಗಳು ಜಡವಾದದ್ದು. ಅಂತಹ ಜಡವಸ್ತುವಿಗೆ ಜೀವಕಳೆಯನ್ನು ನೀಡಿದವ ಮನುಷ್ಯ. ಅಷ್ಟಕ್ಕೂ ಈ ಪ್ರತಿಮೆ. ಮೂರ್ತಿ, ದೇವರ ಕಲ್ಪನೆ ಸೃಷ್ಟಿಯಾದದ್ದಾದರೂ ಹೇಗೆ? ಮನುಷ್ಯನ ಧಾರ್ಮಿಕ ಆಚರಣೆಗಳನ್ನು ನೋಡುವುದಾದರೆ ಹಳೆಯ ಶಿಲಾಯುಗದಲ್ಲಿಯೇ ಮನುಷ್ಯ ಧಾರ್ಮಿಕ ಆಚರಣೆಗಳನ್ನು ಕಂಡುಕೊಂಡದ್ದು ತಿಳಿದುಬರುತ್ತದೆ. ಆದಿ ಮಾನವನಿಗೆ ಆಹಾರ ಸಿಗದೆ ಇರುವಾಗ ರೋಗರುಜಿನಗಳು ಬಂದಾಗ, ಗುಡುಗು ಬಿರುಗಾಳಿ ಸಿಡಿಲು ಆರ್ಭಟಿಸಿದಾಗ, ಅಥವಾ ಯಾವುದೋ ಆಶ್ಚರ್ಯಕರ ಘಟನೆ ನಡೆದಾಗ ಭಯದಿಂದ ಮನುಷ್ಯ ಅತೀಂದ್ರಿಯ ಶಕ್ತಿಗಳ ನೆರವನ್ನು ಬಯಸುತ್ತಾನೆ. ಅವನಿಗೆ ಹುಟ್ಟು ಸಾವುಗಳ ಪರಿಕಲ್ಪನೆಯೇ ಇರುವುದಿಲ್ಲ. ಈ ಸೃಷ್ಟಿಯನ್ನು ನೋಡಿ ಇದನ್ನು ಸೃಷ್ಟಿಸಿದ ಶಕ್ತಿಯನ್ನು ಒಲಿಸಿಕೊಳ್ಳಬಹುದೆಂದು ಅವನಿಗೆ ಹೊಳೆಯುತ್ತದೆ. ಈ ಶಕ್ತಿಯನ್ನು ನಮಗೆ ಬೇಕಾದ ಯಾವ ಕೆಲಸಕ್ಕೆ ಬೇಕಾದರೂ ಬಳಸಿಕೊಳ್ಳಬಹುದು. ಈ ಶಕ್ತಿಯನ್ನು ಊರ ನಡುವೆ ಇದ್ದರೆ ಜನರಿಗೆ ಶತ್ರು ಭಯವಿಲ್ಲ, ಶಕ್ತಿಯಿರುವ ತಾಯಿತವನ್ನು ಮೈಯಲ್ಲಿ ಎಲ್ಲಿಯಾದರೂ ಇರಿಸಿಕೊಂಡರೆ ಮನುಷ್ಯನಿಗೆ ಅಪಜಯ, ಪರಾಭವ, ಆತಂಕ ಇರುವುದಿಲ್ಲ. ಪ್ರಕೃತಿಯಲ್ಲಿ ದೇವರನ್ನು ಕಂಡರು, ಮರಗಳಲ್ಲಿ ಕೊರೆದು ಮೂರ್ತಿ ಮಾಡಿ, ಪೂಜಿಸತೊಡಗಿದರು. ಇದು ಧಾರ್ಮಿಕತೆಯ ಸೃಷ್ಟಿ. ಈ ಮೂರ್ತಿಗಳಿಗೆ ಮುಖವಾಡವಿಟ್ಟು ಬಲಿ, ಅರ್ಪಿಸತೊಡಗುತ್ತಾರೆ. ಆ ಶಕ್ತಿಯನ್ನು ನಾವು ಪೂಜಿಸಿದ ಹಾಗೆ ಫಲ ನೀಡುತ್ತದೆ ಎಂದು ನಂಬಿಕೆ ಸೃಷ್ಟಿಯಾಗುತ್ತದೆ. ಕ್ರಿಸ್ತ ಪೂರ್ವ ಎರಡು ಮೂರು ಸಾವಿರ ವರ್ಷಗಳಷ್ಟು ಹಿಂದೆ ಭಾರತಕ್ಕೆ ಬಂದ ಆರ್ಯರು ಪಂಚ ಭೂತಗಳಲ್ಲಿ ದೇವರನ್ನು ಪೂಜಿಸತೊಡಗಿದರು. ಯಜ್ಞದ ಮುಖಾಂತರ ಭಗವಂತನನ್ನು ಕಂಡರು. ಅಗ್ನಿ (ಬೆಂಕಿ) ವಾಯು (ಗಾಳಿ) ಸೂರ್ಯ (ಬಿಸಿಲು) ವರುಣ (ಮಳೆ) ಆಯಾ ಅಭಿಮಾನಿ ದೇವತೆಗಳಿಗೆ ಬಲಿಯನ್ನು ಒಪ್ಪಿಸಿದರು. ಮುಂದೆ ಸೈಂದವ ಸಂಸ್ಕೃತಿಯಲ್ಲಿ (Indus Civilization) ಜೇಡಿಮಣ್ಣಿನ, ಸುಣ್ಣಕಲ್ಲಿನ ಸಣ್ಣಸಣ್ಣ ಹಲವಾರು ವಿಗ್ರಹಗಳು ಕಾಣಸಿಗುತ್ತದೆ. ಕ್ರಮೇಣ ಮೂರ್ತಿ ರಚನೆಗೆ ಶಿಲ್ಪಶಾಸ್ತ್ರ ಪೂಜೆಗಳಿಗೆ ಆಗಮ ಶಾಸ್ತ್ರಗಳು ಹುಟ್ಟಿಕೊಂಡಿತು. ಯಂತ್ರ ತಂತ್ರ ಹೋಮ ಹವನಾದಿಗಳು ಹುಟ್ಟಿಕೊಂಡಿತು. ನದಿದಂಡೆಯ ಮೇಲೆ ಪರ್ವತದ ತಪ್ಪಲಲ್ಲಿ, ಚಂದನ, ಆಗರು ಕರ್ಪೂರ ಮೊದಲಾದ ವೃಕ್ಷಗಳಿರುವ ಪ್ರದೇಶದಲ್ಲಿ ದೇವಸ್ಥಾನ ಕಟ್ಟಲು ಪ್ರಾರಂಭಿಸಿದರು. ಅಂತಹ ಸ್ಥಳದಲ್ಲಿ ವಿಗ್ರಹ ಪ್ರತಿಷ್ಠೆ ಮಾಡಿದರೆ, ಉತ್ತಮ ಶಕ್ತಿ ಪ್ರವಹಿಸುತ್ತದೆ ಎಂದು ತಿಳಿದುಕೊಂಡರು. ಧ್ವಜಸ್ತಂಭ, ದೀಪಸ್ತಂಭಗೆ ಬಲಿಪೀಠ, ಮಹಾದ್ವಾರ, ಗೋಪುರಗಳು, ಪ್ರಾಕಾರಗಳು ರಚಿಸಿದರು. ವೇದಮಂತ್ರಗಳ ಉಚ್ಚಾರಣೆಯಿಂದ ಅಭಿಷೇಕಾದಿಗಳಿಂದ ಮೂರ್ತಿಯ ಶಕ್ತಿ ಹೆಚ್ಚುತ್ತದೆ. ಆ ಮೂರ್ತಿಯು ಅಸಾಧಾರಣ ಶಕ್ತಿಯನ್ನು ಪಡೆಯುತ್ತದೆ. ಜನರ ಕಷ್ಟಕಾರ್ಪಣ್ಯಗಳನ್ನು ಬಗೆಹರಿಸುತ್ತದೆ. ದೇವಸ್ಥಾನದ ಗರ್ಭಗೃಹದಿಂದ Positive Energy ಹೊರಹೊಮ್ಮುತ್ತಿರುತ್ತದೆ. ದೇವರ ವಿಗ್ರಹದಲ್ಲಿ Magnetic Waves ಗರಿಷ್ಟವಾಗಿರುತ್ತದೆ. ದೇವಸ್ಥಾನದ ಮೇಲೊದಿಕೆ ತಾಮ್ರದಿಂದ ಕೂಡಿದ್ದು ನೀವು ಪ್ರದಕ್ಷಿಣೆ ಹಾಕುವಾಗ Magnetic Waves ನಮ್ಮ ದೇಹದೊಳಗೆ ಪ್ರವೇಶಿಸುತ್ತದೆ. ತುಳಸಿಯ ತೀರ್ಥ ಒಂದು ಉತ್ತಮ ಔಷಧದಾಯಕವಾಗಿದೆ. ದೇವಸ್ಥಾನದ ಪ್ರತಿಯೊಂದು ಆಚರಣೆಯು ವೈಜ್ಞಾನಿಕದಿಂದ ಕೂಡಿದೆ. ದೇವಸ್ಥಾನವು ಒಂದು ಅದ್ಭುತ ಶಕ್ತಿಯ ಕೇಂದ್ರವಾಗಿದೆ. ಆ ಶಕ್ತಿಯನ್ನು ನಾವು ಪಡೆಯಬೇಕೆಂದು ನಮ್ಮ ಪೂರ್ವಜರು ದೇವಸ್ಥಾನಕ್ಕೆ ಹೋದಾಗ ಕೆಲ ಕಾಲ ಕುಳಿತುಕೊಂಡು ಬರಬೇಕೆಂದರು. ಆದರೆ ಇಂದು ದೇವಸ್ಥಾನಕ್ಕೆ ಹೋದಾಗ ನೆಲಕ್ಕೆ ತಾಗಿಸಿ ಬರುವಂತದ್ದಾಗಿದೆ. ಇಂದಿನ ದೇವಸ್ಥಾನಗಳು ಆಡಂಬರವಾಗಿಬಿಟ್ಟಿವೆ. ದೇವಸ್ಥಾನಕ್ಕೆ ಹೋಗುವ ಜನ ತಾನು ಯಾಕೆ ಹೋಗುತ್ತಿದ್ದೇನೆ ಎಂದು ತಿಳಿದಿರುವುದಿಲ್ಲ, ಧ್ವನಿವರ್ಧಕ ಹಾಕುವುದು, ವಿದ್ಯುತ್ತೀಕರಣ, ಮೂಲ ವಿಗ್ರಹದ ಮೇಲೆ ವಿದ್ಯುತ್ ಲೈಟ್, ದೇವರ ಛಾಯಾಚಿತ್ರ ತೆಗೆಯುವುದು. ಜನರು ಹಾಳು ಹರಟೆಯಲ್ಲಿ ನಿರತರಾಗುವುದು ಸೆಲ್ಫೀ ತೆಗೆಯುವುದು. ಈ ಜಗಳವಾಡುವುದು, ಆಣೆ ಪ್ರಮಾಣಗಳನ್ನು ಮಾಡುವುದು ಈ ರೀತಿಯಿಂದ ದೇವರ ಶಕ್ತಿ ಕ್ಷೀಣಿಸುತ್ತದೆ. ದೇವಸ್ಥಾನವು ನಮ್ಮನ್ನು ಪ್ರಜ್ಞಾ ಸ್ಥಿತಿಗೆ (Consciousness) ಕೊಂಡೊಯ್ಯುವ ಸಾಧನ, ದೇವಸ್ಥಾನ ನಿರ್ಮಿಸಿದ ಸತ್ಯದ ಉದ್ದೇಶವನ್ನೇ ಮರೆತುಬಿಟ್ಟಿದ್ದೇವೆ. ಇದನ್ನು ಕಾಪಾಡುವ ಜವಾಬ್ದಾರಿ ನಮ್ಮದಲ್ಲವೆ ?

ಸಕಾಲಕ್ಕಿಲ್ಲದ ವಿದ್ಯೆ

पुस्तकस्था तु या विद्या, परहस्तगतं धनं ।
कार्यकाले समुत्पन्ने न सा विद्या, न तद्धनम् ॥

–सूक्तिमाला

ಪುಸ್ತಕದಲ್ಲಿದ್ದ ವಿದ್ಯೆ, ಬೇರೆಯವರ ಕೈಯಲ್ಲಿದ್ದ ಹಣದಂತೆ, ಆ ವಿದ್ಯೆ ಹಾಗೂ ಬೇರೆಯವರ ಕೈಯಲ್ಲಿರುವ ಹಣ ಎರಡೂ ಅವಶ್ಯಕತೆ ಇದ್ದಾಗ ಸಿಗಲಾರದು

ನಮ್ಮ ಪಾದಗಳಿಗೆ ಶ್ರುತಿ ಎಂದು ಹೆಸರು. ಗುರುವಿನಿಂದ ಶಿಷ್ಯ ಕೇಳಿ ಕಂಠಸ್ತ ಮಾಡಿ, ಉದಾತ್ತ, ಅನುದಾತ್ತ, ಸ್ವರಿತಾದಿಗಳು ಚಾಚು ತಪ್ಪದಂತೆ ಸಹಸ್ರ, ಸಹಸ್ರ ವರ್ಷಗಳಿಂದ ನಮ್ಮವರು ಅದನ್ನು ಕಾಯ್ದುಕೊಂಡು ಬಂದಿದ್ದಾರೆ. ಭಾರತೀಯ ಶಿಕ್ಷಣ ಪರಂಪರೆಯಲ್ಲಿ ವಿದ್ಯೆ ಮಸ್ತಕವಾಗಬೇಕೇ ಹೊರತು, ಪುಸ್ತಕವಾಗಿರಬಾರದು. ಪುಸ್ತಕದಲ್ಲಿರುವ ವಿದ್ಯೆ, ಊಟಕ್ಕಿಲ್ಲದ ಉಪ್ಪಿನಕಾಯಿಯಂತೆ, ಯಾವುದಾದರೊಂದು ಸಂದರ್ಭದಲ್ಲಿ, ಅಕಸ್ಮಾತ್ ಯಾರಾದರೂ ಏನಾದರೊಂದು ವಿಷಯ ಕೇಳಿದಾಗ, ತಕ್ಷಣ ಉತ್ತರಿಸದೆ ಮನೆಯಲ್ಲೋ ಲೈಬ್ರರಿಯಲ್ಲೋ ಪುಸ್ತಕವಿದೆ, ನೋಡಿ ಹೇಳುತ್ತೇನೆ ಎಂದರೆ ಎಷ್ಟೇ ದೊಡ್ಡ ವಿದ್ವಾಂಸನಾದರೂ, ಹೀಗೆ ಹೇಳಿದಾಗ ಕೇಳುಗರ ದೃಷ್ಟಿಯಲ್ಲಿ ಕುಬ್ಜನಾಗುತ್ತಾನೆ.

ಕಲಿತ ವಿದ್ಯೆ ತಕ್ಷಣ ಸ್ಫುರಿಸುವಂತಿರಬೇಕು. अवसर पठिता वाणी, गुणगणरहितापि शोभते पुंसां– ಅಂದರೆ ಸಕಾಲದಲ್ಲಿ ಹೊರಹೊಮ್ಮಿದ ಮಾತಿನಲ್ಲಿ ಅಲಂಕಾರಾದಿ ಇಲ್ಲದಿದ್ದರೂ ಅದಕ್ಕೆ ಎಲ್ಲಿಲ್ಲದ ಶೋಭೆ. ಅದನ್ನೇ ಕನ್ನಡದ ಕವಿ ಸರ್ವಜ್ಞ, ಹೊತ್ತಿಗೊದಗಿದ ಮಾತು ಸತ್ತವನು ಎದ್ದಂತೆ. ಹೊತ್ತಾಗಿ ನುಡಿದ ಮಾತು ಕೈಜಾರಿದ ಮುತ್ತಿನಂತಿಹುದು ಎನ್ನುತ್ತಾರೆ.

ವಿದ್ಯೆ ಏನು ಮಾಡುತ್ತದೆ ಮತ್ತು ಏನು ಮಾಡುವುದಿಲ್ಲ ಎನ್ನುವುದನ್ನು ಒಂದು ಪುಟ್ಟ ಪ್ರಸಂಗ ಹೇಳುತ್ತದೆ. ಖ್ಯಾತ ನಾಟಕಕಾರ ಹಾಗೂ ಸಂಗೀತ ನಿರ್ದೇಶಕರಾಗಿದ್ದ ಬಿ. ವಿ. ಕಾರಂತರು ಏಳನೇ ತರಗತಿಯಲ್ಲಿ ಓದುತ್ತಿರುವಾಗ ಯಾಕೋ ಓದು ತಲೆಗೆ ಹತ್ತುವುದೇ ಇಲ್ಲ ಎಂದೆನಿಸಿತು. ಶಿಕ್ಷಕರೆಲ್ಲ ರಾತ್ರಿ ಹಗಲು ಓದು ಎಂದು ಹೇಳುತ್ತಿದ್ದರು. ಅವರ ಒತ್ತಾಯಕ್ಕೆ ಬೇಸತ್ತು ಹೋದ ಅವರು ಒಂದು ರಾತ್ರಿ ಊರು ಬಿಟ್ಟು ಮೈಸೂರು ಸೇರುತ್ತಾರೆ. ಅಲ್ಲಿನ ಒಂದು ನಾಟಕ ಮಂಡಳಿಗೆ ಸೇರುತ್ತಾರೆ. ನಾಟಕ ಕಲಿಯುತ್ತಾರೆ. ಮುಂದೆ ವಿಶ್ವವೇ ಮುಟ್ಟುವಂಥ ನಾಟಕಕಾರರಾಗುತ್ತಾರೆ.

ಅವರು ಸ್ಕೂಲು ಬಿಟ್ಟು ಓಡಿಹೋದ ದಿನಗಳಲ್ಲಿ ಅಲ್ಲಿನ ಮೇಷ್ಟರುಗಳೆಲ್ಲ, ದಡ್ಡ ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಲು ಕಾರಂತರ ಉದಾಹರಣೆ ಕೊಡುತ್ತಿದ್ದರಂತೆ. ನೀವು ಚೆನ್ನಾಗಿ ಮನಸ್ಸಿಟ್ಟು ಓದಿ ಕಲಿಯದಿದ್ದರೆ ಬಿ.ವಿ.ಕಾರಂತರ ಹಾಗೆ ಊರು ಬಿಟ್ಟು ಹೋಗಬೇಕಾಗುತ್ತದೆ ಎಂದು ಬುದ್ಧಿವಾದ ಹೇಳಿದರಂತೆ. ಆ ಮಾತಿನಿಂದ ಗಮನವಿಟ್ಟು ಪಾಠ ಕೇಳಿದ ಮಕ್ಕಳು ಗುಮಾಸ್ತರಾಗಿ, ಮೇಷ್ಟರಾಗಿ, ಸರ್ಕಾರಿ ನೌಕರರಾಗಿ ಕೊನೆಗೆ ಯಾರಿಗೂ ಗೊತ್ತಿಲ್ಲದವರಂತೆ ಬದುಕಿಗೆ ಕೊನೆ ಹಾಡಿದರು. ಆದರೆ ಕಾರಂತರ ಹೆಸರು ಮಾತ್ರ ಚಿರವಾಗಿ ಉಳಿಯಿತು. ಈಗ ಅದೇ ಕಾಲೇಜಿನ ಮೇಷ್ಟರು, ನಮ್ಮ ಕಾಲೇಜಿನಲ್ಲಿ ಬಿ.ವಿ. ಕಾರಂತ ಎಂಬ ವಿದ್ಯಾರ್ಥಿ ಇದ್ದ. ಅವನಲ್ಲಿ ಎಂಥ ಪ್ರತಿಭೆ ಇತ್ತು ಎಂದರೆ ಅವನು ಮೈಸೂರಿಗೆ ಹೋಗಿ ಸ್ವಂತ ಶಕ್ತಿಯಿಂದ ನಾಟಕ ಸಂಗೀತ, ಅಭಿನಯ ಕಲಿತು ಇಡೀ ರಾಷ್ಟ್ರವೇ ಮೆಚ್ಚುವಂಥ ದೊಡ್ಡ ಸ್ಥಾನಕ್ಕೆ ಏರಿದ್ದಾನೆ ಎಂದು ಪಾಠ ಹೇಳುತ್ತಾರಂತೆ (ಎಂಥ ವಿಸ್ಮಯ)

ಅದಕ್ಕೆ ಹಿರಿಯರು ನುಡಿಯುತ್ತಾರೆ. "ನೀನು ಬುದ್ಧಿವಂತನಾದರೆ ವಿದ್ಯೆ ಬೇಕಾಗಿಲ್ಲ. ದಡ್ಡನಾಗಿದ್ದರೆ ವಿದ್ಯೆಯನ್ನು ಕಲಿಯಬೇಕು. ನಾನು ಸಾಹಸಿಯಾಗಿದ್ದರೆ ಏನನ್ನೂ ಕಲಿಯಬೇಕಾಗಿಲ್ಲ. ಭಯಸ್ಥನಾಗಿದ್ದರೆ ಕಲಿಯುವುದು ತೀರ ಅಗತ್ಯ. ನಾನು ದಿಟ್ಟತನದಿಂದ ಕೂಡಿದ್ದರೆ ವಿದ್ಯೆಯನ್ನು ನಿನಗೆ ಜೀವನವೇ ಕಲಿಸುತ್ತದೆ. ನೀನು ಹೇಡಿಯಾಗಿದ್ದರೆ ವಿದ್ಯೆ ಕಲಿತರೆ ಮಾತ್ರ ಜೀವನ ನಡೆಸುವುದಕ್ಕೆ ಸಾಧ್ಯ. ನಾನು ಪ್ರಕೃತಿಯ ಹಾಗೆ ಬದುಕಬಲ್ಲೆಯಾದರೆ ಈ ಜಗತ್ತೇ ನಿನ್ನ ಪಾಠಶಾಲೆ. ನಿನ್ನ ಪ್ರಕೃತಿಯೇ ನಿನಗೆ ಗೊತ್ತಿಲ್ಲದೇ ಹೋದರೆ ಸ್ಕೂಲುಗಳೇ ನಿನಗೆ ಆಶ್ರಯತಾಣ.

ಶಾಲೆಗೆ ಹೋದರೆ ಏನನ್ನು ಕಲಿಯಬೇಕು? ನೀವು ಕಲಿತದ್ದು ಸರಿಯಾಗಿದೆಯೇ? ನಿಜಕ್ಕೂ ಕಲಿಯಬೇಕಾದದ್ದು ಏನು? ಅನ್ನುವುದನ್ನು ಮತ್ತೊಮ್ಮೆ ನಿರ್ಧರಿಸಿ. ಏಕೆಂದರೆ ಒಳ್ಳೆಯ ಈಜುಪಟು ನಿಮಗೆ ಈಜುವುದನ್ನು ಕಲಿಸಬಲ್ಲ. ಆದರೆ ಈಜಲು ಬೇಕಾದ ಧೈರ್ಯವನ್ನು ಯಾರೂ ಕಲಿಸಲಾಗುವುದಿಲ್ಲ; ಬದುಕುವ ಆಸೆಯನ್ನು ಬಿಟ್ಟು.

यत्रास्ति लक्ष्मीः विनयी न तत्र
अभ्यागतो यत्र न तत्र लक्ष्मी ।
उभौ च तौ यत्र न तत्र विद्या
नैकत्र सर्वे गुणसन्निपातः ॥

"ಐಶ್ವರ್ಯವಿದ್ದಲ್ಲಿ ವಿನಯವಿರುವುದಿಲ್ಲ. ಅತಿಥಿಗಳು ಇರುವಲ್ಲಿ ಸಂಪತ್ತಿರುವುದಿಲ್ಲ. ಒಂದು ವೇಳೆ ಎರಡೂ ಇದ್ದರೆ ಅಲ್ಲಿ ವಿದ್ಯೆ ಇರುವುದಿಲ್ಲ. ಹೀಗೆ ಒಂದೇ ಕಡೆಯಲ್ಲಿ ಎಲ್ಲಾ ಗುಣಗಳು

ಇರುವುದಿಲ್ಲ. ಏಕೆಂದರೆ ಯಾರೂ ಪರಿಪೂರ್ಣರಲ್ಲ ಎಲ್ಲರಲ್ಲೂ ಧನಾತ್ಮಕ ಹಾಗೂ ಋಣಾತ್ಮಕ ಈ ಎರಡೂ ಅಂಶಗಳೂ ಇರುತ್ತದೆ. ಆದ್ದರಿಂದ ಒಬ್ಬ ಮನಷ್ಯನಲ್ಲಿರುವ ಕೆಟ್ಟ ಗುಣಗಳನ್ನು ಕೀಳರಿಮೆಯಿಂದ ನೋಡದೆ, ಅವನಲ್ಲಿರುವ ಒಳ್ಳೆಯ ಗುಣವನ್ನು ಪ್ರೀತಿಸುತ್ತ ಸಹ ಬಾಳ್ವೆಯಿಂದ ಬಾಳಬೇಕು.

ಕೊನೆಯದಾಗಿ ಇದರ ಆಶಯವೇನೆಂದರೆ ವಿದ್ಯೆಯೊಂದಿಗೆ ವಿನಯ, ತಾಳ್ಮೆ, ಪ್ರತಿಭೆ ಎಲ್ಲವೂ ಸಮಾನಾಗಿ ಇದ್ದಾಗ ಮಾತ್ರ ಆತ ಪರಿಪೂರ್ಣನಾಗಲು ಪ್ರಯತ್ನಿಸಲು ಯೋಗ್ಯನಾಗುತ್ತಾನೆ.

ಎಲ್ಲರ ಜೊತೆಗೆ ಸಾಗುವುದಕ್ಕೆ ವಿದ್ಯೆ

ಎಲ್ಲರನ್ನೂ ಮೀರಿಸುವುದಕ್ಕೆ ಪ್ರತಿಭೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು.

ಮೌನದ ಹಿರಿಮೆ

ಪೃಥ್ವಿ ಎಸ್. ಜಿ.
ದ್ವಿತೀಯ ಬಿ.ಎಸ್ಸಿ.

चित्रं वटतरोर्मूले वृद्धाः शिष्याः गुरुर्युवा ।
गुरोस्तु मौनं व्याख्यानं, शिष्यास्तु छिन्नसंशयाः ॥

"ವಟವೃಕ್ಷದ ಬುಡದಲ್ಲಿ ಅತ್ಯಾಶ್ಚರ್ಯವೊಂದು ಕಂಡುಬರುತ್ತಿದೆ. ಅದೇನೆಂದರೆ ಯುವಕನಾದ ಗುರುವಿಗೆ ವೃದ್ಧರಾದ ಶಿಷ್ಯರು. ಗುರುವು ಮೌನವಾಗಿದ್ದಾರೆ. ಶಿಷ್ಯರ ಸಂಯಮವೆಲ್ಲಾ ಪರಿಹಾರವಾಗುತ್ತಿದೆ". ಈ ಮಾತು ಮೌನದ ಮಹಿಮೆ ತಿಳಿಸುತ್ತದೆ.

ಮಾತು ಬೆಳ್ಳಿ, ಮೌನ ಬಂಗಾರ ವೆಂಬ ಗಾದೆ ಮೌನದ ಹಿರಿಮೆಯನ್ನು ಸಾರುತ್ತದೆ. ಮೌನವೆಂದರೆ ಕೇವಲ ಮಾತನಾಡದೇ ಇರುವುದಲ್ಲ. ಬದಲಾಗಿ ಆಲೋಚನಾರಹಿತವಾಗಿರುವುದು. ಆಲೋಚನಾರಹಿತವಾದ ಮೌನ ಮನಸ್ಸಿಗೆ, ದೇಹಕ್ಕೆ, ವಿಶ್ರಾಂತಿಯನ್ನು ಉಂಟುಮಾಡುವುದು. ಇಂದಿನ ಕಲುಷಿತ ಪರಿಸರದಲ್ಲಿ ಗಡಿಬಿಡಿಯ ಜೀವನದಲ್ಲಿ ಮಿತಭಾಷೆ ಮಹದುಪಕಾರಿ.

ಮೌನವು ಉತ್ಯುತ್ತಮವಾದ ಮತ್ತು ಶಕ್ತಿಯುತವಾದ ದೀಕ್ಷೆಯಾಗಿದೆ. ಮೌನವು ನಿರಂತರ ವಾಕ್‌ಝರಿ; ಮೌನವೆಂದರೆ ಭಾಷೆಯ ಪ್ರವಾಹ: ಮಾತನಾಡುವ ಪದಗಳು ಶಬ್ದಗಳು ಆ ಸದ್ದಿಲ್ಲದ ಭಾಷೆಯನ್ನು ತಡೆಹಿಡಿಯುತ್ತದೆ ಎಂಬುದಾಗಿ ಶ್ರೀ ರಮಣರು ಹೇಳುತ್ತಿದ್ದರು. ಉದಾಹರಣೆಗೆ ಒಂದು ತಂತಿಯಲ್ಲಿ ವಿದ್ಯುತ್‌ಶಕ್ತಿ ಹರಿಯುತ್ತದೆ. ಅದರ ದಾರಿಗೆ ತಡೆಯೊಡ್ಡಿದಾಗ ಅದು ದೀಪವಾಗಿ ಉರಿಯುತ್ತದೆ. ಅಥವಾ ಫ್ಯಾನ್ ಆಗಿ ತಿರುಗುತ್ತದೆ. ಹೀಗೆ ಮೌನವೂ ಸಹ ಪದಗಳಿಂದ ತಡೆಯಲ್ಪಟ್ಟ ಭಾಷೆಯ ಪ್ರವಾಹವಾಗಿದೆ.

ಮೌನ ಸಾರ್ವತ್ರಿಕ ಭಾಷೆ. ಹಲವಾರು ವರ್ಷಗಳ ಸಂಭಾಷಣೆಯಿಂದ ತಿಳಿಯಲಾಗದ್ದನ್ನು ಮೌನದ ಮೂಲಕ ತಿಳಿಯಬಹುದು. ಅದು ಅತ್ಯಂತ ಶಕ್ತಿಯುಳ್ಳ ಭಾಷೆ. ಆತ್ಮಜ್ಞಾನಿಗಳ ಭಾಷೆ. ಮೌನದಿಂದಿರುವ ಋಷಿ ಮುನಿಗಳ ಚಿಂತನ–ಮಂಥನದಿಂದ ಹೊರಹೊಮ್ಮಿದ ನುಡಿಗಳೇ ವೇದಮಂತ್ರವಾದವು. ಹಿತ–ಮಿತ–ಸ್ಮಿತ–ಸುಲಲಿತ ಮಾತುಗಳು ಮೌನದ ಆಳದಿಂದ ಬಂದಾಗ ವಿಶಿಷ್ಟವಾದ ಮೆರುಗನ್ನು ಪಡೆಯುತ್ತವೆ. ನಮ್ಮ ಕವಿಗಳು ಮೌನ ಮೊಗ್ಗೊಡೆದು ಮೃದು ಮಾತರಳಿ ಬರಲಿ; ಮೂರು ದಿನಗಳ ಬಾಳು ಘಮಘಮಿಸುತಿರಲಿ ಎಂದಿದ್ದನ್ನು ಸ್ಮರಿಸಬಹುದಾಗಿದೆ.

ಮಾನವ ಜನಾಂಗ ಸುಖ–ಶಾಂತಿ–ನೆಮ್ಮದಿಯಿಂದ ಬದುಕಬೇಕಾದರೆ ಪ್ರತಿದಿನ ಕೆಲವು ನಿಮಿಷಗಳ ಕಾಲವಾದರೂ ಮೌನದಿಂದ ಇರಬೇಕಾದ ಅಗತ್ಯತೆಯನ್ನು ವೈದ್ಯರು, ಮನಃಶಾಸ್ತ್ರಜ್ಞರು, ವಿಜ್ಞಾನಿಗಳು, ತತ್ವಜ್ಞಾನಿಗಳು ಒತ್ತಿ ಹೇಳಿದ್ದಾರೆ. ಆಲೋಚನಾರಹಿತವಾದ ಇಪ್ಪತ್ತು ನಿಮಿಷಗಳ ಮೌನ ಎಂಟು ತಾಸು ನಿದ್ರೆಯ ಸುಖಕ್ಕೆ ಅಥವಾ ವಿಶ್ರಾಂತಿಗೆ ಸಮವೆಂದು ತಿಳಿಯಲಾಗಿದೆ. ಮೆದುಳಿಗೆ ಹೇಗೆ ವಿಶ್ರಾಂತಿ ಅವಶ್ಯಕವೋ ಹಾಗೆ ಮನಸ್ಸಿಗೂ ವಿಶ್ರಾಂತಿ ಬೇಕು. ಮೆದುಳಿನ ಸಾಮರ್ಥ್ಯ ಇಷ್ಟೇ ಎಂದು ನಿರ್ದಿಷ್ಟ ಪಡಿಸಿಲ್ಲ. ಮೆದುಳಿಗೆ ಹೆಚ್ಚು ಹೆಚ್ಚು ವಿಶ್ರಾಂತಿಕೊಟ್ಟಷ್ಟೂ ಅದು ಹೆಚ್ಚುಚ್ಚು ಕ್ರಿಯಾಶೀಲವಾಗುವುದು. ಆಗ ಸ್ಮರಣಶಕ್ತಿ, ಏಕಾಗ್ರತೆ ಹೆಚ್ಚುವುದು. ವಿಶೇಷವಾಗಿ ವಿದ್ಯಾರ್ಥಿಗಳಿಗೆ ಓದಿದ್ದನ್ನು ಮನನ ಮಾಡಲು, ಜ್ಞಾಪಕದಲ್ಲಿಟ್ಟುಕೊಳ್ಳಲು ಅನುಕೂಲವಾಗುವುದು. ಮನುಷ್ಯನ ನರಗಳ ದೌರ್ಬಲ್ಯಕ್ಕೆ ಅತಿಮಾತು ಕಾರಣ, ಎಂಬುದು ವೈದ್ಯರ ಅಭಿಪ್ರಾಯ; ಆದ್ದರಿಂದಲೇ ರೋಗಿಗಳಿಗೆ, ಕಡಿಮೆ ಮಾತನಾಡುವಂತೆ ಸಲಹೆ ನೀಡಲಾಗುತ್ತದೆ.

ಇನ್ನು ಸಾಮಾಜಿಕವಾಗಿ ಕಂಡುಬರುವುದೇನೆಂದರೆ, ವಾಚಾಳಿಗಳ ಜತೆ ಇರುವ ಸ್ನೇಹ ಶಾಶ್ವತವಲ್ಲ; ಮಾತಿನಿಂದ ಮಾತು ಜಗಳ, ಊಟದಿಂದ ಬಂತು ರೋಗ ಎಂಬಂತೆ ಅತಿಮಾತು ಮಿತ್ರತ್ವ ನಾಶಕ್ಕೆ ನಾಂದಿ. ಅತಿಮಾತಿನಿಂದ ನಮ್ಮ ಶಕ್ತಿ ಪೋಲಾಗುವುದಲ್ಲದೆ ರಾತ್ರಿ ಸುಖನಿದ್ರೆ ಬರುವುದಿಲ್ಲ. ರಾತ್ರಿಯ ವೇಳೆ ಮಲಗುವ ಮುನ್ನ ಸ್ವಲ್ಪ ಸಮಯ ಏಕಾಂತದಲ್ಲಿದ್ದು ಅನಂತರ ಮಲಗಿದರೆ ಸುಖನಿದ್ರೆ ಬರುವುದು. ಆದ್ದರಿಂದಲೇ ಸುಭಾಷಿತಗಳು, **मौनं सर्वत्र साधनं** ಎಂದಿದ್ದಲ್ಲದೇ **मौनं सर्वार्थसाधनं** ಎಂದು ಮೌನದ ಮಹಿಮೆ ಸಾರಿದ್ದಾರೆ. ಹೆಚ್ಚಿನ ಸಂದರ್ಭಗಳಲ್ಲಿ

ಕಾರ್ಯಗಳಲ್ಲಿ ಮೌನದಿಂದ ಯಶಸ್ಸು ಎಂಬುದು ಅನುಭವವೇದ್ಯ.

ಇನ್ನು ಆಧ್ಯಾತ್ಮಿಕ ಸಾಧನೆಯಲ್ಲಿ ನಿರತವಾದ ಸಾಧಕನಿಗಂತೂ ಮೌನ ಅಚಲವಾದ ಧ್ಯಾನವೇ ಆಗಿದೆ. ಆತ್ಮಜ್ಞಾನಿಯ ಮೌನ ಅತ್ಯಂತ ಶಕ್ತಿಯುತ; ಅವನಿಂದ ಹೊರಹೊಮ್ಮುವ ಆಧ್ಯಾತ್ಮಿಕ ತರಂಗಗಳು ಅನೇಕ ಜನರನ್ನು ಅವನೆಡೆಗೆ ಸೆಳೆಯುತ್ತವೆ. ಗುರುವು ಮೌನವಾಗಿದ್ದರೆ ಸಾಧಕನ ಮನವು ಪರಿಶುದ್ಧವಾಗುವುದು.

ಇದನ್ನೆಲ್ಲಾ ಯೋಚಿಸಿದಾಗ ಮೌನ ನಮ್ಮ ನಿತ್ಯ ಜೀವನದಲ್ಲಿ ಎಷ್ಟು ಪ್ರಮುಖವಾದ ಸ್ಥಾನವನ್ನು ಗಳಿಸಿಕೊಂಡಿದೆ ಎಂಬುದರ ಅರಿವಾಗುತ್ತದೆ.

ಸನ್ಮಿತ್ರನ ಲಕ್ಷಣಗಳು

ಶ್ರೇಯಾ ಭಂಡಾರಿ
ಪ್ರಥಮ ಬಿ.ಕಾಂ.

ಪಾಪಾನ್ನಿವಾರಯತಿ, ಯೋಜಯತೇ ಹಿತಾಯ,
ಗುಹ್ಯಾನಿ ಗೂಹತಿ, ಗುಣಾನ್ ಪ್ರಕಟೀಕರೋತಿ ।
ಆಪದ್ಗತಂ ಚ ನ ಜಹಾತಿ, ದದಾತಿ ಕಾಲೇ
ಸನ್ಮಿತ್ರಲಕ್ಷಣಮಿದಂ ಪ್ರವದಂತಿ ಸಂತಃ ॥

ಭರ್ತೃಹರಿಯ ನೀತಿಶತಕ

"ಪಾಪಕಾರ್ಯದಿಂದ ತಡೆಯುವವನು ಹಿತವಾದ ಕಾರ್ಯದಲ್ಲಿ ತೊಡಗಿಸುವವನು, ಗುಟ್ಟನ್ನು ಕಾಪಾಡುವವನು, ಗುಣಗಳನ್ನು ಪ್ರಕಾಶಿಸುವವನು, ಕಷ್ಟದಲ್ಲಿ ಕೈಬಿಡದವನು, ಸಕಾಲದಲ್ಲಿ ಸಹಾಯ ಮಾಡುವವನು ಯಾವನೋ, ಅವನೇ ಸನ್ಮಿತ್ರನೆಂದು ಸಜ್ಜನರು ಹೇಳುತ್ತಾರೆ."

ಅಮೃತಸದೃಶವಾದ 'ಮಿತ್ರ' ಎಂಬ ಎರಡಕ್ಷರ ಮೊಟ್ಟಮೊದಲು ಯಾರಿಂದ ಸೃಷ್ಟಿಸಲ್ಪಟ್ಟಿತು ಎಂಬುದು ನಿಗೂಢ. ಜೀವನಯಾತ್ರೆಯಲ್ಲಿ ದಿನದಿನವೂ ಅನೇಕ ಮಿತ್ರರು ಸಿಗುತ್ತಿರುತ್ತಾರೆ. ಕೆಲವೊಮ್ಮೆ ಬೇರೆ ಊರಿಗೆ ಹೋದಾಗಲೂ, ಕೆಲವರು ಮಿತ್ರರಾಗುವುದುಂಟು. ಆದರೆ ನಿಜವಾದ ಮಿತ್ರ ಯಾರು? ಅವನ ಲಕ್ಷಣಗಳೇನು? ಎಂಬುದನ್ನು ಕವಿ ಭರ್ತೃಹರಿಯು ತನ್ನ 'ನೀತಿಶತಕ'ದಲ್ಲಿ ಸೊಗಸಾಗಿ ಹೇಳಿದ್ದಾನೆ.

ನಿಜವಾದ ಮಿತ್ರನ ಮೊದಲ ಲಕ್ಷಣ ನಮ್ಮನ್ನು ಪಾಪಕಾರ್ಯದಿಂದ ತಡೆಯುವುದು. ಈ ಪಾಪಕಾರ್ಯ, ಯಾರಿಗಾದರೂ ಮೋಸ ಮಾಡುವುದಾಗಬಹುದು, ಯಾರಾದರೂ ಹಣ ಲಪಟಾಯಿಸುವುದಾಗಬಹುದು, ಬೀಡಿ–ಸಿಗರೇಟು, ಗಾಂಜಾ–ಸಾರಾಯಿ ಇತ್ಯಾದಿ ಸೇವನೆಯಾಗಬಹುದು. ಅನವಶ್ಯಕವಾಗಿ ಯಾರೊಡನಾದರೂ ದ್ವೇಷ, ಅಸೂಯೆ, ಜಗಳವಾಗಬಹುದು. ಕಾಮ, ಕ್ರೋಧ, ಲೋಭ, ಮೋಹಗಳಿಗೆ ಸಂಬಂಧಿಸಿದ್ದಾಗಬಹುದು. ಒಟ್ಟಾರೆ ಇಂಥ ಕೆಟ್ಟ ಕಾರ್ಯಕ್ಕೆ ನಾವು ಇಳಿದಾಗ ನಮ್ಮನ್ನು ತಡೆದು ತಿದ್ದುವವನೇ ಮಿತ್ರ. ಕೇವಲ ಕುಕಾರ್ಯದಿಂದ ತಡೆದರೆ ಆಗಿಲ್ಲ. ಸುಕಾರ್ಯಕ್ಕೆ ನಮ್ಮನ್ನು ತೊಡಗಿಸುವುದೂ ಮಿತ್ರನ ಎರಡನೇ ಲಕ್ಷಣ. ಕೆಟ್ಟದ್ದನ್ನು ಮಾಡಿದರೆ ಕೆಡುಕಾಗುವುದೆಂದು ಹೇಳಿದಂತೆ, ಒಳ್ಳೆಯದನ್ನು ಮಾಡಿದರೆ ಹೇಗೆ ಒಳಿತಾಗುವುದೆಂದು ತಿಳಿಸಿ, ಮಿತ್ರಸಂಹಿತೆಯ ಮೂಲಕ, ರಾಮನಂತೆ ನಡೆಯಬೇಕೇ ಹೊರತು, ರಾವಣನಂತೆ ಅಲ್ಲ ಎಂದು ತಿದ್ದಿ ಮುದ್ದಾಗಿ ಮಾರ್ಪಾಡಿಸುವವನೇ ನಿಜವಾದ ಮಿತ್ರ.

ಗೆಳೆಯನ ಮತ್ತೊಂದು ಲಕ್ಷಣ. 'ಗುಟ್ಟನ್ನು ಕಾಪಾಡಿ, ಗುಣವನ್ನು ಪ್ರಕಾಶಿಸುವುದು. ಜೀವನದಲ್ಲಿ ಎಲ್ಲರ ಮುಂದೆ ಹೇಳದ ಅನೇಕ ವಿಚಾರಗಳಿರುತ್ತವೆ. ಆದರೆ ಅದನ್ನು ಯಾರ ಹತ್ತಿರವಾದರೂ ಹೇಳಿಕೊಳ್ಳದಿದ್ದರೆ, ಮನಸ್ಸಿಗೆ ನೆಮ್ಮದಿ ಸಿಗುವುದಿಲ್ಲ. ಸಾಮಾನ್ಯವಾಗಿ ಆತ್ಮೀಯ ಸ್ನೇಹಿತನ ಹತ್ತಿರ ಯಾವುದನ್ನೂ ಮುಚ್ಚಿಡದೆ ಎಲ್ಲ ವಿಚಾರ ಹೇಳಿಕೊಳ್ಳುತ್ತಾರೆ. 'ನಮ್ಮಲ್ಲಿದ್ದುದನ್ನು ಕೊಡುವುದು; ಇಲ್ಲದುದನ್ನು ಪಡೆಯುವುದು; ಗುಟ್ಟು ಹೇಳುವುದು; ಹಾಗೂ ಕೇಳುವುದು; ಊಟ ಮಾಡಿಸುವುದು, ಊಟ ಮಾಡುವುದು ಈ 6 ಪ್ರೀತಿಯ ಲಕ್ಷಣಗಳು. ಸನ್ಮಿತ್ರ ಗುಟ್ಟನ್ನು ಎಂದೂ ಬಾಯಿಬಿಡದೆ ನಮ್ಮಲ್ಲಿರುವ ಒಳ್ಳೆಯ ಗುಣಗಳನ್ನು ಮಾತ್ರ ಎಲ್ಲರ ಮುಂದೆ ಹಾಡಿ ಹೊಗಳುತ್ತಾನೆ !

ಆತ್ಮೀಯ ಸ್ನೇಹಿತನ ಮತ್ತೊಂದು ಲಕ್ಷಣ. 'ಕಷ್ಟದಲ್ಲಿ ಕೈ ಬಿಡದಿರುವುದು ಹಾಗೂ ಸಕಾಲದಲ್ಲಿ ಸಹಾಯ ಮಾಡುವುದು, 'ಬಡತನ ಬಂದಾಗ ಹೆಂಡತಿಯ ಬಣ್ಣ ಬಯಲಾಗುತ್ತದೆ; ಯುದ್ಧ ಕಾಲದಲ್ಲಿ ಶೂರನ ಬಣ್ಣ ಬಯಲಾಗುತ್ತದೆ; ದುಃಖ ಕಾಲದಲ್ಲಿ ನೆಂಟರ ಬಣ್ಣ ಬಯಲಾಗುತ್ತದೆ, ಹಾಗೇ ಆಪತ್ಕಾಲದಲ್ಲಿ ಮಿತ್ರನ ಬಣ್ಣ ಬಯಲಾಗುತ್ತದೆ'. ನಾವು ಉನ್ನತ ಅಧಿಕಾರದಲ್ಲಿದ್ದಾಗ ನಮ್ಮನ್ನು ಲೂಟಿಮಾಡಲು, ನಮ್ಮಿಂದ ಸಹಾಯ ಪಡೆಯಲು,

ಅನೇಕ ಮಿತ್ರರು ನಮ್ಮ ಸುತ್ತು ಸುತ್ತುತ್ತಾರೆ. ನೀನೇ ಇಂದ್ರ, ನೀನೇ ಚಂದ್ರ ಎಂದು ಹಾಡಿ ಹೊಗಳುತ್ತಾರೆ. ಆದರೆ ನಾವು ಬಿದ್ದಾಗ, ಅಧಿಕಾರ ಸ್ಥಾನ ಕಳೆದುಕೊಂಡಾಗ, ಮುಳುಗುವ ಹಡಗನ್ನು ಬಿಟ್ಟು ಚದುರುವ ಇಲಿಗಳಂತೆ ಇವರು ಕಣ್ಮರೆಯಾಗುತ್ತಾರೆ! ಇಂಥ ಸಮಯಸಾಧಕರೆಲ್ಲಾ ಮಿತ್ರರಲ್ಲ. ನಮಗೆ ಅನುಕೂಲವಿದ್ದಾಗ ಹೇಗೋ ಹಾಗೇ ಕಷ್ಟಕಾಲದಲ್ಲೂ ನಮ್ಮನ್ನು ಕೈ ಬಿಡದೇ ಮುನ್ನಡೆಸುವವನೇ ನಿಜವಾದ ಮಿತ್ರ. ಈ ಆರು ಗುಣಗಳನ್ನು ಯಾರಲ್ಲಿ ಕಾಣುತ್ತೇವೋ ಅವನನ್ನು ಸನ್ಮಿತ್ರನೆಂದು ಒಪ್ಪಿ, ಅಪ್ಪಿಕೊಳ್ಳಬಹುದು.

ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲಿ ತಂದೆ, ತಾಯಿ, ಸಹೋದರ, ಸಹೋದರಿ, ಬಂಧು–ಬಳಗ ಹೇಗೆ ಮುಖ್ಯವೋ ಹಾಗೆ ಒಂದೊಳ್ಳೆ ಮಿತ್ರನ ಸಂಗವು ಮುಖ್ಯವಾಗಿರುತ್ತದೆ. ನಮ್ಮ ಜೀವನದಲ್ಲಿ ನಮಗೊಬ್ಬ ಒಳ್ಳೆಯ ಮಿತ್ರರಿರುತ್ತಾರೆ. ನಾವು ನಮ್ಮ ಪ್ರತಿನಿತ್ಯದ ವಿಷಯಗಳನ್ನು ಅವರ ಬಳಿ ಹೇಳಿಕೊಳ್ಳುತ್ತೇವೆ. ಹೀಗೆ ಹೇಳುವಾಗ ಕೆಲವೊಮ್ಮೆ ನಮ್ಮ ವೈಯಕ್ತಿಕ ವಿಚಾರಗಳನ್ನು ಅವಳ ಬಳಿ ಹಂಚಿಕೊಳ್ಳುತ್ತೇವೆ. ಹೀಗೆ ಹೇಳುವಾಗ ನಮ್ಮಿಬ್ಬರ ನಡುವೆ ಪರಸ್ಪರ ವಿಶ್ವಾಸ, ನಿಷ್ಕಲ್ಮಶವಾದ ಮನಸ್ಸು, ಮತ್ತು ನಮ್ಮ ಭಾವನೆಗಳಿಗೆ ಸ್ಪಂದಿಸುವ ಗುಣ ನಮ್ಮ ಸ್ನೇಹಿತರಿಗಿರಬೇಕು. ನಾವು ಯಾರ ಜೊತೆಯಾದರು ಗೆಳೆತನವನ್ನು ಮಾಡುವಾಗ ಸ್ವಲ್ಪ ಯೋಚಿಸಿಮಾಡಬೇಕು. ಹಾಗೆಯೇ ನಮ್ಮ ಆತ್ಮೀಯ ಮಿತ್ರರು ನಮಗೇನಾದರು ತಪ್ಪು ನಿಂದನೆಯನ್ನು ಮಾಡಿದಾಗ ನಾವು ಒಮ್ಮೆಲೇ ದುಡುಕಿ ಅವರನ್ನು ಬೈಯಬಾರದು. ನಿಧಾನವಾಗಿ ಅವರ ಮನಸ್ಸಿನಲ್ಲಿರುವ ವಿಷಯವನ್ನು ಅರಿತು ಅದಕ್ಕೆ ಸರಿಯಾದ ಉತ್ತರವನ್ನು ಮನಸ್ಸಿನಲ್ಲಿ ಆಲೋಚಿಸಿ ಅವರ ಮುಂದೆ ಪ್ರಸ್ತಾವಿಸಬೇಕು. ನಾವು ಚಿಕ್ಕವರಿರುವಾಗ ನಮ್ಮ ಸ್ನೇಹಿತರ ಜೊತೆ ನಾವು ರಜಾದಿನಗಳಲ್ಲಿ, ಶಾಲೆಯಿಂದ ಮನೆಗೆ ಬಂದ ನಂತರ ಆಟವಾಡುತ್ತಾ ಇದ್ದೆವು. ಆದರೆ ಇಂದಿನ ಜೀವನಶೈಲಿಯನ್ನು ಗಮನಿಸಿದಾಗ ನಿನಗೆ ಕೆಲವೊಮ್ಮೆ ಭಿನ್ನಾಭಿಪ್ರಾಯ ನನ್ನ ಮನಸ್ಸಿನಲ್ಲಿ ಮೂಡಿಬರುತ್ತಿದೆ. ಇಂದಿನ ಯುಗದ ಮಕ್ಕಳು ತಮ್ಮ ಸ್ನೇಹಿತರೊಂದಿಗೆ ಆಟವಾಡುವುದು ತೀರಾ ಕಡಿಮೆ ಆಗಿ ಬಿಟ್ಟಿದೆ. ಮಕ್ಕಳು ಟಿ.ವಿ., ಮೊಬೈಲ್, ಸಾಮಾಜಿಕ ಜಾಲತಾಣಗಳ ದಾಸರಾಗುತ್ತಿದ್ದಾರೆ. ಹೀಗಾದರೆ ಈಗಿನ ಒಳ್ಳೆಯ ಮಿತ್ರನೆಂದರೆ ಯಾರು? ಕೆಟ್ಟ ಗುಣಗಳನ್ನು ಹೊಂದಿರುವ ಮಿತ್ರನಾರೆಂಬುದನ್ನು ಗುರುತಿಸಲು ಕಷ್ಟವಾಗಬಹುದು. ಇತ್ತೀಚಿನ ದಿನಗಳಲ್ಲಿ ನನ್ನ ಕೆಲವು ಬಾಲ್ಯ ಸ್ನೇಹಿತರು ಕೂಡ ಸಾಮಾಜಿಕ ಜಾಲತಾಣಗಳ ಹಿಂದೆ ಬಿದ್ದಿದ್ದಾರೆ. ಆದರೆ ತಂತ್ರಜ್ಞಾನ ಎಷ್ಟೇ ಮುಂದುವರಿದರೂ ಕೂಡ ಅದರಿಂದ ಸ್ವಲ್ಪ ಪ್ರಮಾಣದಷ್ಟಾದರೂ ನಮ್ಮ ಮೇಲೆ ಕೆಡುಕು ಇದ್ದೆ ಇರುತ್ತದೆ. ಯಾರೋ ಗೊತ್ತು ಗುರಿ ಇಲ್ಲದ ಸಾಮಾಜಿಕ ಜಾಲತಾಣಗಳ ಸ್ನೇಹಿತರ ಹಿಂದೆ ಹೋಗಬೇಡಿ. ಅದನ್ನು ಬಿಟ್ಟು ನಿಮ್ಮ ಬಾಲ್ಯ ಸ್ನೇಹಿತರು ಹಾಗೂ ನಿಮ್ಮ ಆತ್ಮೀಯ ಸ್ನೇಹಿತರೊಂದಿಗೆ ನಿಮ್ಮ ಸ್ನೇಹಸಂಬಂಧವನ್ನು ಇಟ್ಟುಕೊಳ್ಳಿ. ನಿಮಗೇನಾದರೂ ತೊಂದರೆಯಾದಾಗ ನಿಮ್ಮ ಸಹಾಯಕ್ಕೆ ಮೊದಲು ಸ್ಪಂದಿಸುವವರು ನಿಮ್ಮ ನಿಜವಾದ ಸ್ನೇಹಿತರೇ ಹೊರತು ಸಾಮಾಜಿಕ ಜಾಲತಾಣಗಳ ಸ್ನೇಹಿತರಲ್ಲ.

ಸ್ನೇಹ ಸಂಬಂಧವನ್ನು ಮಾಡುವಾಗ ಒಳ್ಳೆಯ ಸ್ನೇಹಿತನನ್ನು ಆಯ್ಕೆಮಾಡಿಕೊಳ್ಳಿ. ಆ ಒಳ್ಳೆಯ ಸ್ನೇಹಿತರು ನಿಮ್ಮ ನೋವು–ನಲಿವು, ಸುಖ–ದುಃಖಗಳಲ್ಲಿ ನಿಮ್ಮ ಜೊತೆ ಇರುತ್ತಾರೆ. ನೀವು ಕೂಡ ನಿಮ್ಮ ಸ್ನೇಹಿತರನ್ನು ಆದಷ್ಟೂ ಪ್ರತಿನಿತ್ಯ ಸಂತಸದಿಂದ ಇರುವಂತೆ ನೋಡಿಕೊಳ್ಳಿ. ಏಕೆಂದರೆ ಸ್ನೇಹಸಂಬಂಧವು ಎಲ್ಲ ಸಂಬಂಧಗಳಿಗಿಂತಲೂ ಮುಖ್ಯವಾದದ್ದು. ಆದ್ದರಿಂದ ನಾವು ನಮ್ಮ ಜೀವನದಲ್ಲಿ ಸಾಧ್ಯವಾದಷ್ಟು ಒಳ್ಳೆಯ ಮಿತ್ರರ ಸಂಗವನ್ನು ಮಾಡಿ ಸ್ನೇಹ ಸಂಬಂಧಕ್ಕೆ ಒಂದು ಉತ್ತಮ ಅರ್ಥವನ್ನು ನೀಡೋಣ.

"Relation of Friendship is greater than the relation of Blood....."

ಸುರಾಮತ್ತಃ ಕಪಿಃ ಕಶ್ಚಿದ್ ವೃಶ್ಚಿಕೇನಾತ್ತದಂಶನಃ ।
ಶ್ಲಿಷ್ಟಃ ಪುನಃ ಪಿಶಾಚೇನ ನ ಬ್ರೂಯಾಂ ಕಿಂ ಕರಿಷ್ಯತಿ ॥

ಮೊದಲೇ ಅದು ಮಂಗ. ಅದರಲ್ಲಿಯೂ ಅದು ಹೆಂಡ ಕುಡಿದಿದೆ. ಅದರಲ್ಲಿಯೂ ಅದು ಚೇಳಿನಿಂದ ಕಚ್ಚಲ್ಪಟ್ಟಿದೆ ಎಂದ ಮೇಲೆ ಕೇಳಬೇಕೇ? ಅಷ್ಟು ಸಾಲದೆಂಬಂತೆ ಪಿಶಾಚಿಯೊಂದು ಪುನಃ ಅದನ್ನು ಆಲಿಂಗಿಸಿಕೊಂಡಿದೆ. ಅದರ ಸ್ಥಿತಿ ಹೇಗಿರಬಹುದು? ಹೇಳಲು ಸಾಧ್ಯವಿಲ್ಲ.

ಪಂಚತಂತ್ರ ರೀತಿಯ ಜಗತ್ತಿನ ದೃಷ್ಟಿಯಲ್ಲಿ ಧನ ಮತ್ತು ವಾಣಿಜ್ಯ

ನಾಗಶ್ರೀ ಬಿ.ಎಸ್.
ಪ್ರಥಮ ಬಿ.ಬಿ.ಎ.

ಹಣವಿಲ್ಲದೇ ಧರ್ಮಾಚರಣೆ ನಡೆಯದು. ಕಾರ್ಯವೆಲ್ಲವೂ ಅರ್ಥಾಧೀನವೇ ಆಗಿದೆ. ಎಲ್ಲಕ್ಕೂ ಸಾಧನ ಅರ್ಥ. ಇದರ ಹಾದಿಯನ್ನು ಯೋಚಿಸಿ ನಡೆದು ಪಡೆಯುವುದು ವಿವೇಕಿಯ ಲಕ್ಷಣ. ವಾಣಿಜ್ಯವು ಉತ್ತಮೋತ್ತಮವಾದ ಮಾರ್ಗ. ಇದರಿಂದ ಲಭಿಸುವ ಹಣ ಕುಂಠಿತವಾಗಬಹುದು. ಇಂದಾದರೂ ಪ್ರಾಯಃ ವಾಣಿಜ್ಯವೇ ಜಗತ್ತಿನ ಜೀವನಾಡಿ.

ಸುಮಾರು ಕ್ರಿಸ್ತಶಕ ಮೂರನೆಯ ಶತಮಾನದಲ್ಲಿ ವಿಷ್ಣು ಶರ್ಮದಿಂದ ಸಂಕಲಿತವಾದ ಪಂಚತಂತ್ರವೆಂಬ ನೀತಿ ಕಥಾಸಂಗ್ರವು ಪ್ರಸಿದ್ಧವಾಗಿದೆ. ಇದರಲ್ಲಿ ಪ್ರಾಚೀನವಾದ ಭಾರತೀಯ ವಾಣಿಜ್ಯಕ್ಕೆ ಸಂಬಂಧಿಸಿದ ಕೆಲವು ವಿಷಯಗಳು ಕಂಡುಬರುತ್ತವೆ. ವಾಣಿಜ್ಯ ವಿಚಾರದ ಪ್ರಸಕ್ತಿಗೆ ಈ ಕಥೆಯೇ ಮೂಲ. ವರ್ಧಮಾನಕ ಐಶ್ವರ್ಯನಂತನೇನೋ ಸರಿ. ಆದರೆ ಇನ್ನೂ ಅಧಿಕ ಹಣವನ್ನು ಸಂಪಾದಿಸಬೇಕೆಂಬ ಬಯಕೆ. ಇದಕ್ಕಾಗಿ ದೀರ್ಘವಾದ ಅವನ ಆಲೋಚನೆ ಇಲ್ಲಿದೆ.

यत्प्रभूतेऽपि वित्ते अर्थोपायाश्चिन्तनीयाः

ಹಣದಿಂದ ಪಡೆಯಲಾಗದುದು ಯಾವುದೂ ಇಲ್ಲ. ಆದುದರಿಂದ ಬುದ್ಧಿವಂತನು ಪ್ರಯತ್ನದಿಂದ ಅದನ್ನು ಸಂಪಾದಿಸಬೇಕು. ಹಣವೇ ಎಲ್ಲಕ್ಕೂ ಸಾಧನ. ಬಂಧುಮಿತ್ರರು, ಕೀರ್ತಿ ಮಾನ್ಯತೆಗಳು, ದಾನಶಕ್ತಿ, ವಿದ್ಯಾರ್ಜನೆ ಮುಂತಾದವುಗಳೆಲ್ಲ ಹಣದಿಂದಲೇ ಲಭಿಸುತ್ತದೆ. ಹೆಚ್ಚೇನು? ಜೀವನಕ್ಕೆ ಅಪೇಕ್ಷಿತವಾದ ಸಕಲವೂ ಹಣದಿಂದಲೇ ಸಂಭವಿಸುತ್ತದೆ. ವೃದ್ಧನೂ ತರುಣನಾಗುತ್ತಾನೆ. ಹಣವಿಲ್ಲದ ಯುವಕನು ವೃದ್ಧನೇ ಸರಿ.

गतवयसामपि पुंसां येषामर्था भवन्ति ते तरुणाः ।
अर्थेन तु ये हीना वृद्धास्ते यौवनेऽपि स्युः ॥

"ಪಂಚತಂತ್ರ"ದ ಇಂತಹ ಅನೇಕ ವಿಚಾರಗಳು ಅನುಭವ ಪ್ರಸಿದ್ಧವಾಗಿವೆ. ಈ ಸಂದರ್ಭದಲ್ಲಿ ವರ್ಧಮಾನಕನಿಗೆ ಕೆಲವು ಅರ್ಥೋಪಾಯಗಳು ಹೊಳೆದವು. ಸೇವೆ, ಕೃಷಿ, ವಿದ್ಯೆ, ಲೇವಾದೇವಿ, ವ್ಯಾಪಾರ ಇವೇ ಅವುಗಳು ಇಲ್ಲಿ ಇದರಲ್ಲಿ ಅನುಕ್ರಮವಾಗಿ ಕ್ಲೇಶ, ತಿರಸ್ಕಾರ, ದೇಹಶ್ರಮ, ಪರಾಧೀನತೆ ಮತ್ತು ಸ್ವವಿತ್ತನಾಶ ಅನಿವಾರ್ಯವಾದುದು. ಆದುದರಿಂದ ಅವಲಂಬನೆಗೆ ಅವು ಅಷ್ಟು ಅರ್ಹವಲ್ಲ. ಉಳಿದುದು ವ್ಯಾಪಾರ, ವಾಣಿಜ್ಯ, ಧನಾರ್ಜನೆಯಲ್ಲಿ ಇದಕ್ಕೆ ಸಮನಾದ ಸಾಧನವು ಮತ್ತೊಂದಿಲ್ಲ. ಇದು ವರ್ಧಮಾನಕನ ಮತ.

ವ್ಯಾಪಾರವು ಹಲವು ಬಗೆ. ಸುಗಂಧದ್ರವ್ಯಗಳ ವ್ಯಾಪಾರ, ಗಿರವಿ, ಸಾರ್ವಜನಿಕ ರಕ್ಷಣಾಕೇಂದ್ರದ ಅಧಿಪತ್ಯ, ಪರಿಚಿತ ಗ್ರಾಹಕನೊಡನೆ ವ್ಯವಹಾರ, ತುಲಾಮಾನಗಳಲ್ಲಿ ಕಪಟ. ಇಲ್ಲದ ಕ್ರಯವನ್ನು ಹೇಳುವಿಕೆ, ದೇಶವಿದೇಶಗಳಲ್ಲಿ ಪದಾರ್ಥ ಕ್ರಯವಿಕ್ರಯ ಇವು ವ್ಯಾಪಾರದ ಬಗೆಗಳು. ಪಂಚತಂತ್ರದಂತೆ ಗಾಂಧಿಕ ವ್ಯಾಪಾರದ ಬಗೆಗಳು ಪಂಚತಂತ್ರದಂತೆ ಗಾಂಧಿಕ ವ್ಯಾಪಾರವು ಸರ್ವೋತ್ತಮವಾದುದು. ಸುಗಂಧದ್ರವ್ಯ ವಿಕ್ರಯವು ಒಂದಿದ್ದರೆ ಸಾಕು. ಸುವರ್ಣಾದಿಗಳ ಅವಶ್ಯಕತೆ ಎಲ್ಲಿಂದ ಬಂದೀತು! ಇದರಲ್ಲಿ ಒಂದನ್ನು ಕೊಟ್ಟು ನೂರನ್ನು ಗಳಿಸಬಹುದು. ಎಂದು ವರ್ಧಮಾನಕನಿಗೆ ಭರವಸೆ.

पण्यानां गान्धिकं पण्यं किमन्यैः काञ्चनादिभिः ।
यत्रैनेन च यत् क्रीतं तच्छतेन प्रदीयते ॥

ಎಷ್ಟೊಂದು ಲಾಭ! ಈಗ ಅಧಿಕ ಲಾಭ ತರುವ ಅಂತಹ ವ್ಯಾಪಾರಗಳು ಎಷ್ಟೊಂದಿವೆ ಎಂಬುದನ್ನು ಗಮನಿಸಬಹುದು. ಅಂತು ಪದಾರ್ಥಗಳ ಕ್ರಯವಿಕ್ರಯವೇ ಧನಾರ್ಜನೆಗೆ ಸೂಕ್ತವಾದ ಮಾರ್ಗವೆಂದು ನಿಶ್ಚಯಿಸಿದ ವರ್ಧಮಾನಕ. ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿ ಕೊಳ್ಳುತ್ತಾನೆ.

ಈ ರೀತಿ ತಿಳಿಸಿದ ವ್ಯಾಪಾರ ವ್ಯವಹಾರ ವೈಶಿಷ್ಟ್ಯಗಳು ಆಧುನಿಕ ಕಾಲಕ್ಕೂ ಅನ್ವಯಿಸುತ್ತವೆ. ಹಣ ಮತ್ತು ಇತರ ಸಂಪತ್ತುಗಳು ಪ್ರಾಪಂಚಿಕ ಸುಖಕ್ಕೆ ಬಹು ಅವಶ್ಯಕವೆಂದು ಜೀವನದ ನಾನಾ ಅನುಭವಗಳಿಂದ ನಿರ್ಣೀತವಾಗುತ್ತದೆ. ದುರಾಸೆ, ಅಧಿಕ ಸಂಗ್ರಹ, ಮುಂತಾದ ಕಾರಣಗಳಿಂದ ಅರ್ಥವು ಅನರ್ಥಕರವೆಂದಾದರೂ वित्तं सर्वसाधनमुच्यते ಹಣವೇ ಸರ್ವ ಸಾಧನವೆಂದು ಪಂಚತಂತ್ರವು ತಿಳಿಸುತ್ತದೆ. ಒಂದೆಡೆ ಹಣದ ಪ್ರಶಂಸೆ, ಮತ್ತೊಂದೆಡೆ ಹಣದ ದುರಾಸೆಯಿಂದ ಉಂಟಾಗಬಹುದಾದ ದುಷ್ಫಲಗಳು ಇವನ್ನು ವಿವರಿಸುವ ಈ ಗ್ರಂಥವು ಧನಾರ್ಜನೆಯು ಧರ್ಮಬದ್ಧವಾಗಿರಬೇಕೆಂಬುದನ್ನು ಸೂಚಿಸುತ್ತದೆ. ಈ ಅಂಶವನ್ನು धर्मोपर्जितभूरिविभवो वर्धमानकः ಎಂಬ ಮಾತಿನಲ್ಲಿರುವ ವರ್ಧಮಾನಕನ ವಿಶೇಷಣದಿಂದ ಸ್ಪಷ್ಟವಾಗಿ ಕಾಣಬಹುದು.

ಉಡುಪಿಯ ಶ್ರೀ ಕೃಷ್ಣ ಮಠ

ರಮ್ಯಾ ಕುಂದರ್
ದ್ವಿತೀಯ ಬಿ.ಎ.

ಭಕ್ತರ ಅಭೀಷ್ಟಗಳನ್ನು ನೇರವೇರಿಸುತ್ತಾ, ಯತಿ ಶ್ರೇಷ್ಠರಾದ ಮಧ್ವರಿಗೊಲಿದು, ಅಷ್ಟಯತಿಗಳಿಂದ ಪೂಜೆಗೊಳ್ಳುತ್ತಾ ಭಗವದ್ಗೀತೆಯನ್ನು ಜಗತ್ತಿಗೆ ನೀಡಿ ಗೀತಾಚಾರ್ಯ ಎನಿಸಿಕೊಂಡಿರುವ ಶ್ರೀ ಕೃಷ್ಣ ಪರಮಾತ್ಮ ಆಚಾರ್ಯ ಮಧ್ವರ ಮೂಲಕ ನೆಲೆನಿಂತಿರುವ ಸ್ಥಳವೇ ಉಡುಪಿ. ಇದುವೇ ನಾವು ಕರೆಯುವ "ಶ್ರೀಕೃಷ್ಣ ಮಠ".

ಶ್ರೀ ಕೃಷ್ಣ ಮಠ ಉಡುಪಿ ನಗರದ ಹೃದಯ ಭಾಗವಾಗಿದೆ. ಈಗ ನಾವು ಉಡುಪಿ ಎಂದು ಕರೆಯುವ ಪ್ರದೇಶದ ಮೂಲ ಹೆಸರು "ರಜತಪೀಠಪುರ" ಈ ರಜತ ಪೀಠ ಎಂಬ ಹೆಸರು ಬರಲು ಕಾರಣ ರಾಮಭೋಜನೆಂಬ ಕ್ಷತ್ರಿಯ.

ಪರಶುರಾಮನಿಂದ ಹೊಸ ಭೂಮಿ ಸೃಷ್ಟಿಯಾದ ಮೇಲೆ ರಾಮಭೋಜನು ಅಶ್ವಮೇಧ ಯಾಗಕ್ಕಾಗಿ, ಇಲ್ಲಿ ನೇಗಿಲಿನಿಂದ ಭೂಶೋಧನೆಯನ್ನು ಮಾಡಿಸುತ್ತಿದ್ದಾಗ, ಒಂದು ಘಟಸರ್ಪವು ಆ ನೇಗಿಲಿಗೆ ಸಿಕ್ಕಿ ಮೃತವಾಯಿತು. ಆಗ ರಾಜನು ತನಗೆ ಹತ್ಯಾದೋಷ ಬಂತೆಂದು ಚಿಂತಿಸುತ್ತಿರುವಾಗ ಪರಶುರಾಮ ದೇವರು ಬಂದು ಅದು ನಿಜವಾದ ಸರ್ಪವಲ್ಲ, ಸರ್ಪರೂಪದಿಂದ ಇದ್ದ ಅಸುರ. ಆ ಅಸುರನ ಹತ್ಯೆಯಿಂದ ರಾಜನಿಗೆ ಸರ್ಪದೋಷವಿಲ್ಲವೆಂದು ಹೇಳಿದರು. ಆದರೂ ಸಮಾಧಾನ ಹೊಂದದ ರಾಜನು ಪರಶುರಾಮ ದೇವರ ಸಲಹೆಯಂತೆ ಬೆಳ್ಳಿಯ ಪೀಠವನ್ನು ಮಾಡಿಸಿ, ಅದರ ನಾಲ್ಕು ಮೂಲೆಗಳಲ್ಲಿ ಒಂದೊಂದು ಸರ್ಪ ದೇವಾಲಯವನ್ನು (ತಾಂಗೋಡು, ಮಾಂಗೋಡು, ಅರಿತೋಡು, ಮುಚ್ಚಿಲಕೋಡು) ಸ್ಥಾಪಿಸಿ ಪೂಜಿಸಿದನು. ಆ ಯಜ್ಞ ಪೀಠದಲ್ಲಿ ಯಜ್ಞವು ಸಾಂಗವಾಗಿ ನೆರವೇರಿತು.

ಮುಂದೆ ಆ ಪೀಠದಲ್ಲಿ ಅನಂತಾಸನ ರೂಪದಲ್ಲಿ ತಾನೇ ಅವಿರ್ಭಾವಿಸುವುದಾಗಿಯೂ, ಈ ಕ್ಷೇತ್ರವು ಅಂದಿನಿಂದ ರಜತಪೀಠ ಪುರವೆಂಬ ಹೆಸರು ಪಡೆಯಲೆಂದೂ ಪರಶುರಾಮ ದೇವರು ಆಶೀರ್ವದಿಸಿದರು. ಅಂದಿನಿಂದ ರಜತಪೀಠಪುರವೆಂಬ ಪ್ರಖ್ಯಾತಿ ಪಡೆಯಿತು. ಮುಂದೆ (ಉಡುಪ, ಚಂದ್ರ) ತನ್ನ ಶಾಪ ವಿಮೋಚನೆಗಾಗಿ ಶಿವನನ್ನು ಕುರಿತು ತಪಸ್ಸನ್ನು ಮಾಡಿರುವುದರಿಂದ ಉಡುಪಿ ಎಂಬ ಹೆಸರನ್ನು ಪಡೆಯಿತು.

ಬೇರೆ ಬೇರೆ ಕಡೆಗಳಲ್ಲಿ ಶ್ರೀ ಕೃಷ್ಣ ದೇವಸ್ಥಾನ ಎಂದು ಕರೆದರೆ ಇಲ್ಲಿ ಶ್ರೀ ಕೃಷ್ಣಮಠ ಎಂದು ಕರೆಯಲ್ಪಡುತ್ತದೆ. ಅಷ್ಟ ಮಠಗಳ ಯತಿ ಪರಂಪರೆಯೇ ಇಲ್ಲಿನ ವಿಶೇಷತೆ.

ಈ ಅಷ್ಟಮಠಗಳು ಯಾವುವೆಂದರೆ

1. ಶ್ರೀ ಪೇಜಾವರ ಮಠ
2. ಶ್ರೀ ಪಲಿಮಾರು ಮಠ
3. ಶ್ರೀ ಅದಮಾರು ಮಠ
4. ಶ್ರೀ ಕೃಷ್ಣಾಪುರ ಮಠ
5. ಶ್ರೀ ಪುತ್ತಿಗೆ ಮಠ
6. ಶ್ರೀ ಶೀರೂರು ಮಠ
7. ಶ್ರೀ ಸೋದೆ ಮಠ
8. ಶ್ರೀ ಕಾಣಿಯೂರು ಮಠ

ಪ್ರತಿಯೊಂದು ಮಠದ ಯತಿಗಳಿಗೆ ಶ್ರೀ ಕೃಷ್ಣನಿಗೆ ಪೂಜೆಸಲ್ಲಿಸಲು 2 ವರ್ಷಗಳ ಅಧಿಕಾರವಿದೆ. ಈ ಅಧಿಕಾರ ಪ್ರತೀ ಮಠಗಳಿಗೆ 16 ವರ್ಷಕ್ಕೊಮ್ಮೆ ಸಿಗುತ್ತದೆ. ಈ 2 ವರ್ಷಗಳಿಗೊಮ್ಮೆ ನಡೆಯುವ ಪೂಜಾ ಕೈಂಕರ್ಯದ ದೀಕ್ಷೆಯೇ ಪರ್ಯಾಯ ಮಹೋತ್ಸವವೆಂದು, ಉಡುಪಿಯ ನಾಡಹಬ್ಬವೆಂದು ವಿಶ್ವವಿಖ್ಯಾತವಾಗಿದೆ. ಈ ಭಾರಿಯ ಪರ್ಯಾಯ ಪಲಿಮಾರು ಮಠದ್ದಾಗಿದೆ. ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು ಪರ್ಯಾಯ ಶ್ರೀ ಕೃಷ್ಣನ ಪೂಜಾ ಕೈಂಕರ್ಯದಲ್ಲಿ ದೀಕ್ಷಾ ಬದ್ಧರಾಗಿದ್ದಾರೆ.

ಶ್ರೀ ಸೋದೆ ಮಠದಲ್ಲಿ ಹಲವಾರು ಯತಿಗಳು ಶ್ರೀಕೃಷ್ಣಪೂಜೆ ಕೈಗೊಂಡವರಿದ್ದಾರೆ. ಇದರಲ್ಲಿ ಪ್ರಖ್ಯಾತಿಯನ್ನು ಪಡೆದವರು. ಶ್ರೀ ಸೋದೆ ವಾದಿರಾಜ ಸ್ವಾಮಿಗಳು, ಇವರಿಂದಾಗಿ ಈ ಮಠ ಇನ್ನಷ್ಟು

ಕೀರ್ತಿಯನ್ನು ಹೆಚ್ಚಿಸಿಕೊಂಡು ಮೆರೆಯುತ್ತಾ ಅಪಾರ ಶಿಷ್ಯವೃಂದವನ್ನು ಹೊಂದಿದೆ. ಸೋದೆ ಮಠದ ವಾದಿರಾಜರ ಹಲವಾರು ಮಹಿಮೆಗಳಲ್ಲಿ ಒಂದು ಕಥೆ (ಪುರಾಣ) ಯಾವುವೆಂದರೆ ಉಡುಪಿಯ ಸಮೀಪದ ಮಟ್ಟು ಗ್ರಾಮದ ಮಟ್ಟುಗುಳ್ಳ.

ಶ್ರೀ ವಾದಿರಾಜರ ಪ್ರಸಿದ್ಧಿಯು ಪೂರ್ಣಚಂದ್ರನಂತೆ ದಿನೇ ದಿನೇ ಪ್ರಕಾಶಿಸುತ್ತಿತ್ತು. ಅದನ್ನು ನೋಡಿ ಕೆಲವರಿಗೆ ಮತ್ಸರ ಉಂಟಾಗಿತ್ತು. ಹೇಗಾದರೂ ಮಾಡಿ ಅವರ ಹೆಸರಿಗೆ ಕಳಂಕವನ್ನು ತಂದೊಡ್ಡಬೇಕೆಂಬ ದುರಾಲೋಚನೆಯಿಂದ ಕುದಿಯುತ್ತಿದ್ದರು.

ಶ್ರೀಗಳವರು ಅನುದಿನವೂ ನೈವೇದ್ಯದ ಸಮಯದಲ್ಲಿ ಬಾಗಿಲು ಮುಚ್ಚಿ ಸಕ್ಕರೆಯ ಮಡ್ಡಿಯನ್ನು ಚಿನ್ನದ ಹರಿವಾಣದಲ್ಲಿಟ್ಟು ತಲೆಯಲ್ಲಿ ಎತ್ತಿ ಹಿಡಿದ ಕೂಡಲೇ ಶ್ರೀ ಹಯಗ್ರೀವ ದೇವರು ಬಿಳಿ ಕುದುರೆಯ ರೂಪದಿಂದ ಅವರ ಬೆನ್ನಿಗೆ ಹಾರಿ ಎರಡು ಕಾಲುಗಳನ್ನು ಅವರ ಭುಜದ ಮೇಲಿಟ್ಟು ಆ ಭಕ್ಷ್ಯವನ್ನು ತಿಂದು ಕುದುರೆಯ ಸ್ವಭಾವದಂತೆ ಸ್ವಲ್ಪಕಾಲ ಅವರೊಡನೆ ಆಟವಾಡಿ ತನ್ನ ಮುಖವನ್ನು ಅವರ ಮೈಗೆ ಒರೆಸಿ, ಉಪಾಸನಾ ಮೂರ್ತಿಯಲ್ಲೇ ಅಂತರ್ಧಾನ ಹೊಂದುತ್ತಿತ್ತು. ಆಮೇಲೆ ಬಾಗಿಲು ತೆಗೆದು ಪೂಜೆ ಮುಂದುವರಿಸುತ್ತಿದ್ದರು. ಕೊನೆಗೆ ಹಯಗ್ರೀವ ಪ್ರಸಾದವೆಂದು ಉಳಿದ ಮಡ್ಡಿಯನ್ನು ತಾವು ಸ್ವೀಕರಿಸುತ್ತಿದ್ದರು.

ಈ ಮತ್ಸರಿಗಳು "ವಾದಿರಾಜರು ಬಾಗಿಲು ಮುಚ್ಚಿ ಸಕ್ಕರೆಯ ಮಡ್ಡಿಯನ್ನು ತಾವೇ ತಿಂದು, ಹಯಗ್ರೀವ ಪ್ರತ್ಯೇಕವಾಗಿ ತಿನ್ನುತ್ತಾರೆಂದೂ, ಸುಳ್ಳು ವಾರ್ತೆಯಿಂದ ಜನರನ್ನು ವಂಚಿಸುತ್ತಾರೆಮದೂ ಅಪಪ್ರಚಾರ ಮಾಡುತ್ತಿದ್ದರು. ಶ್ರೀಗಳವರು ನಸುನಕ್ಕು ಸುಮ್ಮನಿರಲು ಆ ದುಷ್ಟರು ಗುಟ್ಟಾಗಿ ಚಿಕ್ಕ ಅಡುಗೆಯವನಿಗೆ ಹಣದ ಆಮಿಷ ತೋರಿಸಿ ಅವನ ಮೂಲಕ ಭಕ್ಷ್ಯಕ್ಕೆ ವಿಷ ಹಾಕಿಸಿದರು. ಎಂದಿನಂತೆ ಮಡ್ಡಿ ತಿನ್ನಲು ಬಂದ ಹಯಗ್ರೀವ ದೇವರ ಮೈಬಣ್ಣ ಹಸಿರಾಗಿ ಬದಲಾಗಿತ್ತು. ಧ್ಯಾನದಿಂದ ವಿಷಯ ತಿಳಿದ ಶ್ರೀಗಳವರು ಚಕಿತರಾಗಿ ಪ್ರಣಾಮ ಮಾಡಿ ತಿಳಿಯದೆ ವಿಷಮಿಶ್ರಿತ ಭಕ್ಷ್ಯವನ್ನು ನೀಡಿದ್ದಾಗಿ ಮರುಗಿದಾಗ, ಶ್ರೀ ದೇವರು 'ವತ್ಸ' ನೀನೇಕೆ ಚಿಂತಿಸುವೆ'? ನಿನಗೆ ದೋಷಬರಬಾರದೆಂದು ಎಲ್ಲವನ್ನೂ ನಾನೇ ತಿಂದಿರುವೆ, ಅವರೆಲ್ಲರೂ ನಾಳೆಗೆ ಯಮನ ಅತಿಥಿಗಳಾಗುತ್ತಾರೆ. ನನ್ನ ಮೈಬಣ್ಣ ಹೋಗಲು, ಉದಯಪುರ (ಈಗಿನ ಉದ್ಯಾವರ)ದ "ಪಾಪವಿನಾಶಿ ಚಕ್ಷುಪತಿ' ನದಿಯ ದಕ್ಷಿಣಭಾಗದಲ್ಲಿ 'ಮಟ್ಟು' ಎಂಬ ಗ್ರಾಮವಿದೆ. ಅಲ್ಲಿ ಅವರಿಗೆ ಗುಳ್ಳದ ಬೀಜವನ್ನು ಕೊಡು. ಗುಳ್ಳದ ಹುಳಿಯನ್ನು 48 ದಿನ ನನಗರ್ಪಿಸು. ಅದನ್ನು ತಿಂದನಂತರ ನನ್ನ ಮೈಬಣ್ಣ ಎಂದಿನಂತಾಗುವುದು ಎಂದು ಆದೇಶಿಸಿದರು.

800 ವರ್ಷಗಳಿಗೂ ಮೊದಲು ಮುತ್ತು, ರತ್ನ, ಬಂಗಾರಗಳನ್ನೊಳಗೊಂಡ ಹಡಗೊಂದು ಬಿರುಗಾಳಿಗೆ ಸಿಲುಕಿದ್ದಾಗ, ಖಾವಿ ಬೀಸಿ ರಕ್ಷಿಸಿದ ಮಧ್ವಾಚಾರ್ಯರಿಗೆ ಹಡಗಿನ ಮೂಲಕ ಕೃತಜ್ಞತೆಯಿಂದ ಬೇಕಾದದ್ದನ್ನು ತೆಗೆದುಕೊಳ್ಳಬೇಕು ಎಂದು ವಿನಂತಿಸಿ ಕೊಂಡಾಗ "ಮುತ್ತು ರತ್ನ ನನಗೆ ಬೇಡ. ನಿನ್ನ ಹಡಗಿನಲ್ಲಿ ತಂದಿರುವ ಗೋಪೀ ಚಂದನದ ಮುದ್ದೆಯನ್ನು ನನಗೆ ನೀಡು ಎಂದು ಕೇಳಿ ಪಡೆದುಕೊಳ್ಳುತ್ತಾರೆ. ಈ ಗೋಪಿ ಚಂದನವನ್ನು ಉಡುಪಿಗೆ ತಂದು ನೋಡಿದಾಗ ಶ್ರೀ ಕೃಷ್ಣ ಮೂರ್ತಿ ಅದರೊಳಗೆ ಇತ್ತು. ಮೂರ್ತಿಯನ್ನು ವಿಧಿವತ್ತಾಗಿ ಸ್ಥಾಪಿಸಿ 8 ಜನ ಸನ್ಯಾಸಿ ಶಿಷ್ಯ ವೃಂದವನ್ನು ನೇಮಿಸಿ, 2 ತಿಂಗಳಿಗೊಮ್ಮೆ ಪರ್ಯಾಯ ವ್ಯವಸ್ಥೆ ಮಾಡಿದ್ದರು. ಈ ಎರಡು ತಿಂಗಳ ಪರ್ಯಾಯ ವ್ಯವಸ್ಥೆಯನ್ನು ಎರಡು ವರ್ಷಗಳಿಗೆ ವಿಸ್ತರಿಸಿದವರು ಶ್ರೀ ವಾದಿರಾಜ ಸ್ವಾಮಿಗಳು.

ಅಂತೆಯೇ ಇನ್ನು ಉಳಿದಿರುವ ಯತಿಗಳು ಶೈಕ್ಷಣಿಕ ಕ್ಷೇತ್ರ, ಆಧ್ಯಾತ್ಮಿಕ ಕ್ಷೇತ್ರ, ಸಾಮಾಜಿಕ ಕ್ಷೇತ್ರಗಳ ಶ್ರೇಯೋಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸುತ್ತಾ ಸಮಾಜ ಹಾಗೂ ಜನರ ಅಭಿವೃದ್ಧಿ ಹಾಗೂ ಉನ್ನತಿಗಾಗಿ ವಿಶಿಷ್ಟ ಮಾರ್ಗವನ್ನು ತೋರಿಸುತ್ತಾ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗುತ್ತಾ, ಜನರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುತ್ತಾರೆ.

ಶ್ರೀ ಕೃಷ್ಣನ ಎದುರುಗಡೆ ಕನಕನ ಕಿಂಡಿ ಇದೆ. ಈ ಕನಕನ ಕಿಂಡಿಗೆ ಭಾವನಾತ್ಮಕವಾದ ಇತಿಹಾಸವಿದೆ. ಈ ಕನಕನ ಕಿಂಡಿಗೆ ಕಾರಣ ಶ್ರೀ ಕೃಷ್ಣನ ಮಹಾಭಕ್ತ ಕನಕದಾಸ.

ಶ್ರೀ ಕೃಷ್ಣನ ಗರ್ಭಗುಡಿಯ ಎದುರು ಎಡಬದಿಯಲ್ಲಿ ಗರುಡ

ದೇವರ ಹಾಗೂ ಬಲಬದಿಯಲ್ಲಿ ಮುಖ್ಯಪ್ರಾಣ ದೇವರ ಗುಡಿಯಿದೆ. ಪ್ರದಕ್ಷಿಣಾಕಾರವಾಗಿ ಮುಂದೆ ಬಂದಾಗ ಗರ್ಭಗುಡಿಯ ದ್ವಾರದ ಬಳಿ ಮದ್ವಾಚಾರ್ಯರ ವಿಗ್ರಹವಿದೆ. ಇಲ್ಲಿಯೇ ಸ್ವಲ್ಪ ಮುಂದೆ ಎಡಬದಿಯ ಕೋಣೆಯಲ್ಲಿ ಸರ್ವಜ್ಞ ಪೀಠವಿದೆ. ಪರ್ಯಾಯ ಸ್ವಾಮಿಗಳು ತಮ್ಮ ಮೂಲ ಆರಾಧ್ಯ ಮೂರ್ತಿಗಳನ್ನು ಇಲ್ಲಿರಿಸಿ ಪೂಜಿಸುತ್ತಾರೆ. ಸರ್ವಜ್ಞ ಪೀಠವನ್ನು ಎಲ್ಲರೂ ಭಕ್ತಿಭಾವದಿಂದ ವಿನೀತರಾಗಿ ಗೌರವದಿಂದ ಕಾಣುತ್ತಾರೆ.

ಇನ್ನೂ ಮುಂದೆ ಬಂದಾಗ ಬೋಜನ ಶಾಲೆ ಸಿಗುತ್ತದೆ. ಇಲ್ಲಿಯೂ ಸಹ ಮುಖ್ಯ ಪ್ರಾಣ ದೇವರ ಗುಡಿಯಿದೆ. ಭೋಜನ ಶಾಲೆಯ ಮೇಲಂತಸ್ತಿನಲ್ಲಿ ಹಾಗೂ ಕೆಳ ಅಂತಸ್ತಿನಲ್ಲಿ ಏಕಾದಶಿಯನ್ನು ಹೊರತು ಪಡಿಸಿ ಉಳಿದ ಎಲ್ಲಾ ದಿನಗಳಲ್ಲಿ ಅನ್ನದಾನ ಸೇವೆ ನಡೆಯುತ್ತದೆ ಮತ್ತು ಶನಿವಾರ ನೆಲದಲ್ಲಿ ಊಟ ಮಾಡುವ ವ್ಯವಸ್ಥೆ ಇದೆ. ಈ ನೆಲ ಊಟದಲ್ಲಿ ಪಾಪ ವಿನಾಶ ಆಗುತ್ತದೆ ಎಂಬ ನಂಬಿಕೆಯಿದೆ. ಇಲ್ಲಿಂದ ಕೆಳಗೆ ಬಂದಾಗ ವಾದಿರಾಜರು ಸ್ಥಾಪಿಸಿದ ಸುಬ್ರಹ್ಮಣ್ಯ ಗುಡಿ ಇದೆ. ಮುಂದೆ ನವಗ್ರಹ ಗುಡಿ, ವೃಂದಾವನ ಹಾಗೂ ನಾಗಕಟ್ಟೆಗಳೂ ಇವೆ. ಇನ್ನು ಮುಂದೆ ಬಂದಾಗ ರಾಜಾಂಗಣ ಸಿಗುತ್ತದೆ. ಇಲ್ಲಿ ನಿರಂತರ ಆಧ್ಯಾತ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ರಾಜಾಂಗಣದ ಬಳಿ ಗೀತಾ ಮಂದಿರವಿದೆ. ಭಗವದ್ಗೀತೆಯ ಶ್ಲೋಕಗಳನ್ನು ಅಮೃತ ಶಿಲೆಯಲ್ಲಿ ಬರೆದು ಗೋಡಗಳಲ್ಲಿ ಇರಿಸಿದ್ದಾರೆ. ಗೀತಾ ಮಂದಿರ ಕಟ್ಟಡ ಅತ್ಯಂತ ಅದ್ಭುತವಾಗಿದ್ದು ನೋಡಲು ಆಕರ್ಷಕವಿದೆ. ಇದರ ಬಳಿ ಇರುವ ಶೆಡ್‌ನಲ್ಲಿ ಮಠದ ಆನೆಯನ್ನು ಕಟ್ಟುತ್ತಾರೆ. ಹಾಗೆಯೇ ಗೋಶಾಲೆ ಇದೆ. ಅಂತೆಯೇ ಭಕ್ತಾದಿಗಳೆಲ್ಲಾ ಉಳಿದುಕೊಳ್ಳಲು ಬೇಕಾದ ಛತ್ರದ ವ್ಯವಸ್ಥೆಯಿದೆ.

ಶ್ರೀ ಕೃಷ್ಣ ಮಠದಲ್ಲಿ ಪ್ರತೀವರ್ಷ **"ಅಷ್ಟಮಿ ದಿನ"** ಸಂಭ್ರಮದ ದಿನವಾಗಿದೆ. ಮತ್ತು ಅಷ್ಟಮಿ ದಿನದ ವಿಶೇಷತೆ ಎಂದರೆ ಪ್ರತೀ ವರ್ಷ ಶ್ರೀ ಕೃಷ್ಣ ಹುಟ್ಟುವ ದಿನದಂದು ಈ ಗೋಶಾಲೆಯಲ್ಲಿ 12 ಗಂಟೆಯ ಹೊತ್ತಿಗೆ 16 ಫಳಿಗೆಗೆ ಒಂದು ಕರು ಹುಟ್ಟುತ್ತದೆ. ಆ ಹೊತ್ತಿಗೆ ಶ್ರೀ ಕೃಷ್ಣನಿಗೆ ಪೂಜೆ ಮಾಡಿ ಆರ್ಘ್ಯ ಬಿಡುತ್ತಾರೆ.

ಅಂತೆಯೇ ದಿನನಿತ್ಯದಲ್ಲಿ ವಿಶೇಷವಾದ ಪೂಜೆಗಳಿದ್ದು ನಿತ್ಯೋತ್ಸವ ನಾಡಾಗಿ ಉಡುಪಿ ಕಂಗೊಳಿಸುತ್ತದೆ. ಉಡುಪಿಯ ಪೂಜಾ ವ್ಯವಸ್ಥೆ ವಿಶೇಷವಾಗಿದೆ. ಇಲ್ಲಿಯ ಮಾದರಿಯ ಬೇರೆ ಯಾವ ದೇವಸ್ಥಾನದಲ್ಲಿ ಕಾಣಲು ಸಿಗುವುದಿಲ್ಲ. ಯತಿವರೇಣ್ಯರಿಂದ ಪೂಜೆಗೊಳ್ಳುತ್ತಾ, ವಿಶ್ವದಾದ್ಯಂತ ಭಕ್ತರನ್ನು ತನ್ನತ್ತ ಸೆಳೆದುಕೊಳ್ಳುತ್ತಾ ಭಕ್ತರ ಅಭಿಷ್ಟೆಗಳನ್ನು ಈಡೇರಿಸುತ್ತಿರುವ ಶ್ರೀ ಕೃಷ್ಣನನ್ನು ಸ್ಮರಿಸುತ್ತಾ ಲೇಖನಕ್ಕೆ ಪೂರ್ಣವಿರಾಮ ಹಾಕುತ್ತಿದ್ದೇನೆ.

ಪಿಬಂತಿ ಮಧು ಪದ್ಮೇಷು ಭೃಂಗಾಃ ಕೇಸರಧೂಸರಾಃ ।
ಹಂಸಾಃ ಶೈವಾಲಮಿಚ್ಛಂತಿ ಧಿಗ್ ದೈವಮಸಮಂಜಸಮ್ ॥

ತಾವರೆಗಳಲ್ಲಿ ದುಂಬಿಗಳಾದರೋ ಪರಾಗದಿಂದ ಮೆತ್ತಿಕೊಳ್ಳಲ್ಪಟ್ಟವುಗಳಾಗಿ ಮಕರಂದವನ್ನು ಹೀರುತ್ತವೆ. ಹಂಸಗಳು ಮಾತ್ರ ಪಾಚಿಯನ್ನು ತಿನ್ನುತ್ತವೆ. ಈ ವಕ್ರವಾಗಿರುವ ಭಾಗ್ಯಕ್ಕೆ ಧಿಕ್ಕಾರವಿರಲಿ.

ಯದಿ ನಾಮಾಸ್ಯ ಕಾಯಸ್ಯ ಯದಂತಸ್ತದ್ಬಹಿರ್ಭವೇತ್ ।
ದಂಡಮಾದಾಯ ಲೋಕೋಽಯಂ ಶುನಃ ಕಾಕಾಂಶ್ಚ
ವಾರಯೇತ್ ॥

ನಮ್ಮ ಶರೀರದ ಒಳಗಡೆ ಏನಿದೆಯೋ ಅದೆಲ್ಲ ಒಂದು ವೇಳೆ ಹೊರಗಡೆ ಇರುತ್ತಿದ್ದರೆ ಮನುಷ್ಯನಿಗೆ ದೊಣ್ಣೆಯನ್ನು ತೆಗೆದುಕೊಂಡು ಕಾಗೆಗಳನ್ನು ಒಡಿಸುವುದೇ ಒಂದು ಕೆಲಸವಾಗುತ್ತಿತ್ತು.

ಲೌಕಿಕಾನಾಂ ಹಿ ಸಾಧೂನಾಮರ್ಥಂ ವಾಗನುವರ್ತತೇ ।
ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋಽನುಧಾವತಿ ॥

ಲೋಕದಲ್ಲಿರುವ ಸಾಧಾರಣ ಸಜ್ಜನರ ಮಾತು ಅರ್ಥವನ್ನು ಅನುಸರಿಸುತ್ತದೆ ಅಂದರೆ ಅರ್ಥವನ್ನು ನೋಡಿ ಅವರು ಶಬ್ದವನ್ನು ಬಳಸುತ್ತಾರೆ. ಆದರೆ ಆದ್ಯ ಋಷಿಗಳ ಮಾತು ಅರ್ಥವನ್ನು ಅನುಸರಿಸುವುದಲ್ಲ, ಮತ್ತೇನು? ಅರ್ಥವೇ ಮಾತನ್ನು ಅನುಸರಿಸುತ್ತದೆ ಅಂದರೆ ಅವರು ಹೇಳಿದ ಮಾತು ಫಲಿಸುತ್ತದೆ.

ಉಪಾರ್ಜಿತಾನಾಂ ವಿತ್ತಾನಾಂ ತ್ಯಾಗ ಏವ ಹಿ ರಕ್ಷಣಮ್ ।
ತಡಾಗೋದರಸಂಸ್ಥಾನಾಂ ಪರೀವಾಹ ಇವಾಂಭಸಾಮ್ ॥

ಸಂಗ್ರಹಿಸಲ್ಪಟ್ಟ ಸಂಪತ್ತುಗಳಿಗೆ ವಿತರಿಸುವುದೇ ಒಂದು ರಕ್ಷಣೋಪಾಯ. ಕೆರೆಯ ಮಧ್ಯದಲ್ಲಿ ಇರುವ ನೀರಿಗೆ ಹರಿಯುವುದೊಂದೇ ಉಳಿದ ಮಾರ್ಗ.

SANSKRIT – AN ANCIENT LANGUAGE

Manoj S. Hegde
II B.Com. (Voc)

Sanskrit is an ancient language. It was used as a means of communication and dialogue by the Hindu Celestial Gods and then by Indo-Aryans. Here 'Sam' means 'samyak' which indicated entirely and 'krit' that indicates 'done'. In terms of communication, hearing, reading and expressing an emotion. We can proudly say that it is an extra-ordinary complex language with a vast vocabulary. It is widely used today in the reading of sacred texts and hymns.

Origin and purity of Sanskrit

Sanskrit is termed as 'Deva-vani' as it is believed to be generated by God Brahma who passed it to the Rishis living in Celestial abodes, who then communicated the same to their earthy disciples from where it spread onto earth.

One W.C.Taylor said that, "To acquire the mastery of this language is almost a labour of a life; It's literature seems exhaustless."

Vedic Sanskrit

Vedic Sanskrit is found in the Vedas. The sacred texts, especially in RigVeda, the Puranas and the Upanishads where the most-original form of the language was used. This early Sanskrit is rich in vocabulary, grammar, which remains undiluted in its purity to this day. It consists of 52 letters in total. These 52 letters have been altered and are believed to be constant since the beginning, thus making it the most perfect language for word formation and pronunciation. The language is believed to be generated by observing the natural-progression of sounds created in the human mouth, thus considering sound as an important element of language formation. This is one of the prime reasons why Sanskrit has been rich in poetry and bringing out the best meaning through perfect sounds.

The impact of Sanskrit on other languages

Sanskrit has a great impact on other Indian languages such as Hindi, which is presently the National language of India and on Indo-Aryan languages such as Kannada and Malayalam. It has an impact on Chinese language too. Chinese and Srilankan languages have many words which sound similar to the words in the Sanskrit language.,

The influence of Sanskrit is on English language too. The root of many English words can be found in Sanskrit. For example: Attack comes from 'aakramana' meaning taking

aggressive action., Path from 'patha' meaning road, Man from 'manu' meaning human, etc.

Sanskrit has a long and a sacred history. It is a language rich in vocabulary and grammar. In order to preserve this language, initiatives are taken. The ancient scriptures and texts written in Sanskrit are translated to other languages which in turn pave way to preserve this language.

MAHARSHI KAVI VEDAVYASA

Deeksha R. Shetty

The life history of Vedavyasa is an interesting one. The author of the great Epic Mahabharata, Vedavyasa was the first and greatest acharya of Sanatana Dharma. He classified the four Vedas, wrote the 18 Puranas, and recited the great Mahabharata. In fact, the Mahabharata is considered to be the fifth Veda. The most important and the most glorified section is the Bhagavadgeeta, the lesson recited to Arjuna by Lord Sri Krishna in the battle field. Apart from the Mahabharata, he also wrote Brahmasutra, one of his shortest theologies on Hindu philosophy. It is said that Vedavyasa is immortal. Seeing the widespread violence in today's times, he is said to have retreated into some remote village in the Northern India. The life of Vedavyasa is an example to all in the modern times which teaches us how to be selfless and how to devote oneself entirely to the Lord in order to attain nirvana. Vedavyasa is also known as Krishna Dwaipayana. Around some 5,000 years ago, he was born in Damauli of Tanahi district which is now in Nepal. The ancient cave where he wrote Mahabharata is still in Nepal. His father was Parashara Rishi, a sage and his mother was Satyavati. It is said that Mahabharata is the 18th Purana which was written by Vedavyasa. He fathered four famous sons, Pandu, Dhritarashtra, Vidura and Sukhadeva.

Major work of Vedavyasa: Mahabharata

There is a cameo of Vedavyasa himself in Mahabharata. He is considered as a part incarnation of Lord Vishnu. It is said that he came to this earth in Dwaparayuga to put all the Vedic knowledge in this Universe in the form of writing and make it available to everyone. Before Vedavyasa the Vedic knowledge was only orally spread. He is called Vedavyasa because he had split the original version of Vedas into four parts.

What does the word Vedavyasa mean? It means, 'the splitter of Vedas.' As Vedavyasa split the Vedas, it became easy for people to

understand. Hindus traditionally hold the Vyasa categorized the primordial single Veda into three canonical collections and the fourth one known as Atharva Veda was recognized as a Veda much later.

The festival of Guru Purnima is dedicated to him. It is also known as Vyasa Purnima for it is the day believed to be both his birthday and the day he classified the Vedas.

WHY SHOULD WE LEARN SANSKRIT?

Deepthi R. Shetty
I B.Sc.- BZC

There are many advantages in learning Sanskrit. As we all know that Sanskrit is the mother of all languages. Learning a language is always fascinating. For this reason alone, one can study or learn Sanskrit. The members of the 'Samkruta priyaha' group come from different disciplines and have had a long lasting association with Sanskrit. This group comprising of scientists, linguistic scholars, computer scientists, Indologists and above all, well respected Sanskrit scholars feels convinced that there are many aspects in Sanskrit, that are not yet seen or observed in other languages. There is sufficient evidence available today to say that Sanskrit is the oldest language in the world.

Among the current languages which possesses a hoary antiquity like Latin or Greek,Sanskrit is the only language which has retained its pristine purity. It has maintained its structure and vocabulary even today as it was in the past. Sanskrit is as modern as any language can be. Sanskrit is spoken widely today. Many young people speak Sanskrit today. Among the learned in India, the language continues to be a bridge between different states where people use it to discuss religious and spiritual matters. Sanskrit is a scientist's paradise. From the very beginning, scientific principles have benn hidden in the verses found in the Vedas. Upanishads and the great Epics of Inida, concepts and principles seen the present day Mathematics and Astronomy are all hidden in the compositions and treatise of many early scholars of the country.

The Vedas written in Sanskrit language is a gift to us. To master the art of living one should be thorough with the Vedas. Hence Sanskrit becomes very important for humanity. It is believed that a Sanskrit scholar can understand the world better than any other person.

PANINI

Deepak Aithal
II B.Com. B2

Panini is an ancient Sanskrit Philologist, Grammarian and a revered Scholar in Hinduism. He is considered the father of Indian Linguistics. Panini likely lived in Northwest India during the 'Mahajanapada' era (yuga).

Panini is known for his text 'Ashtadhyayi', a sutra-style treatise on Sanskrit Grammar. 3959 verses in the linguistics, Syntax and Semantics in 8-chapters which is the foundational text of the Vyakarana branch of a Vedanga, the auxiliary scholarly discipline of the Vedic period. His aphoristic text attracted numerous Bhashya (commentaries) of which Patanjali's Mahabhashya is the most famous in Hindu tradition. His ideas influenced and attracted commentaries from scholars of other Indian religions such as Buddhism.

Panini's comprehensive and scientific theory of grammar is conventionally taken to mark the start of Classical Sanskrit. His systematic treatise inspired and made Sanskrit the pre-eminent Indian language of learning and literature for two millennia.

Panini's theory of morphological analysis was more advanced than only equivalent Western theory before the 20th Century.

The name Panini is a Patronymic (gotra-naama) meaning, descendant of Paina. His full name was 'Dakiputra Panini' according to verses 1.75.13 and 3.251.12 of Patanajali's Mahabhaya. With the first part suggesting his mother's name which was Daki.

Ashtadhyayi

The Ashtadhyayi is the central part of Panini's Grammar and by far the most complex. The Ashtadhyayi is the oldest surviving complete linguistic and grammar text of Sanskrit language and Panini refers to previous texts and authors such as the Unadisutra, Dhatupatra and Ganapatra, some of which have not survived. He compliments the Vedic ancillary sciences such as the Niruktas, Nighantus and Shiksha. Regarded as extremely compact without sacrificing completeness it would become the model for later specialist technical tests or sutras.

The Ashtadhyayi consists of 3959 sutras in eight chapters, which are each subdivided into four sections or padas. This text attracted a famous and one of the most ancient Bhashya called the Mahabhashya. The author of Mahabhashya is named Patanjali, who may or may not be the same person as the one who

authored Yogasutras. The Mahabhashya literally 'great commentary' is more than a commentary on Ashtadhyayi. It is the earliest known philosophical text of the Hindu Grammarians, Non-Hindu texts and tradition on grammar emerged after Ptanajali, some of which include the Sanskrit grammar text of Janinendra of Jainism and the Chandra school of Buddhism.

Bhattikavya

The learning of Indian curriculum in late classical times had at its heart a system of grammatical study and linguistic analysis.

The core text for this study was the Ashtadhyayi of Panini, the sine qua hon of learning. This grammar of Panini had been the object of intense study for the ten centuries prior to the composition of the Bhattikavya. It was plainly Bhatti's purpose to provide a study aid to Panini's text by using the example already provided in the existing grammatical commentaries in the context of the gripping and morally improving story of the Ramayana. To the dry bones of this grammar Bhatti has given flesh in his poem. The intension of the author was to teach this advanced science through a relatively easy and pleasant medium.

This composition is like a lamp to those who perceive the meaning of words and like a hand mirror for a blind man to those without grammar. This poem which is to be understood by means of a commentary is a joy to those sufficiently learned through my fondness for the scholar I have slighted the dullard.

Through this I Deepak Aithal, tried to explain for all the readers who is Panini and some interesting topic in Sanskrit.

Sanskrit is a wonderful language. But we thought that we can't study, we can't learn Sanskrit. It is not tough as we expected.

Unless you learn and read Sanskrit words, you will never feel the inner beauty of Sanskrit language.

It is a God gift, ready-made resource. But we don't know how to utilize this resource.

Finally, my humble request please try to read Sanskrit, write Sanskrit, Speak Sanskrit once and transfer it to the next generation.

ಸಂ ಮಾಂ ಭಕ್ಷಯಿತಾಮುತ್ರ ಯಸ್ಯ ಮಾಂಸಮಿಹಾದ್ಮ್ಯಹಮ್ ।
ಏತನ್ಮಾಂಸಸ್ಯ ಮಾಂಸತ್ವಂ ಪ್ರವದಂತಿ ಮನೀಷಿಣಃ ॥

– ಮನುಸ್ಮೃತಿ.

ನಾನು ಯಾರ ಮಾಂಸವನ್ನು ಇಲ್ಲಿ ತಿನ್ನುವೆನೋ ಅವನು ಜನ್ಮಾಂತರದಲ್ಲಿ ನನ್ನ ಮಾಂಸವನ್ನು ತಿನ್ನುತ್ತಾನೆ. ಆದ್ದರಿಂದಲೇ ವಿದ್ವಾಂಸರು ಮಾಂಸವನ್ನು [ಸ(ಅವನು)+ ಮಾಂ(ನನ್ನನ್ನು)=ಮಾಂಸ] ಮಾಂಸವೆಂದು ಹೇಳುತ್ತಾರೆ.

SANSKRIT MOTHER OF ALL LANGUAGES

Shreya
II B.Sc. B

Importance of Sanskrit

Whatever we have learnt about our country, i.e., its tradition, ethics, beliefs etc. has come from the primary language of India, Sanskrit. It has come down to us as a legacy. Sanskrit is the only language which has preserved its pristine clarity. It is the language of ancient India which tells us about the Vedic period and its civilization. The name comes from the root word 'Sam-skar' meaning to put together or compose.

About Sanskrit Language

Sanskrit is also referred to as a refined and sophisticated way of speech. It is the prime and most sacred language of Hinduism. This is the only language used to perform all the rituals in major ceremonies like prayers, weddings and other spiritual activities. Shlokas, Mantras and hymns are recited in Sanskrit as it is said to be the most sacred and pure language. Sanskrit is known as the deva bhasha, meaning Lord of languages and in India it is regarded as the mother of all languages across the globe. There is a chance that it is one of the oldest languages on the earth. This language is known as more perfect than Greek, more copious than Latin. Sanskrit is regarded as the most scientific language and the perfect mode of communication by connoisseurs like Pandit Jawaharlal Nehru, Gandhiji, Max Muller and Sir William Jones.

Mother of all Languages

This language has significantly contributed to the entire world in many ways. It has given some vital root words to English languages and mostly all the Indian languages including Marathi, Gujarati, Tamil and Bengali. It has an astounding vocabulary-having 96 words for a single term. This tells that it is a language of love, humanity, peace and tranquility. Whatever be the emotion, one wishes to express such as love, fear, anger, compassion, benevolence, surprise, there is an appropriate term in Sanskrit. No wonder, it is the oldest surviving language in the world.

The greatest epics of the Indian history are written in this language like the Ramayana, Mahabharata. Mahabharata had qualities as the world's largest epic with more than 1,00,000 verses. It is also recommended as the prime language for use in computational, linguistic and Artificial intelligence by NASA. These are some of the credentials of Sanskrit language.

THE ORIGIN OF *NATYASHASTRA*

Pallavi
II B.Sc. B

The '*Natyashastra*' is the world's oldest treatise on performing arts. It is more than 2,500 years old. This encyclopedic work on art by Bharata Muni is divided into 36 chapters and contains more than 6,000 verses. The first chapter of *Natyashastra* gives a semi-historical and mostly fictional account of the creation of work. This is how Bharata Muni narrates it:

At the end of '*Kritayuga*' and at the on-set of the '*Tretayuga*', people on earth got addicted to base sentiments (ग्राम्य–धर्म) such as excessive desire, greed, jealousy, anger and found their state of happiness mixed with sorrow. So, the devas, with Indra leading them, approached 'Brahma', the deity of creation, and requested for audio-visual entertainment "क्रीडनीयकमिच्छामो दृश्यंश्रव्यं च यद्भवेत्" They also requested that this be made accessible to all people from all places. This indeed is the need of all people of all times- despite from the world which is filled with conflicting emotions.

The following five verses speak about the creation of *Natyashastra* by Brahma:

"धर्म्यमर्थ्यं यशस्यं च
सोपदेश्यं सङ्ग्रहम् ।
भविष्यतश्च लोकस्य
सर्वकर्मानुदर्शकम् ॥"

"It will contain good counsel for people in their pursuits of Dharma, material needs and fame. It will guide the world in the future too in all their endeavors.

"सर्वशास्त्रार्थसंपन्नं
सर्वशिल्पप्रवर्तकम् ।
नाट्याख्यं पञ्चमवेदं
सेतिहासं करोम्यहम् ॥"

"It will contain the essence of all the *shastras-s* and will be the foundation for all arts. It shall create '*Natyaveda*', the fifth Veda along with the '*Itihasa-s.*'

"एवं सङ्कल्प भगवान्
सर्ववेदाननुस्मरन् ।
नाट्यवेदं ततश्चक्रे
चतुर्वेदाङ्गसम्भवम् ॥"

"Having taken a decision thus, the deity recalled all the Vedas and created the *Natyaveda* which is born out of the four Vedas."

"जग्राह पाठ्यमृग्वेदात्सामभ्यो
गीतमेव च ।
यजुर्वेदादभिनयान्
रसानाथर्वणादपि ॥"

"He took the lyrics पाठ्यं from Rigveda, गति the music from Samaveda, अभिनय the language gestures from Yajurveda and रसं the aesthetic experience from Atharvaveda."

"वेदोपवेदैः सम्बद्धो
नाट्यवेदो महात्मना ।

एवं भगवता सृष्टो
ब्रह्मणा सर्ववेदिना ॥"

"*Natyaveda*, which is closely linked to the Vedas and the Upavedas was thus created by the all-knowing Brahma, the Omniscient.

This episode establishes a context for the creation of the *Natyashastra* and shouldn't be taken literally. However, it shows that the creation of such a great treatise was an outcome of combining different theoretical and artistic mediums. The *Natyashastra* is just a new form given to different disciplines that already existed, old wine in a new bottle. As in the case with most Indian Shastras, Bharata Muni's *Natyashastra* is a descriptive work on the art forms which existed during his times. The art forms were neither created by Bharata nor does he prescribe a set of rules which need to be followed for all times and places. He even suggests, in that form of art which must dynamically adapt to the tastes of people of different place and at different times. This is evident in several *desi* art forms which have evolved with regional variations based on the *marga* set by Bharata Muni.

The structural apsects of form such as lyrics, music and the language of gestures which are required to communicate the content to evoke and aesthetic experience (*rasa)* are all dealt with in detail in the *Natyashastra*. Moreover, it guarantees the fulfillment of the four-fold aspects of human-pursuit, i.e., the *purushaartha* धर्म, अर्थ, काम, मोक्ष. Brahma then asks *Indra* to instruct the *Devas* to bring the Natyashastra into practice. He adds that the Natyaveda must only be passed on the those who are skillful, learned, mature and willing to work hard. Indra finds the devas incapable of practicing this art. So Brahma then instructs Bharata in the Natyaveda and gives him and his 100 sons the responsibility to propogate and practice the same. Bharata then teaches his sons and assigns different roles to them.

Bharata created the three dramatic styles – वृत्ति the verbal, भारती the subtle and सात्त्वती the energetic and informed Brahma of his work. Brahma then suggested that he pick up the graceful style कौशिकी वृत्ति, from the dance of Shiva which is made up of *angahaara* and filled with *bhaava* and *rasa*. Later, Brahma created *Apsaras*, the celestial damsels from his mind. They were skillful in embellishing drama and he told them to assist Bharata. Brahma suggested to Bharata that the *Indra-dhwajotsava*, the festival in the honor of Indra

killing of demons, would be a suitable occasion to put together a performance employing the principles of the Natyashastra. Bharata begins the performance with the नान्दि. He portrayed popular episode of *Samudra-Mathana*, devas pleased with the performance and rewarded him.

Through this episode, Bharata subtly cautions connoisseurs about their responsibility of having detached attitude while witnessing a play or any work of art in general. More philosophically, when the *bhaavas* do not get elevated to the level of *rasa* in a connoisseur's mind due to his lack of maturity, art cannot be enjoyed.

MATTUR- A SANSKRIT SPEAKING VILLAGE

K. Akshay Kumar

I B.Com. B2

The giant structure of Goddess Saraswati at the center of the courtyard of a village school and the Sanskrit signboard outside the gate is the perfect prologue to this story. Children studying at the Mattur School in Shimoga in Karnataka are taught the Vedas once they are ten years old and all the students who come from the Mattur village speak Sanskrit fluently. To a casual visitor, Mattur fits the word "Idyllic." Arecanut trees and lush fields make way for a smooth road to the village, which is a cluster of simplistically finished and tightly packed concrete houses.

The crime rate is extremely low, given that the village by itself is one extended family. There is not a single property dispute pending before courts from this village. "We have a culture of cohesion that has been around for generations and we have managed to keep it going" says Yadu, who like Madhukar, goes by one name and is software professional. The Mattur School has one of the best records in the district. The teacher at the school says that learning Vedas and chanting the same has helped children with their memory and focus. The software engineers here say their training in chanting has helped them with their academics.

ತೃಣಾದಪಿ ಲಘುಸ್ತೂಲಸ್ತೂಲಾದಪಿ ಚ ಯಾಚಕಃ ।
ವಾಯುನಾ ಕಿಂ ನ ನೀತೋಽಸೌ ಮಾಮಯಂ ಪ್ರಾರ್ಥಯೇದಿತಿ ॥

ಈ ಜಗತ್ತಿನಲ್ಲಿ ಹುಲ್ಲಿಗಿಂತಲೂ ಹಗುರವಾದುದು ಹತ್ತಿ. ಅದಕ್ಕಿಂತಲೂ ಹಗುರವಾದುದು ಬೇಡುವವ. ಹಾಗಾದರೆ ಗಾಳಿ ಹತ್ತಿಯನ್ನು ಹಾರಿಸಿಕೊಂಡು ಹೋದಂತೆ ಇವನನ್ನು ಏಕೆ ಹಾರಿಸಿಕೊಂಡು ಹೋಗುವುದಿಲ್ಲ? – ಅವನು ನನ್ನಲ್ಲಿಯೂ ಬೇಡಿಯಾನು ಎಂಬ ಹೆದರಿಕೆಯಿಂದ.

TEMPLES OF LORD SHIVA

Sambrama
II B.A.

The word Shiva is used as an adjective in the Rigveda, as an epithel for several Rigvedic deities including Rudra.

Lord Shiva is known by many names such as Vishwanatha, Mahadeva, Mahadeo, Mahasu, Mahesh, Maheshwara, Shankara, Shambhu, Neelakantha, Shubhankara, Trilokinatha and Gyaneshwara. The highest reflected in his epithets is Mahadeva, Maheshwara and Paramashvara.

Sangameshwar Temple, Alampur

Sangameshwara Temple was built during the Chalukya reign at the Sangam point of Krishna and Tungabhadra Rivers. The temple is a fine example of Chalukyan grandeur and Shiva is known as the Lord of the confluence.

Umamaheshwar Temple, Yaganti

Yaganti UmaMaheshwar temple is one of the few temples patronized by one of the great dynasties of India, located in Kurnool district of Andhra Pradesh. Yaganti temple is also famous for its growing Nandi, Yaganti cave and Venkateshwara cave.

Mahabaleshwar Temple, Gokarna

Mahabaleshwar Temple of Gokarna is one of the most sacred places in India, situated in North Karnataka district. The temple is located on the shores of the Karwar coast and built in Dravidian architectural style with granite stones.

Jambukeshwara Temple, Tiruchirapalli

Jambukeshwara temple Tiruchirapalli is one of the five major Shiva temples of Tamil Nadu, located in the Srirangam island, in Tiruchirapalli. The temple is also one of the hosts for the annual 'Natyanjali' festival of Classical Indian dance.

Ettumanor Mahadeva Temple, Kottayam

Ettumanoor Mahadeva temple is one of the major Shiva temples in Kerala, counted along with Kaduthruthy Mahadeva temple, Valikom temple, Ernakulam Shiva temple and Vadakkunathan temple.

Murudeshwara Temple, Murudeshwara

Murudeshwara temple has the tallest 20 storied gopura in India, located in Bhatkal town of Karnataka. The town is famous for the world's second tallest temple, surrounded by Arabian Sea.

Gangaikonda Cholapuram temple, Tanjavur

Gangaikonda Cholapuram temple is situated near Tanjavur and is known as an

architectural and engineering marvel. The temple of Gangaikonda Choleshwara is a magnificient Shiva Temple and home to one of the largest statues of Nandi in India.

Meenakshi Sundareshwara Temple, Madurai

Meenakshi SUndareshwara temple is the most prominent landmark and most visited tourist attraction in the city. The historic Hindu temple is nominated as one of the new seven wonders of the world.

SriKalahasteshwara Temple, SriKalahasti

SriKalahasteshwara temple is one of the most famous Shiva temple in South India and one of the most impressive Shiva temples in India. Temple of Kalahasti is one of the ancient and must holy place of Andhra Pradesh.

Annamalaiyar Temple, Thiruvannamalai

Annamalaiyar temple in situated at the base of Annamalai hills in Tamil Nadu and temple complex is one of the largest in India. The Annamalaiyar temple is one of the five Shiva temples with the five elements.

Thillai Nataraja Temple, Shidambaram

Thillai Nataraja temple is the holiest Shiva temple in India, locatedin the town of Chidambaram in TamilNadu.

Vadakkunnathan Temple, Thrissur

Vadakkunnathan temple is an ancient Shiva temple. It is a classic example of Kerala style architecture and has been recommended for world heritage site of Kerala.

Mallikarjuna Swamy Temple, Srisilam

The shrine of Lord Mallikarjuna Swamy is situated on a flat top of Nallamalai hills in the town of SriSailam, Andhra Pradesh. Mallikarjuna Swamy temple is one of the twelve Jyotirlinga temples dedicated to Lord Shiva.

Ramanatha Temple, Rameshwaram

Ramanatha Swamy temple on Rameshwaram island is one of the twelve Jyotirlinga temples of Lord Shiva and part of the most important Hindu Pilgrimage circuit, Chardham. The temple has the longest corridor among all Hindu temples in India.

Brihadeshwara Temple, Thanjavur

Brihadeshwara temple is also known as 'big-temple is one of the most famous temples in Tamil Nadu state and one of the largest temples in India. The temple is part of the world heritage site with the name of great living Chola temples of India.

Shore-Temple, Mahabalipuram

Shore temple at Mahabalipuram is one of the earliest structural temples in South India and part of the group of monuments in Mahabalipuram. The temple is built with blocks of granite and one of the oldest structural stone temple of South India.

SWAMI VIVEKANANDA

Shamanth Acharya
II B.Com. B2

Swami Vivekananda was born in Calcutta on 12th January 1863 during Makar Sankranti festival in a traditional Bengali Kayastha family. The birth name of Swami Vivekananda is Narendranath Datta.

He was a spiritual person from his young age and used to meditate before the statues of Hindu Gods.

He was inspired by the wandering ascetics and monks of his time. He was very naughty during his childhood and his parents couldn't control him. His mother once said, "I prayed to Shiva for a son and he has sent me one of his ghosts." He was sent to the Chandra Vidyasagar's Metropolitan Institution for his primary education in 1871 (When he was 8 years old) and to the Presidency college in 1879. He was a very bright student in subjects like Social Science, Philosophy, History, Religion, Art and Literature. He studied Western logic, European History, Western Philosophy, Sanskrit scriptures and Bengali literature.

He was interested in Hinduism and became very successful in creating new understanding among people about Hinduism both within and outside the country. He was successful in promoting meditation, yoga and other Indian Spiritual way of self-improvement in the West. He was the Nationalistic ideal for the people of India. He drew the attention of many Indian leaders through his Nationalistic ideas. Chakravarti Rajagopalachari said that Swami Vivekananda was the person who had saved Hinduism and India. He was called "The Maker of Modern India" by Subhash Chandra Bose.

ಖಲಃ ಕರೋತಿ ದುರ್ವೃತ್ತಂ ನೂನಂ ಫಲತಿ ಸಾಧುಷು ।
ದಶಾನನೋऽಹರತ್ ಸೀತಾಂ ಬಂಧನಂ ಚ ಮಹೋದಧೇಃ ॥

ದುರ್ಜನನು ಕೆಟ್ಟ ಕೆಲಸವನ್ನು ಮಾಡುತ್ತಾನೆ. ಆದರೆ ಅದರ ಪರಿಣಾಮ ಆಗುವುದು ಮಾತ್ರ ಸಜ್ಜನರಲ್ಲಿ. ಯಾಕೆಂದರೆ ರಾವಣ ಸೀತೆಯನ್ನು ಅಪಹರಿಸಿದ. ಆದರೆ ಸೇತುವೆಯಿಂದ ಬಂಧನ ಮಾತ್ರ ಸಾಗರಕ್ಕೆ.

ಛಾಯಾಮನ್ಯಸ್ಯ ಕುರ್ವಂತಿ ತಿಷ್ಠಂತಿ ಸ್ವಯಮಾತಪೇ ।
ಫಲಾನ್ಯಪಿ ಪರಾರ್ಥಾಯ ವೃಕ್ಷಾಃ ಸತ್ಪುರುಷಾ ಇವ ॥

ಮರಗಳು ತಾವು ಸ್ವಯಂ ಬಿಸಿಲಲ್ಲಿ ನಿಂತುಕೊಂಡು ನೆರಳನ್ನು ಮಾತ್ರವಲ್ಲದೆ ಹಣ್ಣುಗಳನ್ನೂ ಇನ್ನೊಬ್ಬರಿಗೆ ನೀಡುತ್ತವೆ. ಆದಾರಿಂದ ಅವುಗಳು ಸಜ್ಜನರಂತೆ.

ಸ್ವಭಾವೋ ನೋಪದೇಶೇನ ನ ಶಕ್ಯಂ ಕರ್ತುಮನ್ಯಥಾ ।
ಸುತಪ್ತಮಪಿ ಪಾನೀಯಂ ಪುನರ್ಗಚ್ಛತಿ ಶೀತತಾಮ್ ॥

ಯಾರದ್ದೇ ಆಗಲಿ ಸ್ವಭಾವವನ್ನು ಬದಲಾಯಿಸಲು ಸಾಧ್ಯವಿಲ್ಲ. ಚೆನ್ನಾಗಿ ಕಾಯಿಸಿದರೂ ಕೂಡಾ ನೀರು ಸ್ವಲ್ಪಕಾಲದ ನಂತರ ಪುನಃ ತಣ್ಣಗಾಗಿಯೇ ಆಗುತ್ತದೆ.

ನ್ಯಾಯಾರ್ಜಿತಸ್ಯ ದ್ರವ್ಯಸ್ಯ ಬೊದ್ಧವ್ಯೌ ದ್ವಾವತಿಕ್ರಮೌ ।
ಅಪಾತ್ರೇ ಪ್ರತಿಪತ್ತಿಶ್ಚ ಪಾತ್ರೇ ಚಾಪ್ರತಿಪಾದನಮ್ ॥

ನ್ಯಾಯಮಾರ್ಗದಿಂದ ಬಂದಿರುವ ದುಡ್ಡಿನ ವಿಷಯದಲ್ಲಿ ಎರಡು ವಿಧವಾದ ಅಪರಾಧಗಳು ಸಂಭವಿಸುತ್ತವೆ – ಅಯೋಗ್ಯನಿಗೆ ಕೊಡುವುದು ಒಂದು, ಯೋಗ್ಯನಿಗೆ ಕೊಡದಿರುವುದು ಇನ್ನೊಂದು.

ಕನ್ನಡ ಭಾಷಾ ವಿಭಾಗ

ಶ್ರೀ ಕೃಷ್ಣ

– ಕೋಲಿನ್ ಎ. ಲೋಬೊ
ಪ್ರಥಮ ಬಿ.ಎ.

ಕೈಯಲ್ಲಿ ಕೊಳಲು
ಶಿರದಲ್ಲಿ ಗರಿ
ಗೊಲ್ಲನ ರೂಪದಿ ವನದಲಿ
ನಿಂತಿಹ ನಮ್ಮಯ ಶ್ರೀಹರಿ.

ಬೆಣ್ಣೆಯ ಕದ್ದು
ಗೋಪಿಯರ ಮನವನು ಗೆದ್ದು
ಮಾಡುತ ಕೊಳಲಿನ ನಾದ
ನಿಂತಿಹ ಹಸುಗಳ ನಡುವೆ
ನಮ್ಮಯ ಗೋಪಾಲ.

ಬಾಯಲ್ಲೇ ಇಡೀ ಬ್ರಹ್ಮಾಂಡವ ತೋರಿಸಿ
ಕಿರುಬೆರಳಲಿ ಗೋವರ್ಧನವನೆತ್ತಿ
ಮಹಾಸರ್ಪದ ಮೇಲೆ ವಿಜೃಂಭಣೆಯಿಂದ ನರ್ತಿಸಿ
ಮುಗ್ಧ ನಗುವನು ಬೀರುತ ನಿಂತಿಹ
ನಂದ ನಂದನ ಕೃಷ್ಣನ ನೋಡಲ್ಲಿ.

ಕನಕನ ಕರೆಗೆ
ಮೊಗವನು ತೋರಿ
ಭಕ್ತರ ಕರೆಗೆ ಓಗೊಟ್ಟು
ನಿಂತಿಹ ಉಡುಪಿಯ ಕಡಗೋಲು
ಕೃಷ್ಣನ ಮಹಿಮೆಗೆ ಸಾಟಿ ಬೇರೆಲ್ಲಿ?

ಸ್ವರ್ಗವೆ ನನ್ನಮ್ಮ

– ಅಯ್ಯಪ್ಪ ಎಚ್.
ಪ್ರಥಮ ಬಿ.ಎ.

ಅಮ್ಮಾ ನಾನಿರುವೆ ನಿನಗಾಗಿಯೇ
ನಿನ್ನಿಂದ ನಾ ಬಂದಿರುವೆ ಈ ಧರೆಗೆ
ರಕ್ತ ಮಾಂಸಗಳಿಂದ ಕೂಡಿದ ಈ ದೇಹ
ದೇಹವೆಂಬ ರಥದಲ್ಲಿ ನಿನ್ನ ಕೂರಿಸಿ
ಮೆರೆದಾಡುವೆ ಈ ಧರೆಯಲ್ಲಿ.

ಒಂಭತ್ತು ತಿಂಗಳು ಹೊತ್ತು–ಹೆತ್ತು ಸಾಕಿದೆಯಮ್ಮ
ನೋವಿನಲ್ಲಿ ನೀನು ಬೆಂದು
ನಲಿವಿನಲಿ ನನ್ನ ಬೆಳೆಸಿದೆ ಅಮ್ಮ
ಹೊಟ್ಟೆಗೆ ಬಟ್ಟೆ ಕಟ್ಟಿಕೊಂಡು
ಜನ್ಮ ಜನ್ಮಕೂ ಋಣ ತೀರಿಸಲಾರದಮ್ಮ.

ಗಾಳಿ ಬಿಸಿಲು ಎನ್ನದೆ ದುಡಿದು ಸಾಕಿದೆ ನನ್ನ
ಸುರಿಸಿದೆ ನೀ ಬೆವರು ಬಾಳಿನಲ್ಲಿ
ಸನ್ಮಾರ್ಗದ ಜೋತಿಯಲ್ಲಿ ಬೆಳೆಸಿದೆ ಅಮ್ಮ
ಮರು ಜನ್ಮವಿದ್ದರೆ ನಿನ್ನ ಮಡಿಲಲ್ಲಿ ಹುಟ್ಟುವೆ.

ನೀ ಕಂಡ ಕನಸ ನಾ ನನಸಾಗಿಸುವೆ
ನಿನ್ನ ಸುಖದುಃಖಗಳಿಗೆ ಬೆಲೆ ಕಟ್ಟಲಾರೆನಮ್ಮ
ನನಗೆ ನಿನ್ನ ಸುಖದ ಕನಸಮ್ಮ
ಕಣ್ಣಿಟ್ಟು ಕಾಣುವ ಪ್ರೀತಿ ನನ್ನದಮ್ಮ.

ನಿನ್ನ ಕೈತುತ್ತಿನಾ ಪ್ರೇಮವ ಮತ್ತಿನಲ್ಲಿ
ನಿದ್ರಿಸಲು ಸಿಗುವುದು ಅಮ್ಮನ ಮುತ್ತು
ಮರು ಜನ್ಮ ಇದ್ದರೆ ನಿನ್ನ ತಾಯಿಯಾಗಿ ನಾ ಹುಟ್ಟುವೆ
ಮಗುವಿನಂತೆ ಸಾಕುವ ಹಂಬಲ ನನ್ನದಮ್ಮ
ಈ ಉಸಿರೆ ನಿಂತರು ಚಿರ ನನ್ನ ತಾಯಿ.

ಕರುಳ ಬಳ್ಳಿ

– ಮೇಘನಾ ವಿ. ಭಟ್
ತೃತೀಯ ಬಿ.ಎಸ್ಸಿ.

ಒಡಲೊಳಗೆ ಅವಿತಿರಲು
ಹೊಂಗಿರಣ ತಾಕೀತೇ?
ಮಡಿಲಲ್ಲಿ ಕುಳಿತಿರಲು
ನೋವಾರು ಬಂದೀತೆ?

ನೀ ಬಾಳ ಭವಕೆ ಬಂದಿರಲು
ತಾಯಿ, ನೋವಲಿ ಸುಖ ಕಂಡಿಹಳು
ಕರುಳ ಬಳ್ಳಿ ಕಳಚಿರಲು
ಮನದಿ ದೇವರ ನಮಿಸುವಳು.

ತಾಯಿ ಪ್ರೀತಿಯಲಿ
ಮುಳುಗಿರಲು ಹಸುಳೆ
ತಂದೆ ಮಮತೆಯಲಿ
ಬೆಳೆಯುವುದು ನಾಳೆ.

ತೊದಲು ನುಡಿಗಳ ಲಾಲಿ
ತೂಗಿತು ಬಣ್ಣದ ಜೋಲಿ
ಪುಟ್ಟ ಕಂದಮ್ಮನ ತೊಟ್ಟಿಲಲಿ
ತಟ್ಟಿ ಮಲಗಿಸಿದಳು ತಾಯಿ.

ಹೆಜ್ಜೆ–ಗೆಜ್ಜೆಯ ನಾದ
ಮನೆ–ಮನಗಳಿಗೆ ಸ್ವಾದ
ಅಳು–ನಗುವೇ ಚಂದ
ಮುಗ್ಧ ಮನಸ್ಸಿನ ಕಂದ.

ಬೆಲೆಗೆ ಎಂದು ನಿಲುಕದು
ಕಟ್ಟಿದಷ್ಟು ಸಾಲದು
ಅದುವೆ ತಾಯಿ ಪ್ರೀತಿಯು
ಕರುಣಾಮಯಿ ಆ ಮಾತೆಯು.

ಇರುವುದೆಲ್ಲವ ಬಿಟ್ಟು.....

– ಸುಶ್ಮಿತಾ
ದ್ವಿತೀಯ ಬಿ.ಕಾಂ.

ಸಂತೆಸಂತೆಯಲಿ ಅರಸಿದಳವಳು ಸಂತೋಷವ
ಗೊಣಗುತ ಚೇತರಿಸಿದಳವಳು ನಾನೇನ ಮಾಡಿದೆ ಪಾಪವ...
ಪಾಪಿಗಳೂ ಇರುವರು ಸಂತಸದಿ, ತನ್ನ ಸಂತಸ ಹೋಯಿತೆಲ್ಲಿ?
ಕಾಡಲೆದಾಯಿತು, ಪಾತಾಳದ ತಳ ಅರಸಿ ಆಗಸದಿ ಜಿಗಿದದ್ದಾಯಿತು.
ಸಂತಸವ ಕಾಣಲಾರದೇ ದುಃಖಿಸಿದ್ದಾಯಿತು.
ತನ್ನವರ ತೊರೆದು ಸಂತಸವ ಅರಿಸಿದ್ದಾಯಿತು.
ಮೋಡವ ಸರಿಸಿ ಭುವಿಯ ನೋಡಿದರೂ ಸಿಗದಾ ಸಂತಸ,
ಎಲ್ಲೆಂದು ಹುಡುಕಲಿ ನಾ ಎಂದಳು.

ಕಾಣಲಾಗದ ಆ ಸಂತಸವ ಹುಡುಕುವುದ ಬಿಟ್ಟು
ಬಂದಳಾಕೆ ತನ್ನ ಮನೆಗೆ, ಬಿಕ್ಕಿ ಬಿಕ್ಕಿ ಅತ್ತು...
ಅಮ್ಮನೆಲ್ಲಿ ಎಂದು ಹುಡುಕುತಾ ಹೊರನಡೆದಳು,
ಅಮ್ಮನ ಕಾಣದೆ ಸುಮ್ಮನೆ ಕೂತಳು...

ಒಮ್ಮೆಲೆ ಕೇಳಿಸಿತಾ ಆ ಕೈ ಬಳೆಯ ಸದ್ದು,
ತನ್ನಮ್ಮನದು ಎಂದು ಹೋಗಿ ನೋಡಿದಳು...
ಅಮ್ಮನ ಕಂಡು ಸಂತಸದಿ ಕುಣಿದಳಾಕೆ,
ಮಾಡಿದೆ ನಾ ತಪ್ಪು ಎಂದು ಬೇಸರಿಸಿದಳಾಕೆ.

ಎಲ್ಲೆಲ್ಲೂ ಹುಡುಕಿದರೂ ಸಿಗದಾ ಆ ಸಂತಸವ
ತನ್ನಮ್ಮ ಇಟ್ಟಿರುವಳೇ ಜೋಪಾನವಾಗಿ,
ನಕ್ಕಳು ಅಮ್ಮನ ಅಪ್ಪಿಕೊಂಡು...
ಕಾಣದ ಮರ್ಮವ ಬಯಸಿ,
ಜೊತೆಗಿದ್ದ ಸಂತಸವ ತೊರೆದ ಹೆಡ್ಡತನವ ಬೈದು
ಕಳೆದುಕೊಂಡಿದ್ದನ್ನು ಪುನಃ ಪಡೆದಾಕೆಗಾದ ಖುಷಿಯ
ಕಣ್ಣುಮಿಂಚಲಿ ಹೊರಹೊಮ್ಮಿಸಿದಳು...
ಕಣ್ಣಂಚಿನ ನೀರ ಒರೆಸಿಕೊಂಡಳು, ಕಾಣದಹಾಗೆ ತನ್ನಮ್ಮನಿಗೆ...

ಮತ್ತೆ ಹುಟ್ಟಿ ಬರುವೆ

– ಸಂಧ್ಯಾಭಟ್
ಪ್ರಥಮ ಬಿ.ಎಸ್ಸಿ.

ಆಕಾಶದಾಚೆ ಓಡಾಡುವ ಮನವು
ತಂಗಾಳಿ ಕೂಗಿಗೆ ಕಿವಿಕೊಟ್ಟಿದೆ
ತಂಪಾದ ಇಂಪಾದ ಹಕ್ಕಿಯ ಗಾನಕೆ
ಆ ಮನವು ಈಗ ತಲೆಬಾಗಿದೆ.

ಎಲ್ಲೆಲ್ಲೂ ಹಸಿರ ಹಾಸಿ ಹೊದ್ದಿದೆ ಮನವು
ಕಣ್ಣಲ್ಲಿ ತುಂಬಿದೆ ಖುಷಿಯ ಅಳುವು
ಆಗಸವೇ ಬಾಗಿ ವನವ ಚುಂಬಿಸಿದಂತೆ
ಕಾಣುತಿದೆ ನಿಸರ್ಗ ಮರೀಚಿಕೆಯಂತೆ.

ವನದೇವಿ ಹಸಿರಾಗಿ ನಲಿದಾಡುತಿರುವಾಗ
ಸುತ್ತಲೂ ಕೂಡಿದವು ತರ ತರಹದ ರಾಗ
ಬಿಟ್ಟ ಬಯಲಿನ, ಹಚ್ಚ ಹಸರಿನ ಭೂದೇವಿಯ
ಸ್ಪರ್ಶಕೆ ಬದುಕು ಕಂಡಿದೆ ವೇಗ.

ಮತ್ತೆ ಹುಟ್ಟಿ ಬರುವೆ ತಾಯೇ ಈ ನಿನ್ನ ಮಡಿಲಲಿ
ಪ್ರಾಣಿ ಪಕ್ಷಿಯಾಗಿ ಹುಳ ಹುಪ್ಪಟೆಯಾಗಿ
ನಗುವ ಕಾನನದ ಕೂಸಾಗಿ, ಹರಿವ ನದಿಗೆ ನೀರಾಗಿ
ಮತ್ತೊಮ್ಮೆ ಹುಟ್ಟಿ ಬರುವೆ ತಾಯೇ ನಿನ್ನ ಮಡಿಲಲ್ಲಿ.

ಭಾವವ್ಯೂಹ

– ವೃಂದಾ ಉಪಾಧ್ಯ
ತೃತೀಯ ಬಿ.ಎಸ್ಸಿ.

ಮುಕ್ತ ಜೀವದ ಸ್ಪಷ್ಟ ಚಿತ್ತಕೆ
ಮತ್ತೆ ಮಳೆ ಹನಿ ಹೊಡೆತವು
ಹಳೆಯ ಬಾಗಿಲು ಮುಚ್ಚಿಹೋದರೂ
ಕಿಟಿಕಿ ತೆರೆಯಿತು ಗಾಳಿಯು ॥

ಬಿಸಿಯ ತಾಪವು ಕರಗುವಂತೆ
ಮಂಜು ಹನಿಯದು ಚಿಮ್ಮಿದೆ
ಕನಸ ಹೆಣೆಯುತ ಸಾಗುವಾಕೆ
ಭ್ರಮೆಯ ಸುತ್ತಿನ ಆಟದಿ ॥

ಪುನಃ ಸೋಲುವ ಭಯವ ಕಂಡು
ಒಲವ ಚಿಲುಮೆಗೆ ಕತ್ತರಿ
ಅರಿತಳಾಕೆ ತಪ್ಪುರಾಗವು
ಬೇಡ ಬದುಕಿನ ಗೀತದಿ ॥

ಸೋತ ಮನಸದು ಮೂಕವಾಗಿ
ಮಾಯಾ ಜಾಲಕೆ ಸಿಲುಕದು
ಹತಾಶೆ ಮೌನದ ಗೆಲುವು ಇಂದು
ಭಾವವ್ಯೂಹದ ಯುದ್ಧದಿ ॥

ಹೆಮ್ಮೆಯ ಗುರುಗಳಿಗೆ

– ಸಂಗೀತಾ
ದ್ವಿತೀಯ ಬಿ.ಕಾಂ. 'ಎ'

ನನ್ನ ಪ್ರೀತಿಯ ಶಿಕ್ಷಕರೇ
ಇದೋ ನಿಮಗೆ ನನ್ನ ನಮನ ।
ನನ್ನ ನೆಚ್ಚಿನ ರಕ್ಷಕರೇ
ಎರಗುವೆ ನಿಮ್ಮ ಚರಣಕೆ ಅನುದಿನ ॥

ಅನುದಿನವು ನಮಗೆಲ್ಲಾ
ನೀವೇ ಗುರುಗಳು ।
ಕ್ಷಣಕ್ಷಣವು ನಿಮಗೆಲ್ಲಾ
ನಾವೇ ವಿಧೇಯರು ॥

ವಿದ್ಯಾಸಂಸ್ಥೆಯಲ್ಲಿ ಇರುವಾಗ
ತಾಯಿಯಂತೆ ರಕ್ಷಕರು ।
ಮನೆಯಲ್ಲಿ ನಾವು ಇರುವಾಗ
ತಾಯಿಯೇ ಶಿಕ್ಷಕರು ॥

ನಿಮ್ಮ ಪ್ರೀತಿಯ ಮಕ್ಕಳು ನಾವು
ಎಂದು ತಪ್ಪು ಮಾಡಲ್ಲಾ ।
ನಮ್ಮ ಪ್ರೀತಿಯ ಗುರುಗಳು ನೀವು
ನಮಗೆ ದಾರಿ ನೀವೆಲ್ಲಾ ॥

ವಿದ್ಯಾಸಂಸ್ಥೆಯು ನಮಗೊಂದು
ಮನೆಯಂತಹ ಶಾಲೆಯು ।
ಅದರಲ್ಲಿರುವ ಶಿಕ್ಷಕರು
ತಾಯಿ ತಂದೆ ಆಗಿಹರು ॥

ದೇವರಂತೆ ಶಿಕ್ಷಕರು
ಹರಸಿದರು ಒಳ್ಳೆಯ ಮಾರ್ಗವು ।
ತಾಯಿಯಂತೆ ಕೊಟ್ಟರು
ವರವು ನಮಗೆ ಸಿಕ್ಕವು ॥

ಒಳ್ಳೆಯ ಗುಣಗಳು ಹೇಳಿದರು
ನಮ್ಮನು ಗುರಿಯೆಡೆ ನಡೆಸಿದರು ।
ಅವರ ಇಂತಹ ಪಾಠಗಳು
ನಮ್ಮಯ ಕಣ್ಣಿನ ನೋಟಗಳು ॥

ಶಿಕ್ಷಕರಿಗೆ ನಾ ತಲೆಬಾಗಿ
ಮುಂದಕೆ ಹೋಗಲು ಅದು ದಾರಿ ।
ಗುರುಗಳ ಅನುಗ್ರಹ ನಮಗಾಗಿ
ಎಂದಿಗೂ ಸಿಗುವುದು ಸಿಹಿಯಾಗಿ ॥

ಸಂಜೆಯಾಯಿತು ಪಾಠವು ಮುಗಿಯಿತು
ಮಕ್ಕಳು ಮನೆಗೆ ಹೊರಟರು ।
ಪಾಠವ ಮಾಡಿದ ಶಿಕ್ಷಕರೇ
ನಿಮಗಿದೋ ನಾವು ಧನ್ಯರು ॥

ಬಹುಮುಖ ಪ್ರತಿಭೆ

– ಪಲ್ಲವಿ ನಾಯಕ್
ಪ್ರಥಮ ಬಿ.ಎಸ್ಸಿ.

ಶಿಕ್ಷಣವೇ ಶಾಲೆಯಲ್ಲಿ ಮುಖ್ಯವಾಗಿದ್ದ ಕಾಲವೊಂದಿತ್ತು
ಶಿಕ್ಷಣವು ಕನಿಷ್ಠ ವಿಷಯವಾಗಿರುವುದು ಇವತ್ತು
ಬಹುಮುಖ ಪ್ರತಿಭೆಯು ಈ ಅಧ್ಯಾಪಕರದು.

ಚುನಾವಣೆ ಬಂದಿತೆಂದರೆ
ಹೋಗುವರು ಮತಪತ್ರ ಪೆಟ್ಟಿಗೆಯ ತೆಗೆದುಕೊಂಡು
ಮನೆಯ ತ್ಯಜಿಸಿ ಹೋಗುವ ವೀರ ಯೋಧನಂತೆ ॥1॥

ಜನಗಣತಿ ಆರಂಭವಾಯಿತೆಂದರೆ
ಮಳೆಬಿಸಿಲ ಲೆಕ್ಕಿಸದೆ ಮನೆಮನೆಯ ಸಂದರ್ಶಿಸುವರು
ಅನ್ನ, ಆಹಾರವಿಲ್ಲದ ಭಿಕ್ಷುಕನಂತೆ ॥2॥

ವಾರ್ಷಿಕೋತ್ಸವದ ದಿನ ಹತ್ತಿರವಾಯಿತೆಂದರೆ,
ಹಗಲು ರಾತ್ರಿಗಳ ಕಳೆವರು ಶಾಲೆಯಲ್ಲೇ
ಮನೆ ಸಂಸಾರವ ತ್ಯಜಿಸಿದ ಯೋಗಿಯಂತೆ ॥3॥

'ಅಕ್ಷರ ದಾಸೋಹ' ಬಂದ ಮೇಲೆಯೂ
ಹೊಗೆ ಬೆಂಕಿ ಲೆಕ್ಕಿಸದೆ ಸೌಟು ಹಿಡಿದು ನಿಂತಿಹರು
ಹೋಟೆಲ್ ಛತ್ರಗಳ ಅಡುಗೆ ಬಾಣಸಿಗನಂತೆ ॥4॥

ಎಲ್ಲಿದೆ ಪಾಠವ ಮಾಡಲು ಸಮಯ
ಇನ್ನೆಂತು ಆಗುವುದು ಶಿಕ್ಷಣ ಅಭಿವೃದ್ಧಿ
ಮುಷ್ಕರವ ಮಾಡಲು ಇವರಿಗಿಲ್ಲ ಅಧಿಕಾರ

ಇನ್ನೆಂತು ಮುಗಿಯುವುದು ಶಿಕ್ಷಕರ ಮೇಲಿನ ದೌರ್ಜನ್ಯ
ಎಂದು ಸಿಗುವುದೋ ಈ ಬಹುಮುಖ ಪ್ರತಿಭೆಗೆ ಸ್ವಾತಂತ್ರ್ಯ
ನಿವೃತ್ತಿಯ ಮೇಲಾದರೂ ಸಿಗಲಿ ಅವರಿಗೆ ಮುಕ್ತಿ.

ನದಿಯಾಗಿ ನಾನು...

– ಪಂಚಮಿ ಕಾಮತ್
ತೃತೀಯ ಬಿ.ಎ.

ಭುವಿಗಿಳಿದ ದಿನದಿಂದ ಹರಿದೆ ನಾ ಶಾಂತರೂಪದಲಿ
ಮನುಕುಲದ ಕುಡಿಗಳಲಿ ತುಂಬಿದೆ ತೇಜವನು
ತಣಿದು ತಣಿಸಿ ಉಂಡು ಉಣಿಸಿ
ಜೀವನಾಡಿಯಾದೆ ಪಶುಪಕ್ಷಿಗಳಿಗೆ
ನದಿಯಾಗಿ ನಾನು ॥

ಜಟಧರನ ಜಟೆಯಿಂದ ಜಳಜಳನೆ ಬಂದಿಹೆನು
ಈ ಲೋಕವ ಪೊರೆಯಲು ಕಾಯಲು
ಪ್ರಕೃತಿಯ ವರವಾಗಿ ಬಂದೆ ನಾ ಉಣಿಸಲು
ನದಿಯಾಗಿ ನಾನು ॥

ಆರತಿ ಬೆಳಗಿದೆ ಬಾಗಿನ ನೀಡಿದೆ ನನ್ನ ತಣಿಸಲು
ಮರಳು ಸಾಗಿಸಿ ಕೊಚ್ಚಿಸಿದೆ ನನ್ನ ತುಂಬಿದ ಬಸಿರನು
ಆದರೂ ಸಹಿಸಿದೆ ನನ್ನ ಈ ನೋವನು
ನದಿಯಾಗಿ ನಾನು ॥

ನನ್ನೊಡಲ ಬಗೆದು ತೆಗೆದೆ ನೀನು ನನ್ನ ಕುಡಿಗಳನು
ನಿನ್ನ ಸ್ವಾರ್ಥಕ್ಕೆಂದು ನನ್ನ ಪಥವನ್ನೇ ತಿರುಗಿಸಲು ಹೊರಟೆ
ಆದರೂ ಮಗನೆಂದು ಭಾವಿಸಿ ತಾಳ್ಮೆಯ ತಾಳಿದೆ
ನದಿಯಾಗಿ ನಾನು ॥

"ಮಾತೇ' ಎಂದು ಕರೆದಾಕ್ಷಣ ಮರೆಸಲು ಯತ್ನಿಸಿದೆ ನೀನು
ಬಗೆದ ದ್ರೋಹವ ಮುಚ್ಚಿಸಿಲೆತ್ನಿಸಿದೆ ನಾನು
ಮರೆಯಲಸಾಧ್ಯವಾಯಿತೆನಗೆ ನಿನ್ನ ಕುಕೃತ್ಯಗಳ
ನದಿಯಾಗಿ ನಾನು ॥

ಸಾಕು ಸಾಕು ನಿನ್ನ ಈ ಆಟ
ಈಗ ನೋಡು ಜಗತ್ತಿಗೆ ನನ್ನ ಪಾಠ
ಹೇಗೆಂದು ಕೇಳಿದರೆ ದಂಗಾಗುವೆ ನೀನು ನಿನ್ನಯ ಮಾಟ
ಸುನಾಮಿಯ ರೂಪದಲಿ ಸೆಳೆಯುವೆ ನಿನ್ನ ಎನ್ನೊಡಲಿಗೆ

ಚಾಚುವೆ ಎನ್ನ ಕೆನ್ನಾಲಿಗೆಯ ಜಗದಗಲ
ಮುಳುಗಿಸುವೆ ಎಲ್ಲಾ ನಿನ್ನ ಕೃತ, ನಿರ್ಮಾಣಗಳ
ನನ್ನ ಈ ರೌದ್ರಪ್ರಳಯದಲಿ
ನದಿಯಾಗಿ ನಾನು ॥

ನಾನು ಮತ್ತು....

– ಶ್ರೀದೇವಿ ಆರ್.
ದ್ವಿತೀಯ ಬಿ.ಎಸ್ಸಿ. 'ಎ'

ನನ್ನ ತನವ ಅರಿಯಲು, ಅವಳ ತೀರ ಸರಿದು ಬಂದೆ
ಅವಳ ಕಣ್ಣಂಚಿನ ಮಾತ, ನಾನು ತಿಳಿಯದೆ ಹೋದೆ
ದೂರ ಬರಲು ತಿಳಿದೆ ಅಮ್ಮ ನಿನ್ನ ಒಲವು ಮಮತೆ ಪ್ರೀತಿ
ಈಗ ಅರಿತೆ ನಿನ್ನ ಮನವ, ನಿನ್ನ ತ್ಯಾಗಕೆ ಶರಣು ನಾ...

ಅಂದಿನಿಂದ ಈ ಕ್ಷಣದ ವರೆಗೆ, ಒಂದು ದಿನ ಮನ ನೋಯಿಸಿಲ್ಲ
ಮನಸಾರೆ ಸ್ಮರಿಸುವೆ ಅಪ್ಪ ನಿನ್ನನು ಪ್ರತಿ ಕ್ಷಣದಲು
ಆತ್ಮ ವಿಶ್ವಾಸವ ಪ್ರತಿಗಳಿಗೆ, ನೀ ನೀಡಿದೆ ನನ್ನ ಹಾದಿಗೆ
ಸ್ಫೂರ್ತಿ ನೀನೆ, ತ್ಯಾಗ ನೀನೆ, ತಾಳ್ಮೆಯ ಮೂರ್ತಿ ನೀನೆ.

ಯಾರು ಇಲ್ಲಿ ಎನುವ ಸಮಯದಿ ನನ್ನವರಾದ ನೀವೆಲ್ಲರು
ಮನಕೆ ಬಹಳ, ಬಹಳ ಸನಿಹಿಸಿ, ಮಾರ್ಗದರ್ಶಕರಾದಿರಿ
ನೀವು ನೀಡಿದ ಮಾರ್ಗದರ್ಶನ, ನಾವು ಮಾಡಿದ ತುಂಟಾಟವು
ಕೊನೆಯ ಕ್ಷಣದ ಉಸಿರಿನೊಂದಿಗೆ ನನ್ನ ಜೀವದಿ ಬೆರೆಯಲಿ.

ಜೀವದ ಗೆಳತಿ ಶಬ್ದಕೆ, ಅರ್ಥಪೂರ್ಣ ಸೊಬಗ ನೀಡಿದೆ
ಹೆಜ್ಜೆ ಹೆಜ್ಜೆಗೂ ನನ್ನ ನಡೆಗೆ, ಸ್ನೇಹದೊಲುಮೆಯ ಉಣಿಸಿದೆ
ಸ್ಫುರದ್ರೂಪಿ ನನ್ನ ಗೆಳತಿಯೆ, ಅಪರಿಮಿತ ಪ್ರೀತಿ ಚಿಲುಮೆ
ಕೊನೆಯವರೆಗೆ ಈ ಗೆಳೆತನ ಇರಲಿ ಎಂದು ಬಯಸಿದೆ.

ಸುಳಿಯಲಿ ಸಿಲುಕಿದೆ ಮನವು, ನೆನಪಿನ ದೋಣಿಯಲಿ
ಮನಕೆ ಸಿಂಚಿಸಿದ ಸ್ಪರ್ಶವ ಅರಿಯದಾದೆ ನಾನಿಲ್ಲಿ
ಕಾಣದ ಕಡಲೊಳು ತೇಲಬಯಸಿದೆ ಮನ
ಎಲ್ಲೆಲ್ಲೋ ಹುಡುಕಿದೆ ವಿಳಾಸವಿಲ್ಲದ ಈ ಅನಾಮಿಕನ...!

ಗಂಧೇನ ಗಾವಃ ಪಶ್ಯಂತಿ ವೇದೈಃ ಪಶ್ಯಂತಿ ಬ್ರಾಹ್ಮಣಾಃ ।
ಚಾರೈಃ ಪಶ್ಯಂತಿ ರಾಜಾನಶ್ಚಕ್ಷುರ್ಭ್ಯಾಮಿತರೇ ಜನಾಃ ॥

ಹಸುಗಳು ವಾಸನೆಯಿಂದ ತಿಳಿಯಬೇಕಾದ್ದನ್ನು ತಿಳಿಯುತ್ತವೆ. ಬ್ರಾಹ್ಮಣರು ವೇದಗಳಿಂದ ತಿಳಿದರೆ, ರಾಜರು ಗೂಡಚಾರರಿಂದ ತಿಳಿಯುತ್ತಾರೆ. ಸಾಧಾರಣ ವ್ಯಕ್ತಿಗಳು ಮಾತ್ರ ಕಣ್ಣಿನಿಂದ ತಿಳಿಯುತ್ತಾರೆ.

ನಿರೀಕ್ಷೆ

– ವೃಂದಾ ಉಪಾಧ್ಯ
ತೃತೀಯ ಬಿ.ಎಸ್ಸಿ. 'ಎ'

ಬಾನಲ್ಲಿ ಸಾಗುತಿಹ ಮೋಡಗಳ ಸಾಲು
ಎತ್ತ ಕಡೆ ಎಂದಿರದೆ ಮುಕ್ತ ಪಯಣ
ತಲುಪುವುದೇ ಭುವಿಯನ್ನು ಹನಿಹನಿಯ ರೂಪದಿ
ಬಾಯ್ತೆರೆದು ಕಾದಿದೆ ಬರಡು ಭೂಮಿ ॥

ಚುಕ್ಕಿ ನಕ್ಷತ್ರವನೇ ದಿಟ್ಟಿಸಿ ನೋಡುತ್ತಾ
ಹುಟ್ಟಿ ಬಾ ಮಗುವಾಗಿ ನನ್ನುದರದಿ
ಕಣ್ತುಂಬಿ ಹೇಳಿದಳು ವೀರ ಯೋಧನ ಮಡದಿ
ತುಂಬು ಬಸುರನು ಹೊತ್ತು ಅಂಗಳದಲಿ ॥

ತಿಂಡಿಯನು ತೆಗೆದಿಟ್ಟು ಮಗ ಬರುವ ಹಾದಿ
ಕಾಯುತ್ತಾ ಕುಳಿತಿಹಳು ಮುಗ್ಧ ತಾಯಿ
ಈಗಲೂ ಕಾಯುವಳು ತನ್ನ ಕರುಳಿನಕುಡಿಗೆ
ಆಶ್ರಮದ ಬಾಗಿಲ ಬುಡದಲ್ಲಿಯೇ!!

ನವಿಲು

– ಆಕಾಶ್ ಎಸ್. ಕೈಕಿಣಿ
ದ್ವಿತೀಯ ಬಿ.ಕಾಂ 'ಬಿ–2'

ನವಿಲೇ ಓ ನವಿಲೇ
ವಸಂತಕಾಲದಿ ಕುಣಿಯುವ ನವಿಲೇ
ಚೈತ್ರ ಮಾಸದಿ ಹಾಡುವ
ನಲಿಯುವ ನವಿಲೇ!
ತಂಪಾದ ಗಾಳಿ ಬೀಸುವಾಗ
ಹೂವೆಲ್ಲಾ ತೋಟದಲ್ಲಿ ಸುಗಂಧ ಬೀರುವಾಗ
ನೀನು ರೆಕ್ಕೆ ಬಿಚ್ಚಿ ಕುಣಿಯುವಾಗ
ಪ್ರಕೃತಿಯು ನಿನ್ನ ಸೌಂದರ್ಯಕ್ಕೆ ತಲೆಬಾಗಿದೆ ॥
ಓ ನವಿಲೇ.....ಸುಂದರ....ಓ ನವಿಲೇ

ಹುಲ್ಲುಗಳು ಸೂರ್ಯನ ಬೆಳಕಿಗೆ ಶೋಭಿಸುವಾಗ
ಚಿಟ್ಟೆಗಳು, ಹೂವಿನಿಂದ ಹೂವಿಗೆ ಹಾರುವಾಗ
ನೀನು, ಓ ನವಿಲೇ, ನೀನು ಬಂದು ನಿಂತಾಗ
ಕೃಷ್ಣನೇ ನಿನ್ನ ಸೌಂದರ್ಯಕ್ಕೆ ಮನಸೋತನಂತೆ

ಗೋಮಾತೆಗಳು ಹೊಲದಲ್ಲಿ ಮೇಯುವಾಗ
ಮುಕ್ಕೋಟಿ ದೇವ–ದೇವತೆಗಳು ವಾಸವಾಗಿರುವಾಗ
ನೀನು ಬಂದು ಕಾಮನ ಬಿಲ್ಲಿನಂತೆ ನಿನ್ನ ಗರಿಯನ್ನು ಬಿಚ್ಚುವಾಗ
ದೇವದೇವತೆಗಳೇ ನಿನ್ನ ಸೌಂದರ್ಯಕ್ಕೆ ಮಾರು ಹೋದರಂತೆ

ನೀ ಆಕಾಶಕ್ಕೆ ಹಾರಿದ ಆ ದೃಶ್ಯವ ನೋಡಿ
ಪುಷ್ಪಕ ವಾಹನವೇ ಮನಸೋತಿತಂತೆ
ನಿನ್ನ ಆ ಅಂದಕ್ಕೂ, ಚೆಲುವಿಗೂ, ನಿನ್ನ ಆ ಸೃಷ್ಟಿದಾತನಿಗೂ
ಜನರು, ಕವಿಗಳು, ವರ್ಣಿಸಲಾರದೆ, ಬೇಸತ್ತು ಹೋದರಂತೆ

ಓ....ನವಿಲೇ.....ಸೌಂದರ್ಯವೇ ಓನವಿಲೇ.....

ಮರ

– ರಚಿತಾ
ಪ್ರಥಮ ಬಿ.ಕಾಂ. 'ಎ'

ಪ್ರೀತಿಯ ಹೊನಲು ಬೆಳಕು
ಕೊಂಬೆಕೊಂಬೆಗಳಲ್ಲು
ಚಿಗುರು ಒಡೆದು
ಕೊಡುವ ಗುಣ ಬೆಳೆದು
ಮರವಾದೆ ನೀನು.

ಕಣ್ಣಿಲ್ಲದ ಬೇರುಗಳ ಒಳಗಣ್ಣ
ಬೆಳಕು ಅಂತರ್ ಜ್ಯೋತಿಯ
ಬೆಳಗಾಗಿ ಬೆಳೆದು ಬಣ್ಣಬಣ್ಣಗಳ
ಹೂವಾದೆ ನೀನು.

ಗಂಧ ಸುಗಂಧ ತುಂಬಿ
ಪ್ರಕೃತಿಯ ಮಡಿಲಲ್ಲಿ ಮಾತಿಲ್ಲದೆ
ಮನದಣಿಸುವ ಮಧುರ ಮಾಗಿದ
ಫಲವಾದೆ ನೀನು.

ಬೋಧಿ ರೂಪಧರಿಸಿ
ಕೊಡುವ ಪಡೆದ
ಆನಂದದ ಗುಟ್ಟು
ಗೌತಮನಲ್ಲಿ ಉಸಿರಿ
ಬೋಧಿ ಸತ್ವನಾದೆ ನೀನು.

ನೆನಪು

– ದೀಕ್ಷಾ ಶೇಖರ್
ದ್ವಿತೀಯ ಬಿ.ಕಾಂ. 'ಎ'

ಮರೆಯಬೇಕಾದ ಆ ಕೆಟ್ಟ ಘಳಿಗೆಗಳು
ಇನ್ನೂ ಯಾಕೆ ಕಾಡುತಿದೆ ನನ್ನನು
ಹಗಲೂ ಇರುಳೂ ಕನಸೋ ನನಸೋ ಎನ್ನದೆ
ಪುನಃ ಘಟಿಸುವಂತೆ ಭಾಸವಾಗುವುದು.
ಆಕಾಶದೆತ್ತರ ತಲುಪಿರುವ ಆ ನೆನಪು
ಮತ್ತೆ ಮತ್ತೆ ಯಾಕೆ ಮರುಕಳಿಸುವುದು ನನ್ನ ಮುಂದೆ?
ಜೀವನವೆಂಬ ಪುಟ್ಟ ಆವಾಸದ ಪ್ರತಿ ಕ್ಷಣಗಳು
ಇಂದು ಉಳಿದಿವೆ ಬರೀ ನೆನಪುಗಳಾಗಿ
ದಿನ ಕಳೆಂದತೆ ಕೇವಲ ನೆಪವಾಗುವುವು ಈ ನೆನಪುಗಳು
ಆದರೆ ಈ ನೆಪಗಳೇ ಇಂದು ನೆನಪುಗಳಾಗಿ ಕಾಡುತಲಿರುವುವು.
ನಾವಿಕನಿರದ ನನ್ನೀ ದೋಣಿಯ ಪಯಣ
ಕೇವಲ ನೆನಪುಗಳಿಂದ ಸಾಗಿದ ಈ ಜೀವನ
ಸಾಗಲಿ ಮುಂದೆಯೂ ನಿಮ್ಮೀ ನೆನಪುಗಳೊಂದಿಗೆ.....

ಇದು ಸಾಧ್ಯನಾ?

– ಶ್ರೀರಕ್ಷಾ
ದ್ವಿತೀಯ ಬಿ.ಕಾಂ.'ಎ'

ಪ್ರೀತಿಯಿಂದ ಪ್ರೀತಿ ಮಾಡಬಹುದು
ದ್ವೇಷದಿಂದ ಪ್ರೀತಿ ಸಾಧ್ಯನಾ?

ದ್ವೇಷಿಸಿದವರನ್ನು ಪ್ರೀತಿ ಮಾಡಬಹುದು
ಪ್ರೀತಿಸಿದವರನ್ನು ದ್ವೇಷ ಮಾಡಲು ಸಾಧ್ಯನಾ?

ಬೇರಿನಿಂದ ಮರ ಹುಟ್ಟಬಹುದು
ಮರದಿಂದ ಬೇರು ಸಾಧ್ಯನಾ?

ಸಮುದ್ರದಲ್ಲಿ ಉಪ್ಪು ನಿಲ್ಲಬಹುದು
ಉಪ್ಪಿನಿಂದ ಸಮುದ್ರ ಸಾಧ್ಯನಾ?

ನೀನು ನೀನಾಗಿರಬಹುದು
ನೀನು ನಾನಾಗಿರಲು ಸಾಧ್ಯನಾ?

ಪ್ರೀತಿಯಿಂದ ದ್ವೇಷ ಗೆಲ್ಲಬಹುದು
ದ್ವೇಷದಿಂದ ಪ್ರೀತಿ ಗೆಲ್ಲಲು ಸಾಧ್ಯನಾ?

ನಾನಿನ್ನ ಧ್ಯಾನದೊಳಿರಲು

– ಅನಂತರಾಜ್
ದ್ವಿತೀಯ ಬಿ.ಎ.

ಮರೆಯಲಾರೆ ನಿನ್ನ.....ನಿನ್ನದೇ ನೆನಪು
ಹೃದಯ ಈ ಘಳಿಗೇಲಿ ನನ್ನದೆ
ಬದಲಾಗದೆಯೆ ಉಳಿಯುವುದೆ
ಕೇಳುತಿಹುದು ಮನಸು ಒಮ್ಮೊಮ್ಮೆ
ಕಳೆದೋದರೆ ನೀ ಮುಂದೇನಿದೆ...

ನೀ ದಾರಿಯ ಮರೆತೆ ಏನು
ಕೂತು ನಾನು ಕಾಯಲೇನು...

ನಾ ಹೇಗೆ ಮರೆಯಲಿ ನಿನ್ನ
ಹೃದಯ ಕದ್ದೊಯ್ದಿರುವೆ ನನ್ನ
ನಾ ಹೇಗೆ ಮರೆಯಲಿ ನಿನ್ನ

ಬೀಸೋ ಗಾಳಿಯು ಕೇಳುತಿದೆ
ನಿನ್ನ ಉಸಿರಿನ ಸ್ಪರ್ಶವ
ಕಾಣೋ ಕಣ್ಣು ಕೇಳುತಿದೆ
ನಿನ್ನ ರೂಪವ ಪ್ರತಿದಿನ

ಆಕೆ ಹೋದಳು ಹೊರಗೆ
ಹೃದಯ ಹೀಗೇಕೆ ಹೇಳುತಿದೆ

ನಾಳೆ ಎಂಬುದು ಏತಕೆ ನನಗೆ
ಇಂದೆ ಮುಗಿದೋಗಲಿ ಈ ಘಳಿಗೆ
ಒಡೆದೋಗಿರೋ ಹೃದಯವ ಜೋಡಿಸಲು
ನೀ ಬರುವೆಯ ಈಗಲೇ ಹೇಳಿ ಬಿಡು

ನಾ ಹೇಗೆ ಮರೆಯಲಿ ನಿನ್ನ
ನಾ ಹೇಗೆ ಮರೆಯಲಿ ನಿನ್ನ
ಹೃದಯ ಕದ್ದು ಒಯ್ದಿರುವೆ ನನ್ನ
ನಾ ಹೇಗೆ ಮರೆಯಲಿ ನಿನ್ನ.....

ನನ್ನೊಳಗಿನ ಗೆಳತಿಯರು

– ಶುಭಶ್ರೀ
ತೃತೀಯ ಬಿ.ಎ.

ಮನದಲ್ಲೇಕೋ ದುಃಖ ತುಂಬಿದ ಭಾವನೆ
ನನ್ನತನವ ಕಳೆದುಕೊಳ್ಳುತ್ತಿದ್ದೇನೋ ಏನೋ ಎಂಬ ಯಾತನೆ
ಹೀಗೆ ಯೋಚಿಸುತ್ತಾ ಕುಳಿತೆ
ಏನಾಯಿತೆಂದು
ಕಣ್ಣ ಮುಂದೆ ಬಂದಿತೆ
ಖಾಲಿ ತಪ್ಪುಗಳು ಅಂದು.
ಅದೇನೋ ಚಂಚಲ ಪರಿಸ್ಥಿತಿ
ಅದಾವ ತಪ್ಪು ಹುಡುಕಲು ಹೋದರೆ
ಅದು ಕೈಗೆ ಸಿಗದ ಮರೀಚಿಕೆ
ಒಳಮನ ಉಸುರಿದಂತಿತ್ತು
ನೀ ಏನ ಮಾಡುತ್ತಿರುವೆ
ನನ್ನತನವ ನೀ ತೊರೆದು
ಅದರ ಮೇಲೆ ಸವಾರಿ ಮಾಡುತ್ತಿರುವೆಯಾ ಎಂದು.
ಪರಿತಪಿಸಿದೆ, ಅಂತೆಯೇ
ಕೆಲಕಾಲ ಮೌನಿಯಾದೆ
ನನ್ನತನವ ಹುಡುಕಲಾರಂಭಿಸಿದೆ
ಸಿಕ್ಕಿತು ನನ್ನತನ
ನನ್ನಲ್ಲಿಯೇ ಅಳುತ್ತಾ ಕುಳಿತಿತ್ತು
ಅದರ ಕಂಬನಿಯೊರೆಸಿ
ಅದ ತಬ್ಬಲು ಹೋದೆ ನಾ
ಆಗ ನನಗೆ ನೆರವಿತ್ತರು
ನನ್ನ ಗೆಳತಿಯರು
ಇವರ ಸಹಾಯದಿಂದ ನನ್ನತನವ ನನ್ನಲ್ಲಿಯೇ
ಉಳಿಸಿಕೊಂಡೆ ಎಂಬೆ ಹೆಮ್ಮೇನ
ಅವರಿಗೆ ಸಲ್ಲಿಸುವೆ ನಾ.

ಪ್ರಸಾದೋ ನಿಷ್ಫಲೋ ಯಸ್ಯ ಕ್ರೋಧಶ್ಚಾಪಿ ನಿರರ್ಥಕಃ ।
ನ ತಂ ಭರ್ತಾರಮಿಚ್ಛಂತಿ ಪತಿಂ ಷಂಡಮಿವ ಸ್ತ್ರಿಯಃ ॥

ಯಾವನ ಪ್ರಸನ್ನತೆ ಮತ್ತು ಸಿಟ್ಟು ಇವೆರಡೂ ಕೂಡಾ ನಿಷ್ಫಲಗಳೋ ಜನರು ಅವನನ್ನು ಷಂಡನಾದ ಗಂಡನನ್ನು ಸ್ತ್ರೀಯರು ಎಂಬಂತೆ ಮೆಚ್ಚುವುದಿಲ್ಲ.

ಯಸ್ಮೈ ದೇವಾಃ ಪ್ರಯಚ್ಛಂತಿ ಪುರುಷಾಯ ಪರಾಭವಮ್ ।
ಬುದ್ಧಿಂ ತಸ್ಯಾಪಕರ್ಷಂತಿ ಸೋಽವಾಚೀನಾನಿ ಪಶ್ಯತಿ ॥

ದೇವತೆಗಳು ಯಾವಾತನಿಗೆ ಪರಾಜಯವನ್ನು ನೀಡಬೇಕೆಂದು ಅಪೇಕ್ಷಿಸುತ್ತಾರೋ ಅವರು ಆತನ ಬುದ್ಧಿಯನ್ನು ಎಳೆದುಕೊಂಡು ಬಿಡುತ್ತಾರೆ. ಆಗ ಆತ ಎಲ್ಲವನ್ನು ವಿಪರೀತವಾಗಿ ನೋಡುತ್ತಾನೆ.

ಜೀವನ

–ಎನ್. ಆರ್. ನಮಿತಾ ರಾವ್
ಪ್ರಥಮ ಬಿ.ಕಾಂ. 'ಬಿ–1'

ಜಗತ್ತಿನ ಜಂಜಾಟಕ್ಕೆ ಸಿಲುಕಿ
ನರಳುತ್ತಿದೆ ಮನ...
ಜೀವನದ ತೊಳಲಿಕೆಗೆ ಸಿಲುಕಿ
ಕೊರಗುತ್ತಿದೆ ಮನ...

ಕಷ್ಟ–ಸುಖಗಳಷ್ಟೇ ಅಂತೆ
ನಮ್ಮ ಬದುಕು...
ಆದರೆ ನಮ್ಮ ನಿಲುವಿನಲ್ಲಿ
ಅದೊಂದು ತೊಡಕು...

ಹಾಗಾದರೆ ನಮ್ಮ ಬದುಕು ಬರೀ
ಕಷ್ಟ ಸುಖಗಳೇ?
ಅಥವಾ...ಅದರಿಂದಾಚೆಗೆ
ಏನೋ ಇರಬಹುದೇ?

ಜೀವ ಹಾಗೂ ಜೀವನಕ್ಕೆ
ಇದೆ ದೊಡ್ಡ ವ್ಯತ್ಯಾಸ...
ಇದರ ಶೋಧನೆಯಲ್ಲಿಯೇ
ನಮಗಾಗುತ್ತದೆ ಆಯಾಸ...

ಆದರೂ ಅದರ ಬಗ್ಗೆ ನಮಗೆ
ಸಿಗುತ್ತದೆ ಸುಳಿವು...
ಅದನ್ನು ಹುಡುಕಿದರೂ ಇಲ್ಲ
ನಮಗೆ ಕೊನೆಯವರೆಗೂ ಉಳಿವು...

ನಮ್ಮ ಜೀವನ ಒಂದು
ಸ್ವಾರ್ಥದ ಹೋರಾಟ...
ಸಾವಿನ ವಿರುದ್ಧ ನಾವು ಮಾಡುವ
ನಿರಂತರ ಕಾದಾಟ...

ಎಲ್ಲರಿಗೂ ಗೊತ್ತು ನಮಗಿಲ್ಲ
ಈ ಕಾದಾಟದಲ್ಲಿ ಗೆಲುವು...
ಆದರೂ ನಮಗೆ ಅತ್ಯವಶ್ಯಕ
ನಮ್ಮ ಉಳಿವು...

ಇದರಲ್ಲಿಯೇ ಆಯಿತು
ನಮ್ಮ ಜೀವನ...
ಹೂ–ಹಣ್ಣು, ಪ್ರಾಣಿ–ಪಕ್ಷಿ
ಮರಗಿಡಗಳಿಲ್ಲದ ಕಾನನ...

ನಮ್ಮ ಜೀವನ ಎಂದೆಂದಿಗೂ
ನಮ್ಮ ಕೈಯಲ್ಲಿ...
ಮೌಲ್ಯಭರಿತ ಜೀವನವೇ ಬೇಕು
ಬಾಳು ಹಸನಾಗುವಲ್ಲಿ...

ಹೊಂದಾಣಿಕೆ ಇಲ್ಲದಿದ್ದರೆ ಬಾಳು
ಬೆಂಕಿಯಲ್ಲಿ ದಹನ...
ಎಲ್ಲರೊಂದಿಗೆ ಹೊಂದಿಕೊಂಡು ಬದುಕಿದರೆ
ಸಮರಸವೇ ಜೀವನ...

ನನ್ನ ತಂದೆ.....ನನ್ನ ಹೆಮ್ಮೆ

– ಎನ್. ಆರ್. ನಮಿತಾ ರಾವ್
ಪ್ರಥಮ ಬಿ.ಕಾಂ. 'ಬಿ–1'

ತಂದೆ ಮಕ್ಕಳಿಂದ ಬಯಸುವುದೇನು?
ಬರೀ ಒಂದು ಮುಷ್ಠಿ ಪ್ರೀತಿ...
ಅದು ಮಕ್ಕಳಿಂದ ದೊರಕದಿದ್ದರೂ
ಬದಲಾಗುವುದಿಲ್ಲ ಅವರ ರೀತಿ...

ನೀವು ಎಂದೂ ನನಗೆ ಕೇಳಿಲ್ಲ
"ಮಗಳೇ ನನಗೇನು ತಂದೆ?"
ಆದರೆ ನೀ ಮನೆಗೆ ಬರುವ ಮುನ್ನ
ಎಲ್ಲವನ್ನೂ ತೆಗೆದುಕೊಂಡು ಬಂದೆ...

ತಾಯಿ ಬೇರಿನಂತಿದ್ದರೆ
ನೀವು ಕೊಂಬೆ...
ಆಕೆ ಹುಟ್ಟಿಸಿದಾಕೆಯಾಗಿರಲು
ನಿಮ್ಮ ಪೋಷಣೆಯಲ್ಲಿ ನಾನಾದೆ ಗೊಂಬೆ...

ನಿಮ್ಮ ಬೆವರಿನ ಪ್ರತಿ ಹನಿಯಲ್ಲಿಯೂ
ಅದೆಷ್ಟು ಶ್ರಮವಿದೆ?
ಈ ನಿಮ್ಮ ಕಠಿಣ ಶ್ರಮಕ್ಕೆ
ಯಾರಾದರೂ ಬೆಲೆಕಟ್ಟಲಾಗುವುದೇ?

ನೀವು ದುಡಿದ ಒಂದು ರೂಪಾಯಿಯ
ಹಿಂದೆಯೂ, ಅದೆಷ್ಟು ಬೆವರುಹನಿಗಳಿವೆ?
ಎಂದಿಗೂ ನಿಮ್ಮ ಶ್ರಮವನ್ನು
ಹಾಗೂ ನಿಮ್ಮ ಕಷ್ಟವನ್ನು ನಾನರಿಯುವೆ...

ನಮಗೇನೇನು ಬೇಕು ಎಂದು ತಿಳಿದು
ಅದನ್ನು ಮೊದಲೇ ಪೂರೈಸುವಿರಿ ನೀವು...
ನಮಗೆಂದಿಗೂ ಬೆಲ್ಲ ದೊರೆಯಲೆಂದು
ನೀವು ತಿನ್ನುತ್ತಿದ್ದೀರಿ ಕಹಿ ಬೇವು...

ಅಪ್ಪ, ನಾನರಿಯಬಲ್ಲೆ ನಿಮ್ಮ
ಮನದಾಳದ ನೋವುಗಳನ್ನು...
ಏಕೆಂದರೆ ನಾ ನಿಮ್ಮ ಮಗಳು
ಅರಿಯುತ್ತೇನೆ ಆದಷ್ಟನ್ನು...

ನಮಗೆಂದೂ ಬೇಕಾಗಿರುವುದು
ಕೇವಲ ನಿಮ್ಮ ಪ್ರೀತಿ ಮತ್ತು ಸಂತೋಷ...
ಬೇರೇನೂ ಬೇಕಿಲ್ಲ ಅಪ್ಪಾ,
ನಿಮ್ಮ ಖುಷಿಯೇ ನಮಗೆ ಹರುಷ...

ದೇವರ ಅನನ್ಯ ಸೃಷ್ಟಿ

–ಕೆ. ಜಿ. ಪ್ರತಿಮಾ ಆಚಾರ್ಯಾ
ಪ್ರಥಮ ಬಿ.ಕಾಂ. 'ಬಿ–1'

ಮೃದು ಮಧುರವಾದ ಬಿಳಿ ಲಿಲ್ಲಿ ಹೂಗಳಿಂದ
ಮೃದುವಾದ ತ್ವಚೆಯ ರಚಿಸಿದ ಪರಮಾತ್ಮ
ನಾಚಿಕೆ ಮುಳ್ಳಿನ ಮೊಗ್ಗುಗಳನ್ನು ಕಣ್ಣುಗಳಿಗೆ ಆರಿಸಿದ
ನಿನ್ನ ಮಗುವಿನ ಗದ್ದವ ಮಾಡಿದ.

ಪ್ರಬಲ ಕೆಂಪಿನ ಟ್ಯುಲಿಪ್‌ಗಳು
ಎಂದೂ ಬಾಡದ ಅವುಗಳನ್ನು
ಮೃದು ಸುಂದರ ಪುಟ್ಟ ಬಾಯಿಯ
ಎಂದೆಂದೂ ರಚಿಸಿದಂತೆ ಸೃಷ್ಟಿಸಿದ.

ಸುಂದರ ಗುಲಾಬಿ ಬಣ್ಣದ ಮೊಗ್ಗನು
ಆರಿಸಿದನಾತ ನಿನ್ನ ಗಲ್ಲದ ಗುಳಿಗೆ
ಅರಳಲು ಅಣತಿಯನಿತ್ತನು ಅದಕೆ
ಮುಂಜಾನೆಯ ಸೌಂದರ್ಯದ ಗಣಿಗಳ.

ತನ್ನ ಮಾಂತ್ರಿಕ ಬೆರಳುಗಳಿಂದಾರಿಸಿ
ಮಡಚಿ ಆಕೃತಿಯ ನೀಡಿ
ಶಾಶ್ವತವಾಗಿ ಅಂಟಿಸಿದನವ ಭದ್ರದಿ ಕಿವಿಗಳಾದವು ನಿನಗೆ
ಉಷಃಕಾಲದ ಚಿನ್ನದ ಗರಿಗಳು.

ಆದವು ನಿನ್ನಯ ಕೂದಲು
ಹೂಗಳ ಪರಾಗವ ಆರಿಸಿತಂದು
ಚಿಮುಕಿಸಿದನವ ಮುಂಜಾಗ್ರತೆಯಿಂದಲಿ
ಪುಟ್ಟ ಕೈಕಾಲ ಬೆರಳುಗಳವು ನಿನ್ನವು

ಅತ್ಯಮೂಲ್ಯವು ನಿನಗೂ ನನಗೂ
ಡೈಸಿ ಹೂವಿನಿಂದ ಮಾಡಿದನವನು
ನಿನ್ನ ಮೂಗಾಯಿತು ಮಂಜಿನ ಹನಿಯಿಂದ
ಈ ಪೃಥ್ವಿ ಅದರಲ್ಲಿರುವುದೆಲ್ಲವ.

ಸೃಷ್ಟಿಸಿದವನು ನಮಗಾಗಿ
ಮಗುವದು 'ದೇವರ ಅನನ್ಯಕೃತಿ'
ಪ್ರೀತಿಯಿಂದ ಎರವಲು ಕೊಟ್ಟನು ನಮಗೆ.

ಸಂತಃ ಕುರ್ವಂತಿ ಯತ್ನೇನ ಧರ್ಮಸ್ಯಾರ್ಥೇ ಧನಾರ್ಜನಮ್ ।
ಧರ್ಮಾಚಾರವಿಹೀನಾನಾಂ ದ್ರವಿಣಂ ಮಲಸಂಚಯಃ ॥

ಸಜ್ಜನರು ತುಂಬಾ ಪ್ರಯತ್ನದಿಂದ ಧರ್ಮಕಾರ್ಯಕ್ಕೋಸ್ಕರ ದುಡ್ಡನ್ನು ಸಂಗ್ರಹಿಸುತ್ತಾರೆ. ಯಾರಲ್ಲಿ ಧರ್ಮವಿಲ್ಲವೋ, ಆಚಾರವೂ ಇಲ್ಲವೋ ಅವರಲ್ಲಿ ದುಡ್ಡೆಂದರೆ ಕಕ್ಕಸಿನ ಸಂಗ್ರಹವೆಂದು ತಿಳಿಯಬೇಕು.

ಜೀವನ ಪಯಣ

– ಸರ್ವೋತ್ತಮ್ ಶೆಣೈ ಬಿ.
ದ್ವಿತೀಯ ಬಿ.ಕಾಂ. 'ಬಿ–1'

ಜಗವೆಂಬ ಬಂಡಿಯಲಿ...
ಬದುಕೆಂಬ ಪಯಣದಲಿ...
ನಿನ್ನೆಯೆಂಬ ನೆನಪಿನಲಿ...
ನಾಳೆಯೆಂಬ ಕನಸಿನಲಿ...
ಇಂದಿನ ತೊಳಲಾಟದಲಿ...
ಟೀಕಿಸುವವರ ಕೊಂಕು ಮಾತಿನಲಿ...
ಪ್ರೀತಿಸುವವರ ಸಾಂತ್ವನದಲಿ...
ಸಾಗಲೇಬೇಕು ಈ ದಾರಿಯಲಿ...

ಸಾಗಲೇಬೇಕು ಈ ದಾರಿಯಲಿ...
ಸಾಗುವ ಭರದಲ್ಲಿ ನಮ್ಮ ಕನಸುಗಳು
ಅಳಿಸದಿರಲಿ...

ಬಾಳು ಸಾಗಲಿ ಖುಷಿ ಖುಷಿಯಲಿ...
ಕನಸಿನ ದೋಣಿ ದಡವನ್ನು ಸೇರಲಿ...
ಅದರ ದಡವನ್ನು ಸೇರಲಿ...

ನೀನು ಹೋದ ನಂತರ

– ರಚಿತಾ
ಪ್ರಥಮ ಬಿ.ಕಾಂ. 'ಎ'

ಯಾವತ್ತೂ ನನ್ನದೇ ಅಂದುಕೊಂಡೆ
ಕನಸುಗಳನ್ನು ದುರ್ಬೀನು ಹಾಕಿ
ಹುಡುಕಿ ಸೋತಿದ್ದೀನಿ.
ನನ್ನ ತೋಳುಗಳಿಗೆ
ತಬ್ಬಿಕೊಂಡರೇ ಮಹಾಪಾಪ ಅನ್ನುವ
ಸುಳ್ಳನ್ನು ಪ್ರತಿನಿತ್ಯ ಹೇಳಿಕೊಡುತ್ತಿದ್ದೇನೆ.
ಕಣ್ಣುಗಳಲ್ಲಿರುವ ಕೆಲವು
ಅಪರೂಪದ ಚಿತ್ರಗಳನ್ನು
ಅಳಿಸಿಬಿಡುವಂತೆ ದೇವರಲ್ಲಿ
ಬೇಡಿಕೊಂಡಿದ್ದಾಗಿದೆ.
ಉಕ್ಕಿ ಬರುವ ಕೆಲವು
ಭಾವನೆಗಳಿಗೆ ನನ್ನ ಪ್ರೀತಿಯ
ಅಸಹಾಯಕತೆಯ ಕತೆ ಹೇಳಿದ್ದೀನಿ.
ಮತ್ತೆ ಮತ್ತೆ ಕಾಡುವ
ಅಪರೂಪದ ಕನಸುಗಳಿಗೆ
ಘಾಸಿಗೊಂಡ ಹಳೆಯ ಕನಸುಗಳ
ಕುರಿತು ಪುಟಗಟ್ಟಲೆ ವರದಿ ಮಾಡಿದ್ದೇನೆ.
ನೀನಿಲ್ಲದೇ ಪುಟ್ಟ ಪುಟ್ಟ ಹೆಜ್ಜೆಯಿಡುತ್ತಿರುವ
ನನ್ನ ಕಾಲುಗಳ ಆತ್ಮವಿಶ್ವಾಸಕ್ಕೆ ಒಂದು ಮುತ್ತಿಟ್ಟಿದ್ದೇನೆ.
ಮತ್ತೆ ಕೊನೆಯದಾಗಿ ಹೃದಯಕ್ಕೆ ಸಲ್ಲಿಸಿದ
ಮನವಿ ಪತ್ರ ತಿರಸ್ಕೃತಗೊಂಡ
ಪರಿಯ ನೆನೆದು ಸೋತು ಸುಣ್ಣವಾಗಿದ್ದೇನೆ.

ಉಳುವಾತನ ಉಳಿವಿನಲಿ...ಈ ಕ್ಷಣ...

('ಚಿತ್ರ' ಕವನ ಸ್ಪರ್ಧೆಯಲ್ಲಿ ಮೊದಲ ಬಹುಮಾನಿತ ಕವನ)

– ಅಕ್ಷತಾ ಹೆಗ್ಡೆ
ದ್ವಿತೀಯ ಬಿ.ಕಾಂ. 'ಬಿ–I'

ಅರಳದ ಅರಲ್ ಭೃಂಗವ ಕಾಯಲು
ಹಸಿರೆಲೆಯ ಹಂಬಲ ಬಿಂದು ಇಬ್ಬನಿಯೊಳು
ಮೂಡಣ ಕೆಂಪೆಸಗಿನ ಹೊತ್ತು; ಬಂಡಿಗೆರಡೆತ್ತುಗಳ ಹೊತ್ತು
ದಾರಿಗೂಡಿದೆ ನೀನೆ ನಾಯಕ
ಕೆಸರ ಕೊಳದಲಿ ನೀ ನೇಗಿಲಿನ ನಾವಿಕ...

ಹಸಿರ ಹೊನಲೇ ಅವನ ದೀವಿಗೆ
ಬಿತ್ತಿಹನು ಬೆಳೆದು ಬದುಕ ಬವಣೆಗೆ
ತುಂಬಿ ಹರಿವ ಸರಿತರಾಗಕೆ
ಬರುವ ಭತ್ತ....ಬೆಳೆಯ ಹೊನಲಿಗೆ...

ವಸುಧಾವಲಯ ನೀನಾಗೆಯಾ?
ಸಾಕ್ಷಿ, ಬಿಸಿಲಲಿ ಬಸೆದ ನೆತ್ತರಿಗೆ?
ಕೊಳೆಯ ದಿರಿಸಿನ ಬೆವರ ಕಂಪಿಗೆ?
ದುಡಿದ ಕೈಗಳ ಪೂರ್ಣ ಸೋಲಿಗೆ?
ಸೋಲಿನ ದಿವಸದಿ ಕಣ್ ತುಂಬಿದ ಬಿಂದುವಿಗೆ...

ಕ್ಷೀಣವಾಯಿತು ಸೋನೆಯಬ್ಬರ
ನಾಂದಿಯಾಯಿತು ಆತ್ಮಹತ್ಯೆ ಬರ್ಬರ
ಅನ್ನದಾತನಿಗಿದೋ ನೇಣಿನ ಪಾಶ
ಆತ್ಮಹತ್ಯೆಯೇ ಪರಿಹಾರದ ವಿಷ...
ಕರತೆರುವ ಪುಣ್ಯದ ಪಾಣಿಗೆ
ಕೈಗೂಡಿ ಕಟ್ಟುವ ಜೀವಮಾಳಿಗೆ...

ಅಬ್ಬರಿಸಿದ ಸೋನೆ ಕಣ್ಣಂಚ ದಾಟಿತು ಹನಿ,
ಬರಡಾದ ಭೂಮಿಯೋ ಸವಿಯಿಲ್ಲದ ಹೂರಣ
ಉಳುವಾತ ನನಸನ ತೇರೆಳದರೆ ಸಾಕು, ಪೈರು ಸಾಲುಸಾಲಾಗಿ
ಇಲ್ಲವಾದರೆ ವಿಧಿಯೆ! ಜೀವನವಿದು
ಉಷೆಯಿಲ್ಲದೆ ಕಳೆದ ಹಗಲಿನಂತೆ...

ಮಣ್ಣ ಅಣುಕಣದಲ್ಲಿ ನಿನ್ನದೇ ಗುರುತು
ಎರಚಿ ಕಾಳನು ಗೆದ್ದೆ ಫಸಲ ಕಣಜ
ಜನತೆ ತೋಡಲಿ ಈಜುವ ರಾಜಹಂಸವೇ ರೈತ
ನೋಡು ಜಗವೆ! ಇವ ಉಳುವಾಯೋಗಿ ಜಗನ್ಮಿತ್ರ
ನಿನ್ನ ವೈಭವದ ಗುಣಗಾನವಿದೋ ದಿಕ್ ದಿಗಂತದಾಚೆ...!

ತವರ ಹೊಲದಲ್ಲಿ ಜೀವ ತೇದು
ಬಸಿದ ಬೆವರಿನ ಭರವಸೆಯ ನೋಟ
ಕನಸುಗಳಲೆ ಬಡಿಯಿತೆ ಉಳುಮೆ ಸಾಗರದಲಿ
ಬೆಳಕ ಬೆಳೆಯಲ್ಲಿ ನೀನು...; ಹಸಿವಿಲ್ಲದ ಬಾಳಲ್ಲಿ ನಾವು
ಆ ಅಲೆಗಳಬ್ಬರದ ಸದ್ದು ನೀನಾದೆ ರೈತ
ಹೃದಯ ರಿಂಗಣದ ದನಿಯಾದೆ ನೀ ಅನ್ನದಾತ...

ಮಾತೃ ಹೃದಯದ ವಾತ್ಸಲ್ಯ.....

(ಆಶುಕವನ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಕವನ)

– ದಿವ್ಯಾ
ದ್ವಿತೀಯ ಎಂ.ಕಾಂ.

ತನ್ನ ಒಡಲ ಕುಡಿಗೆ ಜನ್ಮ ನೀಡೋ ತಾಯಿ
ಯಾರ ಕೇಳರಿಯದ ಪ್ರೀತಿ ಕೊಟ್ಟ ತಾಯಿ
ಪ್ರಪಂಚದ ಅರಿವೆ ಇಲ್ಲದ ಈ ಕಂದಮ್ಮನಿಗೆ
ಜೀವವಾಗಿ, ಜೀವ ಜೊತೆಯಾಗಿ
ಸಾಕಿ ಸಲಹಿದ ವಾತ್ಸಲ್ಯಮೂರ್ತಿ
ತೊದಲು ನುಡಿ ಕಲಿಸಿದ ಪ್ರೀತಿಯ ಧಾತ್ರಿ.

ತಾಯ ಮನದಾ ಮಾತು
ತಾನಾಗಿ ತಾನ್ ತಿಳಿಯಲು
ಕಂದಮ್ಮ ತಾನೆ ತವಕಿಸಿತು
ಇರುವುದೆಲ್ಲವ ಬಿಟ್ಟು
ತಾಯ ಪ್ರೀತಿಯ ಕಡೆಗೆ
ಎನ್ನ ಮನ ಹಾತೊರೆಯಿತೋ...
ಆಕೆಯ, ಮಮತೆಯಲಿ ತಾನ್ ಜಾರಿತೋ...

ಕನಸ ಕಾಣುವ ಕಣ್ಣು
ಕಂಬನಿಯ ಸುರಿಸಿರಲು
ತಾಯ ಮನದಲಿ ಸೇರಿತು
ಮಾತು ಮೌನವ ಬಿಟ್ಟು
ಮನಸ ಸೇರಲು ತಾನು...
ತಾಯಿಯ ಮಮತೆ ಅದರಲಿ ಕಂಡಿತು
ಮಾತು ನನ್ನಲಿ ಅರಳಿತು...

ಮಿಡಿದ ಎನ್ನ ಮನದಾ ಮಾತು
ಮುತ್ತಾಗಿ ಹೊರಹೊಮ್ಮಿ
ಮಾಣಿಕ್ಯ ತಾನಾಯಿತೂ...
ತಾಯ ವಾತ್ಸಲ್ಯದ ಸೆಲೆಯು
ಮಲ್ಲಿಗೆಯ ಮೊಗ್ಗಾಗಿ
ಮುದವ ನೀಡಲು ಬಯಸಿತು

ಎನ್ನ ಮನಕೆ ಸಂತಸ ತಾ ನೀಡಿತು.
ಮಾತೃ ಹೃದಯದಾ ಹೂವಿನೆಸಳು ಮೌನ
ಗಂಧ–ಕಸ್ತೂರಿಯದು ಹೂವಿನೆಸಳು ಚಿನ್ನಾ
ಅಮ್ಮನೆದೆ ಸುರಿವ ಅಮೃತ ಧಾರೆ
ನಿತ್ಯ ನಿರಂತರೆಯ ನಾದಲೀಲೆ.

ಮುಗಿದರೂ ಮುಗಿಯದೆ, ಮುಗಿಸಲಾಗದೆ
ಮುಗಿಲ ಮುಟ್ಟುತಿದೆ ಎನ್ನ ಮಾತು
ಮುದುಡದೆ ಸದಾ ಮೊಗ್ಗರಳಿ ಹೂವಾಗುವ
ಮೊಗ್ಗಿನ ಮನಸ್ಸಿನಂತಿರುವ ತಾಯಿಯ ವಾತ್ಸಲ್ಯಕ್ಕೆ
ಆಕೆಯ ಹೃದಯ ವೈಶಾಲ್ಯತೆಗೆ ಎನ್ನಮನ ಸೋತು...
ಎನ್ನ ಮನ ಸೋತು...

ಚುಟುಕುಕವಿತೆಗಳು

ಚುಟುಕುಕವನ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಕವನಗಳು

– ಮಧುರಾ
ತೃತೀಯ ಬಿ.ಎಸ್ಸಿ.

ಕನಸುಗಾರರು

ಹಗಲಲ್ಲಿ ಚೀಲ ಹೊತ್ತ ಎಳೆಯರು
ಆಯುವರು ಚಿಂದಿ ರದ್ದಿ ಪೇಪರು
ವಿದ್ಯಾಸೌಲಭ್ಯಗಳಿಂದ ವಂಚಿತ ಅನಾಥರು
ಕನಸ ನನಸುಗೊಳಿಸಲೆತ್ನಿಸುವರು
ಅವರೇ ನೀಜವಾದ ಹೋರಾಟಗಾರರು.

ಅಸ್ತಿತ್ವ

ಹುಡುಕಿದೆ ನಿನ್ನ ಅಸ್ತಿತ್ವವ ಅಲ್ಲಿ ಇಲ್ಲಿ
ವಿಚಾರಿಸಿದೆ ನಿನ್ನ ಬಗೆಗೆ ಕಂಡಕಂಡವರಲ್ಲಿ
ಕೊನೆಗೊಮ್ಮೆ ತಿಳಿಯಿತು ಓ ಭಗವಂತಾ
ನೀನಿರುವೆ ನನ್ನ ಹೃದಯದ ಗುಡಿಯಲ್ಲಿ.

ವಿದಾಯ

ಓ ಗೆಳತಿ
ವ್ಯಗ್ರವಾಗಿದೆ ಮನಸು ಯಾಕೋ ಇಂದು
ನಿನ್ನಿಂದ ದೂರ ಹೋಗುವುದ ನೆನೆದು
ನಿನ್ನಯ ನೆನಪುಗಳ ಭದ್ರ ಪುಸ್ತಕದಿ
ನನ್ನ ಅಚ್ಚಳಿಸು ಎಂಬ ಆಶೆ
ಅರಿತಿರುವೆ ನಾನು ನಿನ್ನ ಹೃದಯದಲ್ಲಿದೆ
ನನಗಾಗಿ ಶಾಶ್ವತ ಸ್ಥಾನ.

ಎಲ್ಲರಂತಲ್ಲ ನನ್ನ ಅಪ್ಪ

ನೋಡಲು ಗುಲಾಬಿಯ ಮುಳ್ಳಿನಂತೆ ಕಠೋರ
ಹೃದಯ ಗುಲಾಬಿಯ ಪಕಳಿಯಂತೆ ಹಗುರ
ಜೀವನದಲ್ಲಿ ಹೊಡೆತ ತಿಂದು ಆಗಿರುವರು ಕಠಿಣ
ಮಕ್ಕಳಿಗಾಗಿ ಹೋರಾಡುವರು ಪ್ರತಿ ಕ್ಷಣ.

ಆತಿಥ್ಯ

ಮನೆಗೆ ಬಂದರು ಅತಿಥಿಗಳು
ಸತ್ಕಾರವೋ ಸತ್ಕಾರ, ಉಪಚಾರವೋ ಉಪಚಾರ
ಊಟಕ್ಕೆ ಕುಳಿತ ಅವರಿಗೆ
ಬೇಳೆ ಹಾಕದ ಖಾಲಿ ಸಾರು.

ದೈವಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಮ್ ।
ಸಮುದ್ರಮಥಾನಾಲ್ಲೇಭೇ ಹರಿರ್ಲಕ್ಷ್ಮೀಂ ಹರೋ ವಿಷಮ್ ॥

ಎಲ್ಲಾ ಕಡೆಯೂ ಕೂಡಾ ವಿದ್ಯೆ ಫಲಿಸುವುದಿಲ್ಲ. ಪರಾಕ್ರಮವೂ ಫಲಿಸುವುದಿಲ್ಲ. ನಮ್ಮ ನಮ್ಮ ಪೂರ್ವಪುಣ್ಯ ಮಾತ್ರ ಫಲಿಸುವುದು ಯಾಕೆಂದರೆ ಸಮುದ್ರಮಥನದಿಂದ ಹರಿಯು ಲಕ್ಷ್ಮಿಯನ್ನು ಪಡೆದರೆ ಹರನು ವಿಷವನ್ನು ಪಡೆದ.

ಚುಟುಕಗಳು

– ಗಣೇಶ್ ಗೌಡ
ದ್ವಿತೀಯ ಎಂ.ಕಾಂ.

ಕಾದಿರುವೆ ನಿನಗಾಗಿ

ಸಾಕಾಗಿ ಹೋಗಿದೆ ಮನದಲ್ಲೇ ನೊಂದು
ಕಣ್ಣಂಚಲಿ ನಿಂತಿದೆ ಕಣ್ಣೀರ ಬಿಂದು
ಹರಿಸಲು ಕಾದಿದೆ ನನ್ನ ಕಂಗಳು ಈಗ
ವರಿಸುದಾದರೆ ನೀ ಬರಬೇಕು ಬೇಗ.

ಪ್ರೀತಿಸುವೆಯಾ

ನಿನ್ನ ಹೃದಯವನು ಗೆಲ್ಲುವ ಗುರಿಯಲ್ಲಿ
ಬರೆದೆನು ಚಿತ್ತಾರ ನವಿಲಿನ ಗರಿಯಲ್ಲಿ
ಮನವೇಕೋ ಸಾಯುತಿದೆ ನೋವಿನಲಿ ತತ್ತರಿಸಿ
ಖುಷಿಯ ನೀಡುವೆಯಾ ನೀ ಒಪ್ಪಿಗೆಯ ಉತ್ತರಿಸಿ.

ನೀನೆ ಚೆಲುವೆ

ಜಗದಲ್ಲಿ ಇಹರಮ್ಮ ಚೆಲುವೆಯರು ಕೋಟಿ
ಬೆಳದಿಂಗಳೆ ನಗೆಯುವಳೆ ನಿನಗ್ಯಾರು ಸಾಟಿ
ದೃಷ್ಟಿಯಾಗುವಂತ ರೂಪ ಯಾರು ತಂದೋರು
ಈ ಸೃಷ್ಟಿಯಲ್ಲಿ ನೀನು ಒಬ್ಬಳೆ ನಂದು ಅನ್ನೋಳು...

ನಾಡು–ನುಡಿ

ನಮ್ಮವರೆ ಮರೆತಿಹರು ಕನ್ನಡದ ಒಲವು
ಇದರಿಂದ ಆಗುತಿದೆ ಪರಭಾಷಾ ಗೆಲುವು
ಕಲಿಯಲು ಬೇಕಿಹುದು ಭಾಷೆಗಳು ಹಲವು
ಕನ್ನಡವು ಪ್ರಜ್ವಲಿಸೆ ತೊಡಬೇಕು ಛಲವು
ಸಿಗುವುದು ಕೊನೆಯಲ್ಲಿ ಮಾತೃನುಡಿಯ ಫಲವು.

ನಾಧರ್ಮಶ್ಚರಿತೋ ಲೋಕೇ ಸದ್ಯಃ ಫಲತಿ ಗೌರಿವ ।
ಶನೈರಾವರ್ತ್ಯಮಾನೋ ಹಿ ಕರ್ತುರ್ಮೂಲಾನಿ ಕೃಂತತಿ ॥

ದುಷ್ಕರ್ಮವು ಮಾಡಲ್ಪಟ್ಟರೆ ಅದು ಹುಲ್ಲನ್ನು ತಿಂದ ಹಸುವು ಹಾಲೆಂಬಂತೆ ಕೂಡಲೇ ಫಲಿಸಬೇಕೆಂದಿಲ್ಲ. ಅದು ನಿಧಾನ ನಿಧಾನವಾಗಿ ಮರುಕಳಿಸುತ್ತಾ ದುಷ್ಕರ್ಮಮಾಡುವ ವ್ಯಕ್ತಿಯ ಬುಡವನ್ನೆ ಕತ್ತರಿಸುತ್ತದೆ

ಮಾರ್ಜಾಲಭಕ್ಷಿತೇ ದುಃಖಂ ಯಾದೃಶಂ ಗೃಹಕುಕ್ಕುಟೇ ।
ನ ತಾದೃಙ್ ಮಮತಾಶೂನ್ಯೇ ಕಲವಿಂಕೇऽಥ ಮೂಷಕೇ ॥

ಮನೆಯಲ್ಲಿ ಸಾಕಿದ ಕೋಳಿಯನ್ನು ಬೆಕ್ಕು ತಿಂದರೆ ಎಂತಹ ಸಂಕಟವಾಗುತ್ತದೋ ಅಂತಹ ಸಂಕಟ ಅದೇ ಬೆಕ್ಕು ಗುಬ್ಬಚ್ಚಿಯನ್ನೋ, ಇಲಿಯನ್ನೋ ತಿಂದರೆ ಉಂಟಾಗುವುದಿಲ್ಲ. ಏಕೆ? – ಏಕೆಂದರೆ ಅದರಲ್ಲಿ ಯಾವುದೇ ತರನಾದ ಮಮತೆಯಿಲ್ಲ.

ಹನಿಗವನಗಳು

– ಆಕಾಶ್ ಎಸ್. ಕೈಕಿಣಿ
ದ್ವಿತೀಯ ಬಿ.ಕಾಂ. 'ಬಿ–1'

ಪುಟ್ಟ–ಪುಟ್ಟಿ

ಆಚೆಮನೆಯ ಪುಟ್ಟ
ಈಚೆಮನೆಯ ಪುಟ್ಟಿ
ಪುಟ್ಟ–ಪುಟ್ಟಿಯ ಸೇರಿಕೊಂಡು
ಮಾಡಿದವರೊಂದು ಬುಟ್ಟಿ.

ಸ್ವಚ್ಛತೆ

ಎಲ್ಲೆಲ್ಲೂ ಸ್ವಚ್ಛತೆ...
ಶಾಸಕರು, ಜನರೊಡಗೂಡಿ
ರಸ್ತೆಯ ಬದಿಯಲ್ಲಿ ಸ್ವಚ್ಛತೆಯ ಪುರಾಣ...
ಮನೆಯ ಮೂಲೆ ಮೂಲೆಯಲ್ಲಿ
ಕಸದ ಪುರಾಣ...

ಮೊಬೈಲ್

ಮೊಬೈಲ್ ಬಂತು ಮನೆಯಲ್ಲಿ
ಪಸರಿಸಿತು ಆ್ಯಪ್‌ನ ಸುರಿಮಳೆ
ಇದರ ಸುರಿಮಳೆಯಿಂದಾಗಿ
ನವಯುವಕರು–ಯುವತಿಯರು ಮಕ್ಕಳು
ಬಿದ್ದರು ಕೆಸರಿನ ಹೊಂಡಕ್ಕೆ...

ಆಗ–ಈಗ

ಮಕ್ಕಳು ಬಂದರು ಶಾಲೆಗೆ
ಶಿಕ್ಷಣವನ್ನು ಕಲಿತರು, ಶಿಕ್ಷಕ–ಶಿಕ್ಷಕಿ
ಗುರುಗಳು ಏನೇ ಹೇಳಿದರೂ, ಅತ್ತರೂ
ಈಗ ಮಕ್ಕಳು ಬಂದರು ಶಾಲೆಗೆ
ಗುರುಗಳು ಬೈದರೆ ಪೋಲೀಸರು
ಬಂದರೂ ಮನೆಯ ಬಾಗಿಲಿಗೆ

ಕನ್ನಡಿ

ಕನ್ನಡಿ ಬಂತು ಕನ್ನಡಿ
ಅಂದವ ನೋಡಲು ಉಪಯೋಗಿಸಿದರು
ನವಯುಗದಲ್ಲಿ ಕನ್ನಡಿ ತೊರೆದು
ಮೊಬೈಲ್ ಕ್ಯಾಮೆರಾವನು ಬಳಸಿದರು...

ಪಾನಕ

ಆಚೆ ಮನೆಯ ಕನಕ
ಈಚೆ ಮನೆಯ ಬೆನಕ
ಕನಕ–ಬೆನಕ ಸೇರಿಕೊಂಡು
ಮಾಡಿದರು ಪಾನಕ.

ಸ್ವಪ್ನಗೀತೆ

– ಅನಂತರಾಜ್
ದ್ವಿತೀಯ ಬಿ.ಎ.

ಸ್ವಪ್ನದ ಲೋಕದಿ
ಮುಳುಗಿದ ಪ್ರೇಮಿ
ಬಾಗಿಲ ತಟ್ಟಲು
ಮರೆಯದಿರು ಓ ಚಿನ್ನ...

ನಿನ್ನ ಪ್ರೇಮದ ಆಚರಣೆಯಲಿ
ಮುಳುಗಿದೆ ನಾನಿಂದು
ಬರಿ ಸ್ನೇಹವ ಬಯಸುವ
ನೀ ಬಂದು
ಪ್ರೀತಿಯ ಪಡೆವೆನೆಂದು.

ಹೃದಯವು ಬೇಡಿದೆ
ಪ್ರೀತಿಯು ಬೇಕಿದೆ
ಮನಸಿನ ತಲ್ಲಣ
ಗಗನವ ಏರಿದೆ...

ಸ್ವಪ್ನದಿ ಕಾಡುವ ನೀನು
ದೇವತೆಗೆ ಸಾಟಿ
ಪ್ರೇಮದ ಜಪದಲಿ
ಮುಳಿಗಿದ ನಾನು
...ಮರೆತೆನು ಜಗವನ್ನು....

ನಹಿ ಪಾಪಕೃತಂ ಕರ್ಮ ಸದ್ಯಃ ಪಚತಿ ಕ್ಷೀರವತ್ ।
ನಿಗೂಢಂ ದಹತ್ಯೇನಂ ಭಸ್ಮಚ್ಛನ್ನಾಗ್ನಿವಚ್ಚಿರಮ್ ॥

ಹಿಂದೆ ಮಾಡಿದ ಪಾಪದ ಕೆಲಸವು ಹಾಲಿನ ಹಾಗೆ ಕೂಡಲೆ ಫಲ ಕೊಡುವುದಿಲ್ಲ. ಅದು ಆತನನ್ನು ಬೂದಿಯಿಂದ ಮುಚ್ಚಿದ ಬೆಂಕಿಯಂತೆ ಒಳಗೊಂದೊಳಗೆ ತುಂಬಾ ಕಾಲ ಸುಡುತ್ತಿರುತ್ತದೆ.

ಪಾತ್ರಾಪತ್ರವಿವೇಕೋಽಸ್ತಿ ಧೇನುಪನ್ನಗಯೋರಿವ ।
ತೃಣಾತ್ ಸಂಜಾಯತೇ ಕ್ಷೀರಂ ಕ್ಷೀರಾತ್ ಸಂಜಾಯತೇ ವಿಷಮ್ ॥

ಇದು ಹಸು, ಇದು ಸರ್ಪ ಎಂಬುದಾಗಿ ಪಾತ್ರ–ಅಪಾತ್ರಗಳ ವಿವೇಚನೆ ಇರಬೇಕು. ಅವುಗಳು ಸಮಾನಗಳಲ್ಲ. ಏಕೆಂದರೆ ಹಸುವು ಹುಲ್ಲನ್ನು ತಿಂದು ಹಾಲನ್ನು ಕೊಡುತ್ತದೆ. ಅದರೆ ಸರ್ಪ ಹಾಲನ್ನು ಕುಡಿದು ವಿಷವನ್ನು ಕೊಡುತ್ತದೆ.

ಗುಣೇಷು ಕ್ರಿಯತಾಂ ಯತ್ನಃ ಕಿಮಾಟೋಪೈಃ ಪ್ರಯೋಜನಮ್ ।
ವಿಕ್ರೀಯಂತೇ ನ ಘಂಟಾಭಿರ್ಗಾವಃ ಕ್ಷೀರವಿವರ್ಜಿತಾಃ ॥

ಗುಣಗಳ ಬಗ್ಗೆ ಪ್ರಯತ್ನ ಮಾಡಬೇಕು ಹೊರತು ಬಾಹ್ಯ ಆಡಂಬರಗಳ ಬಗ್ಗೆ ಅಲ್ಲ. ಅದರಿಂದೇನು ಪ್ರಯೋಜನ? ಹಾಲಿಲ್ಲದಿರುವ ಹಸುಗಳು ಕುತ್ತಿಗೆಗೆ ಕಟ್ಟಿದ ಗಂಟೆಗಳಿಂದಲೇ ಮಾರಲ್ಪಡಲು ಸಾಧ್ಯವಿಲ್ಲ.

ನಿನ್ನ ದೂರದ ಹಾದಿ

– ಸುಶ್ಮಿತಾ ಎಸ್.
ತೃತೀಯ ಬಿ.ಎಸ್ಸಿ. 'ಬಿ'

ಬಾಳು ನೀ ನಿನ್ನಂತೆ
ನಿನ್ನಿಚ್ಛೆಯ ಮೇಲೆ
ಬಲವಾದ ಹೆಜ್ಜೆಯೂರಿ
ನೋವು ನಲಿವುಗಳೆಂಬ
ಕಲ್ಲುಮುಳ್ಳುಗಳ
ಜೋಗಿಯ ಜೋಳಿಗೆಗೆ ತುಂಬಿ
ಗಂಟಲೊಳು ಇಳಿದ ಅನ್ನ
ತನ್ನೊಂದೆ ಹೊಟ್ಟೆಯ ತುಂಬುವಂತೆ
ನಿನ್ನ ದೂರದ ದಾರಿಯ
ನೀ ನೋಡು ಮನುಜ
ಬಂದವರು ಬಂದರು
ಹೋದವರು ಹೋದರು
ರಸ್ತೆಯಲಿ ಸಿಗುವ ಸಂಗಡಿಗರು
ನಿನ್ನ ಮನೆಗೆ ಬರುವರೆ?
ಮತ್ತೇಕೆ ತನ್ನವರು ಎನ್ನುವ
ಸ್ವಾರ್ಥ, ಅಭಿಮಾನ?
ನಿನ್ನ ದಾರಿಯಲ್ಲಿ ನೀನೇ ನಡೆಯಬೇಕು
ಇಲ್ಲದಿರೆ ನಡುದಾರಿಯಲ್ಲೇ ದೂಡಿ
ನಿನ್ನ ದಾರಿಯಲ್ಲಿ ಓಡುವವರಿದ್ದಾರೆ
ನಿನ್ನದಾಗ ಬೇಕಿದ್ದ ಕಲ್ಲುಗಳು
ಅವರ ಜೋಳಿಗೆ ತುಂಬಬಹುದು
ಯಾರಿಗೆ ಗೊತ್ತು, ಆ ಕಲ್ಲುಗಳು
ಶಿಲೆಯಾಗಿ ನಿಲ್ಲಲುಬಹುದು
ವಜ್ರಗಳಾಗಬಹುದು.
ದೂರದ ಹಾದಿ ದೂರವೆನಿಸಬಹುದು
ಆದರೆ ನಡೆದಂತೆ ಮನೆ ಹತ್ತಿರವಾಗಲೇಬೇಕು
ನೀ ನಡೆ ನಿನ್ನಂತೆ
ನಿನ್ನ ಮನೆಯ ಕಡೆಗೆ
ದೂರವೋ, ಹತ್ತಿರವೋ
ನಿನ್ನ ದಾರಿಯಲ್ಲಿ
ನೀ ನಡೆ ಮನುಜ.

ಪೂರ್ಣಪ್ರಜ್ಞ

– ಚೈತನ್ಯ
ತೃತೀಯ ಬಿ.ಎ.

ಉಡುಪಿಯೆಂಬ ಕೃಷ್ಣನ ನಾಡು
ಚಂದ್ರನ ತಪಸಿನ ಸುಂದರ ಬೀಡು
ವಿಬುಧೇಶ ತೀರ್ಥರ ಕನಸಿನ ಗೂಡು
ವಿಶ್ವಪ್ರಿಯರ ನಲುಮೆಯ ಸೂರು

ಪೂರ್ಣಪ್ರಜ್ಞ,

ಬರುವೆವು ಇಲ್ಲಿ ಕಲಿಕೆಯ ಅರಸುತ
ಗಳಿಪೆವು ಅದನು ಮೌಲ್ಯದ ಬೆಳೆಸುತ
ಸಂಸ್ಕೃತ–ಸಂಸ್ಕೃತಿ ಅರಿಯುವ ನಾವು
ತಿಳಿವೆವು ಇಲ್ಲಿ ಶಿಸ್ತಿನ ಕಾವು

ಪೂರ್ಣಪ್ರಜ್ಞ,

ಜಾತಿಮತಗಳ ಭೇದವ ಮರೆತು
ಸದ್ಭಾವನೆಯಲಿ ಎಲ್ಲರು ಬೆರೆತು
ಶಿಕ್ಷಣ ಶಯೆಯಲ್ಲಿ ಚೆನ್ನಾಗಿ ಬಲಿತು
ಒಕ್ಕೊರಲಿಂದ ನಮಿಪರು ಕಲೆತು

ಪೂರ್ಣಪ್ರಜ್ಞ,

ಮಿನುಗಿದೆ ಹಲವೆಡೆ ಇದರ ಭಾತ್ರಿ
ಹುಟ್ಟಿದೆ ಎಲ್ಲೆಡೆ ಇದರ ಕೀರುತಿ
ಎತ್ತುವರಿದಕೆ ದಿನವೂ ಆರತಿ
ಮಕ್ಕಳ ಪಾಲಿನ ಸೌಭಾಗ್ಯ ಮೂರುತಿ

ಪೂರ್ಣಪ್ರಜ್ಞ,

ವಿಷಸ್ಯ ವಿಷಯಾಣಾಂ ಚ ದೃಶ್ಯತೇ ಮಹದಂತರಮ್ ।
ಉಪಭುಕ್ತಂ ವಿಷಂ ಹಂತಿ ವಿಷಯಾಃ ಸ್ಮರಣಾದಪಿ ॥

ವಿಷಕ್ಕೂ ಭೋಗ್ಯವಸ್ತುಗಳೆಂಬ ವಿಷಯಗಳಿಗೂ ತುಂಬಾ ದೊಡ್ಡ ವ್ಯತ್ಯಾಸವಿದೆ. ವಿಷ ಸೇವಿಸಲ್ಪಟ್ಟರೆ ಮಾತ್ರ ಸಾಯಿಸುತ್ತದೆ. ಸ್ತ್ರೀ, ವಾಹನ ಮೊದಲಾದ ವಿಷಯಗಳು ಸ್ಮರಿಸಲ್ಪಟ್ಟರೂ ಕೂಡಾ ಸಾಯಿಸಿ ಬಿಡುತ್ತವೆ.

ನ ಕಶ್ಚಿಚ್ಚಂಡಕೋಪಾನಾಮಾತ್ಮೀಯಾ ನಾಮ ಭೂಭುಜಾಮ್ ।
ಹೋತಾರಮಪಿ ಜುಹ್ವಾನಂ ಸ್ಪೃಷ್ಟೋ ದಹತಿ ಪಾವಕಃ ॥

ಅತ್ಯಂತ ಸಿಡುಕಿನ ಸ್ವಭಾವದ ರಾಜರಿಗೆ **'ಈತ ನಮ್ಮ ಆತ್ಮೀಯ'** ಎನ್ನುವ ಭಾವನೆಯಿರುವುದಿಲ್ಲ. ಏಕೆಂದರೆ ತಾಗಿದ ಬೆಂಕಿಯು ಆಹುತಿ ಕೊಡುವ ವ್ಯಕ್ತಿಯನ್ನೇ ಸುಟ್ಟುಬಿಡುತ್ತದೆ.

ಶೂನ್ಯ

– ಮೇಘನಾ ಜೆ.ವಿ.
ತೃತೀಯ ಬಿ.ಎಸ್ಸಿ.

ಭಾರತೀಯರು ಕಂಡು ಹಿಡಿದ ಓ ಶೂನ್ಯ ।
ನಿನ್ನ ಮಹಿಮೆಯ ಪರಿ ಅನನ್ಯ ।
ಎಲ್ಲಾ ರೀತಿಯಲ್ಲೂ ಇಹುದು ನಿನ್ನ ಶೂನ್ಯ
ಒಂದರ ಮುಂದೆ ನೀ ಎರಡಿದ್ದರೆ ನಾವು ಧನ್ಯ ॥

ಅನ್ಯರೊಡನೆ ಕೂಡಿಸಿದರೆ ಅವರೊಳಗೆ ಮುಳುಗಿ ಹೋಗುವೆ
ನಿನ್ನಿಂದ ಕಳೆದರೆ ನಕಾರಾತ್ಮಕ ಬೆಲೆಯ ನೀ ತೆರುವೆ ।
ನಿನ್ನೊಡನೆ ಗುಣಿಸಿದರೆ ನೀ ಮರಳಿ ಸಿಗುವೆ
ನಿನ್ನಿಂದ ಭಾಗಿಸಿದರೆ ಸಿಗಲಾರದನ್ನು ತೋರಿಸುವೆ ॥

ನಿನ್ನ ಮುಂದೆ ಹೋದರೆ ಕಡಿಮೆ ಬೆಲೆಯ ಕೊಡುವೆ
ನಿನ್ನ ಹಿಂದೆ ಬಂದರೆ ಹೆಚ್ಚು ಗೌರವ ನೀಡುವೆ ।
ಒಂದರ ಮುಂದೆ, ಘಾತದ ಕೆಳಗೆ ಇದ್ದು ಎಷ್ಟೋ ವಿಷಯಗಳ ವರ್ಣಿಸುವೆ
ಆದರೆ ನೀನೊಬ್ಬನೇ ಇದ್ದಾಗ ಯಾವ ಚಿಹ್ನೆಯೂ ಹೊಂದದೆ ತಟಸ್ಥವಾಗಿರುವೆ ॥

ಭೂಮಿಯು ನಿನ್ನಾಕಾರವೆಂದು ತಿಳಿದಿದ್ದರು
ಈಗ ಮಕ್ಕಳಿಗೆ ವಸುಂಧರೆಯನ್ನು ನಿನ್ನಾಕಾರದಿಂದಲೇ ಬಣ್ಣಿಸುವರು ।
ಸೂರ್ಯ, ಚಂದ್ರರೆಲ್ಲರೂ ನಿನ್ನಂತೆಯೇ ಕಾಣುವರು
ಮಾದರಿಗಳಲೆಲ್ಲ ನಿನ್ನ ರೂಪವನೇ ಮೆರೆಸಿದರು ॥

ಆಕ್ಸಿಜನ್ ಆಕಾರವು ನೀನಾಗಿರುವೆ
ಬೇರೆ ಕಣಗಳೊಡನೆ ಕೂಡಿ ಜಲ, ಅನಿಲವ ನೀಡುವೆ ।
ನಿನ್ನ ರೂಪವ ಎಲ್ಲಾ ಶಾಸ್ತ್ರಗಳಲ್ಲೂ ಪ್ರತಿಬಿಂಬಿಸುವೆ
ನಿನ್ನ ಮಾಯೆಯ ನಾನರಿಯೆ ॥

ಉತ್ತರ ದಕ್ಷಿಣಕ್ಕೂ, ಪೂರ್ವ ಪಶ್ಚಿಮಕ್ಕೂ
ಅಗಣಿತ ಅಂಕಿಗಳ ಹೊಂದಿರುವೆ ।
ಎಲ್ಲಾ ನೇತ್ರಗಳಿಗೂ, ಮನಸುಗಳಿಗೂ
ನೀ ಪೂರ್ಣವಾಗಿರುವೆ....ಓ ಶೂನ್ಯವೇ ॥

ಪಯಣ

– ಕೃತಿ ಕೆ ರಾವ್
ತೃತೀಯ ಬಿ.ಎಸ್ಸಿ.

ಪ್ರಕೃತಿಯ ಗರ್ಭದಿಂದ ಜನಿಸಿದ ಮಗುವು
ಅರ್ಜಿಸುವುದು ಜ್ಞಾನವನ್ನು ಜೀವನದ ಸೂತ್ರವನ್ನು
ಬಾಗುವುದು ಮಾಯೆಯ ಮಾಯೆಯನ್ನು ಕಂಡು
ದಿಗ್ಭ್ರಮಿಸುವ ಈ ಶೂನ್ಯದ ಮಹತ್ವವ ತಿಳಿದು

ಹುಡುಕುವ ನಾನಾರೆಂಬ ಸತ್ಯದ ಯಾತ್ರೆಯು
ಕರೆದೊಯ್ಯುವುದೇ ಚೇತನದ ಸಾಗರದೊಳು
ಮುಳುಗುವುದೇ ಈಜುವುದೇ ರಹಸ್ಯದ ಸುಳಿಯೊಳು
ತಲುಪುವುದೇ ಜೀವನದ ಚಿಕ್ಕ ದ್ವೀಪದೊಳು

ಅರಿಯಬಹುದೇ ತಾನಿರುವುದು ಒಂದು ದ್ವೀಪದೊಳೆಂದು
ಉಳಿದಿದೆ ಇನ್ನು ಕಾಣದ ತೀರವೊಂದು
ಶೇಷವಿರುವುದೇ ಸಾಹಸವು ಮನದೊಳು
ನಾಶವಾದ ನೌಕೆಯನ್ನು ಮತ್ತೆ ಕಟ್ಟಲು

ಸಾಗುವ ಈ ಯಾತ್ರೆಯಲ್ಲಿ ಎದುರಿಸುವುದೇ ಬಿರುಗಾಳಿಯನ್ನು
ದೃಢವಾಗಿರುವುದೇ ತರಂಗದೊಳು ಸಿಲುಕಿದ ಆ ಗುರಿಯು
ತೋರಿಸುವುದೇ ಸತ್ಯವು ನಕ್ಷತ್ರವಾಗಿ ದಾರಿಯನ್ನು ಇರುಳೊಳು
ಸರಿಯುವುದೇ ಮಾಯೆಯ ಪರದೆಯು, ಮೂಡುವುದೇ
ತಾನು ತಾನಲ್ಲವೆಂಬ ಪರಮಾನಂದವನು

–: ಕಥೆ :–

ಸೀಮೋಲ್ಲಂಘನೆ

– ಪಾರ್ವತಿ
ದ್ವಿತೀಯ ಎಂ.ಕಾಂ.

ಶಾಸ್ತ್ರಿಯವರ ಮನೆಯಲ್ಲಿ ಮದುವೆ ಸಂಭ್ರಮ. ಮನೆ ತುಂಬಾ ಅಲಂಕಾರದಿಂದ ಕೂಡಿತ್ತು. ಎಲ್ಲೆಲ್ಲೂ ಸಂಭ್ರಮ ಸಂತೋಷ. ಮನೆ ತುಂಬಾ ಹೂ ಹಣ್ಣು ತಳಿರು ತೋರಣ. ಅದಲ್ಲದೆ ಅಲಂಕಾರದಿಂದ ಕಂಗೊಳಿಸುತ್ತಿರುವ ಯುವತಿಯರು. ಇಂದು ಶಾಸ್ತ್ರಿಯವರ ಏಕೈಕ ಪುತ್ರಿ ತಾರಿಣಿಯ ಮದುವೆ. ತಾರಿಣಿ ಇನ್ನೂ 18 ವರ್ಷದ ಮುಗ್ಧ ಹುಡುಗಿ. ಶಾಸ್ತ್ರಿಗಳು ತನ್ನ ಪುತ್ರಿಯ ಮದುವೆ ತುಂಬಾ ವಿಜೃಂಭಣೆಯಿಂದ ನೆರವೇರಿಸಿದರು. ಯಾವುದಕ್ಕೂ ಕೊರತೆ ಮಾಡಲಿಲ್ಲ. ತನ್ನ ಶಕ್ತಿ ಮೀರಿ ಖರ್ಚು ಮಾಡಿ ಮಗಳ ಮದುವೆ ಮಾಡುತ್ತಿದ್ದಾರೆ. ಇಂದು ತಾರಿಣಿ ತುಂಬಾ ಚೆಂದ ಕಾಣುತ್ತಿದ್ದಾಳೆ. ಹೆಚ್ಚು ಹೇಳಬೇಕೆಂದರೆ ಅವಳು ದೇವಲೋಕದ ಅಪ್ಸರೆ ಧರೆಗಿಳಿದು ಬಂದಂತಿದ್ದಳು. ಮದುವೆಯ ಕಾರ್ಯ ಮುಗಿಸಿ ಮಗಳನ್ನು ಗಂಡನ ಮನೆಗೆ ಕಳುಹಿಸಿದಾಗ ಶಾಸ್ತ್ರಗಳಿಗೆ ಅವಳ ಬಾಲ್ಯದ ದಿನಗಳು ಕಣ್ಣಮುಂದೆ ಕವಿದಂತಾಯಿತು.

ಶಾಸ್ತ್ರಿಗಳದ್ದು ಸಣ್ಣ ಸಂಸಾರ. ಅವರ ಪತ್ನಿ ಶಾರದ. ಶಾಸ್ತ್ರಿಗಳ ಮದುವೆಯಾಗಿ 2 ವರ್ಷಕ್ಕೆ ಅವರಿಗೆ ಮುದ್ದಾದ ಹೆಣ್ಣುಮಗು ಜನಿಸಿತು. ಶಾಸ್ತ್ರಿ ದಂಪತಿಗಳು ಅವಳಿಗೆ ಪ್ರೀತಿಯಿಂದ ತಾರಿಣಿ ಎಂದು ನಾಮಕರಣ ಮಾಡಿದರು. ಶಾಸ್ತ್ರಿಗಳು ಶ್ರೀಮಂತರಾಗಿರಲಿಲ್ಲ. ತುಂಬಾ ಬಡತನದ ಸಂಸಾರ ಅವರದ್ದು. ಆದರೆ ಮೂರು ಹೊತ್ತಿನ ಊಟಕ್ಕೇನೂ ಕಮ್ಮಿ ಇರಲಿಲ್ಲ. ತಾರಿಣಿ ಬಾಲ್ಯದಿಂದಲೇ ತುಂಬಾ ಚುರುಕಾದ ಹುಡುಗಿ. ಎಲ್ಲದರಲ್ಲೂ ಜಾಣೆ. ಅವಳಿಗೆ 5 ವರ್ಷ ಇರುವಾಗ ಅವಳ ತಾಯಿ ಶಾರದೆ ಅನಾರೋಗ್ಯದ ಕಾರಣದಿಂದ ಕೊನೆಯುಸಿರೆಳೆದರು. ಆಮೇಲೆ ತಾರಿಣಿಯ ಜವಾಬ್ದಾರಿ ಶಾಸ್ತ್ರಿಗಳ ಮೇಲೆ ಬಂತು. ಶಾಸ್ತ್ರಿಗಳು ಇನ್ನೊಂದು ಮದುವೆ ಆಗುವ ಗುಂಗಿಗೆ ಹೋಗಲಿಲ್ಲ ಬದಲಾಗಿ ತಾರಿಣಿಯನ್ನು ಕಷ್ಟಪಟ್ಟು ಓದಿಸಿದರು. ತಾರಿಣಿಯೂ ಅಷ್ಟೇ, ಅಪ್ಪನ ಕಷ್ಟವನ್ನು ಅರಿತು ಬೆಳೆದಿದ್ದಳು. ಎಂದೂ ಅವಳು ಶಾಸ್ತ್ರಿಯವರ ಮಾತಿಗೆ ಎದುರಾಡಿದವಳೇ ಅಲ್ಲ. ಹೀಗೆ ಅವಳು ಪಿ.ಯು.ಸಿ. (ಪದವಿಪೂರ್ವ) ಶಿಕ್ಷಣವನ್ನು ಮುಗಿಸುವ ಹೊತ್ತಿಗೆ ಅವಳಿಗೆ ಸಂಬಂಧ ಕುದುರಿತು.

ಶಾಸ್ತ್ರಿಯವರಿಗೆ ಮಗಳ ಮದುವೆ ಆಲೋಚನೆ ತಪ್ಪು ಎನಿಸಲಿಲ್ಲ. ಅವರಿಗಿದ್ದ ಬಡತನಕ್ಕೆ ಅವರಿಗೆ ಮುಂದೆ ಓದಿಸುವುದು ಕಷ್ಟ ಅನಿಸಿತು. ಅದಕ್ಕಾಗಿ ಬಂದ ಸಂಬಂಧವನ್ನು ನಿರಾಕರಿಸಲಿಲ್ಲ. ಶಾಸ್ತ್ರಿಯವರ ಪ್ರಕಾರ ಹುಡುಗ ದುಡಿಯುತ್ತಿದ್ದ. ಸಂಪತ್ತಿಗೂ ಕೊರತೆ ಇರಲಿಲ್ಲ. ಇದಕ್ಕಿಂತ ಹೆಚ್ಚು ಇನ್ನೇನು ಬೇಕು ಅಂದುಕೊಂಡು ಮಗಳನ್ನು ಕೇಳಿಯೇ ಬಿಟ್ಟರು. ಎಂದೂ ತಂದೆಗೆ ಎದುರಾಡದ ತಾರಿಣಿ ಶಾಸ್ತ್ರಿಯವರ ಮಾತಿಗೆ ಸಮ್ಮತಿ ಸೂಚಿಸಿದಳು.

ಇಂದು ಮಗಳನ್ನು ಗಂಡನ ಮನೆಗೆ ಕಳುಹಿಸಿದ ಖುಷಿ. ಶಾಸ್ತ್ರಿಗಳಿಗೆ ಇನ್ನೊಂದೆಡೆ ಮಗಳು ದೂರವಾದ ನೋವು. ಅಂತೂ ಮಗಳು ಸಂತೋಷವಾಗಿದ್ದರೆ ಸಾಕು ಎನ್ನುವುದು ಅವರ ಭಾವನೆ.

ಇತ್ತ ತಾರಿಣಿ ಮದುವೆಯ ನಂತರದ ಹೊಸ ಜೀವನಕ್ಕೆ ಕಾಲು ಇಟ್ಟಳು. ಏನೋ ಒಂಥರ ಖುಷಿ ಮತ್ತೊಂದೆಡೆ ಏನೋ ಭಯ. ಇವೆಲ್ಲದರ ನಡುವೆ ತನ್ನ ಹೊಸ ಜೀವನಕ್ಕೆ ಕಾಲು ಇಟ್ಟಳು. ಮೊದಲ ಒಂದು ವರ್ಷ ಎಲ್ಲವೂ ಚೆನ್ನಾಗಿಯೇ ಇತ್ತು. ಆಮೇಲೆ ಸಮಸ್ಯೆಗಳು ಶುರುವಾಯಿತು. ತಾರಿಣಿಯ ಗಂಡ ಬೇರೊಂದು ಹೆಣ್ಣಿನ ಪ್ರೀತಿಯ ಬಲೆಗೆ ಬಿದ್ದಿದ್ದ. ಅವಳನ್ನು ಮನೆಗೆ ಕರೆತಂದು ದಿನವೂ ತಾರಿಣಿಗೆ ಕಿರುಕುಳ ಕೊಡಲು ಶುರು ಮಾಡಿದ. ಕೊನೆಗೆ ಇದರಿಂದ ರೋಸಿಹೋದ ತಾರಿಣಿ ಗಂಡನಿಂದ ವಿಚ್ಛೇದನ ಪಡೆದಳು.

ತಾರಿಣಿಯ ಜೀವನವು ಕ್ಷಣ ಮಾತ್ರದಲ್ಲಿ ಎಲ್ಲೋ ಹೋಗಿ ನಿಂತಿತು. ಅವಳು ಬಯಸದಿದ್ದರೂ ಶಾಸ್ತ್ರಿಯವರ ಆಶ್ರಯಕ್ಕೆ ಬರುವಂತಾಯಿತು. ಇದರಿಂದ ಬೇಸತ್ತ ಶಾಸ್ತ್ರೀಯವರು ಮಗಳ ಮುಂದಿನ ಭವಿಷ್ಯಕ್ಕಾಗಿ ಪರಿತಪಿಸುತ್ತಿದ್ದರು. ತನ್ನ ಮಗಳ ಜೀವನ ಹಾಳು ಮಾಡಿದ ಪಾಪಿ ಅಳಿಯನಿಗೆ ಬೈಯುತ್ತಿದ್ದಾಗ ತಾರಿಣಿ ಅಂದ ಮಾತೇನೆಂದರೆ, **"ಹೋಗಲಿ ಬಿಡಿ ಅಪ್ಪ. ಎಲ್ಲವೂ ಇಷ್ಟಕ್ಕೇ ಮುಗಿಯಿತಲ್ಲಾ? ಅವನಿಂದ ವಿಚ್ಛೇದನ ಪಡೆದ ಮೇಲೆ ಅವನನ್ನು ದೂರುವುದ ಸರಿಯಲ್ಲ. ಇನ್ನು ಮುಂದಿನದನ್ನು ಯೋಚಿಸಿದರಾಯಿತು. ಇದರಲ್ಲಿ ನಿಮ್ಮದೇನೂ ತಪ್ಪಿಲ್ಲ. ದುಃಖಿಸಬೇಡಿ ಅಪ್ಪ."** ತಾರಿಣಿಯ ಅಳುಕಿಲ್ಲದ ದಿಟ್ಟ ನುಡಿಗಳಿಗೆ ಶಾಸ್ತ್ರಿಗಳು ಕಂಬನಿ ತುಂಬಿದ ಕಣ್ಣುಗಳಿಂದ ಅವಳನ್ನೇ ನೋಡುತ್ತಿದ್ದರೆ ಅವಳೋ ಕಿಟಿಕಿಯಾಚೆಯ ದಿಗಂತದಲ್ಲಿ ದೃಷ್ಟಿ ನೆಟ್ಟು ಏನನ್ನೋ ಹುಡುಕುತ್ತಿದ್ದಳು. ಸಂಜೆ ಸೂರ್ಯನ ಹೊನ್ನ ಕಿರಣಗಳು ಅವಳ ಮುಖದ ತುಂಬಾ ಪ್ರಜ್ವಲಿಸುತ್ತಿದ್ದವು.

ಕೊನೆಗೂ ತಾರಿಣಿ ದಿಟ್ಟ ನಿರ್ಧಾರ ಮಾಡಿಯೇ ಬಿಟ್ಟಳು. ಅವಳು ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸುವ ಮನಸ್ಸು ಮಾಡಿದಳು. ಅವಳಿಗೆ ತನ್ನ ಪಿ.ಯು. ಅಂಕಪಟ್ಟಿ ಕಣ್ಣೆದುರು ಬಂತು. ಒಳ್ಳೆಯ ಅಂಕ ಪಡೆದಿದ್ದರೂ ಬಡತನ ಮದುವೆ ಇವೆಲ್ಲದರ ನಡುವೆ ಅವಳ ವಿದ್ಯಾಭ್ಯಾಸದ ಕನಸನ್ನು ಮರೆತು ಬಿಟ್ಟಳು. ಅದನ್ನು ನನಸಾಗಿಸುವ ಕಾಲ ಬಂದಿದೆ ಎಂದು ಪುಸ್ತಕ ಹಿಡಿದು ಓದಲು ಕೂತಳು. ಅವಳ ಹಠ ಸಾಧನೆಯಿಂದ ಡಾಕ್ಟರ್ ಆಗುವ ಮೊದಲ ಪರೀಕ್ಷೆಯಲ್ಲಿ ಉತ್ತಮ ಅಂಕದಿಂದ ಪಾಸಾಗಿ ಒಳ್ಳೆಯ ಕಾಲೇಜಿನಲ್ಲಿ ಸೀಟು ಮಾಡಿಕೊಂಡಳು. ಈಗ ಅವಳು ಓದಲು ಐವತ್ತು ಸಾವಿರ ರೂಪಾಯಿ ಫೀಸ್ ಕಟ್ಟಬೇಕಾಯಿತು. ಅವಳಲ್ಲಿ ದುಡ್ಡು ಇರಲಿಲ್ಲ. ಅಲ್ಲದೆ ವಿಚ್ಛೇದನವಾದಾಗಲೂ ಅವಳು ಏನನ್ನೂ ಗಂಡನಿಂದ

ಪಡೆದಿರಲಿಲ್ಲ. ಅವಳಲ್ಲಿ ಇದ್ದಿದ್ದ ಚಿನ್ನವನ್ನು ಮಾರಿ ಫೀಸ್ ಜಮೆ ಮಾಡಿದಳು. ಶಾಸ್ತ್ರಿಗಳು ಯಾವುದೇ ರೀತಿಯ ವಿರೋಧವನ್ನು ಸೂಚಿಸಲಿಲ್ಲ. ಅವರು ತುಂಬಾ ಕಷ್ಟಪಟ್ಟು ಮಗಳ ಮದುವೆಗೆಂದು ಮಾಡಿಸಿದ ಚಿನ್ನ ಅದಾಗಿತ್ತು. ಇಂದು ಅದು ಅವಳ ವಿದ್ಯಾಭ್ಯಾಸಕ್ಕೆ ಪ್ರಯೋಜನವಾಯಿತು.

ತಾರಿಣಿ ತುಂಬಾ ಕಷ್ಟ ಪಟ್ಟು ಪಣ ತೊಟ್ಟು ಓದುತ್ತಿದ್ದಳು. ಉಳಿದ ಸಮಯದಲ್ಲಿ ಬೇರೆಯವರ ಮನೆ ಕೆಲಸಕ್ಕೆ ಹೋಗಿ ಹಣ ಸಂಪಾದಿಸಿ ಅವರಿಂದ ಮುಂದಿನ ವರ್ಷದ ಫೀಸನ್ನು ಜಮೆ ಮಾಡಿದಳು. ಶಾಸ್ತ್ರಿಗಳು ತಾರಿಣಿಯ ಎಲ್ಲಾ ಕೆಲಸಕ್ಕೂ ಬೆಂಬಲವಾಗಿ ನಿಂತರು. ಕೊನೆಗೂ ಎರಡನೇರ್ಯಾಂಕಿನೊಂದಿಗೆ ಎಮ್.ಬಿ.ಬಿ.ಎಸ್. ಪದವಿ ಪಡೆದಳು. ಈಗ ಪರಿವಾರಕ್ಕೆ ಹಣದ ಕೊರತೆ ಕಡಿಮೆಯಾಯಿತು. ಅಲ್ಲಿಂದ ಮುಂದಕ್ಕೆ ಅವಳು ಎಮ್.ಡಿ. ಮಾಡುವ ಇಚ್ಛೆಯನ್ನು ಶಾಸ್ತ್ರಿಗಳಿಗೆ ಹೇಳಿದಾಗ ಅದಕ್ಕೂ ಅವರು ಬೆಂಬಲಿಸಿದರು. ಬ್ಯಾಂಕಿನಿಂದ ಸಾಲವನ್ನು ಪಡೆದು ತನ್ನ ಮುಂದಿನ ಶಿಕ್ಷಣಕ್ಕೆ ಸೇರಿಕೊಂಡಳು.

ತಾರಿಣಿ ಇಲ್ಲಿಯೂ ತುಂಬಾ ಹಠತೊಟ್ಟು ಓದುತ್ತಿದ್ದಳು. ಜೊತೆಗೆ ಜನ ಸೇವೆಯನ್ನು ಮಾಡುತ್ತಿದ್ದಳು. ಅವಳು ಎಮ್.ಡಿ. ಮಾಡುತ್ತಿದ್ದಾಗ ಅವಳಿಗೆ ವಿಶ್ವನಾಥನ ಪರಿಚಯ ಆಯಿತು. ಇದು ಕಾಲಕ್ರಮೇಣ ಪ್ರೀತಿಯಾಗಿ ಮಾರ್ಪಟ್ಟಿತು. ಶಾಸ್ತ್ರಿಗಳು ಈ ವಿಷಯದಲ್ಲೂ ಮಗಳ ಮೇಲೆ ಯಾವುದೇ ರೀತಿಯ ಕೋಪವನ್ನು ತೋರಿಸದೆ ಜಾತಿ ಮತವನ್ನು ಲೆಕ್ಕಿಸದೆ ಮಗಳನ್ನು ವಿಶ್ವನಾಥನಿಗೆ ಕೊಟ್ಟು ಮದುವೆ ಮಾಡಿದರು. ಇಂದು ತಾರಿಣಿ ತನ್ನ ಗಂಡನೊಂದಿಗೆ ಸುಖ ಸಂಸಾರ ನಡೆಸುತ್ತಿದ್ದಾಳೆ.

ಶಾಸ್ತ್ರಿಗಳು ತನ್ನ ಮಗಳ ಸಂಸಾರವನ್ನು ನೋಡಲು ಅವಳ ಮನೆಗೆ ಬಂದಿದ್ದಾರೆ. ಮಗಳು ಅಳಿಯ ಇಬ್ಬರೂ ಪ್ರೀತಿಯಿಂದ ಅವರನ್ನು ಸ್ವಾಗತಿಸಿದರು. ಶಾಸ್ತ್ರಿಗಳನ್ನು ಕಂಡು 2 ವರ್ಷದ ಅವರ ಮೊಮ್ಮಗು ಓಡೋಡಿ ಬಂದು ಅದನ್ನು ಕೈಗೆತ್ತಿಕೊಂಡು ಮುದ್ದಿಸುತ್ತಾ ತನ್ನ ಮಗಳ ಜೀವನದ ಆಗುಹೋಗುಗಳನ್ನು ಮನದಲ್ಲಿ ನೆನೆಯುತ್ತಾ ಹೊರಗಡೆ ಬಂದು ಅವಳ ಭವಿಷ್ಯ ಸರಿಹೋಯಿತಲ್ಲಾ ಎಂದು ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ನನ್ನ ಶಂಕರಜ್ಜ

(ಚಿತ್ರ ನೋಡಿ ಕಥೆ ರಚನೆ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ ಪಡೆದ ಕಥೆ.)

– ವಾಗ್ದೇವಿ ಮಧ್ಯಸ್ಥ
ಪ್ರಥಮ ಎಂ.ಕಾಂ.

ಕೆಲಸ ಯಾವುದಾದರೇನಯ್ಯ
ಕಾಯಕವೇ ಕೈಲಾಸ
ಮೆಚ್ಚಿಸಲು ನಾ ಮಾಡುತ್ತಿಲ್ಲ ಕೆಲಸವ
ಹೊಟ್ಟೆಪಾಡು ಶ್ರದ್ಧೆಯಿದೆ ನನ್ನಲ್ಲಿ ಅಯ್ಯಾ...

ದೂರದ ಬೆಟ್ಟದ ಕೆಳಗೆ ಒಂದು ಪುಟ್ಟ ಊರು. ನನ್ನೂರು. ನಾನು ಹುಟ್ಟಿ ಬೆಳೆದು ಊರು. ಶ್ರೀಪುರ. ಚಿಕ್ಕವಯಸ್ಸಿನಿಂದಲೂ ನಾನು ಶಾಲೆಗೆ ಹೋಗುವಾಗ ಸಿಗುವುದು ನಮ್ಮ ಶಂಕರನ ಅಂಗಡಿ. ಮೊದಲ ಬಾರಿ ನಾನು ಅವನ ಅಂಗಡಿಗೆ ಹೋಗಿದ್ದು ನನ್ನ ಚಪ್ಪಲಿಯನ್ನು ಹೊಲಿಸಲು.

ಹೌದು, ಶಂಕರನ ಕೆಲಸ ಚಪ್ಪಲಿ, ಶೂ ರಿಪೇರಿ ಮಾಡುವುದು. ಅವನಿಗೆ ಸುಮಾರು 60 ವರ್ಷ ಆಗಿರಬಹುದು. ಆದರೆ ಇನ್ನೂ ಮುಖದಲ್ಲಿ ಕಳೆ ಹಾಗೆ ಇದೆ. ತುಂಬ ಲಾಭದಾಯಕ ಅಲ್ಲದಿದ್ದರೂ ಒಂದು ಹೊತ್ತು ಗಂಜಿಗೆ ಸಾಕಾಗುವಷ್ಟು ಅವನಿಗೆ ದುಡಿಮೆ ಇತ್ತಂತೆ, ನನ್ನ ಅಜ್ಜಿ ಯಾವಾಗಲೂ ಹೇಳುತ್ತಿದ್ದರು.

ಶ್ರೀಪುರದ ಜನರಿಗೆ ಅವನು ಪರಿಚಿತ. ಊರು ಮಧ್ಯದಲ್ಲಿ ಅವನ ಅಂಗಡಿ. ಹಾಗಾಗಿ ಎಲ್ಲರಿಗೂ ಅವನು ಗೊತ್ತು. ಮಳೆಗಾಲ ಅಥವಾ ಚಳಿಗಾಲ ಅವನ ಅಂಗಡಿ ಮಾತ್ರ ಯಾವಾಗಲೂ ತೆರೆದಿರುತ್ತದೆ. ಜನರು ಯಾರೂ ಇಲ್ಲದಿದ್ದರೂ ಅವನು ಮಾತ್ರ ಅಂಗಡಿಯಲ್ಲಿ ಇರುತ್ತಾನೆ.

ಚಿಕ್ಕ ವಯಸ್ಸಿನಿಂದಲೂ ಕುತೂಹಲ ನನಗೆ. ಒಮ್ಮೆ ಶಂಕರಜ್ಜನ ಬಳಿ ಕೇಳಿಯೇ ಬಿಟ್ಟೆ, "ಅಜ್ಜ ನೀನು ಯಾವಾಗಲೂ ಇಲ್ಲೆ ಇರುವೆ. ನಿನಗೆ ಮನೆಯಲ್ಲಿ ಅಜ್ಜಿ ಕಾಯುವುದಿಲ್ಲವಾ? ನಿನ್ನ ಮನೇಲಿ ಯಾರ್ ಇದ್ದಾರೆ? ನಿನ್ ಮಕ್ಕಳು ಏನ್ ಮಾಡ್ತಿದ್ದಾರೆ?" ಅದಕ್ಕೆ ಅಜ್ಜ ಹೇಳಿದ್ದು ನನಗೆ ಈಗಲೂ ನೆನಪಿದೆ. "ಪುಟ್ಟಿ, ನಿಂಗೆ ಇನ್ನೂ ಚಿಕ್ಕ ವಯಸ್ಸು. ಅಜ್ಜಿಗೆ ದೇವರಂದ್ರೆ ತುಂಬಾನೇ ಇಷ್ಟ. ಅದಕ್ಕೆ ಅವನ ಹತ್ತಿರಾನೇ ಹೋದಳು. ನನ್ನ ಮಕ್ಕಳು ಎಲ್ಲಿದ್ದಾರೋ ಗೊತ್ತಿಲ್ಲ. ದೂರಕ್ಕೆ ಯಾವುದೋ ಪಟ್ಟಣಕ್ಕೆ ಹೋದರು, ಆದರೆ ಮತ್ತೆ ಗೊತ್ತಿಲ್ಲ. ನಾನು ಒಬ್ಬಂಟಿ ಆಗ; ಆದರೆ ಇದೆ ನನ್ನ ಮೊಮ್ಮಗಳು ತರ ನೀನೇ ಇದ್ದೀಯಾ." ಆ ಕ್ಷಣ ನನಗೆ ಹೊಸ ಅಜ್ಜ ಬಂದ್ರು ಅಂತ ಅನ್ನಿಸಿತು. ಮನೆಯಿಂದ ಶಾಲೆಗೆ, ಶಾಲೆಯಿಂದ ಮನೆಗೆ ಹೋಗುವಾಗ ಶಂಕರಜ್ಜನ ಅಂಗಡಿಗೆ ಹೋಗಿ ಆ ದಿನದ ವರದಿ ಹೇಳದಿದ್ದರೆ...ಯಾಕೋ ಮನಸ್ಸಿಗೆ ಸಮಾಧಾನವೇ ಆಗುತ್ತಿರಲಿಲ್ಲ.

ಪದೇ ಪದೇ ದಿನಗಳು, ತಿಂಗಳುಗಳು, ವರ್ಷಗಳು ಹೋದವು. ಅಪ್ಪ ಶಿಕ್ಷಣ ಮುಖ್ಯ ಅಂತ ಪಟ್ಟಣಕ್ಕೆ ಕಳುಹಿಸಿದರು. ಆರು ವರ್ಷ ಓದಲು ಮನೆಯಿಂದ ಹೊರ ಬಂದೆ. ದಿನಗಳೋ ಹಾಗೇ ತಿಳಿಯದೇ ಕಳೆದುಹೋದವು. ಕೊನೆಯ ದಿನ ಇಂದು. ಓದು

ಮುಗಿಯಿತು. ಅತ್ತ ಮನೆಗೆ, ಅಪ್ಪ ಅಮ ನನ್ನ ನೋಡುವ ಹಂಬಲ. ಶಂಕರಜ್ಜನಿಗೆ ಆರು ವರ್ಷಗಳ ವರದಿ ಒಪ್ಪಿಸಬೇಕು. ಬಸ್ಸಿನಲ್ಲಿ ಕೂತಾಗ ಅದೇ ಯೋಚನೆಯನ್ನು ಮಗ್ನಳಾದೆ.

"ಯಾರಲ್ಲಿ ಶ್ರೀಪುರ.....ಶ್ರೀಪುರ ಬಂತು. ಇಳಿಯುವವರು ಬೇಗ ಇಳಿಯಿರಿ...ಬೇಗ...ಬೇಗ"

ಬಸ್ ಕಂಡಕ್ಟರ್ ಕೂಗಿದಾಗ ನಿದ್ದೆಯಿಂದ ಎಚ್ಚೆತ್ತೆ. ಬಸ್ಸಿನಿಂದ ಇಳಿದೆ. ನಾನು ಓಡಾದಿದ ರಸ್ತೆ ಈಗ ಗುರುತು ಹಿಡಿಯಲು ಸಾಧ್ಯವಿಲ್ಲ. ಶಂಕರಜ್ಜನ ಚಪ್ಪಲ್ ಅಂಗಡಿ ಹೋಗಿ ಅಲ್ಲೊಂದು ಪುಟ್ಟ ಹೋಟೆಲ್ ಬಂದಿದೆ. ಖಾಲಿ ಇದ್ದ ಜಾಗ ಈಗ ಮನೆ, ಅಂಗಡಿಯಿಂದ ತುಂಬಿದೆ. ಜನ ಸಂಚಾರ. ಆರು ವರ್ಷದಲ್ಲಿ ಈ ತರ ಬದಲಾವಣೆ, ನನಗೆ ನಂಬಲು ಸಾಧ್ಯವಿಲ್ಲ.

ಶಂಕರಜ್ಜನ ಅಂಗಡಿ ಇರುವ ಸ್ಥಳಕ್ಕೆ ಬಂದೆ. ಅರೆ! ಅಂಗಡಿಯೇ ಇಲ್ಲ. ಯಾರನ್ನು ಕೇಳೋದು, ಯಾರ ಪರಿಚಯನೂ ಇಲ್ಲ. ಅಪ್ಪನನ್ನು ಕೇಳಬೇಕೆಂದು ಮನೆಗೆ ಬಂದೆ.

ಮನೆಯಲ್ಲಿ ಎಲ್ಲಾ ಕುಶಲ ಉಪಚಾರ ಆದ ಮೇಲೆ ಅಪ್ಪನನ್ನೇ ಕೇಳಿದೆ, "ಅಪ್ಪ, ಶಂಕರಜ್ಜನ ಅಂಗಡಿ ಎಲ್ಲಿ ಹೋಯಿತು? ಆ ಜಾಗದಲ್ಲಿ ಯಾವುದೋ ಮನೆ ಕಟ್ಟಿದ್ದಾರೆ. ಶಂಕರಜ್ಜ ಎಲ್ಲಿಗೆ ಹೋದ?"

"ಶಂಕರಜ್ಜ? ಯಾವ ಶಂಕರಜ್ಜ...?"

"ಅದೇ ಅಪ್ಪ, ನಾನು ಶಾಲೆಗೆ ಹೋಗುವ ದಾರಿಯಲ್ಲಿ...ಶಂಕರಜ್ಜ...ಅವನ ಚಪ್ಪಲಿ ಅಂಗಡಿ ಇದೆ ಅಲ್ಲಾ....ಆ ಶಂಕರಜ್ಜ...?"

"ಹೋ!...ಅವನಾ, ಅವನು ಈಗ ಇಲ್ಲ. ಪುಟ್ಟಿ. ಅವನ ಮಕ್ಕಳು ಅವನನ್ನು ಕರೆದುಕೊಂಡು ಹೋದರು."

"ಶಂಕರಜ್ಜನ ಮಕ್ಕಳಾ? ಹಾಗಾದರೆ ಪೇಟೆಯಿಂದ ಅವನ ಮಕ್ಕಳು ಬಂದ್ರಾ...?" ತಲೆಯಲ್ಲಿ ಹತ್ತಾರು ಪ್ರಶ್ನೆಗಳಿಗೆ ಆಹ್ವಾನ ನೀಡಿತ್ತು.

ಸುಸ್ತಾದರೂ ನಿದ್ದೆ ಬರಲಿಲ್ಲ. ಶಂಕರಜ್ಜನ ಬಗ್ಗೆ ಮನದಲ್ಲಿ ನೆನಪು ಸುಳಿಯಿತು. ಆದರೂ, ಶಂಕರಜ್ಜನ ನನಗೆ ಹೇಳದೇ ಕೇಳದೇ ಹೋದನು. ಸಣ್ಣ ಕೋಪ, ಆದರೂ ಅವನ ಮಕ್ಕಳ ಜೊತೆ ಇದ್ದಾನೆ ಎಮದು ಸಮಾಧಾನವಾಯಿತು.

ಮೂರನೆಯ ದಿನವೇ ಹಳೇ ಗೆಳತಿಯ ಮನೆಗೆ ಹೋದೆ. ಅವಳಿಗೂ ಶಂಕರಜ್ಜನ ಬಗ್ಗೆ ಗೊತ್ತಿತ್ತು. ಮಾತಾಡುವಾಗ ಶಂಕರಜ್ಜನ ವಿಷಯ ಬಂತು. ಅವಳು ಹೇಳಿದಳು, "ನಿಂಗೆ ಗೊತ್ತಾ, ಅದೇ ಚಪ್ಪಲಿ ಅಂಗಡಿ ಶಂಕರ ಇದ್ದನಲ್ಲಾ, ಅವನು ಸತ್ತು ಹೋದನಂತೆ. ಪಾಪ, ಒಳ್ಳೆ ಮನುಷ್ಯ. ಆ ದೇವರು ಒಳ್ಳೆಯವರಿಗೆ ಕಷ್ಟ ಕೊಡುತ್ತಾನಂತೆ. ಅದು ಶಂಕರನ ವಿಷಯದಲ್ಲಿ ಸತ್ಯ."

"ಯಾಕೆ, ಶಂಕರಜ್ಜನಿಗೆ ಏನಾಯತು?" ಎದೆಯು ಭಯದಿಂದ ಹೊಡೆದುಕೊಳ್ಳುತ್ತಾ ಕೇಳಿದೆ.

"ಅದಾ, ನೀನು ಪೇಟೆಗೆ ಓದಲು ಹೋಗಿ ಎರಡು ವರ್ಷದ ನಂತರ ಅವನ ಮಕ್ಕಳು ಅಂತ ಇಬ್ಬರು ಬಂದ್ರು. ಅವರ ವೇಷ ಭೂಷಣ ನೋಡಿದರೆ ಪಟ್ಟಣದಲ್ಲಿ ಒಳ್ಳೆ ಸಂಪಾದನೆ ಇದೆ ಅಂತ ಅನ್ನುತ್ತೆ. ಒಂದು ದಿನ ಸೀದಾ ಬಂದ್ರು; ಶಂಕರನ ಅಂಗಡಿಗೆ ಬಂದು, ಅಪ್ಪಾ, ನಿನ್ನ ಮಕ್ಕಳು ನಾವು. ನಿನ್ನನ್ನು ಮನೆಗೆ ಕರೆದುಕೊಂಡು ಹೋಗಲು ಬಂದಿದ್ದೇವೆ, ಅಂದ್ರು. ಶಂಕರನಿಗೆ ತುಂಬಾನೇ ಖುಷಿ ಆಯ್ತು. ಮಕ್ಕಳನ್ನು ನೋಡಿ ವರ್ಷಗಳೇ ಆದಾಗ ಈಗ ಮನೆಗೆ ಕರೆದುಕೊಂಡು ಹೋಗಲು ಬಂದಿದ್ದಾರೆ ಅಂತ ಅವರು ಹೇಳಿಂದಂತೆ ಅಂಗಡಿಯನ್ನು ಅವರ ಹೆಸರಿಗೆ ಬರೆದ್ರು. ಎರಡು ದಿನ ಆದ್ಮೇಲೆ ದೊಡ್ಡ ಬುಲ್ಡೋಜರ್ ಬಂದು ಅಂಗಡಿಯನ್ನು ಕಿತ್ತು ಬಿಸಾಕಿತು. ತಡೆಯಲು ಶಂಕರ ಹೋದಾಗ ನಿನ್ನ ಮಕ್ಕಳು ಈ ಭೂಮಿಯನ್ನು ನನ್ನ ಯಜಮಾನನಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳಿ ಶಂಕರನನ್ನು ದೂಡಿದರು...ಪಾಪ, ನಮ್ಮ ಊರಿನವರು ಅವನನ್ನು ಏಳಿಸಲು ಹೋದಾಗ ಅವನ ಪ್ರಾಣ ಪಕ್ಷಿ ಹೋಗಿತ್ತು." ಗೆಳತಿ ಮಾತು ನಿಲ್ಲಿಸಿ ಮೌನಕ್ಕೆ ಶರಣಾದಳು.

ಆದರೆ ಈಗ ಹೃದಯಾಘಾತ ಆಗಿದ್ದು ನನಗೆ. ನನ್ನ ಶಂಕರಜ್ಜ ಇನ್ನಿಲ್ಲ...ಅವನ ಮಕ್ಕಳು ಅವನಿಗೆ ಮೋಸ ಮಾಡಿದರು...ಪುಟ್ಟಿ ನನ್ನ ಮೊಮ್ಮಗಳು ಅಂತ ಹೇಳುತ್ತಿದ್ದ ಶಂಕರಜ್ಜ ನನ್ನ ಬರುವಿಕೆಗೂ ಕಾಯದೆ ಹೋದರೆ...? ನನ್ನ ನೆನಪು ಆ ಕ್ಷಣ ಅವರಿಗೆ ಬರಲಿಲ್ಲವೆ...? ಯಾರಲ್ಲಿ ಕೇಳಲಿ...ಹೇಗೆ ಉತ್ತರ ಹುಡುಕಲಿ. ಕಾಯಕವೆ ಕೈಲಾಸ ಎಂದು ನಡೆಯುವ ಶಂಕರಜ್ಜನು ಇನ್ನಿಲ್ಲ ಎಂದು ಒಪ್ಪಿಕೊಳ್ಳಲು ಮನಸ್ಸಾಗಲಿಲ್ಲ. ಅಪ್ಪನು ವಿಷಯ ಮುಚ್ಚಿಟ್ಟರು...

ಮನೆಗೆ ಹೊರೆಟೆ...ದಾರಿಯಲ್ಲಿ ಶಂಕರಜ್ಜನದ್ದೇ ನೆನಪು. ಆ ವಯಸ್ಸಿನಲ್ಲೂ ನಗುಮುಖ. ಆಂ! ಕಾಲಿಗೆ ಮುಳ್ಳು ತಾಗಿತು, ಆದರೆ ನೋವಾಗುತ್ತಿಲ್ಲ...ಮನಸ್ಸು ಪ್ರಸ್ತುತವನ್ನು ಒಪ್ಪಿಕೊಳ್ಳಲು ಸಿದ್ಧವಾಗುತ್ತಿಲ್ಲ.

ದೂರದಲ್ಲಿ ನನ್ನ ಮನೆ. ಆದರೆ ಶಂಕರಜ್ಜನೂ ಅವನ ಅಂಗಡಿ ಮಾತ್ರ ಕಾಣುತ್ತಿಲ್ಲ. ನನ್ನ ಕಣ್ಣು ಮಾತ್ರ ನೀರಿನಿಂದ ತುಂಬಿತ್ತು.

ಸೋತು ಗೆದ್ದವನು

ಸಂಗ್ರಹ – ಅಯ್ಯಪ್ಪ
ಪ್ರಥಮ. ಬಿ.ಎ.

ಆ ಹಳ್ಳಿಯ ಹೆಸರು ಅರ್ಪಳ್ಳಿ. ಅಲ್ಲಿ ದ್ಯಾಮವ್ವ ಅನ್ನೋ ಅಜ್ಜಿ ಇದ್ದಳು ಹಾಗೆ ಈ ಅಜ್ಜಿಗೆ ಯಲ್ಲಪ್ಪ ಅನ್ನುವ ಮೊಮ್ಮಗನಿದ್ದ ಮತ್ತು ಅಜ್ಜಿಗೆ ಒಬ್ಬ ಸೂರಪ್ಪ ಎಂಬ ಮಗನಿದ್ದ. ಸೂರಪ್ಪನ ಮದುವೆಯಾಗಿ ಯಲ್ಲಪ್ಪನು ಹುಟ್ಟಿದ ಮೇಲೆ ಹೆಂಡತಿ ತೀರಿ ಹೋದಳು. ಮಗನನ್ನು ತನ್ನ ಜೀವಕ್ಕಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದ ಸೂರಪ್ಪ. ಪ್ರತಿದಿನ ಸಾಹುಕಾರರ ಮನೆಗೆ ಹೋಗಿ ಅವರ ತೋಟದಲ್ಲಿನ ತೆಂಗಿನ ಮರವನ್ನು ಹತ್ತಿ ತೆಂಗಿನಕಾಯಿಯನ್ನು ಇಳಿಸುತ್ತಿದ್ದ. ಒಂದು ದಿನ ಮರದಿಂದ ಸೂರಪ್ಪನು ಕೆಳಗೆ ಬಿದ್ದು ಮರಣ ಹೊಂದಿದನು.

ಸೂರಪ್ಪನು ಸತ್ತ ಮೇಲೆ ಅಜ್ಜಿಯು ಮೊಮ್ಮಗನಾದ ಯಲಪ್ಪನನ್ನು ಸಲಹಿದಳು. ಅಜ್ಜಿಯು ತರಕಾರಿ ವ್ಯಾಪಾರ ಮಾಡಿ ಮೊಮ್ಮಗನ್ನು ನೋಡಿಕೊಳ್ಳುತ್ತಿದ್ದಳು. ಒಂದು ದಿನ ಅಜ್ಜಿಗೆ ಒಳ್ಳೆಯ ಲಾಭವಾಗಿ ತರಕಾರಿ ಖಾಲಿಯಾಯಿತು. ತರಕಾರಿ ತೆಗೆದುಕೊಂಡು ಬರಲು ಯಲ್ಲಪ್ಪನಿಗೆ ಮುನ್ನೂರು ರೂಪಾಯಿ ಕೊಟ್ಟು ಪೇಟೆಗೆ ಕಳುಹಿಸಿದಳು. ಯಲ್ಲಪ್ಪ ಹೋಗುವ ದಾರಿಯಲ್ಲಿ ಒಂದು ಜನ ಸಮೂಹ ನೆರೆದಿತ್ತು. ಅಲ್ಲಿ ಏನಾಗಿದೆ ಎಂದು ನೋಡಿಕೊಂಡು ಬರೋಣ ಎಂದು ಯಲ್ಲಪ್ಪನು ತೆರಳಿದ. ಅಲ್ಲಿ ನೋಡಿದರೆ ಹಾವು ಆಟಗಾರನೊಬ್ಬ ಹಾವನ್ನು ಆಡಿಸುತ್ತಿದ್ದ. ಆಗ ಆ ಹಾವನ್ನು ಕಂಡ ಯಲ್ಲಪ್ಪನು ತುಂಬಾ ಇಷ್ಟಪಟ್ಟನು. ಕೊನೆಗೆ ಆ ಹಾವನ್ನು ತಾನು ಪಡೆಯಬೇಕು ಎಂಬ ಆಸೆ ಉಂಟಾಯಿತು. ನಂತರ ಆ ಹಾವು ಆಟಗಾರನ ಬಳಿ, ಅಣ್ಣೋ ಈ ಹಾವು ನನಗೆ ತುಂಬಾ ಇಷ್ಟ ಆಗಿದೆ. ಕೊಡ್ತಿಯಾ ಅಣ್ಣಾ ಎಂದು ಕೇಳಿದ. ಆ ಹಾವು ಆಟಗಾರನು ಇಲ್ಲಪ್ಪಾ, ಕೊಡೋಕೆ ಆಗುವುದಿಲ್ಲ. ಇದರಿಂದಲೇ ನನ್ನ ಜೀವನ ನಡೆಯುತ್ತಿರೋದು. ಇದು ನಿನಗೆ ಕೊಟ್ಟು ನಾನೆಲ್ಲಿಗೆ ಹೋಗಲಿ ಎಂದು ಯಲ್ಲಪ್ಪನಿಗೆ ಹೇಳಿದ. ನಂತರ ಯಲ್ಲಪ್ಪ ಬೇಜಾರಿನಿಂದ ಅಲ್ಲಿಂದ ಹೊರಡುವಾಗ ಆತನ ಸಪ್ಪೆ ಮುಖವನ್ನು ನೋಡಿದ. ಹಾವು ಆಟಗಾರನು ಪುನಃ ಯಲ್ಲಪ್ಪನನ್ನು ಕರೆದು ಹೀಗೆ ಹೇಳಿದ.

ನೋಡಪ್ಪ, ಈ ಹಾವನ್ನು ಯಾರು ಕೇಳಿದರೂ ಕೊಟ್ಟಿಲ್ಲ. ಆದರೆ ನಿನ್ನ ನೋಡಿದ ಮೇಲೆ ಇದು ನನಗಿಂತ ನಿನಗೆ ಅಗತ್ಯವಾದುದು ಎಂದು ಅನಿಸುತ್ತಿದೆ. ಇದು ನೀನು ಕೊಳ್ಳುವುದಾದರೆ 100 ರೂಪಾಯಿಯನ್ನು ಕೊಟ್ಟು ತೆಗೆದುಕೋ ಎಂದು ಹೇಳಿದನು. ಆಗ ಯಲ್ಲಪ್ಪ ತುಂಬಾ ಖುಷಿಯಿಂದ ತೆಗೆದುಕೊಂಡ. ಮುಂದೆ ಸಾಗಿದ. ಅಲ್ಲಿಯೇ ಸ್ವಲ್ಪ ದೂರದಲ್ಲಿಯೇ ಒಬ್ಬ ಗಿಳಿಶಾಸ್ತ್ರ ಹೇಳುವವನು ಮುಂದೆ ಒಬ್ಬನನ್ನು ಕೂರಿಸಿಕೊಂಡು ಭವಿಷ್ಯ ಹೇಳುತ್ತಿದ್ದ. ಆ ಗಿಳಿಯು ಪಂಜರದೊಳಗಿನಿಂದ ಒಂದು ಟಪುಲನ್ನು ತೆಗೆದು ಅವನ ಕೈಯಲ್ಲಿ ಕೊಟ್ಟು ಪಂಜರದೊಳಗೆ ಹೋಗುವುದನ್ನು ಯಲ್ಲಪ್ಪ ನೋಡಿ ಈ ಗಿಳಿಯನ್ನು ತೆಗೆದುಕೊಳ್ಳಬೇಕೆಂಬ ಹಂಬಲವನ್ನು ಹೊಂದಿದನು. ನಂತರ ಶಾಸ್ತ್ರವ ಹೇಳುವವನ ಬಳಿ ಕೇಳಿದ, ಈ ಗಿಳಿಯನ್ನು ಕೊಡುವಿರಾ ಎಂದು. ಆಗ ಆತನು ಇಲ್ಲ, ಇದನ್ನು ಕೊಡಲಾಗದು. ಇದು ಕಾಶಿಯಿಂದ ತಂದಿರುವ ಗಿಳಿ ಎಂದು ಕೊಡಲು ನಿರಾಕರಿಸಿದನು. ಕೊನೆಗೆ ಬೇಸರದಿಂದ ಹೊರಟ ಯಲ್ಲಪ್ಪನನ್ನು ಕರೆದು ತೆಗೆದುಕೊ, ಇದರ ಬೆಲೆ ಒಂದು ಸಾವಿರ ರೂಪಾಯಿ. ಇದು ನನಗಿಂತ ನಿನಗೆ ಉಪಯುಕ್ತ ಅನಿಸುತ್ತಿದೆ. ನಿನ್ನ ಬಳಿ ತುಂಬಾ ಹಣ ಇಲ್ಲ ಅಂತ ಗೊತ್ತು. 100 ರೂಪಾಯಿ ಕೊಟ್ಟು ತೆಗೆದುಕೊಂಡು ಹೋಗು ಎಂದನು. ಆಗ ಯಲ್ಲಪ್ಪನು ಉಳಿದಿರೋ 200 ರೂಪಾಯಿಯಲ್ಲಿ 100 ರೂಪಾಯಿ ಕೊಟ್ಟು ಗಿಳಿಯನ್ನು ತೆಗೆದುಕೊಂಡು ಹೊರಟನು. ಯಲ್ಲಪ್ಪನ ಬಳಿ ಉಳಿದ ಹಣ ಕೇವಲ 100 ರೂಪಾಯಿ ಮಾತ್ರ. ಹೀಗೆ ಮುಂದೆ ಪೇಟೆಗೆ ಹೋಗುತ್ತಾ ಹಾವು ಮತ್ತು ಗಿಳಿಯನ್ನು ತೆಗೆದುಕೊಂಡ ಖುಷಿಯಲ್ಲಿ ಅವುಗಳನ್ನು ನೋಡುತ್ತಾ ಮುಂದೆ ಉಳಿದಿರೋ 100 ರೂಪಾಯಿಯಲ್ಲಿ ತರಕಾರಿ ತೆಗೆದುಕೊಂಡು ಹೋಗೋಣ ಎಂದು ಒಬ್ಬ ಅಜ್ಜಿಯಬಳಿ ಹೋಗಿ ಕೆಜಿ ಲೆಕ್ಕವನ್ನು ಕೇಳುವಾಗ ಅಜ್ಜಿಯ ಬಳಿ ಒಂದು ಮಂಗವು ಕುಳಿತು ವ್ಯಾಪಾರಿಗಳ ಹಣ್ಣುಗಳನ್ನು ಒಂದೊಂದಾಗಿ ಅಜ್ಜಿಗೆ ತೆಗೆದು ಕೊಡುತ್ತಿತ್ತು. ಅಜ್ಜಿಯು ಅದೇ ಹಣ್ಣುಗಳನ್ನು ಮಾರುತ್ತಿರುವುದನ್ನು ಸೂಕ್ಷವಾಗಿ ವೀಕ್ಷಿಸಿದ. ಈ ಮಂಗವು ಸಹ ಅವನಿಗೆ ಇಷ್ಟವಾಯಿತು. ಆ ಮಂಗವನ್ನು ತೆಗೆದುಕೊಳ್ಳಬೇಕೆಂದು ಅಜ್ಜಿಯ ಬಳಿ ಕೇಳಿದ. ಅಜ್ಜಿಯು ಹೀಗೆ ಹೇಳುವಳು, ಮಗ, ನನಗಂತೂ ಮಕ್ಕಳಿಲ್ಲ. ಈ ಕೋತಿಯೇ ನನಗೆ ಸರ್ವಸ್ವವಾಗಿದೆ. ಇದನ್ನು ಕೊಟ್ಟು ನಾನು ಯಾವ ವೃದ್ಧಾಶ್ರಮಕ್ಕೆ ಸೇರಲಿ ಹೇಳು ಮಗು ಎಂದು ಕೇಳಿದಳು. ಆಗ ಯಲ್ಲಪ್ಪನು, ಇಲ್ಲ ಅಜ್ಜಿ ನನಗೆ ಬೇಡ. ನೀನೇ ಇಟ್ಟುಕೋ ಎಂದು ಹೇಳಿದ. ಯಲ್ಪಪ್ಪನನ್ನು ಕರೆದು, ಮಗು ನಾನು ಇಂದಲ್ಲ ನಾಳೆ ಅಂದರೆ, ಕೆಲವೇ ದಿನಗಳ ಕಾಲ ಬದುಕುವುದು. ನನ್ನ ಉಸಿರು ನಿಂತ ಮೇಲೆ ಇದನ್ನು ಸಾಕುವವರು ಯಾರೂ ಇಲ್ಲ. ಇದನ್ನು

ನಾವು ನಮ್ಮ ರಾಷ್ಟ್ರ ಧ್ವಜಕ್ಕೆ ನೀಡುವಷ್ಟೇ ಗೌರವ ನಮ್ಮ ರಾಜ್ಯ ಧ್ವಜಕ್ಕೂ ನೀಡುವಂತಾಗಬೇಕು. ಆದಾಗ ಮಾತ್ರ.....ನಾವು ನಮ್ಮ ರಾಜ್ಯದ ಸಲುವಾಗಿ ತೋರಿಸುವ ಪ್ರೀತಿಯನ್ನು ವ್ಯಕ್ತಪಡಿಸಲು ಸಾಧ್ಯ.

ನಮ್ಮ ರಾಜ್ಯದ ಬಾವುಟವೂ ಅಧಿಕೃತವಾಗಿ 'ರಾಜ್ಯ ಬಾವುಟ' ಎಂದು ಕರೆಯಲ್ಪಡಬೇಕು. ಇಡೀ ಭಾರತದಲ್ಲಿ ಕೇವಲ ಜಮ್ಮು–ಕಾಶ್ಮೀರದಲ್ಲಿ ನಾವು ಅವರ ರಾಜ್ಯದ ಬಾವುಟ ಕಾಣಲು ಸಾಧ್ಯ. ಆದರೆ, ಇನ್ನು ಕೆಲವೇ ದಿನಗಳಲ್ಲಿ ನಮ್ಮ ಕರ್ನಾಟಕವೂ ಆ ಸಾಲಿನಲ್ಲಿ ಸೇರುವಂತಾಗಬೇಕು.

ಬೇರೆ ರಾಜ್ಯದ ಆಸೆ, ಆಕಾಂಕ್ಷೆ, ಏನೇ ಇರಲಿ, ಆದರೆ,

"ನಮ್ಮ ರಾಜ್ಯ, ನಮ್ಮ ಧ್ವಜ,
ನಮಗಾಗಿ, ನಮ್ಮಿಂದಲೇ, ರಾರಾಜಿಸಲಿ,
ಎನ್ನುವ ಬಯಕೆ ಈ ನನ್ನ ಮುದ್ದು ಮನಸ್ಸಿಗೆ."

ಹಾಗಿದ್ದರೆ, ಪ್ರತಿಯೊಂದು ಜೀವ, ಪ್ರತಿಯೊಂದು ಕ್ಷಣ, ಪ್ರತಿಯೊಬ್ಬರೂ, ಕನ್ನಡ ಪರ ಹೋರಾಟ ಮಾಡಿ, "ಕರ್ನಾಟಕಕ್ಕೆ ಪ್ರತ್ಯೇಕ ಧ್ವಜ" ನೀಡಬೇಕು.

"ಭಾರತಾಂಬೆಯ ಶೃಂಗಾರವನ್ನು ನಮ್ಮ ಕನ್ನಡ ಧ್ವಜದಿಂದಲೇ ನಾವು ಮಾಡಿ, ಅರಶಿಣ–ಕುಂಕುಮದಿಂದ ಸಿಂಗರಿಸಿ, ಕನ್ನಡ, ಸಾಹಿತ್ಯ, ಸಂಸ್ಕೃತಿಯ ಭೂಷಣದಿಂದ ನಮ್ಮ ಕನ್ನಡತಿಯನ್ನು ಅಲಂಕರಿಸುವ ಭಾಗ್ಯ ನಮಗಾಗಲಿ" ಎಂದು ಹೇಳುತ್ತಿರುವ ಈ ಕನ್ನಡ ಜೀವ ಇದು.

ಗಡಿಬಿಡಿಯ ಗಂಡಾಂತರ

(ವಿದ್ಯಾರ್ಥಿ ವೇದಿಕೆ ಆಯೋಜಿಸಿದ ಹಾಸ್ಯಬರಹ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಬರಹ.)

– ರಸಿಕ್ ಕುಮಾರ್
ತೃತೀಯ ಬಿ.ಎ.

ಹಾಸ್ಯವೆಂಬುವುದು ನಮ್ಮ ಜೀವನದ ಎಲ್ಲಾ ಹಂತಗಳಲ್ಲೂ ಬರುವಂಥದ್ದು. ಹಾಸ್ಯಕ್ಕೆ ಇಂಥದ್ದೇ ಆದ ಮಿತಿ ಅಂತೇನಿಲ್ಲ. ಹಾಸ್ಯಕ್ಕೆ ಹಾಸ್ಯ ಇದ್ರೆ ಸೈ, ಜನರು ಅದನ್ನ ಓದಿ ಹಲ್ಲು ಬಿಟ್ರೆ ಸೈ. ಕಾಲ್‌ಗೇಟ್ ಕಂಪೆನಿ ಮಾಲಿಕರಾದಷ್ಟು ಸಂತೋಷ್ ಆತ್ತ್. ಇವತ್ತು ಹಾಸ್ಯವನ್ನ ಮಾಡೋಣ. ಯಾವುದ್ರ ಮೇಲೆ...? ವಿಷ್ಯ ಗಡಿಬಿಡಿಯ ಗಂಡಾಂತರ. ಗಡಿಬಿಡಿ ಮಾಡಿ ಕೆಲ್ಸ ಮಾಡಿದ್ರೆ ಏನೆಲ್ಲಾ ಅನಾಹುತ ಆಗ್ತದೆ ಅಂತ ಹಾಸ್ಯದ ಮೂಲಕ ಹೇಳುವಂಥದ್ದು. ಹಾಸ್ಯಕ್ಕೆ ಭಾಷೆ ಬಹುಮುಖ್ಯ. ಹಾಗಾಗಿ ನಾನು ಕುಂದಗನ್ನಡವನ್ನ ಬಳಸುತ್ತಿದ್ದೇನೆ.

ಹ್ವಾಯ್ ನಮಸ್ಕಾರ.....ನಾನ್ ಅಣ್ಣಪ್ಪಣ್ಣ.....ನನ್ನ ಕಥೆ ಎಂಥ ಗೊತ್ತಾಯ್ಲಿಲ್ಲ್ ನಿಮ್ಗೆ. ನಾನೊಂದ್ ಹೆಂಡ್ತಿನ್ ಕಟ್ಕಂಡ್ ಆ ಹೆಂಗ್ಸ್ ನನ್ ಲಗಾಡಿ ತೆಗ್ದ್ ಕೊಡ್ತೆ. ಹೆಂಗ್ಸ್ ಎಲ್ಲಾದಕ್ಕೂ ಗಡ್ಬಿಡಿ ಮಾಡುದು. ಗಡ್‌ಬಿಡಿ ಮಾಡಿ ಎಲ್ಲಾ ಕೌಂಚಿ ಹಾಕುದ್. ನನ್ ಕರ್ಮ. ಮೊನ್ನೆ ಎಂಥ ಆಯ್ತಾ ಗೊತಿತ್ತಾ? ನನ್ ಭಾವ ಮೈಸೂರಿಂದ ಬಂದಿದ್ದ ಊರಿಗೆ, ಹಾಂಗ್ ತಂಗಿನ್ ಕಂಡ್ಕ ಹೋಪ ಅಂದೇಳಿ ನಮ್ಮನಿಗ್ ಬಂದ ರಾತ್ರಿ ಹೊತ್ತಿಗೆ. ಈ ಹೆಂಗ್ಸ್ ಧಾರವಾಹಿ ಕಾಂತ ಕೂತಿತ್. ನಾನ್ "ಏಯ್ ಇವ್ಳೇ, ನಿನ್ ಅಣ್ಣ ಬಂದಿದ ಬಾ ನೋಡ್" ಅಂದೆ. ಹೆಂಗ್ಸಿಗ್ ನನ್ನ ಎದೆಗ್ ಬೆಚ್ಚಿ ತೊರುವ ಅಂಬಗ್ ಆಯ್ತೋ ಏನೋ. ಸೀದಾ ದಡಬಡ ಅನ್ಕೊಂಡ್ ನೆಲ ಬಡ್ದ್ ಹೋಪಂಗ್ ಅಡುಗೆ ಮನೆಗೆ ಹೋಯ್ ಚಾ ಮಾಡ್ಕ ಬಂದಳ್. ಆ ಚಾ ಕುಡ್ಕಂಡ್ ಹೋದ್ ನನ್ ಭಾವ ಮತ್ ನಮ್ಮನಿ ಬದಿಗ್ ಬರ್ಲೇ ಇಲ್ಲ. ಯಾಕೆ ಕೇಂತ್ರಿಯಾ...? ಈ ಸತ್ತ್ ಧಾರವಾಹಿ ಕಾಂಬುಕಂದೇಳಿ ಗಡ್ಬಿಡಿಯಂಗ್ ಚಾಕ್ಕೆ ಸಕ್ರಿ ಹಾಕ್‌ಕಿದ್ರೆ ಉಪ್ ಹಾಕಿ ಸತ್ತಿದಳ್. ಕಹಿ ಗೆಂಡ.

ಅದೂ ಈ ಹೆಂಗ್ಸಿನ್ ಧಾರವಾಹಿ ಚಟದೊಳ್ಗೆ ಮಕ್ಕಳ್ ಮರಿ ಬದ್ಕುದೇ ಇಲ್ಲ. ಅದಕ್ಕೋಸ್ಕರ ನಾನೇ ರಾತ್ರಿ ಆದ್ಮೇಲೆ ಮಕ್ಕಳನ್ನೆಲ್ಲ ತೊಡಿಮೇಲ್ ಕೂರಿಸ್ಕಂಬುದೆ. ಯಾಕೆ ಕೇಣಿ. ಈ ಹೆಂಗ್ಸ್ ಅಡಿಗಿ ಮನೆಗ್ ಸಾಂಬಾರ್ ಮಾಡುಕ್ ಇಟ್ಟ್ ಬತ್. ಅದ್ ಕುದಿತ ಇಲ್ಯ ಕಾಂಬುಕೆ ಇಪ್ಪತ್ತೈದ್ ಸಲ ಆಚಿಂದ ಈಚೆಗ್ ಈಚಿಂದ್ ಆಚೆಗ್ ಓಡುದ್. ಈ ಗಡಿಬಿಡಿಯಂಗ್ ಓಡುದ್ರೊಳ್ಗೆ ಮಕ್ಳ್

ಮರಿ ಮೆಟ್ರು ಮೆಟ್ಟಿಳ್ ಅವ್ಳ. ಅದ್ಕೆ ಅದೆಲ್ಲ ಕೆಲ್ಸ ಬೇಡ ಹರ್ಕಿ ಹೊತ್ತ್ ಹುಟ್ಟಿದ್ ಮಕ್ಕಳ್ ಅವ್. ಅವ್ಳ್ ಧಾರವಾಹಿ ಕಾಂಬು ಜೋಗಳ್ಳೊಳ್ಗೆ ಮಕ್ಕಳ್ ಮರಿನೆಲ್ಲ ಕೊಂದ್ಕ ತಿಂಬುದಲ್ಲ.

ಹೋದ್ ತಿಂಗ್ಳ್ ನಂಗ್ ಯಾವ್ದೋ ಕೆಲ್ಸದ್ ಮೇಲ್ ಬೆಂಗ್ಳೂರಿಗ್ ಹೋಪ್ಕ್ ಇದ್ದೀತೇ. ನಂಗ್ ಬಟ್ಟಿ ಪ್ಯಾಕ್ ಮಾಡುಕ್ ಪುರ್ಸುತ್ ಇರ್ಲ. "ಏಯ್ ಇವ್ಳೇ, ನನ್ ಬಟ್ಟೆ ಒಂಚೂರ್ ಪ್ಯಾಕ್ ಮಾಡೆ" ಅಂದೆ. ಅವ್ಳ್ ನಾಗಿಣಿ ಧಾರವಾಹಿ ಕಾಂತ ಕೂತಿದ್ದಳ್. ಸಿಟ್ಟ್‌ಬಂದ್ ಸೀದಾ ನನ್ ಕೋಣೆಗೆ ಹೋಯ್ ಅಂತೂ ಬಟ್ಟೆ ಪ್ಯಾಕ್ ಮಾಡ್ಕು ಬಂದ್ ಕೊಟ್ಟಳ್. ನಂಗ್ ಬಸ್ಸಿಗ್ ಟೈಂ ಆಯ್ತ್ ನಾನ್ ಹೋದೆ. ಬೆಂಗ್ಳೂರಲ್ ರೂಮಿಗ್ ಹೊಯ್ಕಂಡ್ ಪ್ಯಾಂಟ್ ಚೇಂಜ್ ಮಾಡ್ಕಂದೇಳಿ ಪ್ಯಾಂಟ್ ಹುಡುಕ್ತೆ, ಪ್ಯಾಂಟ್ ಎಲ್ಲಿತ್...? ಈ ಸತ್ತಳ್ ಪ್ಯಾಂಟ್ ಬದ್ಲ್ ಲಂಗ ಹಾಕಿ ಇಟ್ಟಿದಳ್. ನಾನ್ ಎಂಥ ಆಫೀಸರ್ ಹತ್ರ ಲಂಗ ಹಯ್ಕಂಡ್ ಹೋಪ್ತಾ...ಎಂಥ ಹೆಂಗ್ಸು, ಗಡಿಬಿಡಿ ಅಷ್ಟ್. ಕಡಿಗ್ ನಾನ್ ಹೊಸ ಪ್ಯಾಂಟ್ ತಕಂಡ್ ಹೋದ್ದ್.

ಅದ್‌ಬಿಡಿ. ಮಾನ ಪರ್ಯಾದೆ ಹೋಪುದ್ ಪ್ರಶ್ನೆ ಅಲಾ...ಮೊನ್ನೆ ನನ್ ಜೀವ್‌ಮಾನ ತೆಗಿತಿದ್ದಳ್. ನಂಗೆ ಜೋರ್ ಅರ್‌ಜೆಂಟ್ ಆಯ್ತ್ ಸೀದಾ ಬಾತ್‌ರೂಮಿಗ್ ಹೋದೆ. ಹೋಯ್ ಕಾಂತೆ ನೀರಿಲ್ಲ ಮರ್ರೆ, ಎಂಥ ಸಾಯುದ್. ಹೆಂಡ್ತಿನ್ ಕರ್ದ್ ಕೇಳ್ದೆ, "ಇವ್ಳೇ ಒಂದ್ ಚೆರಿಗಿ ನೀರ್ ತಕಂಬಾ" ಅಂದೆ. ತಂದಿಟ್ಟಳ್ ಹೇಳ್ದಂಗೆ. ನಂಗ್ ಅವ್ಳ್ ತಂದಿಟ್ಟಿದ್ದ್ ಬಿಸಿ ಕೊದಿ ನೀರ್ ಅಂದೇಳಿ ಗೊತ್ತಾದ್ ನನ್....ಬೂಲ್‌ಹಂಡ್ ಸುಟ್ಟೋದ್ಮೇಲೆ. ಈಗ ಊರ್ನರೆಲ್ಲ "ಎಂಥಕ್ ಹಾಂಗ್ ನಡಿತಾ ಇದ್ರಿ, ಏನಾಯ್ತ್" ಕೇಳ್ತೆ, "ಬಿದ್ದ್ ಸ್ವಲ್ಪ ಕಾಲ್ ನೋವ್ ಆಯ್ತ್, ಅದ್ಕೆ ಅಂದೇಳಿ ಹೇಳುದ್. ಮತ್ತೆಂತ ಬೂಲ್ ಸುಟ್ಟ್ ಹೋಯ್ತುಂದೇಳಿ ಹೇಳುಕಾತ್ತ?

ಇವ್ಳಿಗ್ ಹೇಳುಕ್ ನಾನೇನ್ ಘನಾನನಲ್ಲ ಬಿಡಿ ಮೊನ್ನೆ ಗಡಿಬಿಡಿಯಂಗೆ ಕಾಲ್ ಬಂತ್ ಅಂದ್ಹೆಳಿ ಮೊಬೈಲ್ ತಕಂಡ್ ಕಿವಿಗ್ ಇಟ್ಕುಂಬು ಬದ್ಲ್ ಪಕ್ಕದಂಗ್ ಇದ್ದಿದ್ ಇಸ್ತ್ರಿಪೆಟ್ಟಿಗಿ ಇಟ್ಕಂಡದ್ ಕಪಾಲ್‌ಗೆಂಡಿಗ್ ಉದ್ದಿನ್ ಗುತ್ತಿಗೆ ಬೂದಿ ಚೊಲ್ಲಿದ್ ನಮ್ಮಿ ಆಯ್ತ್. ಆರು ನಮ್ಗ್ ಇದೆಲ್ಲ ಬ್ಯಾಡಿದ್ದಿತ್ತ್.

ಈ ಗಡ್‌ಬಿಡಿಯೊಳ್ಗೆ ಕೆಲವ್ರು ಜೀವ ತಕ್ಕಂತ ಹೋಯ್. ಮೊನ್ನೆ ನಾನ್ ಬೆಂಗ್ಳೂರಿಗ್ ಹೋದಲ್, ನಮ್ ಬಿಲ್ಡಿಂಗ್‌ಗೆ ಒಬ್ಬ ಬಿಲ್ಡಿಂಗ್ ಟಾಪ್ ಮೇಲ್ ನಿಂತಿದ್ದ. ಯಾವನೋ ಒಬ್ಬ ಬಂದ್ಕಂಡ್ ಅಣ್ಣಯ್ಯ ನಿನ್ ಹೆಂಡ್ತಿ ಸತ್ತೋದ್ಲ್ ಅಂದ. ಟಾಪ್ ಫ್ಲೋರಂಗ್ ನಿಂತ್ತನ್ ತಡಬಡ ಮಾಡ್ಲ "ಅಯ್ಯೋ ನನ್ ಹೆಂಡ್ತಿ ಸತ್ತೋದಳಾ, ಅವ್ಳ ಹೋರ್‌ಮೇಲೆ ನಾನ್ಯಾಕೆ ಬದ್ಕುದ್" ಅಂದನೇ ಸೀದಾ ಹೋಯ್ ಹಾರಿ ಬಿಟ್ಟ ಬಿಲ್ಡಿಂಗ್ ಮೇಲಿಂದ. ಪುಣ್ಯಾತ್ಮ ಹಾರಿದ್ಮೇಲ್ ಗೊತ್ತಾಯ್ತ್ ನಂಗಿನ್ನು ಮದ್ವೇನೇ ಆಯ್ಲಿಲ್ಲ ಇನ್ ಹೆಂಡ್ತಿ ಎಲ್ಲಿಂದ ಅನ್ಕಂಡ್. ಎಂಥ ಮಾಡುದ್, ಹಾರಿ ಆಯ್ತ್, ಜೀವ ಹೋಯ್ ಆಯ್ತ್.

ನಾಡಿದ್ದ್ ಫೆಬ್ರವರಿ 14ಕ್ಕೆ ಪ್ರೇಮಿಗಳ ದಿನಾಚರಣೆ ಬಂತಲ. ಕೆಲವ್ ಹುಡುಗ್ರಿಗೆ ಚ್ಯಾನ್ಸ್ ಆತ್ತ್ ಈಗ. ಪ್ರೇಮಿಗಳ ದಿನಾಚರಣೆಗ್ ಶುಭಾಶಯ ತಿಳಿಸ್ಲಿಕ್, ನನ್ ಫ್ರೆಂಡ್ ಒಬ್ಬ ಅವಂದ್ ಲವ್ವರ್‌ಗೆ "Happy Valentine's day, I Love you" ಎಂದೇಳಿ ಮೆಸೇಜ್ ಕಳ್ಸುಕ್ ಹೋದ. ಅದು ಮಿಸ್ಸಾಯ್ತ್. ಇನ್ನೊಬ್ಬಿಗ್ ಹೋಯ್ತ್. ಅವ್ಳೂ "I love you so much" ಅಂದಳ್, ಯಾರಿಗುಂಟು ಯಾರಿಗಿಲ್ಲ. ಹೊಡಿ ಒಂದ್ ಸೋಡ ಶರ್ಬತ್, ಗಡ್‌ಬಿಡ್ಯಾಂಗಾರು ಮತ್ತೊಂದ್ ಹುಡ್ಗೀನ ಕ್ಯಾಚ್ ಹಯ್ಕಂಡ ಬಡ್ಡೀಮಗ.

ನನ್ನನ್ ಒಂದ್ಸಲ ವಿಧವಾ ಸಂಘಕ್ಕ್ ಭಾಷಣಕ್ಕ್ ಕರ್ದಿದ್ರ್. ನಾನ್ ಹೋಯ್ದೆ. ಅಲ್ಲಿನ್ ಒಬ್ಬ ಎಮ್.ಎಲ್.ಎ. ಮುಖ್ಯ ಅತಿಥಿ. ಅವ್ನಿಗ್ ಸುಟ್ಕಂಡ್ ತಿಂಬುಕ್ ಎಂಥ ಬತ್ತಿಲ್ಲ. ಸಮಿತಿಯವ್ರು. ಹೇಯ್ ಬನ್ನಿ ಭಾಷಣ ಮಾಡಿ ಅಂತ. ಇವ ಗಡ್‌ಬಿಡಿಯಂಗ್ ಹೋಯ್ ಎಂತ ಹೇಳಿದ್ದ್ ಗೊತಿತ್ತಾ...? ವಿಧವೆಯರು ಇಷ್ಟು ಸಂಖ್ಯೆಯಲ್ಲಿ ಸೇರಿದ್ದು ನನಗೆ ತುಂಬಾ ಖುಷಿಯಾಗ್ತಾ ಇದೆ. ಇನ್ನೂ ಮುಂದಿನ ದಿನಗಳಲ್ಲಿ ಈ ಸಂಖ್ಯೆಯನ್ನು ಇನ್ನೂ ಹೆಚ್ಚಿಸ್ತೇನೆ. ಅಷ್ಟೇ ಅಲ್ಲದೆ ಮುಂದಿನ ದಿನಗಳಲ್ಲಿ ನನ್ನ ಹೆಂಡತಿಯನ್ನೂ ಈ ಸಂಘಕ್ಕೆ ಸೇರ್ಸುವವನಿದ್ದೇನೆ" ಅಂದ. ಅಲ್ಲಿದ್ದರೆಲ್ಲ ಮೆಟ್ಟ್ ತಕ್ಕಂಡ್ ಕೊಟ್ರ್ ಅವ್ನಿಗ್.

ನನ್ ಹೆಂಡ್ತಿ ಸ್ವಲ್ಪ ಕಪ್ಪ್ ಹೋಯ್. ಅವ್ಳಿಗ್ ಬಿಳಿ ಆಯ್ಕ್ ಅಂತ್ ಆಸೆ. ಸಮಾ ಉಂಡ್ರೆ ತಿಂದ್ರೆ ಬಿಳಿ ಆತ್ತ್. ಅದ್ ಬಿಟ್ಕಂಡ್ ಇಡೀ ದಿನ ಧಾರವಾಹಿ ಕಾಂತ ಆಯ್ಕಂಡ್ರೆ ಎಂಥ ಬಿಳಿ ಆತ್ತ್. ಇವ್ಳ್ ಹೇಳುದ್, "ನನ್ ಫ್ರೆಂಡ್ಸೆಲ್ಲ ಬಿಳಿ ಇದ್ರ್, ನಾನು 7 ದಿನದೊಳ್ಗೆ ಬಿಳಿ ಆಯ್ಕ್ ನಂಗೆ ಫೇರ್ ಆಂಡ್ ಲವ್ಲಿ ತಂದ್‌ಕೊಡಿ. ನಾನು ಏಳ್ ದಿನದೊಳ್ಗ್ ಬಿಳಿ ಆತೆ" ಅಂದಳ್. ಎಂತ ಅದ್ 7 ದಿನದೊಳ್ಗ್ ಬಿಳಿ ಆಪ್ಕೆ, ಮೀನ್ ಪದಾರ್ಥ ಅಂದ್ಕಂಡ್ಯಾ...!!! ಹಾಂಗ್ ಬಿಳಿ ಆಪ್ಪಾರ್ ನಾನ್ ಯಾವತ್ತೋ ಬಿಳಿ ಆಯ್ತಿತ್ತ್. 7 ದಿನದಂಗ್ ಬಿಳಿ ಆಯ್ಕ್ ಅಂದೇಳಿ ಹಯ್ಕಂಡ್ ತಿಕ್ಕಿದ್ದೇ ತಿಕ್ಕಿದ್, ಹೆಂಗ್ಸಿದ್ ಮುಖ ಎಲ್ಲ ಸುಟ್ಟ್‌ಹೋಯ್ ಮತ್ತು ಕಪ್ಪು ಆಯ್ತ್. ಗಡ್‌ಬಿಡಿ ಮಾಡುಕಾಗ ಈ ವಿಷ್ಯದಂಗೆಲ್ಲ.

ನನ್ ಮಗರಾಯ ಮೊನ್ನೆ ಒಂದ್ ಕಥೆ ಮಾಡ್ಕಂಡಿದ. ನಮ್ಮನೆಗ್ ತುಳಸಿ ಪೂಜೆ. ಪಟಾಕಿ ಎಲ್ಲ ತಂದಿಟ್ಟಿದ್ದೆ. ಇವ್ನಿಗೆ ಪಟಾಕಿ ಹೊಡಿಯೋಕ್ ಹೆದ್ರಿಕೆ. ಆದ್ರೂ ಧೈರ್ಯ ಮಾಡಿ ಪಟಾಕಿ ಹಚ್ಚಿದ. ಹಚ್ಚಿ ಎಂಥ ಮಾಡಿದ್ದ್...? ಹಚ್ಚಿ ಪಟಾಕಿ ಬಿಸಾಡ್ತಿದ್ರೆ, ಹಚ್ಚಿ ಊದಬತ್ತಿ ಬಿಸಾಡಿ ಪಟಾಕಿ ಕೈಯಗೆ ಹಿಡ್ಕೊಂಡಿದ್ದ್ ಕಥಿ ಏನಾಯ್ತದ್? ಆಗಂಡಿನ್ ಕೈ ಗುಣ ಮಾಡ್ಕಿದ್ರೆ ಯಾವ್ ಡಾಕ್ಟ್ರತ್ರೆಲ್ಲ ಹೋಯ್ ಯಬ್ಬ.

ಬೆಂಗ್ಳೂರ್‌ಗೆ ಕೆಲವೆಲ್ಲ, ಭೋಜನ ಪ್ರಿಯರ್ ಇದ್ದಾರ್ಲೆ ಯಾವ್ದೇ

ಹಾಲಂಗ್ ಮದ್ವೆ ಅಥವ ಬೇರೆಯಾವ್ದಾದ್ರು function ಆಯ್ತಂದ್ರೆ ಇವ್ರು ನಾನ್ ಅವನ್ ಸಂಬಂಧಿ, ನಾನ್ ಇವನ್ ಸಂಬಂಧಿ ಅಂತ ಹೇಳ್ಕಂಡ್ ಊಟಕ್ಕೆ ಹೋಗುದ್. ಮೊನ್ನೆ ಎಂಥ ಆಯ್ತಂದ್ರೆ.....ಯಾವ್ದೋ ಮನೆಯಲ್ ತಿಥಿ ಊಟ ಆಗ್ತಾ ಇದ್ದಿತ್ತ್. ಇವ್ರೆಲ್ಲ ಹೊಯ್ಕಂಡ್ ಮುಚ್ಕಂಡ್ ಊಟ ಮಾಡ್ಕಂಡ್ ಬರ್ತಿದ್ರೆ, "ಏನು ನಾವ್ ಗಂಡಿನ್ ಕಡೆಯವ್ರ್ ನಮ್ಗೆ ಮರ್ಯಾದೆ ಕೊಡಿ, ಒಬ್ರು ವಿಚಾರಿಸ್ಲಿಕ್ ಬರ್ಲಿಲ್ಲ. ಏನಂತ ತಿಳ್ಕೊಂಡಿದ್ರಿ, ಮದ್ವೆ ನಿಲ್ಸಿ ಬಿಡ್ತೇವೆ" ಅಂದ್ರ್. ಯಾರಾರು ತಿಥಿ ಊಟದ್ ಮನಿಗ್ ಬಂದ್ ಹೀಂಗ್ ಹೇಳ್ರೆ ಬಿಡ್ತಾ ಮೆಟ್ಟಂಗ್ ಹೊಡುದಿಲ್ವಾ...? ಸುಮ್ನೆ ಗಡ್‌ಬಿಡಿ ಮಾಡ್ದೇ ಯಾವ್ ಕಾರ್ಯದ್ ಊಟ ಅಂದೇಳಿ ತಿಳ್ಕಂಡ್ ಮಾತಾಡ್ತಿದ್ರೆ, ಅಧಿಕ ಪ್ರಸಂಗ ಮಾಡುದು.

ಇನ್ನೂ ಹೆಂಗಾರ್ ಹೋರ್ ಸುಮಾರ್ ಇತ್ತ್ ಹೋಯ್. ಭಟ್ರ್ ಅಂಗ್ಡಿ ಪೂಜೆದ್ ದಿನ ಬಂದ್ಕಂಡ್ ಗಡ್‌ಬಿಡಿಯಂಗ ಸುಮ್ನೆಸುಮ್ನೆ ಹೇಳ್ಕ ಹೋತ್ರ್. ಯಾರ್ ಕೇಂಬುಕಾತ್ತ್. ನಮ್ಗಂತೂ ಮಂತ್ರ ಸುಟ್ಕಂಡ್ ತಿಂಬುಕ್ ಬತ್ತಿಲ್ಲ. ಕೇಣ್ದೆ ಉಪಾಯ್ ಇಲ್ಲ. ಅಂತೂ ಗಡ್‌ಬಿಡಿಯಂಗೆ ಹಾಸ್ಯಾನೂ ಇತ್ತ್ – ಕೆಲವ್ಸಲ ಅದೇ ತೊಂದ್ರಿ ಕೂಡಾ ಆತ್ತ್.

ಜಿ.ಎಸ್.ಟಿ. – ಗಾಡ್ಸ್ ಸರ್ವೀಸ್ ಟ್ಯಾಕ್ಸ್

ಭಗವಂತನಿಗೆ ನಾವು ಸಂದಾಯ ಮಾಡಲೇಬೇಕಾದ ತೆರಿಗೆ.

– ರಾಧಿಕಾ ಶೆಟ್ಟಿ,
ಪ್ರಥಮ ಬಿ.ಎಸ್ಸಿ. 'ಬಿ'

ನಮ್ಮ ದೇಶದಲ್ಲಿ ಇತ್ತೀಚೆಗೆ ಜಿ.ಎಸ್.ಟಿ. ಎನ್ನುವ ಹೆಸರಿನ ಹೊಸದಾದ ತೆರಿಗೆ ವ್ಯವಸ್ಥೆಯನ್ನು ಸರಕಾರವು ತಂದಿರುವುದು ನಿಮ್ಮೆಲ್ಲರಿಗೂ ತಿಳಿದಿರುವ ವಿಷಯ. ಅನೇಕ ವಿಧಗಳ ತೆರಿಗೆಗಳನ್ನೆಲ್ಲ ರದ್ದು ಮಾಡಿ, ಒಂದೇ ತೆರಿಗೆ ವ್ಯವಸ್ಥೆಯನ್ನು ಕೇಂದ್ರ ಸರಕಾರವು ಎಲ್ಲಾ ರಾಜ್ಯಗಳ ಸಹಕಾರದೊಂದಿಗೆ ದೇಶದಾದ್ಯಂತ ಕಾರ್ಯರೂಪಕ್ಕೆ ತಂದಿದೆ. ಕೆಲವರು ಈ ಹೊಸ ಏಕರೂಪದ ತೆರಿಗೆ ವ್ಯವಸ್ಥೆಯಿಂದಾಗಿ ಸಂತಸವನ್ನು ಅನುಭವಿಸಿದರೆ, ಇನ್ನು ಕೆಲವರು ಇದರಿಂದಾಗಿ ಬೇಸರವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಕೇಂದ್ರ ಸರಕಾರದ ಮುಂದಾಳುತ್ವದಲ್ಲಿ ತರಲಾದ ಈ ತೆರಿಗೆ ಶಾಸನವನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕು. ರಾಜನ ಶಾಸನವನ್ನು ಪಾಲಿಸಲು ಪ್ರಜೆಗಳು ಬದ್ಧರಾಗಿರಬೇಕಾಗುತ್ತದೆ. ಹೊಸ ಕಾನೂನುಗಳನ್ನು ನಾವು ಕೆಲವೊಮ್ಮೆ ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಹೊಸ ಹೊಸ ನಿಯಮಗಳನ್ನು ಪಾಲಿಸುವಲ್ಲಿ ನಮಗೆ ಕಷ್ಟವಾಗುತ್ತದೆ. ಹಾಗಾಗಿ ನಮಗೆ ಇವು ಇಷ್ಟವಿರುವುದಿಲ್ಲ. ಆದರೆ ನಮಗೆ ಅನ್ಯ ಮಾರ್ಗಗಳಿರುವುದಿಲ್ಲ.

ಈ ಹೊಸ ತೆರಿಗೆಯನ್ನು ಗೂಡ್ಸ್ ಮತ್ತು ಸರ್ವೀಸಸ್ ಎಂಬ ಹೆಸರಿನಲ್ಲಿ ಸರಕಾರವು ನಮ್ಮಿಂದ ವಸೂಲು ಮಾಡುತ್ತಿದೆ. ಅಂದರೆ ಯಾವುದೇ ತರಹದ ವಸ್ತುಗಳನ್ನು (ಕೆಲ ಅಗತ್ಯ ವಸ್ತುಗಳನ್ನು ಹೊರತುಪಡಿಸಿ) ಮತ್ತು ಸೇವೆಗಳನ್ನು ನಾವು ಕೊಂಡುಕೊಂಡಾಗ ಅಥವಾ ಪಡೆದಾಗ, ಈ ತೆರಿಗೆಯನ್ನು ನಾವು ಸರಕಾರಕ್ಕೆ ಪಾವತಿಸಲೇಬೇಕಾಗುತ್ತದೆ. ಒಂದು ದೃಷ್ಟಿಯಲ್ಲಿ ಚಿಂತನೆ ಮಾಡಿದರೆ ಈ ದೇಶದ ಪ್ರತಿಯೊಂದು ವಸ್ತು ಹಾಗೂ ಸ್ಥಳಗಳು ನಮ್ಮ ಸರಕಾರಕ್ಕೆ ಸೇರಿರುವುದೇ ಆಗಿದೆ. ನಮ್ಮ ಸ್ವಂತ ಮನೆ ಅಥವಾ ಅಂಗಡಿಗೂ ಕೂಡ ನಾವು ಪ್ರತಿವರ್ಷ ಪ್ರಾಪರ್ಟಿ ಟ್ಯಾಕ್ಸ್‌ಅನ್ನು ಸರಕಾರಕ್ಕೆ ಪಾವತಿಸುತ್ತೇವೆ. ನಮ್ಮದೇ ಆದ ಸ್ವಂತ ಮನೆಗೂ ಕೂಡಾ ತೆರಿಗೆ ಪಾವತಿ ಮಾಡುತ್ತೇವೆ. ಇದೇ ನಿಯಮ.

ನಮ್ಮ ಶಾಸ್ತ್ರಗಳ ಪ್ರಕಾರ ನಾವು ಈ ದೇಹಗಳಲ್ಲ, ನಾವು ಆತ್ಮಸ್ವರೂಪಿಗಳು, ಚೇತನಾತ್ಮರು. ನಾವು ಪರಮಾತ್ಮನ ಅಂಶಗಳು, ನಮ್ಮ ಪೂರ್ವಜನ್ಮಗಳ ಕರ್ಮಗಳಿಗನುಗುಣವಾಗಿ ನಮಗೆ ಭಗವಂತನಾದ ಶ್ರೀಕೃಷ್ಣನು ವಿಧವಿಧವಾದ ಶರೀರಗಳನ್ನು ನೀಡಿದ್ದಾನೆ. ಅವನು 84 ಲಕ್ಷ ವಿಧವಿಧದ ಜೀವರಾಶಿಗಳನ್ನು ಸೃಷ್ಟಿಸಿ ಜೊತೆಯಲ್ಲಿ ನಮ್ಮೆಲ್ಲರಿಗೂ ಜೀವನೋಪಾಯಕ್ಕಾಗಿ ಅಗತ್ಯ ವಸ್ತುಗಳನ್ನೂ ಕೂಡಾ ಸೃಷ್ಟಿಸಿದ್ದಾನೆ. ಈ ದೃಷ್ಟಿಗೋಸ್ಕರ ಪ್ರಪಂಚ ಮಾತ್ರವಲ್ಲದೆ ಚತುರ್ದಶ ಭುವನಗಳನ್ನು ಒಳಗೊಂಡಿರುವ ಸಮಸ್ತ ಬ್ರಹ್ಮಾಂಡಗಳನ್ನೇ ಸೃಷ್ಟಿಮಾಡಿದ್ದಾನೆ. ಒಂದೆರಡಲ್ಲ, ಅಗಣಿತ ಬ್ರಹ್ಮಾಂಡಗಳನ್ನು ಅವನು ಸೃಷ್ಟಿಸಿದ್ದಾನೆ ಎಂಬುದಾಗಿ ವೈದಿಕ ಶಾಸ್ತ್ರಗಳು ನಮಗೆ ತಿಳಿಸುತ್ತವೆ. ಅದಕ್ಕೆಂದೇ ದೇವೋತ್ತಮ ಪುರುಷನಾದ ಶ್ರೀಕೃಷ್ಣನನ್ನು ಸರ್ವಕಾರಣ ಕಾರಣ ಎಂಬುದಾಗಿ ಬ್ರಹ್ಮದೇವರು ಬ್ರಹ್ಮಸಂಹಿತೆಯಲ್ಲಿ ಸಂಬೋಧಿಸಿರುವುದು.

'ಈಶ್ವರ ಪರಮ ಕೃಷ್ಣ ಸಚ್ಚಿದಾನಂದ ವಿಗ್ರಹಃ / ಅನಾದಿರಾದಿರ್ ಗೋವಿಂದಃ ಸರ್ವಕಾರಣ ಕಾರಣಮ್' ಸರ್ವಕಾರಣಗಳಿಗೂ ಮೂಲಕಾರಣನಾದ ಶ್ರೀಕೃಷ್ಣನು ನಮ್ಮೆಲ್ಲರ ಪರಮಪಿತನು. ಅವನು ನಮಗಾಗಿ ಈ ಅದ್ಭುತವಾದ ಪ್ರಕೃತಿಯನ್ನು ಪರ್ವತಗಳನ್ನು – ಗಿರಿಕಾನನಗಳನ್ನು ನದಿಗಳನ್ನು ಸಾಗರಗಳನ್ನು ಅತ್ಯಗತ್ಯವಾದ ಧಾನ್ಯಗಳನ್ನು ಹಣ್ಣು ಹಂಪಲುಗಳನ್ನು ಫಲ–ಪುಷ್ಪಗಳನ್ನು ಎಲ್ಲವನ್ನೂ ಸೃಷ್ಟಿಸಿದ್ದಾನೆ. ಇವಿಷ್ಟೇ ಅಲ್ಲದೆ ಸೂರ್ಯಚಂದ್ರರಿಂದ ಗಾಳಿ ಬೆಳಕುಗಳನ್ನೂ ನೀಡುತ್ತಿದ್ದಾನೆ. ಜೊತೆಗೆ ಮಾನವ ಶರೀರವನ್ನು ಪಡೆದಿರುವ ನಮಗೆ ಬುದ್ಧಿಶಕ್ತಿಯನ್ನು ಕೂಡ ನೀಡಿದ್ದಾನೆ. ಈ ಬುದ್ಧಿಶಕ್ತಿಯನ್ನು ವಿನಿಯೋಗಿಸಿಕೊಂಡು ನಾವು ನಮ್ಮ ನಿಜವಾದ ಅಸ್ತಿತ್ವವನ್ನು (ಆತ್ಮಸಾಕ್ಷಾತ್ಕಾರವನ್ನು) ಮತ್ತು 'ಜೀವ–ದೇವರ' ನಡುವಿನ ಸಂಬಂಧವನ್ನು ಕಂಡುಕೊಳ್ಳಬೇಕಾಗಿದೆ. ಇದನ್ನೇ ಶಾಸ್ತ್ರಗಳು 'ಅಥಾತೋ ಬ್ರಹ್ಮ ಜಿಜ್ಞಾಸಾ..' ಎಂಬುದಾಗಿ

ಹೇಳುತ್ತೇವೆ. ಈ ಅಶಾಶ್ವತ ಭೌತಿಕ ಜಗತ್ತಿನಿಂದ ಬಿಡುಗಡೆ ಹೊಂದಿ, ಶಾಶ್ವತವಾದ ವೈಕುಂಠ ಲೋಕಗಳಿಗೆ ಹೋಗಲು ಪ್ರಯತ್ನಿಸಬೇಕಾಗಿದೆ. ನಮ್ಮ ಜೀವನಕ್ಕೆ ಬೇಕಾಗಿರುವ ಅಗತ್ಯ ವಸ್ತುಗಳನ್ನು (ಧಾನ್ಯಗಳನ್ನು ತರಕಾರಿಗಳನ್ನು ಹಣ್ಣು–ಹಾಲು ಇತ್ಯಾದಿಗಳನ್ನು) ಮತ್ತು ಸೇವೆಗಳನ್ನು (ಗಾಳಿ, ಬೆಳಕು, ಮಳೆ ಇತ್ಯಾದಿಗಳನ್ನು) ನಮಗೆ ನೀಡಿರುವ ಶ್ರೀಕೃಷ್ಣನಿಗೆ ನಾವು ಜಿ.ಎಸ್.ಟಿ.ಯನ್ನು ಕೊಡಬೇಕಾಗಿದೆ. ನಮ್ಮ ದೇಶಕ್ಕೆ ನಾವು ಹಣದ ರೂಪದಲ್ಲಿ ಈ ತೆರಿಗೆಯನ್ನು ನೀಡಿದರೆ, ಪರಮಾತ್ಮನಿಗೆ ಈ ತೆರಿಗೆಯನ್ನು ಭಕ್ತಿಯ ರೂಪದಲ್ಲಿ ನೀಡಬೇಕಾಗುತ್ತದೆ. ಅವನು ಭಗವದ್ಗೀತೆಯ ಅಂತ್ಯದಲ್ಲಿ ಹೀಗೆ ಹೇಳಿದ್ದಾನೆ,

ಮನ್ಮನಾ ಭವ ಮದ್ಭಕ್ತೋ ಮದ್ಯಾಜಿ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನಿ ಪ್ರಿಯೋ ಸಿ ಮೆ ॥

'ನನ್ನ ಕುರಿತು ಚಿಂತಿಸು, ನನ್ನ ಭಕ್ತನಾಗು, ನನ್ನನ್ನು ಪೂಜಿಸು ಮತ್ತು ನನಗೆ ನಮಸ್ಕರಿಸು, ಆಗ ನೀನು ನಿಶ್ಚಯವಾಗಿಯೂ ನನ್ನ ಬಳಿಗೆ ಬರುವೆ.'

ಭಕ್ತಿಯಿಂದ ಅವನ ಆರಾಧನೆ, ನಾಮ ಸಂಕೀರ್ತನೆಗಳನ್ನು ಮಾಡುತ್ತಾ ನಾವು ಅವನಿಗೆ ಶರಣಾಗಬಹುದಾಗಿದೆ. ಅವನ ಶುದ್ಧ ಭಕ್ತರ ಸಂಗದಲ್ಲಿ ಭಕ್ತಿಯೋಗವನ್ನು ಆಚರಿಸುತ್ತಾ ಮೆಳಿ ಭಗವಂತನೆಡೆಗೆ ಹೋಗುವುದೇ ಮನುಷ್ಯ ಜನ್ಮದ ನಿಜವಾದ ಗುರಿ. ಭಕ್ತಿಯೋಗ ಎನ್ನುವ ಜಿ.ಎಸ್.ಟಿ.ಯನ್ನು ನಾವು ಭಗವಂತನಿಗೆ ಸಲ್ಲಿಸೋಣ, ಆ ಮೂಲಕ ಆನಂದದಿಂದ ಜೀವಿಸೋಣ ಬನ್ನಿ. ಹರೇ ಕೃಷ್ಣ.

ಕಲಾ ವಿಭಾಗದ ಭವಿಷ್ಯವೇನು

– ಎನ್. ಪವಿತ್ರ
ಪ್ರಥಮ ಬಿ.ಎ.

ಹಿಂದಿನ ಕಾಲದಲ್ಲಿ ಪದವಿ ಮಾಡುವುದು ಎಂದರೆ ಅದು ಬಿ.ಎ. ಮಾತ್ರ. ಒಬ್ಬ ವ್ಯಕ್ತಿ ಬಿ.ಎ. ಪದವಿ ಪಡೆದನೆಂದಾದರೆ ಆತ ಬಹು ವಿದ್ಯಾವಂತನಾಗಿ ಸಮಾಜದಲ್ಲಿ ಗುರುತಿಸಲ್ಪಡುತ್ತಿದ್ದನು. ನಾಗರಿಕ ಸೇವಾ ಪರೀಕ್ಷೆಗಳು ಎಂಬುದು ಕೇವಲ ಕಲಾ ವಿಭಾಗಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಇಂದು, ಇದನ್ನು ವೈದ್ಯರು, ಇಂಜಿನಿಯರು, ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಒಬ್ಬ ಉನ್ನತ ಶ್ರೇಣಿಯಲ್ಲಿ ಪಾಸಾಗಿ ಪಿ.ಯು.ಸಿ.ಯಲ್ಲಿ ಕಲಾ ವಿಭಾಗ ಆಯ್ದುಕೊಳ್ಳುವುದು ಬಹಳ ವಿರಳ. ಒಂದು ವೇಳೆ ಹಾಗೆ ಆಯ್ದುಕೊಂಡರೂ ಸಮಾಜವು ಆತನ ಮನಸ್ಸನ್ನು ಪರಿವರ್ತಿಸುತ್ತದೆ. ಹೀಗಾಗಿ ವಿದ್ಯಾರ್ಥಿಗಳಿಗೆ ಬಿ.ಎ. ಎನ್ನುವುದು ವೇಸ್ಟ್, ಕಡಿಮೆ ಅಂಕ ಬಂದವರಿಗೆ ಮಾತ್ರ ಸೀಮಿತ. ಇದರಲ್ಲಿ ಕಲಿಯಲು ಏನೂ ಇಲ್ಲ. ಕೇವಲ ಇತಿಹಾಸ, ಗುಣಲಕ್ಷಣ, 4 ಅಥವಾ 5 ವ್ಯಾಖ್ಯಾನಗಳು ಅಷ್ಟೇ. ವಿಜ್ಞಾನದ ಹಾಗೇ ಕಷ್ಟದ ಸೂತ್ರಗಳಿವೆಯೇ? ಪ್ರಾಯೋಗಿಕ ಪರೀಕ್ಷೆಗಳಿವೆಯೇ? ಇಲ್ಲ. ಆದ್ದರಿಂದ ಈಗ ಒಬ್ಬ ವಿದ್ಯಾರ್ಥಿ 70% ತೆಗೆದರೂ ಹೋಗುವುದು ವಿಜ್ಞಾನ ವಿಭಾಗಕ್ಕೆ. ಎಲ್ಲದಕ್ಕೂ ಮಿಗಿಲಾಗಿ ಪ್ರಸ್ತುತ ಸ್ಥಿತಿ ಹೇಗಿದೆ ಎಂದರೆ ಬಿ.ಎ. ಮಾಡುತ್ತಿರುವೆ ಎಂದು ಯಾರಾದರ ಬಳಿ ಹೇಳಿದಲ್ಲಿ ಅವರ ಮುಖ ಬೀಭತ್ಸಕ ರೀತಿಯಲ್ಲಿರುತ್ತದೆ.

ಅದಕ್ಕೂ ಮಿಗಿಲಾಗಿ 90%ಗಿಂತ ಅಧಿಕ ಅಂಕಗಳನ್ನು ತೆಗೆದು ಬಿ.ಎ. ತೆಗೆದುಕೊಂಡಲ್ಲಿ ಆ ವಿದ್ಯಾರ್ಥಿಯ ಜೀವನವೇ ಮುಗಿಯಿತು ಎನ್ನುವ ರೀತಿಯಲ್ಲಿ ಜನರೇ ಆಡುತ್ತಾರೆ. ವಿಜ್ಞಾನ ಮತ್ತು ವಾಣಿಜ್ಯ ವಿಭಾಗಕ್ಕೆ ಸೈ ಎನ್ನುವ ಜನರೇ ಹೆಚ್ಚು. ವಿನಹ, ಕಲಾ ವಿಭಾಗವನ್ನು ಇಷ್ಟಪಡುವವರು ಕಡಿಮೆ. ಆದರೆ ಸ್ನೇಹಿತರೆ ಮುಂಬರುವ ದಿನಗಳಲ್ಲಿ ನಾವೆಲ್ಲರೂ ಸೇರಿ ಕಲಾ ವಿಭಾಗಕ್ಕೆ ಮತ್ತೆ ಹಿಂದಿನ ಸ್ಥಾನವನ್ನು ತರಲು ಪ್ರಯತ್ನಿಸೋಣ.

ಗೋಮಾತೆಯ ರಕ್ಷಣೆ

– ಆಕಾಶ್ ಎಸ್. ಕೈಕಿಣಿ
ದ್ವಿತೀಯ ಬಿ.ಕಾಂ. 'ಬಿ–2'

'ಗೋವು ಎನ್ನುವುದು ದೇವ–ದೇವತೆಗಳ ಸ್ವರೂಪ' ಅಂತಹ ಗೋವನ್ನು ರಕ್ಷಣೆಯಾಗಿ–ಇಡುವುದು ನಮ್ಮ ಕರ್ತವ್ಯ. ಹಿಂದೂ ಸಂಪ್ರದಾಯದಲ್ಲಿ ಗೋವನ್ನು 'ಲಕ್ಷ್ಮಿ'ಗೆ ಹೋಲಿಸುತ್ತಾರೆ. ಕಣ್ಣಿಗೆ ಕಾಣುವ ದೇವತೆಯೆಂದು ಗೋವನ್ನು ಕರೆಯಬಹುದು. ದೀಪಾವಳಿಯ ದಿನ ಎಲ್ಲಾ ಕಡೆಯಲ್ಲಿ ಗೋಪೂಜೆಯನ್ನು ಆಚರಿಸುವ ಸಂಪ್ರದಾಯವಿದೆ. ಆದ್ದರಿಂದ ಈ ಪ್ರೀತಿಯ ಗೋಮಾತೆಯನ್ನು ರಕ್ಷಿಸುವುದು ನಮ್ಮ ಕರ್ತವ್ಯ.

ಇಂದಿನ ದಿನಗಳಲ್ಲಿ ಗೋವಿನ ಸಾಕಣಿಕೆಯನ್ನು ನಾವು ಎಲ್ಲಾ ಕಡೆಗಳಲ್ಲಿ ನೋಡಬಹುದಾಗಿದೆ. ನಾವು ದಿನಪತ್ರಿಕೆಗಳಲ್ಲೂ ಗೋವಿನ ಸಾಗಣಿಕೆಯ ವರದಿಯನ್ನು ನೋಡಬಹುದಾಗಿದೆ. ರಾತ್ರೋರಾತ್ರಿ ಗೋವಿನ ಸಾಗಣಿಕೆಯನ್ನು, ಅವುಗಳನ್ನು ಲಾರಿಯಲ್ಲಿ ತುಂಬಿ ಕಳುಹಿಸುವ ದೃಶ್ಯವನ್ನು ನೋಡಿರಬಹುದು. ಇತ್ತೀಚಿನ ದಿನಗಳಲ್ಲಿ ಗೋವಿನ ಸಾಗಣಿಕೆ–ಸರಕಿನ–ಸಾಗಣಿಕೆ ಒಂದೇ ಎಂದು ಹೇಳಬಹುದು.

ಗೋವು ನಮಗೆ, ಎಲ್ಲಾ ರೀತಿಯಲ್ಲೂ ಸಹಕಾರಿಯಾಗುತ್ತದೆ, ನಮ್ಮ ದಿನನಿತ್ಯದ ಕಾರ್ಯ ಚಟುವಟಿಕೆಗಳಲ್ಲಿ; ಬೆಳಗಿನ ಜಾವ ನಾವು ಕಾಫಿಯೋ, ಚಹಾವೋ ಕುಡಿಯುತ್ತೇವೆ. ಆ ಚಹಾದೊಡನೆ ಸೇರಿದ ಹಾಲು ನಮಗೇ ಸಿಗುವುದೇ, ನಮ್ಮ ಗೋ–ಮಾತೆಯಿಂದ ಪೂಜೆ ಪುನಸ್ಕಾರಗಳಿಗೂ ಗೋವಿನ ಹಾಲು ಬೇಕಾಗುತ್ತದೆ. ನಾವು ಸವಿಯಾಗಿ ತಿನ್ನುವ, ತುಪ್ಪದಿಂದ ಮಾಡಿದ ಅಡಿಗೆ ಅಥವಾ ಬೆಣ್ಣೆ ಎಲ್ಲದಕ್ಕೂ ನಮ್ಮ ಗೋವು ಕಾರಣ. ಅಂತಹ ಗೋವನ್ನು ಹಿಂಸೆಗೆ ಒಳಪಡಿಸುವ ದುಷ್ಕರ್ಮಿಗಳೇ ಮೂರ್ಖರು. ಹಿಂದಿನ ದಿನಗಳಲ್ಲಿ ಪ್ರತಿಯೊಬ್ಬರ ಮನೆಯಲ್ಲೂ ಗೋವು ಎನ್ನುವುದು ಇರುತ್ತಿತ್ತು. ಆದರೆ ಈಗಿನ ದಿನಗಳಲ್ಲಿ ಅದೆಲ್ಲಾ ನಶಿಸಿ ಹೋಗಿದೆ. ಬೆಳಗಿನ ಜಾವ ಎದ್ದು ಮಹಿಳೆಯರು ಹಟ್ಟಿಯನ್ನು ಸ್ವಚ್ಛಗೊಳಿಸಿ, ಗೋವಿನ ಸ್ನಾನ ಮಾಡಿಸಿ ಹಾಲು ಕರೆದು, ಆಕಾಶಕ್ಕೆ ತೋರದಂತೆ ಹಾಲನ್ನು ಮನೆಯೊಳಗೆ ಕೊಂಡೊಯ್ಯುತ್ತಿದ್ದರು. ಆದರೆ ಇಂದಿನ ದಿನದಲ್ಲಿ ನಮಗೆ ತಾಜಾ–ಹಾಲು ಎಲ್ಲಿಯೂ ಸಿಗುವುದಿಲ್ಲ. ಕೆಲವೊಂದು ಕಡೆಯಲ್ಲಿ ಹಳ್ಳಿಯ ಕಡೆಯಲ್ಲಿ ಲಭ್ಯವಿದೆ. ಆದರೆ ಬೇರೆ ಎಲ್ಲಾ ಸ್ಥಳದಲ್ಲಿ ನಾವು ವಿಷ–ಪೂರಿತ ಹಾಲನ್ನು ಸೇವಿಸುತ್ತಿದ್ದೇವೆ. ಇದಕ್ಕೆ ಗೋ–ಮಾತೆಯ ನಶಿಸುತ್ತಿರುವುದೇ ಮೂಲ ಕಾರಣ.

ವೇದಗಳ ಕಾಲದಿಂದಲೂ ಮಾತೆಯ ಸ್ವರೂಪವನ್ನು ನೀಡುತ್ತಾ ಬಂದಿದ್ದಾರೆ. ಮೊದಲಿನ ದಿನದಿಂದ ಇಂದಿನ ದಿನದವರೆಗೂ ಗೋವಿನ ಹಾಲು ಮಕ್ಕಳಿಗೆ ಪೌಷ್ಟಿಕ ಆಹಾರ ಎಂದು ವೈದ್ಯರು ಹೇಳುತ್ತಾರೆ. ಇದರ ತುಪ್ಪ ಅಥವಾ ಇದರ ಗೋಮೂತ್ರ ಅನೇಕ ಔಷಧಿಗಳಿಗೂ ಉಪಯೋಗಿಸುತ್ತಿದ್ದಾರೆ. ಇದರ ಸೆಗಣಿ ಫಸಲಿನ ಬೆಳವಣಿಗೆಗೆ ಉತ್ತಮ ತ್ಯಾಜ್ಯ. ಹಿಂದಿನ ಕಾಲದಿಂದಲೂ ಒಂದು ಪ್ರಯೋಗ ಮಾಡಲಾಯಿತು. ಎಮ್ಮೆಯ ಹಾಲನ್ನು ಕುಡಿದವನು ಯಾವತ್ತು ಸುಸ್ತಾಗಿ ಇರುತ್ತಾನೆ, ಹಾಗೆಯೇ ಆಕಳಿನ ಹಾಲನ್ನು ಕುಡಿದವ ಚುರುಕಾಗಿ ತನ್ನ ಕಾರ್ಯ ಚಟುವಟಿಕೆಯಲ್ಲಿ ತೊಡಗುತ್ತಾನೆ. ವೇದ ಕಾಲದಿಂದಲೂ, ಋಷಿ ಮುನಿಗಳು ಹೇಳಿದಂತೆ 33ಕೋಟಿ ದೇವ–ದೇವತೆಗಳ ವಾಸಸ್ಥಾನವಾಗಿದೆ. ಪ್ರಾಚೀನ ಭಾರತದಲ್ಲಿ ದನವನ್ನು ಸಮೃದ್ಧಿಯ ಪ್ರತೀಕ ಎಂದು ನಂಬುತ್ತಿದ್ದರು. ಯುದ್ಧದ ಸಮಯದಲ್ಲಿ ಧನ–ಸಂಪತ್ತು, ಹೇಗೋ ಹಾಗೆ ದನವನ್ನು ಸಹ ಲೂಟಿ ಮಾಡುತ್ತಾರೆ. ಈ ರೀತಿಯ ನಂಬಿಕೆಯು ಇರುತ್ತಿತ್ತು. ಯಾವ ದೇಶದಲ್ಲಿ ಅತ್ಯಧಿಕ ಗೋವಿನ ಸಾಕಣಿಕೆ ಇರುತ್ತದೆಯೋ ಆ ದೇಶವನ್ನೇ ಸಂಪತ್ತಿನ ದೇಶವೆಂದು ತಿಳಿಯುತ್ತಿದ್ದರು. ಅದರ ಗುಂಪಿನಲ್ಲಿ ನಮ್ಮ ಭಾರತವು ಒಂದು. ಆದರೆ ಅಂತಹ ದೇಶದಲ್ಲಿ ಗೋವಿನ ಹಿಂಸಾಚಾರ ನಮಗೆ ನಾಚಿಕೆಯಾಗುವ ಸಂಗತಿ, ಹಾಗೆಯೇ ಇದನ್ನು ಗೋಪಾಲನ ಸಂಗಾತಿ ಎಂದು ಕರೆಯುತ್ತಾರೆ.

ಇದನ್ನು ನಮ್ಮ ದೇಶದಲ್ಲಿ ಮಾತ್ರವಲ್ಲ ಎಲ್ಲಾ ದೇಶದಲ್ಲೂ ಸಾಧು ಪ್ರಾಣಿಯೆಂದು ಕರೆಯುತ್ತಾರೆ. ಆದರೆ ಭಾರತ ದೇಶದಲ್ಲಿ ಹಸುವಿನ ಸಂಖ್ಯೆ ಹೆಚ್ಚಳ, ಆದ್ದರಿಂದ ಇದನ್ನು ಪುರಾತನ ಕಾಲದಲ್ಲಿ 'ಸಂಪದ್ಭರಿತ ದೇಶ' ಎಂದು ಕರೆಯುತ್ತಿದ್ದರು. ಹಿಂದೂ ಧರ್ಮದಲ್ಲಿ ದನವನ್ನು ಹತ್ಯೆಗೈಯುವುದು 'ಪಾಪ' ಎಂದು ಹೇಳಲಾಗಿದೆ. ಆದರೆ ಈಗ ನಮ್ಮ ಭಾರತ ಸರ್ಕಾರವು ಗೋವಿನ ಹತ್ಯೆ ಅಥವಾ ಗೋವಿನ ಮಾಂಸದ ಸೇವನೆಗೆ ಪ್ರತಿಬಂಧ ಹಾಕಲಾಗಿದೆ. ಇದು ಒಂದು ಒಳ್ಳೆಯ ಸಂಗತಿ.

ಗೋವಿನ ರಕ್ಷಣೆಯನ್ನು ಮಾಡುವುದು ನಮ್ಮೆಲ್ಲರ ಆದ್ಯಕರ್ತವ್ಯ, ಸಾಧು–ಪ್ರಾಣಿಯ ಹತ್ಯೆ, ಒಂದು ನವಜಾತ ಶಿಶುವಿನ ಹತ್ಯೆಯಂತೆ. ಆದ್ದರಿಂದ ನಾವೆಲ್ಲರೂ ಸಹ, ಎಲ್ಲಿಯೂ ಸಹ, ಗೋವಿನ ಸಾಗಣಿಕೆ ನೋಡಿದರೆ, ಅದರ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು. ಆದ್ದರಿಂದ ಎಲ್ಲರೂ ಸಹ ಗೋವನ್ನು ನೋಡಿದಾಗ ಭಗವಂತನು ನಮಗೆ ನೀಡಿದ ಕಾಣಿಕೆ ಎಂದು ತಿಳಿಯಿರಿ. ಆದ್ದರಿಂದ ನಾವೆಲ್ಲರೂ ಸಹ ಭಾರತ ಸರ್ಕಾರದೊಡನೆ ನಮ್ಮ ಕೈಯನ್ನು ಸಹ ನವಜಾತ ಹಸುವಿನ ರಕ್ಷಣೆಗೆ ಕೈ ಜೋಡಿಸೋಣ.

ಗೆಜ್ಜೆ

– ಶ್ರೀನಿಧಿ
ದ್ವಿತೀಯ ಬಿ.ಕಾಂ. 'ಬಿ–1'

ಗೆಜ್ಜೆ ಎನ್ನುವ ಒಂದು ಎರಡಕ್ಷರದ ಪದ ನಮ್ಮ ಮನಸ್ಸಿಗೆ ಮೊದಲು ನೆನಪಾಗಲು ಶಬ್ದವೇ ಹೆಣ್ಣು ತೊಡುವ ಕಾಲ್ಗೆಜ್ಜೆಯ ನಾದ. ಆ ಗೆಜ್ಜೆಯ ಸಪ್ಪಳದ ಸವಿನಾದವನ್ನು ಕೇಳಿದಾಗ ಅದು ನಮ್ಮ ಕಿವಿಗೆ ಸಪ್ತಸ್ವರಗಳ ನಾದ ಕೇಳಿದ ಹಾಗೆಂದೆನಿಸುತ್ತದೆ. ಮತ್ತು ಗೆಜ್ಜೆಯ ನಾದ ಕೇಳಿದಾಗ ಮೈರೋಮಾಂಚನಗೊಳ್ಳುತ್ತದೆ. ಹೆಣ್ಣು ಮಕ್ಕಳಿಗೆ ಗೆಜ್ಜೆ ಹಾಕಿಕೊಳ್ಳುವುದರಲ್ಲಿ ಇರುವ ಖುಷಿ ಬೇರೆ ಯಾವುದರಲ್ಲೂ ಸಿಗಲಾರದು. ಸಣ್ಣವರಿದ್ದಾಗಲಂತೂ ನಮಗೆ ಗೆಜ್ಜೆ ಕೊಡಿಸದಿದ್ದರೆ ಅತ್ತು ರಂಪಾಟ ಮಾಡುತ್ತೇವೆ. ಗೆಜ್ಜೆ ಹಾಕಿಕೊಳ್ಳುವುದು ಒಂದು ರೀತಿಯಲ್ಲಿ ನೋಡಿದರೆ ಅದು ಸಂಸ್ಕೃತಿಯ ಪ್ರತೀಕವಾಗಿದೆ. ಎಲ್ಲಾದರೂ ಒಂದು ಗೆಜ್ಜೆ ಧ್ವನಿ ಕೇಳಿದರೆ ಸಾಕು ಯಾವುದೋ ಒಂದು ಹೆಣ್ಣು ಗೊಂಬೆ ಬರುತ್ತಿರುವ ಹಾಗೆ ಎನಿಸುತ್ತದೆ. ಹೆಣ್ಣು ಕಾಲುಗೆಜ್ಜೆ ತೊಟ್ಟಳೆಂದರೆ ಅವಳ ಅಂದವನ್ನು ಹೆಚ್ಚಿಸಿದಂತೆ ಗೆಜ್ಜೆಯನ್ನು ತೊಟ್ಟಿಕೊಂಡಾಗ ಅವಳಿಗೆ ನವಿಲಿನ ಹಾಗೆ ಮಾಡಬೇಕೆಂಬ ಆಸೆ ಅವಳ ಮನಸ್ಸಿನಿಂದ ಮೂಡಿ ಬರುತ್ತದೆ. ಅಂಬೆಗಾಲಿಡುವ ಮಗುವಿನ ಗೆಜ್ಜೆನಾದವು ಅಮ್ಮನ ಮನಸ್ಸಿಗೆ ಮುದ ನೀಡುತ್ತದೆ. ನಮ್ಮ ಸಂಸ್ಕೃತಿಯ ನಾನಾ ಕ್ಷೇತ್ರದಲ್ಲಿ

ಗೆಜ್ಜೆಗೆ ಬಹಳ ಪ್ರಮುಖ ಸ್ಥಾನವಿದೆ. ಉದಾ: ಯಕ್ಷಗಾನ, ಭರತನಾಟ್ಯ, ಡೊಳ್ಳುಕುಣಿತ, ಇತ್ಯಾದಿ. ಭರತನಾಟ್ಯ ಮತ್ತು ಯಕ್ಷ ವೈಭವದಲ್ಲಿ ಗೆಜ್ಜೆಯನ್ನೇ ದೇವರೆಂದು ಪೂಜಿಸುತ್ತಾರೆ. ಭರತನಾಟ್ಯ, ಯಕ್ಷಗಾನ ರಂಗದಲ್ಲಿ ಗೆಜ್ಜೆಯನ್ನು ತೊಡಿಸದಿದ್ದರೆ ಅದು ಒಂದು ಅಸಂಪೂರ್ಣ ಅಂದ ಹಾಗೆ ಅದನ್ನು ಸಂಪೂರ್ಣಗೊಳ್ಳಲು ಸಾಧ್ಯವಿಲ್ಲ. ಇಂದಿನ ಕಾಲದಲ್ಲಿ ಗೆಜ್ಜೆಯನ್ನು ತೊಟ್ಟಿಕೊಳ್ಳುವುದರ ಸಂಖ್ಯೆ ಕಡಿಮೆಯಾಗುತ್ತದೆ. ಪಟ್ಟಣದಲ್ಲಂತೂ ಗೆಜ್ಜೆಯ ನಾದ ಕೇಳಲು ಸಿಗುವುದೇ ಇಲ್ಲ. ಸುವರ್ಣಯುಗದಲ್ಲಿ ಗೆಜ್ಜೆಯನ್ನು ಧರಿಸಿಕೊಂಡರೆ ಅವರು ಹಳ್ಳಿಯಿಂದಲೇ ಬಂದವರೆಂದು ಅಂದುಕೊಳ್ಳುತ್ತಾರೆ. ಗೆಜ್ಜೆಯನ್ನು ತೊಡುವುದರಲ್ಲಿ ಬಡವರು, ಶ್ರೀಮಂತರು ಎಂಬ ಭಾವನೆ ಇರುವುದಿಲ್ಲ ಅದನ್ನು ಯಾರು ಬೇಕಾದರೂ ತೊಟ್ಟಿಕೊಳ್ಳಬಹುದು.

ನನ್ನ ಬರಹ ಹೇಗೆ ಅಂತ್ಯವಾಗುತ್ತದೆಯೋ ಹಾಗೆಯೇ ಗೆಜ್ಜೆಯ ಸವಿನಾದದ ಸಪ್ಪಳ ಕೂಡ ಇಂದಿನ ಯುಗದಲ್ಲಿ ಅಂತ್ಯವಾಗುತ್ತಿದೆ.

ಮಹಾತ್ಮಾ ಗಾಂಧಿ

– ಮನೋಜ್ ಎಮ್. ಪ್ರಭು
ಪ್ರಥಮ ಬಿ.ಕಾಂ. 'ಬಿ2'

ಮಹಾತ್ಮಗಾಂಧಿಯವರನ್ನು ನಾವು 'ರಾಷ್ಟ್ರಪಿತ' ಎಂದು ಗೌರವದಿಂದ ಕರೆಯುತ್ತೇವೆ. ಅಂತಹ ಗಾಂಧೀಜಿಯವರು ಜನಿಸಿದ ಪುಣ್ಯಭೂಮಿಯಲ್ಲಿ ಜನಿಸಿದ ನಾವೇ ಪುಣ್ಯವಂತರು. ಗಾಂಧೀಜಿಯವರು ಅಕ್ಟೋಬರ್ 2, 1869ರಂದು ಗುಜರಾತಿನ ಪೋರ್‌ಬಂದರ್ ಎಂಬ ಪ್ರದೇಶದಲ್ಲಿ ಜನಿಸಿದರು. ಅವರ ತಂದೆಯ ಹೆಸರು ಕರಮಚಂದ್ ಗಾಂಧಿ ಹಾಗೂ ತಾಯಿಯ ಹೆಸರು ಪುತಲೀಬಾಯಿ.

ಗಾಂಧೀಜಿ ಬಾಲ್ಯದಿಂದಲೇ ವಿಶಿಷ್ಟವಾದ ವ್ಯಕ್ತಿತ್ವವನ್ನು ಹೊಂದಿದ್ದರು. ಅವರು ದೀನದಲಿತರ ಕಡೆಗೆ ಕರುಣೆ ದಯೆ ಹೊಂದಿದ್ದರು. ಅವರು ದೀನ ದಲಿತರ ಕಡೆಗೆ ಕರುಣೆ, ದಯೆ ಹೊಂದಿದ್ದರು. ಅವರ ತಂದೆಯ ಜೊತೆ ಸಕಲ ಧರ್ಮಗಳ, ಜಾತಿಗಳ ಮನೆಗೆ ಸಮಾರಂಭಗಳಿಗೆ ಹೋಗುತ್ತಿದ್ದರು. ತಾಯಿಯ ಬಾಯಿಯಿಂದ ಪುಣ್ಯಪುರುಷರ ಕಥೆಗಳನ್ನು ಕೇಳಿ ನೀತಿ, ನಿಯಮ, ಪ್ರಾಮಾಣಿಕತೆ, ಸ್ವಾಭಿಮಾನವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಗಾಂಧೀಜಿ ಬಾಲ್ಯದಿಂದಲೂ ಗುರು ಹಿರಿಯರಲ್ಲಿ ಗೌರವ, ಭಕ್ತಿ ಹೊಂದಿದ್ದರು. ಗಾಂಧೀಜಿ ತಮ್ಮ ತಂದೆಗೆ ಕೊನೆಯ ಮಗನಾಗಿದ್ದರು. ಗಾಂಧೀಜಿಯವರ ತಂದೆ, ತಾಯಿಗೆ ಆರು ಮಂದಿ ಮಕ್ಕಳು. ಗಾಂಧೀಜಿ ಉತ್ತಮ ಮನೆತನ, ಸಾಕಷ್ಟು ಅನುಕೂಲ ಇರುವ ಮನೆಯಲ್ಲಿ ಜನಿಸಿದ್ದರು.

ಗಾಂಧೀಜಿಯನ್ನು ಅವರ ತಂದೆ ಪೋರ್‌ಬಂದರ್‌ನಲ್ಲಿಯೇ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸೇರಿಸಿದ್ದರು. ತರಗತಿಯಲ್ಲಿ ಗಾಂಧೀಜಿ ತುಂಬಾ ಬುದ್ಧಿವಂತ ವಿದ್ಯಾರ್ಥಿ ಎನಿಸಿರಲಿಲ್ಲ. ಒಂದು ಬಾರಿ ಶಾಲೆಗೆ ಒಬ್ಬ ತನಿಖಾಧಿಕಾರಿ ಬಂದಿದ್ದರು. ಅವರು ವಿದ್ಯಾರ್ಥಿಗಳಿಗೆ ಬರೆಯಲು ಒಂದೆರಡು ಪದಗಳನ್ನು ಸೂಚಿಸಿದರು. ಆ ಪದಗಳನ್ನು ಗಾಂಧೀಜಿ ತಪ್ಪಾಗಿ ಬರೆದಿದ್ದರು. ಆಗ ತನಿಖಾಧಿಕಾರಿ ಗಾಂಧೀಜಿಯ ಅಕ್ಕಪಕ್ಕದಲ್ಲಿ ತುಳಿತಿರುವ ವಿದ್ಯಾರ್ಥಿಗಳನ್ನು ನೋಡಿ ಪದಗಳನ್ನು ಬರೆ ಎಂದು ಹೇಳಿದಾಗ ಗಾಂಧೀಜಿ ನಯವಾಗಿ ನಿರಾಕರಿಸಿದರು. ಈ ಸನ್ನಿವೇಶ ನಮಗೆ ಗಾಂಧೀಜೀಯ ಸತ್ಯಸಂಧತೆಯನ್ನು ಬಾಲ್ಯದಿಂದಲೇ ಅಳವಡಿಸಿಕೊಂಡಿದ್ದರು ಎಂಬುದನ್ನು ತೋರಿಸುವುದು.

ಅಂದು ಬಾಲ್ಯ ವಿವಾಹಗಳು ಜಾರಿಯಲ್ಲಿದ್ದವು. ಎಲ್ಲಾ ಮನೆಗಳಲ್ಲಿ ನಡೆದಂತೆ ಗಾಂಧೀಜಿಯವರ ವಿವಾಹವೂ ಸಹ ಕಸ್ತೂರಿ ಬಾ ಜೊತೆ ಬಾಲ್ಯದಿಂದಲೇ ನಡೆಯಿತು. ಗಾಂಧೀಜಿಗೆ ಬಹಳ ನಾಚಿಕೆ, ಅಂಜುಬುರುಕ ಸ್ವಭಾವ ಇತ್ತು. ಅವರು ತಮ್ಮ ಪತ್ನಿಯನ್ನು ಮಾತನಾಡಿಸಲು ತುಂಬಾ ನಾಚಿಕೆಪಡುತ್ತಿದ್ದರು.

ಗಾಂಧೀಜಿ ಹೆಚ್ಚಿನ ಶಿಕ್ಷಣ ಪಡೆಯಲು ಇಂಗ್ಲೆಂಡಿಗೆ ತೆರಳಿದರು. 1888ರಲ್ಲಿ ಗಾಂಧೀಜಿ ವಿದೇಶಕ್ಕೆ ಪ್ರಥಮ ಬಾರಿ ಪ್ರಯಾಣ ಬೆಳೆಸಿದರು. ಆಗ ತಮ್ಮ ತಾಯಿಗೆ ತಾನು ವಿದೇಶದಲ್ಲಿ ವಾಸ ಮಾಡಿದರೂ ಸಹ ಮದ್ಯ, ಮಾಂಸ, ಮಾನಿನಿಯರ ಸಹವಾಸ ಮಾಡುವುದಿಲ್ಲವೆಂದು ಭಾಷೆ ನೀಡಿದರು. ಇಂಗ್ಲೆಂಡಿನಲ್ಲಿ ಆ ಕಾಲದಲ್ಲಿ ಬ್ಯಾರಿಸ್ಟರ್ ಪದವಿ ಪಡೆದುಕೊಂಡು ಭಾರತಕ್ಕೆ ಹಿಂದಿರುಗಿದ ಗಾಂಧೀಜಿ ತಮ್ಮ ವಕೀಲ ವೃತ್ತಿಯನ್ನು ಆರಂಭಿಸಿದರು. ಆದರೆ ಭಾರತದಲ್ಲಿ ಬಡವರಿಗೆ, ದೀನ ದಲಿತರಿಗೆ, ಕಾನೂನಿನ ಮೂಲಕ ಸರಿಯಾದ ಸ್ಥಾನ ಮಾನ ಸಿಗುತ್ತಿಲ್ಲ ಎಂದು ಗಾಂಧೀಜಿ ಮನನೊಂದು ನುಡಿದರು.

ಗಾಂಧೀಜಿ ತಮ್ಮ ವಕೀಲಿಕೆಯನ್ನು ದಕ್ಷಿಣ ಆಫ್ರಿಕಾದಲ್ಲಿ ಮುಂದುವರೆಸಿದರು. ಅಲ್ಲಿಯೂ ಸಹ ಬ್ರಿಟಿಷರ ದಬ್ಬಾಳಿಕೆ ಜಾರಿಯಲ್ಲಿತ್ತು. ಕರಿಯರು ಮತ್ತು ಬಿಳಿಯರ ನಡುವೆ ಹೋರಾಟ ನಡೆಯುತ್ತಿತ್ತು. ತಮ್ಮ ಸತ್ಯಾಗ್ರಹದ ಪಾಠವನ್ನು ಗಾಂಧೀಜಿ ಮೊದಲ ಬಾರಿಗೆ ದಕ್ಷಿಣ ಆಫ್ರಿಕಾದಲ್ಲಿ ಪ್ರಾರಂಭ ಮಾಡಿದರು. ಹೀಗೆ ಹಲವಾರು ವರ್ಷಗಳ ಕಾಲ ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಹೋರಾಟ ನಡೆಸಿದರು.

ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ತೀವ್ರವಾಗಿ ನಡೆಯುತ್ತಿದ್ದ ಕಾಲ. ಗಾಂಧೀಜಿಗೆ ತಾನು ತನ್ನ ತಾಯ್ನಾಡಿಗೆ ಹೋಗಬೇಕು. ಅಲ್ಲಿ ತನ್ನ ಜನರಿಗಾಗಿ ದುಡಿಯಬೇಕು ಎಂಬ ಹಂಬಲ ಮನದಲ್ಲಿ ಮೂಡಿತು. ಅವರು ದಕ್ಷಿಣ ಆಫ್ರಕಾವನ್ನು

ಬಿಟ್ಟು ಭಾರತಕ್ಕೆ ಬಂದು ಸಾಬರಮತಿ ಆಶ್ರಮವನ್ನು ಪ್ರಾರಂಭಿಸಿದರು. 1915ರಲ್ಲಿ ಗಾಂಧೀಜಿ ಭಾರತಕ್ಕೆ ಬಂದು ನೆಲೆಸಿದರು.

ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡಲು ಗಾಂಧೀಜಿ ಬಳಸಿದ ಎರಡು ಅಸ್ತ್ರಗಳು ಯಾವುದೆಂದರೆ ಅಹಿಂಸೆ ಮತ್ತು ಸತ್ಯಾಗ್ರಹ. ಆರಂಭದಲ್ಲಿ ಗಾಂಧೀಜಿಯವರ ಸತ್ಯಾಗ್ರಹವನ್ನು ಕಂಡು ಬ್ರಿಟಿಷರು ಗೇಲಿ ಮಾಡಿ ನಕ್ಕರು. ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಬಲವಾಗಿ ಖಂಡಿಸಿದರು. ಭಾರತದಲ್ಲಿ ಜಾತಿ ಪದ್ಧತಿ ತೊಲಗಬೇಕು ಎಂದು ಹೋರಾಟ ಮಾಡಿದರು. 'ಹರಿಜನ' ಪತ್ರಿಕೆ ಪ್ರಾರಂಭ ಮಾಡಿ ಜನರಲ್ಲಿ ಜಾಗೃತಿ ಮೂಡಿಸಿದ ಗಾಂಧೀಜಿ, ಭಾರತ ದೇಶದ ಮೂಲೆ, ಮೂಲೆಗೂ ಸಂಚಾರ ಮಾಡಿ ಜನರಲ್ಲಿ ದೇಶಪ್ರೇಮವನ್ನು ತುಂಬಿದರು. ತಾವೇ ಸ್ವತಃ ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ವಹಿಸಿಕೊಂಡರು. ಆ ದಿನಗಳಲ್ಲಿ ಗಾಂಧೀಜಿಯವರ ಒಂದು ಮಾತಿಗೆ ಜನ ತಂಡೋಪತಂಡವಾಗಿ ಹರಿದು ಬರುತ್ತಿದ್ದರು. ಗಾಂಧೀಜಿಯವರ ಒಂದು ಕೂಗಿಗೆ ಜನ ತಮ್ಮ ಮನೆ, ಮಠ, ಆಸ್ತಿಯನ್ನು ಸ್ವಾತಂತ್ರ್ಯಕ್ಕಾಗಿ ಮುಡಿಪಾಗಿ ಇಡುತ್ತಿದ್ದರು. ಭಾರತೀಯರಿಗೆ ಗಾಂಧೀಜಿಯವರ ಮೇಲೆ ಅಪಾರ ಪ್ರೇಮ. ಭಾರತ ದೇಶದಲ್ಲಿರುವ ಧನಿಕ ಸಮೂಹ ಗಾಂಧೀಜಿ ಬೆಲೆ ಬಾಳುವ ಚಿನ್ನ, ಬೆಳ್ಳಿ, ಹಣವನ್ನು ಕಾಣಿಕೆಯ ರೂಪದಲ್ಲಿ ನೀಡುತ್ತಿದ್ದರು. ತನ್ನ ಬಳಿಗೆ ಬಂದ ಹಣವನ್ನು ಒಂದೂ ಗಾಂಧೀಜಿ ತಮ್ಮ ಸ್ವಂತಕ್ಕೆ ಬಳಸಲಿಲ್ಲ. ಅವರು ಸ್ವಾತಂತ್ರ್ಯ ಹೋರಾಟಕ್ಕಾಗಿ ದೀನ ದಲಿತರಿಗೆ, ಬಡವರಿಗಾಗಿ ಹಂಚಿದರು. ಅಂತಹ ನಿಸ್ವಾರ್ಥ ಚೇತನ ನಮ್ಮ ಗಾಂಧೀಜಿ.

ಸ್ವಾತಂತ್ರ್ಯ ಹೋರಾಟದ ಕಿಚ್ಚು ಭಾರತದ ಎಲ್ಲಾ ಕಡೆ ಹತ್ತಿ ಉರಿಯುತ್ತಿತ್ತು. ಗಾಂಧೀಜಿ ಬ್ರಿಟಿಷರ ವಿರುದ್ಧ 'ಮಾಡು ಇಲ್ಲವೇ ಮಡಿ', 'ಉಪವಾಸ ಸತ್ಯಾಗ್ರಹ' ಎಂಬ ಅಸ್ತ್ರವನ್ನು ಬಳಸಿದರು. ಗಾಂಧೀಜಿವರ ನೈತಿಕ ಸ್ಥೈರ್ಯ, ಆತ್ಮವಿಶ್ವಾಸವನ್ನು ಕಂಡು ಬ್ರಿಟಿಷರು ಬೆರಗಾದರು. ಅವರ ಅಂತಃಶಕ್ತಿಯನ್ನು ಕಂಡು ಆಶ್ಚರ್ಯಚಕಿತರಾದರು.

ಭಾರತಕ್ಕೆ 15ನೇ ಆಗಸ್ಟ್ 1947ರಲ್ಲಿ ಸ್ವಾತಂತ್ರ್ಯ ಬಂದಿತು. ಗಾಂಧೀಜಿ ಬಯಸಿದ್ದರೆ ದೇಶದ ಸರ್ವೋಚ್ಚ ಪದವಿಯನ್ನು ಅಲಂಕರಿಸಬಹುದಾಗಿತ್ತು. ಆದರೆ ಗಾಂಧೀಜಿ ಎಂದಿಗೂ ಪದವಿ, ಪುರಸ್ಕಾರಗಳನ್ನು ಬಯಸಿ ಹೋದವರಲ್ಲ. ಅವರ ಉಸಿರು ಸದಾಕಾಲ ಭಾರತಕ್ಕೆ ಮಿಡಿಯುತ್ತಿತ್ತು. ಅವರು ಭಾರತದಿಂದ ಜಾತಿ ಪದ್ಧತಿ, ಕೋಮು ಸಂಘರ್ಷ, ಅಸಮಾನತೆಯನ್ನು ಹೊಡೆದೋಡಿಸಲು ಯತ್ನಿಸುತ್ತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂಭ್ರಮದಲ್ಲಿಯೇ ಮುಸಲ್ಮಾನರು ಭಾರತದಿಂದ ಬೇರ್ಪಟ್ಟು ತಮ್ಮದೇ ದೇಶವನ್ನು ಕಟ್ಟಿಕೊಂಡರು. ಆಗ ಗಾಂಧೀಜಿ ಬಹಳ ನೊಂದುಕೊಂಡರು. ಜನವರಿ 30, 1948ರಂದು ತಮ್ಮ ಪ್ರಾರ್ಥನಾ ಮಂದಿರಕ್ಕೆ ಬರುವಾಗ ದಾರಿಯಲ್ಲಿ ಹಂತಕನ ಗುಂಡಿಗೆ ಬಲಿಯಾದ ಗಾಂಧೀಜಿ ಅಸುನೀಗಿದರು.

ಭಾರತ – ಒಂದು ರಾಷ್ಟ್ರವಾಗಿ.

– ರಕ್ಷಿತ್
ದ್ವಿತೀಯ ಬಿ.ಎ.

ಇವತ್ತಿನ ಪ್ರಸ್ತುತ ಭಾರತ ಜಾಗತಿಕ ಮಟ್ಟದಲ್ಲಿ ಬಹಳಷ್ಟು ಅಭಿವೃದ್ಧಿ ಹೊಂದುತ್ತಿದ್ದರು ಭಾರತದಲ್ಲಿನ ಸಮಸ್ಯೆಗಳು ಬಹಳಷ್ಟು. ಯಾಕೆ ಭಾರತದಲ್ಲಿನ ಸಮಸ್ಯೆಗಳಿಗೆ ಪರಿಹಾರವೇ ಇಲ್ಲ? ಎಂಬ ಪರಶ್ನೆ ಅಕ್ಷರಶಃ ಭಾರತೀಯರ ಮನಸ್ಸಿನಲ್ಲಿ ಬೇರೂರಿರುತ್ತದೆ.

ಒಂದು ಕಾಲದಲ್ಲಿ ಮುತ್ತು, ರತ್ನ, ಹವಳಗಳನ್ನು ಸೇರಿನಲ್ಲಿ ಮಾರಾಟ ಮಾಡುತ್ತಿದ್ದ ದೇಶ ಭಾರತ ಆದರೆ ಇವತ್ತು ನಿರುದ್ಯೋಗ, ಬಡತನ ಭಾರತವನ್ನು ಕಾಡುತ್ತಿದೆ. ಇವೆಲ್ಲದರ ನಡುವೆ ಭಾರತೀಯರ ಮನೋಭಾವನೆ ಕೂಡ ಬದಲಾಗುತ್ತಿದೆ. ಬ್ರಿಟಿಷರ ವಿರುದ್ಧ ಹೋರಾಡಿದ ವೀರರನ್ನು ಮರೆತಿರುವವರು ಹಲವಾರು ಮಂದಿ. ನಮ್ಮ ದೇಶ ಭಾರತ ಎಂದು ಹೇಳಿಕೊಳ್ಳಲು ಅನೇಕರು ನಾಚಿಕೆ ಪಟ್ಟುಕೊಳ್ಳುತ್ತಾರೆ. ಆದರೆ ಇಡೀ ಪ್ರಪಂಚ ಇವತ್ತು ಭಾರತವನ್ನು ಸ್ವಾಗತಿಸುತ್ತದೆ ಎಂದು ಬಹಳ ಹೆಮ್ಮೆ ನಮಗಿರಬೇಕು. ಭಾರತದ ಒಳಗಿನ ಸಮಸ್ಯೆಗಳಿಗೆ ನಾವೇ ಕಾರಣ. ನಮ್ಮಲ್ಲಿರುವ ಹೊಟ್ಟೆಕಿಚ್ಚು, ದ್ವೇಷ, ಅಸೂಯೆ, ವ್ಯಾಮೋಹ ಇವತ್ತು ಈ ಪರಿಸ್ಥಿತಿ ಉಂಟಾಗಿದೆ. ಅಂದು ಬ್ರಿಟಿಷರ ವಿರುದ್ಧ ಹೋರಾಡಿದ ವೀರರೊಂದಿಗೆ ನಮ್ಮವರು ಸಹಕರಿಸದೇ ಬ್ರಿಟಿಷರ ಎಂಜಲು ಕಾಸಿಗೆ ಆಸೆ ಪಟ್ಟು ಅವರೊಂದಿಗೆ ಕೈ ಜೋಡಿಸಿದ್ದಕ್ಕೆ ಭಾರತವನ್ನು ಬ್ರಿಟಿಷರು ಆಳಿದಲ್ಲದೇ ಅಪಾರ ಸಂಪತ್ತು ಲೂಟಿಗೈದರು. ಇದಕ್ಕೆ ಕಾರಣ ನಾವೇ. ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಭಗತ್‌ಸಿಂಗ್‌ನನ್ನು ನಿರ್ಲಕ್ಷಿಸಿದ ನಮ್ಮ ಅಂದಿನ ನಾಯಕರು ಕಾರಣ. ಹಾಗಾಗದೇ ಇರುತ್ತಿದ್ದರೆ ಇವತ್ತು ಕಾಶ್ಮೀರ ನಮ್ಮದು, ಪಾಕಿಸ್ಥಾನ ನಮ್ಮದು ಆಗಿರುತ್ತಿದ್ದಲ್ಲದೇ ಗಡಿಯಲ್ಲಿ ನಮ್ಮ ದೇಶದ ಭಾರತಾಂಬೆಯ ಹೆಮ್ಮೆಯ ಪುತ್ರರು ಪ್ರಾಣ ತ್ಯಾಗ ಮಾಡುತ್ತಿರಲಿಲ್ಲ. ನಮ್ಮ ದೇಶದ ಯೋಧರ ರುಂಡ ಬೇರೆ ಮುಂಡ ಬೇರೆ ಮಾಡಿದಾಗಲೂ ನಮ್ಮ ದೇಶದ ಜನತೆ ಸುಮ್ಮನಿದ್ದರು. ಇವತ್ತು ದೇಶದಲ್ಲಿನ ಜನರ ಮನೋಭಾವನೆ ಬದಲಾಗಬೇಕಾಗಿದೆ. ನಮಗೆ ಯಾಕೆ? ಅನ್ನುವ ಮನೋಭಾವ ಬಿಟ್ಟು ದೇಶ ನನ್ನದು ಭಾರತಾಂಬೆಯ ಮಡಿಲಲ್ಲಿ ಇರುವವರು ನನ್ನವರು ಎಂದು ಭಾವಿಸಿ

ಬದುಕಿದರೆ ಇವತ್ತು ಈ ಪರಿಸ್ಥಿತಿ ನಮಗೆ ಇರುತ್ತಿರಲಿಲ್ಲ.

ಸ್ವಾಮಿ ವಿವೇಕಾನಂದರು ಇಡೀ ಭಾರತದ ಸಂಸ್ಕೃತಿ, ಸಂಪ್ರದಾಯವನ್ನು ಪ್ರಪಂಚಾದ್ಯಂತ ಸಂಚರಿಸಿ ಬಿತ್ತರಿಸಿ ಬಂದಿದ್ದರು. ಅಮೇರಿಕಾದ ವಿಶ್ವಧರ್ಮ ಸಮ್ಮೇಳನದಲ್ಲಿ ಅವರು ತಮ್ಮ ಮಾತನ್ನು ಪ್ರಾರಂಭಿಸುವಾಗ "ಅಮೇರಿಕದ ಸಹೋದರ ಸಹೋದರಿಯರೇ" ಎಂದು ಪ್ರಾರಂಭಿಸಿದರು. ಅಂತಹ ಶ್ರೇಷ್ಠ ವ್ಯಕ್ತಿ ಹುಟ್ಟಿದ ಧರ್ಮದಲ್ಲಿ ನಾವು ಹುಟ್ಟಿದ್ದು ಇವತ್ತು ಯಾರಾದರೂ ಯಾರನ್ನು ಅಣ್ಣ, ಅಕ್ಕ, ತಮ್ಮ, ತಂಗಿ, ಅಂತ ಸಂಬಂಧ ಕಲ್ಪಿಸಿ ಮಾತಾಡಿದರೆ ಅದಕ್ಕೆ ನೂರಾರು ಪ್ರಶ್ನೆಗಳು ಉದ್ಭವಿಸುತ್ತವೆ. ಈ ಮನೋಭಾವನೆ ನಮ್ಮಲ್ಲಿ ಬದಲಾಗಬೇಕಾಗಿದೆ. ಇವತ್ತು ಭಾರತವನ್ನು ಇಂಡಿಯಾ ಅಂತ ಕರೀತೇವೆ ಆದರೆ ನಿಜವಾಗಿ ಇಂಡಿಯಾ ಅನ್ನುವುದು ಪರಕೀಯರು ಕೊಟ್ಟ ಹೆಸರು. ನಮ್ಮದು ಭಾರತ, ಹಿಂದೂಸ್ಥಾನ. ನಮ್ಮ ದೇಶದ ಅನ್ನ ತಿಂದು, ನಮ್ಮ ದೇಶದಲ್ಲಿ ವಾಸಿಸಿ ಇವತ್ತು ಪಾಕಿಸ್ಥಾನಕ್ಕೆ ಜೈ ಎನ್ನುವವರು ನಮ್ಮಲ್ಲಿ ಇದ್ದಾರೆ. ನಮ್ಮಲ್ಲಿ ಇದ್ದು ಹಿಂದೂಸ್ಥಾನದ ವಿರುದ್ಧ ಪಿತೂರಿ ಮಾಡುವವರಿದ್ದಾರೆ. ಇದನ್ನು ನಾವು ತಡೆಯಬೇಕಿದೆ.

ಇವತ್ತು ಭಾರತದಲ್ಲಿರುವ ಹಲವಾರು ಸಮಸ್ಯೆಗಳ ವಿರುದ್ಧ ನಾವು ಧ್ವನಿ ಎತ್ತದಿದ್ದರೆ ಮುಂದೊಂದು ದಿನ ಭಾರತ ಕೇವಲ ಇತಿಹಾಸದ ಪುಟವಾಗುತ್ತದೆ. ಆದ್ದರಿಂದ ಭಾರತವನ್ನು ಸದೃಢ ಮಾಡಲು ನಾವೆಲ್ಲಾ ಒಂದಾಗೋಣ. ಇಂಡಿಯಾ ಎನ್ನುವುದನ್ನು ಬಿಟ್ಟು ಹಿಂದೂಸ್ಥಾನ ಎನ್ನೋಣ. ಭಗತ್‌ಸಿಂಗ್, ವೀರಸಾವರ್ಕರ್ ತತ್ವವನ್ನು ಪಾಲಿಸೋಣ. ಸುಭಾಸ್ ಚಂದ್ರ ಬೋಸ್‌ರಂತೆ ವೀರ ಯೋಧನ ತತ್ವವನ್ನು ಹಿಡಿದು ಯೋಧರನ್ನು ಗೌರವಿಸುತ್ತಾ ಹಿಂದೂಸ್ಥಾನವನ್ನು ಮಾಡಲು ಪಣ ತೊಡೋಣ.

ನಗು

– ರಮ್ಯಾ ಕುಂದರ್
ದ್ವಿತೀಯ ಬಿ.ಎ.

ಮಾನವನ ಮುಖದಲ್ಲಿ ಮೂಡುವಂತಹ ಹಾಗೂ ಸಾಮಾನ್ಯವಾಗಿ ವ್ಯಕ್ತಪಡಿಸುವ ಭಾವನೆಯೆಂದರೆ ನಗು. ಮಾನವನು ತಾನು ಅನಭವಿಸಿದ ಸಂತೋಷವನ್ನು ನಗುವಿನ ಮೂಲಕ ವ್ಯಕ್ತಪಡಿಸುತ್ತಾನೆ.

ನಗೆಯಲ್ಲಿ ಅನೇಕ ವಿಧಗಳಿವೆ. ಅವುಗಳೆಂದರೆ: (1) ತೆನಾಲಿ ರಾಮಕೃಷ್ಣನ ವಿಕಟ ನಗು. (2) ಮುದ್ದಣ್ಣ ಮನೋರಮೆಯರ ಸರಸನಗು. (3) ಕವಿಗಳ ರಸ ನಗು. (4) ಹಾಸ್ಯನಗು. (5) ಮೂದಲಿಕೆಯ ನಗು. (6) ಅಟ್ಟಹಾಸದ ನಗು. (7) ಬುದ್ಧನ ಶಾಂತ ನಗು. ಇತ್ಯಾದಿ.

ಮಾನವನು ಮಾತ್ರ ಈ ಅದ್ಭುತವಾದ ಭಾವನೆಯನ್ನು ವ್ಯಕ್ತಪಡಿಸಲು ಸಾಧ್ಯ. ಮನುಷ್ಯರು ನಗುವ ಸಂದರ್ಭದಲ್ಲಿ ಹಲವು ರೀತಿಗಳು. ಅವುಗಳೆಂದರೆ ಕೆಲವರು ಸಂತೋಷದಿಂದ ನಗುವಾಗ ದಮ್ಮು ರೋಗಿಗಳು ಉಸಿರಾಡಿದಂತೆ, ಕುದುರೆಯ ಹೇಂಕಾರದಂತೆ, ಕೆಲವರು ನಗುವಾಗ ಕೋಳಿಯ ಕೂಗುವಿಕೆಯಂತೆ, ಇನ್ನೂ ಕೆಲವರು ನಗುವಾಗ ಪಕ್ಕದಲ್ಲಿ ಇರುವ ವ್ಯಕ್ತಿಗೆ ಹೊಡೆಯುತ್ತಾ ನಗುವವರೂ ಇದ್ದಾರೆ.

ಅಟ್ಟಹಾಸದಿಂದ ರಾಕ್ಷಸರ ರೀತಿಯಲ್ಲಿ ನಗುವ ಜನರನ್ನು ನಾವು ನಮ್ಮ ಸುತ್ತಮುತ್ತಲೂ ಗಮನಿಸಬಹುದಾಗಿದೆ. ನಗುವುದರಿಂದ ನಮ್ಮ ನರಗಳಲ್ಲಿ ರಕ್ತಸಂಚಾರವು ಒಳ್ಳೆಯ ರೀತಿಯಲ್ಲಿ ನಡೆಯುವುದರಿಂದಾಗಿ ಮುಖವು ಕಾಂತಿಯುಕ್ತವಾಗಿ ಕಾಣುತ್ತದೆ.

ನಕ್ಕಾಗ ಮುಖದಲ್ಲಿ ಉಂತಾಗುವಂತಹ ಭಾವನೆಗಳು:

1. ನಕ್ಕಾಗ ಕೆನ್ನೆಯು ಉಬ್ಬಿ ಕಿತ್ತಳೆಯ ಹಣ್ಣಿನಂತಾಗುತ್ತದೆ.
2. ನಕ್ಕಾಗ ಗುಲಾಬಿಯ ದಳದ ಹಾಗೆ ಕೆಂಪಗಿನ ತುಟಿಗಳು ತೆರೆಯುತ್ತವೆ.
3. ನಗುವುದರಿಂದ ವೈಜ್ಞಾನಿಕವಾಗಿ ಹೇಳುವುದಾದರೆ ನಮ್ಮ ರೋಗಗಳನ್ನು ದೂರವಿರಿಸಿ ಆಯಸ್ಸನ್ನು ಹೆಚ್ಚಿಸುತ್ತದೆ.

ನಗುವಿನಿಂದ ರೋಗಗಳನ್ನು ದೂರ ಮಾಡುವುದಕ್ಕಾಗಿ ಇತ್ತೀಚೆಗೆ ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ನಗುವುದಕ್ಕಾಗಿಯೇ ಹಲವಾರು ಕ್ಲಬ್‌ಗಳನು ನಡೆಸುತ್ತಾರೆ. ಹಾಗೆಯೇ ಜೀವನದ ಒತ್ತಡದಿಂದ ಹೊರಬಂದು ಹಲವಾರು ಜನರು ಇಂತಹ ಕ್ಲಬ್‌ಗಳಿಗೆ ಸೇರಿಕೊಳ್ಳುತ್ತಾರೆ.

ಒಟ್ಟಾರೆ ಹೇಳುವುದಾದರೆ ನಗುವು ದೇವರು ನಮಗೆ ಕೊಟ್ಟ ಅದ್ಭುತವಾದಂತಹ ಭಾವನೆಯಾಗಿದೆ. ಹಾಗಾಗಿ ಸದಾ ನಗುತ್ತಿರಿ.

ಬಹ್ವಾಶೀ ಸ್ವಲ್ಪಸಂತುಷ್ಟಃ ಸುನದ್ರಃ ಶೀಘ್ರಚೇತನಃ ।
ಪ್ರಭುಭಕ್ತಶ್ಚ ಶೂರಶ್ಚ ಜ್ಞಾತವ್ಯಾಃ ಷಟ್ ಶುನೋ ಗುಣಾಃ ॥

ತುಂಬಾ ತಿನ್ನುವುದು, ಅಲ್ಪದಿಂದಲೇ ತೃಪ್ತಿ, ಚೆನ್ನಾಗಿ ನಿದ್ದೆ, ಬೇಗನೇ ಎಚ್ಚರಗೊಳ್ಳುವಿಕೆ. ಸ್ವಾಮಿನಿಷ್ಠೆ ಮತ್ತು ಶೌರ್ಯ ಈ ಆರು ನಾಯಿಯಲ್ಲಿರುವ ಗುಣಗಳು.

ಕೈ ಇಲ್ಲದ ಹುಡುಗಿ ವಿಮಾನ ಹಾರಿಸಿದಳು

(ಸಂಗ್ರಹ) – ಸಂಭ್ರಮ
ದ್ವಿತೀಯ ಬಿ.ಎ.

ಒಬ್ಬ ವ್ಯಕ್ತಿಗೆ ಕೈಗಳು ಎಷ್ಟು ಮುಖ್ಯವೆಂದು ಎಲ್ಲರಿಗೂ ತಿಳಿದಿದೆ. ಅಮೇರಿಕಾದ ಎರಿಜೋನಾದಲ್ಲಿ ಜೆನಿತಾ ಕಾಕ್ಸ್ ಎಂಬ ಹುಡುಗಿ ಇದ್ದಳು. ಅವಳು ಗರ್ಭದಲ್ಲಿರುವಾಗ ಅವಳಿಗೆ ಎರಡು ಕೈಗಳೇ ಇಲ್ಲ ಎಂಬ ವಿಷಯ ಯಾರಿಗೂ ತಿಳಿದಿರಲಿಲ್ಲ. ಒಂದು ದಿನ ಜೆನಿತಾ ಜನಿಸಿದಾಗ ಆಕೆಯ ತಂದೆ–ತಾಯಿಗೆ ಆಘಾತ ಉಂಟಾಯಿತು. ಅವರು ಇದನ್ನು ಊಹಿಸಿರಲಿಲ್ಲ. ತಜ್ಞರು ಕೂಡ ಪರಿಶೀಲಿಸಿದಾಗ ಕೈಗಳೇ ಇಲ್ಲವೆಂಬ ವಿಷಯ ಗೊತ್ತಿರಲಿಲ್ಲ. ಆಕೆಯ ತಾಯಿಗೆ ಮಗಳಿಗೆ ಕೈಗಳೇ ಇಲ್ಲ, ಹೇಗೆ ಬದುಕನ್ನು ನಡೆಸುತ್ತಾಳೆ ಎನ್ನುವುದನ್ನು ಊಹಿಸಲು ಅಸಾಧ್ಯವಾಯಿತು. ಆದರೆ ಆಕೆಯ ತಾಯಿಯು ಧೈರ್ಯ ತೆಗೆದುಕೊಂಡು ಕಾಲುಗಳಲ್ಲಿ ಬರೆಸುವ, ಕಾಲುಗಳಲ್ಲಿ ತಲೆಕೂದಲನ್ನು ಬಾಚಿಕೊಳ್ಳುವ ತನ್ನೆಲ್ಲ ಕೆಲಸಗಳನ್ನು ಕಾಲುಗಳಲ್ಲೆ ಮಾಡುವ ಅಭ್ಯಾಸವನ್ನು ಮಾಡಿಸಿದಳು. ಬರುಬರುತ್ತ ಜೆನಿತಾಗೆ ಹಾರ್ಮೋನಿಯಮ್ ಕೆಲಿಯಬೇಕೆಂಬ ಆಸೆಯಾಯಿತು. ಅದನ್ನು ಆಕೆ ಕಲಿತಳು. ನಂತರ ಆಕೆಯು ತಾನು ಈಜಲು ಕಲಿಯಬೇಕೆಂಬ ಆಸೆಯನ್ನು ತಂದೆಯ ಬಳಿ ಹೇಳಿಕೊಂಡಾಗ ತಂದೆಯು ಅದಕ್ಕೊಪ್ಪಿಕೊಂಡರು. ಈಜನ್ನು ಕಲಿಯಲು ಎರಡು ಕೈಗಳು ಪ್ರಮುಖವಾಗಿ ಬೇಕು. ಆಕೆಗೆ ನೀರನ್ನು ದೂಡಲು ಬಹಳ ಕಷ್ಟವಾಗುತ್ತಿತ್ತು. ಎಷ್ಟು ಸಲ ಆಕೆ ನೀರನ್ನು ಕುಡಿಯುತ್ತಿದ್ದಳು. ತನಗೆ ಇದು ಸಾಧ್ಯವಿಲ್ಲವೆಂಬ ಯೋಚನೆ ಬಂದಾಗ ರೆಕ್ಕೆ ಇಲ್ಲದೆ ಈಜಾಡುವ ಮೀನನ್ನು ಕಂಡು ಆತ್ಮವಿಶ್ವಾಸ ಹೆಚ್ಚಿಸಿಕೊಂಡಳು. ಆಕೆಯು ತನ್ನಿಂದ ಸಾಧ್ಯವಾಗುತ್ತದೆ ಎಂದು ಹೇಳಿ ಈಜನ್ನು ಕಲಿತಳು. ನಂತರ ಆಕೆಯು ಈಜುಗಾರಿಕೆಯಲ್ಲಿ ಪ್ರಶಸ್ತಿಯನ್ನು ತೆಗೆದುಕೊಳ್ಳುವಾಗ ಕರಾಟೆಯಲ್ಲಿ ಬ್ಲಾಕ್‌ಬೆಲ್ಟ್ ಗೆದ್ದುಕೊಂಡ ಒಬ್ಬ ಯುವತಿಯನ್ನು ಕಂಡು ತಾನು ಕರಾಟೆಯನ್ನು ಕಲಿಯಬೇಕು ಎಂಬ ಆಸೆಯನ್ನು ತಂದೆಯ ಬಳಿ ಹೇಳಿಕೊಂಡಳು. ತಂದೆಯು ಅದಕ್ಕೂ ಒಪ್ಪಿಕೊಂಡು ಗುರುವನ್ನು ಹುಡುಕಲು ಆರಂಭಿಸಿದರು. ಎರಡು ಕೈಗಳಿಲ್ಲದವಳಿಗೆ ಕರಾಟೆಯನ್ನು ಕಲಿಸಲು ಯಾರು ಮುಂದೆ ಬರುತ್ತಿರಲಿಲ್ಲ. ಹೇಗಾದರೂ ಮಾಡಿ ಕರಾಟೆ ಗುರುವನ್ನು ಹುಡುಕಿದ ಅವರು ಗುರುವಿನ ಬಳಿ ಆಕೆಗೆ ಕರಾಟೆಯನ್ನು ಕಲಿಸುವಂತೆ ಕೇಳಿದಾಗ ಅವರು ಒಪ್ಪಿಕೊಂಡರು. ಕರಾಟೆಯಲ್ಲಿ ಎದುರಾಳಿಯ ಹೊಡೆತವನ್ನು ತಡೆಯಲು ಕೈಗಳು ಮುಖ್ಯವಾಗಿ ಬೇಕಾಗುತ್ತದೆ. ಆಕೆಯು ಕರಾಟೆಯನ್ನು ಕಲಿತಳು. ನಂತರ ಅದೇ ವರ್ಷ ಆಕೆಯ ಆ ಕರಾಟೆ ಚಾಂಪಿಯನ್‌ಶಿಪ್ ಆಗಿ ಪ್ರಶಸ್ತಿಯನ್ನು ಪಡೆದುಕೊಂಡಳು. ಆಕೆಯು ಸೈಕಾಲಜಿ ಪದವಿಯನ್ನು ಪಡೆದುಕೊಂಡಳು. ಕಾಲುಗಳಿಂದ ಡ್ರೈವಿಂಗ್ ಮಾಡುವ ಕಲೆಯನ್ನು ಕಲಿತುಕೊಂಡಳು. ಆಕೆಗೆ ಎಲ್ಲರಂತೆ ತಾನು ಕಾರನ್ನು ಓಡಿಸಬೇಕೆಂಬ ಅಭಿಲಾಷೆ ಉಂಟಾಗಿ ತಂದೆಯ ಬಳಿ ಹೇಳಿದಳು. ಕಾರು ಓಡಿಸಬೇಕೆಂಬ ಆಕೆಯ ಆಸೆಯನ್ನು ಕೇಳಿ ಕೆಲವರು ಹಾಸ್ಯ ಮಾಡತೊಡಗಿದರು. ಇದರಿಂದ ಆಕೆಯು ನೊಂದುಕೊಂಡರೂ ಕಾರನ್ನು ಓಡಿಸಲು ಕಲಿತುಕೊಂಡಳು. ನಂತರ ಆಕೆಗೆ ತಾನು ವಿಮಾನವನ್ನು ಹಾರಿಸಬೇಕೆಂಬ ಆಸೆಯಾಯಿತು. ಆಕೆಯು ತನ್ನ ಆಸೆಯನ್ನು ಕೆಲವರಲ್ಲಿ ಹೇಕೊಂಡಾಗ ಒಬ್ಬರು ಕರೆದು ಆ ಕೋರ್ಸ್‌ನ್ನು ಕೊಟ್ಟರು. ಮೊದಮೊದಲು ಆಕೆಗೆ ವಿಮಾನವನ್ನು ಹಾರಿಸಲು ಬಹಳ ಕಷ್ಟವಾಗುತ್ತಿತ್ತು. ನಂತರ ವಿಮಾನವನ್ನು ಓಡಿಸುವುದನ್ನು ಕಲಿತಳು.

ತನಗೆ ಕೈಯಿಲ್ಲವೆಂಬ ಕಾರಣದಿಂದ ಅವಳು ಸುಮ್ಮನೆ ಕೂರಲಿಲ್ಲ. ಅಥವಾ ಆತ್ಮಹತ್ಯೆಯನ್ನು ಮಾಡಿಕೊಳ್ಳಲಿಲ್ಲ. ಎರಡು ಕೈಗಳಿಲ್ಲದಿದ್ದರೂ ಅವಳ ಸಾಧನೆಯು ಅಪೂರ್ವವಾದದ್ದು. ಅವಳು ಹೆಜ್ಜೆಹೆಜ್ಜೆಗೂ ಅಡೆತಡೆ, ಬೈಗುಳವನ್ನು ಅನುಭವಿಸಿದರೂ ತಾನು ಏನಾದರೂ ಸಾಧಿಸಬೇಕು ಎಂಬ ಛಲ ಹೊಂದಿದ್ದಳು. ದೈಹಿಕ ಅಸಮರ್ಥರಿಗೆ ಸ್ಫೂರ್ತಿಯಾಗಿದ್ದಳು ಆಕೆ.

ಸಮಾಜ

– ದೀಪ್ತಿ
ದ್ವಿತೀಯ ಬಿ.ಎ.

ಯಾವಾಗಲೂ ಯಾವುದಾದರೂ ಒಂದು ವಿಷಯವನ್ನು ಬರೆಯಬೇಕು ಎಂದೆನಿಸಿದಾಗ ನನ್ನ ತಲೆಗೆ ಹೊಳೆಯುವ ವಿಷಯ ಈ ಸಮಾಜ. ಸಮಾಜದಲ್ಲಿರುವ ದೋಷಗಳು, ಒಳ್ಳೆಯದೂ ಇದೆ. ಆದರೆ ಕೆಟ್ಟ ಜನರ ಎದುರು ಒಳ್ಳೆಯ ಕೆಲಸಗಳು ಕಾಣದಂತಾಗಿದೆ. ಗಂಡು–ಹೆಣ್ಣು, ಬಡವ–ಶ್ರೀಮಂತ, ಹಿಂದು–ಮುಸ್ಲಿಂ–ಕ್ರಿಶ್ಚಿಯನ್, ಇವುಗಳಲ್ಲೂ ಕೂಡ ತಾರತಮ್ಯವಿದೆ. ಇವೆಲ್ಲ ಪಿಡುಗುಗಳು ಎಂದು ಹೇಳಬಹುದು. ಎಲ್ಲದರ ಕುರಿತು ಯೋಚಿಸಿದಾಗ ಎಲ್ಲವೂ ಪ್ರಶ್ನೆಯಾಗಿಯೇ ಉಳಿಯುತ್ತದೆ. ಯಾಕೆ ಹೀಗೆ? ನನ್ನ ಅನುಭವದ ಪ್ರಕಾರ ಕೆಲವೊಂದು ವಿಷಯಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ.

ಮೊದಲನೆಯದಾಗಿ ಇರುವ ಪಿಡುಗೆಂದರೆ ಈ ಸಮಾಜದಲ್ಲಿನ ಗಂಡು–ಹೆಣ್ಣು ಎನ್ನುವ ಭೇದ–ಭಾವ. ಎಷ್ಟರ ಮಟ್ಟಿಗೆ ಇದು ಬೇರೂರಿದೆ ಎಂದರೆ, ನಾವು 21ನೆಯ ಶತಮಾನದಲ್ಲಿ ಇದ್ದರೂ ಕೂಡಾ ಅದರಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ನಮ್ಮ

ಸಮಾಜದ ಪ್ರಕಾರ ಗಂಡಿಗೆ ಎಲ್ಲ ಸ್ವಾತಂತ್ರ್ಯವಿದ್ದು, ತಾನು ಬಯಸಿದ ಎಲ್ಲವನ್ನು ಮಾಡಬಹುದು. ಆದರೆ ಹೆಣ್ಣು ಸಮಾಜದ ಸಂಕೋಲೆಯಲ್ಲಿದ್ದು ಬಂಧಿಯಾಗಿ ಕತ್ತಲೆಯಲ್ಲಿ ಜೀವನ ಸಾಗಿಸುತ್ತಿದ್ದಾಳೆ. ನಾನು ಇದು ಗಂಡಿನ ತಪ್ಪು ಎಂದು ಹೇಳುತ್ತಿಲ್ಲ. ಇದಕ್ಕೆ ಕಾರಣವೇ ನಮ್ಮ ಸಮಾಜ. ನಾವು ಪ್ರಾಥಮಿಕ ಮಟ್ಟದಲ್ಲಿ ಓದುತ್ತಿರಬೇಕಾದರೆ ನಮ್ಮ ಪಠ್ಯಪುಸ್ತಕದಲ್ಲಿ ಇರುವ ಚಿತ್ರಗಳನ್ನು, ಬರೆದ ಮಾಹಿತಿಯನ್ನೋದುತ್ತಿದ್ದೇವೆ. ಅಲ್ಲಿ ಹೆಂಗಸು ಮನೆಕೆಲಸ ಮಾಡುತ್ತಿರುತ್ತಾಳೆ, ಗಂಡಸು ಹೊರಗಡೆ ದುಡಿಯುತ್ತಿರುತ್ತಾನೆ. ಅಲ್ಲಿನ ಬರವಣಿಗೆಯೂ ಅದಕ್ಕೆ ಪೂರಕವಾಗಿದೆ. ಬೆಳೆಯುತ್ತಿರುವ ಮಕ್ಕಳ ಮನಸ್ಸಿನಲ್ಲಿ ಇದೇ ಅಚ್ಚಳಿಯದಂತೆ ಉಳಿದಿರುತ್ತದೆ.

ಹಾಗಾದರೆ ಬದಲಾವಣೆ ಎಲ್ಲಿಂದ ಆಗಬೇಕು ಎಂಬುದನ್ನು ನಾವು ತಿಳಿಯಬೇಕಲ್ಲವೇ?

ಇನ್ನು ಬಡವ–ಶ್ರೀಮಂತ, ಇಲ್ಲೂ ಕೂಡ ತಾರತಮ್ಯ. ಬಡವ ಬಡವನಾಗಿಯೇ ಇರುತ್ತಾನೆ. ಶ್ರೀಮಂತ ಶ್ರೀಮಂತನಾಗುತ್ತಾ ಹೋಗುತ್ತಾನೆ. ಸಂಪತ್ತಿನ ಹಂಚಿಕೆಯಲ್ಲಿ ಏರುಪೇರಾಗಿರುವುದೇ ಇದಕ್ಕೆಲ್ಲ ಕಾರಣ. ಎಲ್ಲಿಂದ ಈ ಸಮಸ್ಯೆಯನ್ನು ಬಗೆಹರಿಸಬಹುದು. ಹಸಿದವರಿಗೆ ಅನ್ನ ನೀಡುವುದು ಆಗ ಸಮಸ್ಯೆ ಕೊನೆಯಾಗುವುದೇ? ಹಸಿವು ಒಂದು ಹೊತ್ತು ಆಗದಿರಬಹುದು. ಮರುದಿನ ಆತನಿಗೆ ಹಸಿವಾಗುತ್ತದೆ ಅಲ್ಲವೆ? ಯಾವುದೇ ಸಮಸ್ಯೆಯನ್ನು ಬಗೆಹರಿಸಲು ಒಂದು ಉಪಾಯ ಇದ್ದೇ ಇರುತ್ತದೆ. ಹಸಿದವನಿಗೆ ಅನ್ನ ನೀಡುವ ಬದಲು ಅನ್ನವನ್ನು ಗಳಿಸುವ ಮಾರ್ಗವನ್ನು ಹೇಳಿಕೊಟ್ಟರೆ ಅವನು ಇನ್ನು ಮುಂದೆ ಹಸಿವಿನಿಂದ ಇರಲು ಸಾಧ್ಯವೆ? ಯೋಚನೆ ಮಾಡಿ...

ಇನ್ನೊಂದು ಮುಖವಾಗಿ ನಮ್ಮ ಸಮಾಜದಲ್ಲಿ ಇರುವ ಪಿಡುಗೆಂದರೆ 'ಧರ್ಮ.' ಆ ಧರ್ಮ, ಈ ಧರ್ಮ ಎನ್ನುತ್ತಾ ಜಗಳವಾಡಿ ಕೊನೆಗೆ ಜೀವವನ್ನು ಕಳೆದುಕೊಳ್ಳುವ ಹಂತಕ್ಕೆ ಈಗಿನ ಸಮಾಜ ಬಂದಿದೆ. ಇದರಿಂದ ಯಾರಿಗೆ ಲಾಭ, ಯಾರಿಗೆ ನಷ್ಟ? ಅದೇ ಎಲ್ಲರೂ ಒಂದೇ ಎಂಬ ಭಾವನೆ ಈ ಸಮಾಜವನ್ನು ಎಷ್ಟು ಶಾಂತಿಯುತವಾಗಿ, ಸಾಮರಸ್ಯದಿಂದಿರಲು ಸಹಾಯ ಮಾಡುತ್ತದೆಯಲ್ಲವೇ. ವ್ಯಕ್ತಿತ್ವವನ್ನು ಅವನ ಧರ್ಮದಿಂದ ಅಳಿಯಲು ಆಗುವುದಿಲ್ಲ. ಅದೆಲ್ಲ ಅವರ ಗುಣ ನಡತೆಗೆ ಬಿಟ್ಟದ್ದು. ಈ ಹಬ್ಬ ಮಾಡುವಂತಿಲ್ಲ, ಆ ಹಬ್ಬ ಮಾಡುವಂತಿಲ್ಲ, ಧರ್ಮವನ್ನು ಅವಹೇಳನ ಮಾಡುತ್ತಾ, ತಮ್ಮ–ತಮ್ಮ ಧರ್ಮವೇ ಶ್ರೇಷ್ಠವೆಂದು ಸಾಧಿಸಲು ಪ್ರಯತ್ನಿಸುವುದು ಎಷ್ಟರ ಮಟ್ಟಿಗೆ ಸರಿ. ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದೆ ಎಂದು ಹೇಳಿದರೆ ಸಾಕೆ? ಅದಕ್ಕಾಗಿ ನಮ್ಮ ಪ್ರಯತ್ನ ಬೇಡವೇ? ಎಲ್ಲರೂ ಅವರವರ ನಂಬಿಕೆಗನುಗುಣವಾಗಿ ಅವರ ಧರ್ಮವನ್ನು, ದೇವರನ್ನು ಪ್ರಾರ್ಥಿಸುತ್ತಾರೆ. ಅದಕ್ಕೆ ಸ್ವಾತಂತ್ರ್ಯವಿದೆ. ಯಾರಿಗೂ ಇವರ ನಂಬಿಕೆಯನ್ನು ಪ್ರಶ್ನೆ ಮಾಡಲು ಹಕ್ಕಿಲ್ಲ.

ಎಲ್ಲರೂ ಒಂದೇ ಎಂಬ ಭಾವನೆ ಇದ್ದರೆ ಸಮಾಜವು ಹೇಗಾಗಬಹುದು, ಯೋಚನೆ ಮಾಡಿ!

ಎಲ್ಲವೂ ನಮ್ಮ ಕೈಯಲ್ಲಿಯೇ ಇದೆ. ತಪ್ಪು–ಸರಿ ಗುರುತಿಸುತ್ತಾ, ಅದರಂತೆ ನಡೆದುಕೊಳ್ಳುವವನು ನೆಮ್ಮದಿಯ ಜೀವನವನ್ನು ಕಾಣುತ್ತಾನೆ. ಇಲ್ಲವಾದರೆ ಆತಂಕದ, ದುರಂತದ ಜೀವನ ನಮ್ಮದಾಗಬಹುದು.

ಕೋಳಿ ಮತ್ತು ಗಿಡುಗ (ಹದ್ದು)

– ರಕ್ಷಣ್
ದ್ವಿತೀಯ ಬಿ.ಎ.

ಒಂದು ಊರಿನಲ್ಲಿ ಕೋಳಿ ಹಾಗೂ ಗಿಡುಗ ತುಂಬಾ ಒಳ್ಳೆಯ ಸ್ನೇಹಿತರಾಗಿದ್ದರು. ಕೋಳಿ ಮತ್ತು ಗಿಡುಗ ಉತ್ತಮವಾದ ಸ್ನೇಹವನ್ನು ಹೊಂದಿತ್ತು. ಒಂದು ದಿನ ಗಿಡುಗ ಆಹಾರ ಸಿಗದೆ ಆಹಾರವನ್ನು ಹುಡುಕಿಕೊಂಡು ಹೋಗುವ ಅನಿವಾರ್ಯತೆ ಬರುತ್ತದೆ. ಆ ಕಾರಣಕ್ಕಾಗಿ ಗಿಡುಗ ತನ್ನ ಬಳಿ ಇದ್ದ ಕೆಲವು ಒಡವೆ, ಚಿನ್ನಗಳನ್ನು ತುಂಬಾ ನಂಬಿಕಸ್ಥ ಸ್ನೇಹಿತ ಕೋಳಿಯ ಬಳಿ ಕೊಟ್ಟು ಈ ರೀತಿ ಹೇಳುತ್ತದೆ. ನಾನು ಬೇರೆ ಊರಿಗೆ ಹೋಗಿ ಆಹಾರವನ್ನು ಹುಡುಕಿ ತರುವೆ. ಅಲ್ಲಿಯವರೆಗೆ ನನ್ನ ಈ ಒಡವೆಗಳನ್ನು ನಿನ್ನ ಬಳಿ ಇಟ್ಟುಕೊಳ್ಳು. ನಂತರ ನನಗೆ ಹಿಂತಿರುಗಿಸು ಎಂದು ಹೇಳಿ ಗಿಡುಗ ಹೋಗುತ್ತದೆ.

ಒಂದು ದಿನ ಕೋಳಿ ಆ ಒಡವೆಗಳನ್ನು ಕಳೆದು ಹಾಕುತ್ತದೆ. ಗಿಡುಗ ಬಂದು ತನ್ನ ಒಡವೆಗಳನ್ನು ಕೊಡು ಎಂದು ಕೇಳಿದಾಗ ಕೋಳಿ ಒಡವೆ ಕಳೆದು ಹೋದ ವಿಷಯವನ್ನು ತಿಳಿಸುತ್ತದೆ. ಇದರಿಂದ ಕುಪಿತನಾದ ಗಿಡುಗ ಕೋಳಿಗೆ ಈ ರೀತಿ ಹೇಳುತ್ತದೆ. ನೀನು ನನ್ನ ಒಡವೆಗಳನ್ನು ಹುಡುಕಿಕೊಡುವ ವರೆಗೂ ನಾನು ನಿನ್ನ ಮರಿಗಳನ್ನು ಎತ್ತಿಕೊಂಡು ಹೋಗುವೆ ಎಂದು ತಿಳಿಸಿ ಅಲ್ಲಿಂದ ಹಾರಿ ಹೋಗುತ್ತದೆ. ಆದರೆ ಕೋಳಿ ಹಿಂದಿಗೂ ಆ ಒಡವೆಯನ್ನೇ ಹುಡುಕುವ ಕೆಲಸವನ್ನೇ ಮಾಡುತ್ತದೆ. ಗಿಡುಗ ಕೋಳಿಯ ಮರಿಗಳನ್ನು ಎತ್ತಿಕೊಂಡು ಹೋಗುತ್ತದೆ.

ಭಾರತದ ಸಮಸ್ಯೆಗಳು

– ಸುಜನ್
ದ್ವಿತೀಯ ಬಿ.ಎ.

ಭಾರತವು ಒಂದು ಒಳ್ಳೆಯ ದೇಶ. ಹಾಗೆಯೇ ಭಾರತವು ತನ್ನೊಳಗಿನ ಹಲವು ಪ್ರತಿಭೆಗಳನ್ನು ಒಳಗೊಂಡಿದೆ. ಹಾಗೆಯೇ ಹಿಂದೂ, ಮುಸ್ಲಿಮ್ ಇತ್ಯಾದಿ ಜಾತಿ ಧರ್ಮ ಎನ್ನದೆ ಎಲ್ಲರೂ ಒಂದೇ ಎಂದು ಎಲ್ಲ ವರ್ಗದ ಜನರನ್ನು ತನ್ನೊಳಗೆ ಸೇರಿಸಿಕೊಳ್ಳುತ್ತಾ ಇದೆ. ಆದರೆ ಭಾರತದಲ್ಲಿ ಅನೇಕ ಸಮಸ್ಯೆಗಳಿವೆ. ಅದರಲ್ಲೂ ಸ್ತ್ರೀಯರಿಗೆ ತುಂಬಾ ಸಮಸ್ಯೆಯಿದೆ. ಅಷ್ಟೇ ಅಲ್ಲದೇ ಈ ಸಮಸ್ಯೆಗಳು ನಮ್ಮ ಭಾರತದೇಶದಲ್ಲಿ ಇಲ್ಲದಂತೆ ಆಗಬೇಕು.

1. ಭಯೋತ್ಪಾದನೆ :

ಭಾರತದಲ್ಲಿ ಭಯೋತ್ಪಾದನೆಯು ಹೆಚ್ಚಾಗುತ್ತಿದೆ. ಅಷ್ಟೇ ಅಲ್ಲದೇ ನೆರೆಹೊರೆ ದೇಶ ಹಾಗೂ ನಮ್ಮ ದೇಶದ ಕೆಲವರು ಭಯೋತ್ಪಾದನೆಯನ್ನು ಮಾಡುತ್ತಿದ್ದಾರೆ. ಹೀಗಾಗಿ ಜನರಲ್ಲಿ ಆತಂಕವು ಮನೆಮಾಡಿದೆ. ಭಯೋತ್ಪಾದನೆ ಉಂಟಾಗುವ ಕಾರಣವೇನೆಂದರೆ ನಮ್ಮ ದೇಶದಲ್ಲಿ ವಿದ್ಯೆ ದೊರಕಿದರೂ ಉದ್ಯೋಗವಿಲ್ಲದಿರುವ ಭಯೋತ್ಪಾದನೆಯಂತಹ ಚಟುವಟಿಕೆಗಳು ಆಗುತ್ತಿವೆ. ಹಾಗಾಗಿ ಎಲ್ಲರಿಗೂ ಉದ್ಯೋಗ ದೊರಕಿದರೆ ಆಗ ನಮ್ಮ ದೇಶವು ಉನ್ನತ ಸ್ಥಾನಕ್ಕೆ ಏರುತ್ತದೆ.

2. ಲಂಚ :

ಭಾರತದಲ್ಲಿ ಹೆಚ್ಚಾಗಿ ಕಂಡು ಬರುವುದೇನೆಂದರೆ ಲಂಚ. ಯಾವ ಕೆಲಸ ಆಗಬೇಕಾದರೂ ಲಂಚವನ್ನು ನೀಡಲೇಬೇಕು. ಇದರಿಂದ ಕೆಳವರ್ಗದ ಜನರಿಗೆ ಸರಿಯಾದ ಮೂಲಭೂತ ಸೌಲಭ್ಯ, ಶಿಕ್ಷಣ, ಉದ್ಯೋಗ ಮುಂತಾದವು ಸಿಗದೆ ಬಡತನದಲ್ಲಿ ಇದ್ದಾರೆ. ಆದರೆ ಶ್ರೀಮಂತರು ಲಂಚವನ್ನು ಕೊಟ್ಟು ಎಲ್ಲ ಸೌಲಭ್ಯವನ್ನು ಪಡೆದುಕೊಳ್ಳುತ್ತಾರೆ. ಇದರಿಂದ ಬಡವ ಮತ್ತು ಶ್ರೀಮಂತರಲ್ಲಿ ಅಂತರ ಹೆಚ್ಚಾಗಿ ಸಂಘರ್ಷವು ಉಂಟಾಗುತ್ತಿದೆ. ಲಂಚವು ಕಡಿಮೆಯಾಗಬೇಕಾದರೆ ಕಾನೂನಿನ ಪ್ರಕಾರ ಶಿಕ್ಷೆಯಾದರೆ ಆಗ ನಮ್ಮ ಭಾರತ ದೇಶವು ಲಂಚದಿಂದ ಮುಕ್ತಿಯನ್ನು ಹೊಂದುತ್ತದೆ.

3. ಅತ್ಯಾಚಾರ :

ನಮ್ಮ ಭಾರತ ದೇಶದಲ್ಲಿ ಇತ್ತೀಚೆಗೆ ಸಾಲು ಸಾಲು ಅತ್ಯಾಚಾರ ಪ್ರಕರಣಗಳು ಜರುಗುತ್ತಲೇ ಇದೆ. ಇದಕ್ಕೆ ಕಾರಣವೆಂದರೆ ಪಾಲಕರು ತಮ್ಮ ಮಕ್ಕಳಿಗೆ ಒಳ್ಳೆಯ ಸಂಸ್ಕೃತಿಯನ್ನು ಕಲಿಸದಿದ್ದರೆ ಇಂತಹ ಪ್ರಕರಣಗಳು ಜರುಗುತ್ತವೆ. ಹಾಗೂ ಹದಿಹರೆಯದ ವಯಸ್ಸಿನಲ್ಲಿ ಅತ್ಯಾಚಾರ ಪ್ರಕರಣಗಳು ಜರುಗುತ್ತಲೇ ಇರುತ್ತವೆ. ಕಾನೂನಿನ ಪ್ರಕಾರ ಇಂತಹ ಪ್ರಕರಣಗಳಿಗೆ ಕಠಿಣ ಕ್ರಮ ಕೈಗೊಂಡರೆ ಅತ್ಯಾಚಾರವು ಕಡಿಮೆಯಾಗುತ್ತದೆ.

4. ವರದಕ್ಷಿಣೆ :

ನಮ್ಮ ಭಾರತ ದೇಶದಲ್ಲಿ ಮದುವೆಯ ಸಂದರ್ಭದಲ್ಲಿ ವಧುವು ವರನ ಕಡೆಯವರಿಗೆ ಚಿನ್ನ, ಹಣ ಅಥವಾ ಜಾಗವನ್ನು ವರದಕ್ಷಿಣೆಯಾಗಿ ನೀಡಬೇಕಾಗುತ್ತದೆ. ಆದರೆ ವರದಕ್ಷಿಣೆ ಅಪರಾಧವೆಂದು ಗೊತ್ತಿದ್ದರೂ ತೆಗೆದುಕೊಳ್ಳುತ್ತಾರೆ. ಇದನ್ನು ತಡೆಗೈಯಲು ಸರ್ಕಾರ ವರದಕ್ಷಿಣೆಯ ಬಗ್ಗೆ ಸರಿಯಾದ ಕ್ರಮವನ್ನು ಕೈಗೊಂಡರೆ ಆಗ ಭಾರತವು ಉಜ್ಜ್ವಲ ದೇಶವಾಗಿ ಬದಲಾಗುತ್ತದೆ.

5. ಜಾತಿ ಸಂಘರ್ಷ :

ನಮ್ಮ ಭಾರತ ದೇಶದಲ್ಲಿ ಹೆಚ್ಚಾಗಿ ಜಾತಿ ಸಂಘರ್ಷವು ಕಂಡು ಬರುತ್ತದೆ. ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ ಹೀಗೆ ನಾನಾ ಬಗೆಯ ಜಾತಿಗಳಿದ್ದರೂ ತಮ್ಮತಮ್ಮಲ್ಲೇ ಜಗಳವನ್ನು ಆರಂಭಿಸುತ್ತಾರೆ. ಹಾಗಾಗಿ ನಾವೆಲ್ಲರೂ ಒಂದೇ. ಯಾವುದೇ ಜಾತಿ–ಭೇದ ಇಲ್ಲವೆಂಬ ನಿರ್ಧಾರಕ್ಕೆ ಬಂದರೆ ಆಗ ನಮ್ಮ ದೇಶದಲ್ಲಿ ಜಾತಿ ಸಂಘರ್ಷವು ಕಡಿಮೆ ಆಗುತ್ತದೆ.

ಹೀಗೆ ನಾನಾ ಸಮಸ್ಯೆಗಳು ಭಾರತ ದೇಶದಲ್ಲಿದೆ.

ಮಾನ್ಯಾ ಏವ ಹಿ ಮಾನ್ಯಾನಾಂ ಮಾನಂ ಕುರ್ವಂತಿ ನೇತರೇ ।
ಶಂಭುರ್ಬಿಭರ್ತಿ ಮೂರ್ಧ್ನೇಂದುಂ ಸ್ವರ್ಭಾನುಸ್ತಂ ಜಿಘೃಕ್ಷತಿ ॥

ಗುಣವಂತರು ಮಾತ್ರ ಗುಣವಂತರಿಗೆ ಗೌರವವನ್ನು ನೀಡುವುದು ಹೊರತು ಇತರ ಸಾಧಾರಣ ವ್ಯಕ್ತಿಗಳಲ್ಲ. ಚಂದ್ರನನ್ನು ಶಿವನು ತಲೆಯಲ್ಲಿ ಹೊತ್ತುಕೊಂಡಿರುತ್ತಾನೆ ಆದರೆ ರಾಹು ಮಾತ್ರ ಅತನನ್ನು ಹಿಡಿದು ನುಂಗಲು ಪ್ರಯತ್ನಿಸುತ್ತಾನೆ.

ಸದ್ಭಿಸ್ತು ಲೀಲಯಾ ಪ್ರೋಕ್ತಂ ಶಿಲಾಲಿಖಿತಮಕ್ಷರಮ್ ।
ಅಸದ್ಭಿಃ ಶಪಥೇನಾಪಿ ಜಲೇ ಲಿಖಿತಮಕ್ಷರಮ್ ॥

ಸಜ್ಜನರಿಂದ ಅಪ್ಪಿ ತಪ್ಪಿ ಹೇಳಿದ ಮಾತು ಕೂಡಾ ಶಿಲೆಯಲ್ಲಿ ಕೆತ್ತಲ್ಪಟ್ಟ ಅಕ್ಷರದಂತೆ ಶಾಶ್ವತ. ದುರ್ಜನರು ಪ್ರತಿಜ್ಞೆ ಮಾಡಿ ಹೇಳಿದರೂ ಅದು ನೀರಿನಲ್ಲಿ ಬರೆಯಲ್ಪಟ್ಟ ಅಕ್ಷರದಂತೆ ನಶ್ವರ.

ಕೇಳಿ ಬನ್ನಿ ನಮ್ಮ ಭಾರತದ ಗಡಿಯ ಸೈನಿಕರ ಜೀವನವ

– ಸ್ವಾತಿ ಎ. ಭಟ್
ತೃತೀಯ ಬಿ.ಎ.

ಯಾರು ಕೇಳುತ್ತಾರೆ ನಮ್ಮ ಸೈನಿಕರ ಜೀವನವನ್ನು, ಯಾರಾದರೂ?? ಯಾರೂ ಇಲ್ಲ. ಅವರು ಇವತ್ತು ಇಲ್ಲಿ ನಮ್ಮ ದಿನದ ಜೀವನ ಸುಗಮವಾಗಿ ನಡೆಯಲು ಕಾರಣ. ಕೇವಲ ಎರಡೇ ಗಂಟೆ ನಿದ್ದೆಯನ್ನು ಮಾಡಿ ಉಳಿದ 22 ಗಂಟೆ ದೇಶವನ್ನು ಕಾಯುತ್ತಾ ಇರುತ್ತಾರೆ. ಯಾವಾಗ ಎಲ್ಲಿಂದ ಯಾರು ದಾಳಿಯನ್ನು ಮಾಡುತ್ತಾರೆ ಎಂದು ತಿಳಿದಿರುವುದಿಲ್ಲ. ಆದರೂ ಯಾವುದಕ್ಕೂ ನಾವು ಸಿದ್ಧ ಎಂದು ಕೈಯಲ್ಲಿ ಬಂದೂಕು ಹಿಡಿದು ಒಂದು ನಿಮಿಷವೂ ಎಚ್ಚರ ತಪ್ಪದೇ ಈ ದೇಶದ ರಕ್ಷಣೆಗಾಗಿ ಸದಾ ಸಿದ್ಧ. ಯಾವಾಗಲಾದರೋ ಒಮ್ಮೆ ತಮ್ಮ ಊರಿಗೆ ಬರುತ್ತಾರೆ. ಬಂದವರು ಸ್ವಲ್ಪ ಕಾಲ ವಿಶ್ರಮಿಸಿ ನಂತರ ಕರೆ ಬಂದಾಗ ಯಾವುದೇ ರೀತಿಯ ಬೇಜಾರನ್ನು ಮಾಡದೇ ಹೊರಟು ಹೋಗುತ್ತಾರೆ.

ಆದರೆ ಇವರು ನಮಗಾಗಿ ನಮ್ಮ ದೇಶಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡುತ್ತಾರೆ. ಆದರೆ ನಾವು ಇವರನ್ನು ಇವರ ತ್ಯಾಗವನ್ನು ಒಂದು ದಿನವಾದರೂ ನೆನಪು ಮಾಡುತ್ತೇವೆಯೇ? ಒಮ್ಮೆಯಾದರೂ ಅವರ ಬಗ್ಗೆ ಯೋಚನೆಯನ್ನಾದರೂ ಮಾಡಿದ್ದೇವೆಯೇ? ಇಲ್ಲ. ನಮಗೆ ಕೇವಲ ನಮ್ಮ ಬಗ್ಗೆ ಮಾತ್ರ ಚಿಂತೆ.

ನಮ್ಮ ರಾಜಕಾರಣಿಗಳು ಸಭೆಯಲ್ಲಿ ನಿದ್ದೆ ಮಾಡಿದರು ಅಥವಾ ಬೇಡವಾದ ಬೇರೆ ಎಲ್ಲಾ ಕೆಲಸವನ್ನು ಮಾಡಿದರೂ ಅವರ ತಿಂಗಳ ಸಂಬಳ ಒಂದು ಲಕ್ಷ. ಪುನಃ ಅವರಿಗೆ ಎಲ್ಲಾ ತರಹದ ಸೌಲಭ್ಯ ವಿತರಣೆ ಎಲ್ಲವನ್ನು ಮಾಡುತ್ತಾರೆ. ಬೆಳಗ್ಗೆ ರಾತ್ರಿ ಎಂಬ ಭಾವನೆ ಇಲ್ಲದೆ ಗಡಿ ಕಾಯುವ ನಮ್ಮ ಸೈನಿಕರ ಸಂಬಳ ಕೇವಲ 25 ರಿಂದ 30 ಸಾವಿರ! ದೇವರೇ! ಇದು ಎಂಥಾ ನ್ಯಾಯ? ತಮ್ಮ ಜೀವನವನ್ನು ಈ ದೇಶಕ್ಕಾಗಿ ಕೊಟ್ಟವರ ದೇಹಕ್ಕೆ ಬೆಲೆಯೇ ಇಲ್ಲ. ಯಾವಾಗಲೂ ನ್ಯಾಯದ ಬಗ್ಗೆ ಮಾತನಾಡುವ ನಮ್ಮ ಈ ದೇಶ ಇವತ್ತು ಯಾಕೆ ಸುಮ್ಮನಿದೆ? ಯಾರೋ ಸತ್ತಾಗ ಅವರಿಗಾಗಿ ಏನೆಲ್ಲಾ ಮಾಡುತ್ತಾರೆ. ಆದರೆ ನಮ್ಮ ಸೈನಿಕರು ಯುದ್ಧದಲ್ಲಿ ಮಡಿದಾಗ ಯಾರಾದರೂ ಇದ್ದಾರೆಯೇ, ಯಾರೂ ಇಲ್ಲ. ಒಬ್ಬ ವ್ಯಕ್ತಿಯಾದರೂ ಅವರ ಕುಟುಂಬದ ಪರಿಸ್ಥಿತಿ ಹೇಗೆ ಇರುತ್ತದೆ ಎಂದು ಯೋಚನೆ ಮಾಡಿದ್ದಾರೆಯೇ? ಇಲ್ಲ.

ಯಾಕೆಂದರೆ ನಮಗೆ ಅದು ಅಗತ್ಯ ಇಲ್ಲದ ವಿಷಯ. ಯಾರಾದರೂ ಸಿನಿಮಾ ವ್ಯಕ್ತಿ ತೀರಿಕೊಂಡರೆ ಅವರಿಗಾಗಿ ಶೋಕಾಚರಣೆ ಮತ್ತೆ ಅವರಿಗಾಗಿ ರಜೆ ಘೋಷಣೆ. ನಮ್ಮ ಎಲ್ಲಾ ಜನರ ಕಣ್ಣೀರು! ಒಮ್ಮೆ ಆದರೂ ನಮ್ಮ ಸೈನಿಕರು ಸತ್ತಾಗ ಅವರ ಕಥೆಯನ್ನು ಕೇಳಿ ಕಣ್ಣೀರನ್ನು ಹಾಕಿದ್ದುಂಟಾ? ಅಥವಾ ಅವರಿಗಾಗಿ ಶೋಕಾಚರಣೆ ಮಾಡಿದ್ದೀರಾ? ಇಲ್ಲ. ಮೊದಲನೆಯದಾಗಿ ಅವರು ಸತ್ತ ವಿಷಯ ಯಾರಿಗೂ ತಿಳಿಯುವುದಿಲ್ಲ ಮತ್ತೆ ಕಣ್ಣೀರು ಎಲ್ಲಿಂದ? ಇದು ನಮ್ಮ ದೇಶದ ನೈಜ ಘಟನೆಗಳು. ಗಡಿ ಪ್ರದೇಶದಲ್ಲಿ ಕೊರೆಯುವ ಛಳಿಯಲ್ಲಿ 24 ಗಂಟೆ ದೇಶ ಕಾಯುತ್ತಾ ಕುಳಿತಿರುತ್ತಾರೆ. ಅವರು ಒಮ್ಮೆಯಾದರೂ ನಾವುಗಳು ಈ ಕೆಲಸವನ್ನು ಮಾಡುವುದಿಲ್ಲ ಎಂದು ಹೇಳುತ್ತಾರೆಯೇ? ಇಲ್ಲ. ಯಾವತ್ತೂ ಹೇಳುವುದಿಲ್ಲ. ಒಂದು ವೇಳೆ ಅವರು ಈ ರೀತಿ ಹೇಳಿದರೆ ನಮ್ಮ ದೇಶದ ಗತಿ ಏನು? ಪಾಕಿಸ್ಥಾನದ ಗಡಿಯಲ್ಲಿ, ಬಾಂಗ್ಲಾದೇಶದ ಗಡಿಯಲ್ಲಿ, ಚೀನಾದ ಗಡಿಯಲ್ಲಿ ಎಲ್ಲಾ ಕಡೆ ಯಾವಾಗ ಬೇಕಾದರೂ ಪ್ರಾಣ ಹೋಗಬಹುದು. ಅವರ ಪರಿಸ್ಥಿತಿ ಅವರಿಗೆ ಗೊತ್ತು. ಯಾಕೆ? ಅವರಿಗೆ ಕುಟುಂಬ ಇಲ್ಲವೇ? ಅವರಿಗೂ ತಮ್ಮದೇ ಆದ ಸಂಸಾರವನ್ನು ಮಾಡಬೇಕು ಎಂದು ಆಸೆ ಇರುತ್ತದೆ. ಎಲ್ಲವನ್ನು ತೊರೆದು ದೇಶಕ್ಕಾಗಿ ತಮ್ಮ ಪ್ರಾಣವನ್ನು ಒತ್ತೆ ಇಡುತ್ತಾರೆ. ಈ ಪೈಕಿ ತಂದೆ ತಾಯಂದಿರು ತಮ್ಮ ಮಗ ಅಥವಾ ಮಗಳನ್ನು ಕಳೆದುಕೊಳ್ಳುತ್ತಾರೆ. ಎಷ್ಟೋ ಗಂಡ ಅಥವಾ ಹೆಂಡತಿಯರು ತಮ್ಮ ಗಂಡ ಅಥವಾ ಹೆಂಡತಿಯನ್ನು ಕಳೆದುಕೊಳ್ಳುತ್ತಾರೆ. ಎಷ್ಟೋ ಮಕ್ಕಳು ತಮ್ಮ ತಂದೆ ತಾಯಿಯನ್ನು ಕಳೆದುಕೊಳ್ಳುತ್ತಾರೆ. ಅಣ್ಣ, ತಮ್ಮ, ಅಕ್ಕ, ತಂಗಿ ಎಲ್ಲರನ್ನೂ ಕಳೆದುಕೊಳ್ಳುತ್ತಾರೆ. ಇವರ ಕಥೆಯನ್ನು ಯಾರಾದರು ಇದ್ದರೆ ಕೇಳಲು. ಇಲ್ಲ. ಒಮ್ಮೆಯಾದರೂ ಜನರೇ ದಿನಕ್ಕೆ ದೇವರಲ್ಲಿ ಇವರಿಗಾಗಿ ಪ್ರಾರ್ಥನೆಯನ್ನು ಮಾಡಿ.

ಹರೇಃ ಪದಾಹತಿಃ ಶ್ಲಾಘ್ಯಾ ನ ಶ್ಲಾಘ್ಯಂ ಖರರೋಹಣಮ್ ।
ಸ್ಪರ್ಧಾ ವಿದುಷಾ ಯುಕ್ತಾ ನ ಯುಕ್ತಾ ಮೂರ್ಖಮಿತ್ರತಾ ॥

ವಿಷ್ಣುವಿನಿಂದ ಒದೆಸಿಕೊಂಡರೂ ಅದು ಪ್ರಶಂಸನೀಯ ಹೊರತು ಕತ್ತೆಯನ್ನು ಏರುವುದಾದರೂ ಅದು ಪ್ರಶಂಸನೀಯವಲ್ಲ. ತಿಳಿದವರೊಂದಿಗೆ ಸ್ಪರ್ಧೆಯಾದರೂ ಆಗಬಹುದು ಆದರೆ ಮೂರ್ಖರೊಂದಿಗೆ ಗೆಳೆತನವಲ್ಲ.

ಸಂತಃ ಸ್ವತಃ ಪ್ರಕಾಶಂತೇ ಗುಣಾ ನ ಪರತೋ ನೃಣಾಮ್ ।
ಆಮೋದೋ ನಹಿ ಕಸ್ತೂರ್ಯಾಃ ಶಪಥೇನ ಇಭಾವ್ಯತೇ ॥

ಸಜ್ಜನರಲ್ಲಿರುವ ಗುಣಗಳು ತಾವಾಗಿಯೆ ತೋರಿಬರುತ್ತವೆ ಹೊರತು ಅವುಗಳನ್ನು ಬೇರೆಯವರು ತೋರಿಸಬೇಕಾದುದಿಲ್ಲ. ಕಸ್ತೂರಿಯಲ್ಲಿರುವ ಪರಿಮಳವು 'ಇದರಲ್ಲಿ ಪರಿಮಳವಿದೆ' ಎಂಬ ಇನ್ನೊಬ್ಬರ ಮಾತಿನಿಂದ ತೋರಿಬರುವುದಿಲ್ಲ. ಅದು ತಾನಾಗಿಯೇ ತೋರಿ ಬರುತ್ತದೆ.

ಉನ್ನತಿ ಮತ್ತು ಅವನತಿ

– ಗಜೇಂದ್ರ
ತೃತೀಯ ಬಿ.ಎ.

ಪ್ರತಿಯೊಬ್ಬರ ಕನಸು ಏನೆಂದರೆ ಉನ್ನತಿಯತ್ತ ಹೋಗುವುದು. ಆದರೆ, ಅದೇ ವೇಳೆಗೆ ಕಷ್ಟ, ದುಃಖ, ದುಮ್ಮಾನಗಳಿಂದಾಗಿ ಅದು ಅವರನ್ನು ಅವನತಿಯತ್ತ ಕೊಂಡೊಯ್ಯುತ್ತದೆ. ನಮ್ಮ ದೇಶದ ಬಗ್ಗೆ ಚಿಂತಿಸುವುದಾದರೆ, ನಮ್ಮ ದೇಶದ ಸಂಸ್ಕೃತಿ, ಶ್ರೀಮಂತಿಕೆ ನೋಡಿದರೆ ಅದು ಈವಾಗ ಜಗತ್ತಿಗೆ ಒಂದು ಮಾದರಿಯಾಗಬೇಕಿತ್ತು. ಆದರೆ ಅದು ಇಂದಿಗೂ ಸಾಧ್ಯವಾಗಿಲ್ಲ. ಏಕೆಂದರೆ, ನಮ್ಮ ದೇಶದ ಜನರ ನಡತೆ, ಹವ್ಯಾಸದಿಂದಾಗಿ. ಜನರಲ್ಲಿಡಿರುವ ಆಸೆ, ಭ್ರಷ್ಟಾಚಾರ, ಸ್ವಾರ್ಥ ಮನೋಭಾವದಿಂದಾಗಿ ಜನರು ತಮ್ಮ ಬಗ್ಗೆ ಮಾತ್ರ ಚಿಂತಿಸುತ್ತಾರೆ ಹೊರತು ನಮ್ಮ ದೇಶದ ಬಗ್ಗೆ ಅಲ್ಲ. ನಮ್ಮ ದೇಶದ ಬಗ್ಗೆ ಚಿಂತಿಸುವವರೆಲ್ಲ ನೂರಕ್ಕೆ ಒಬ್ಬರೋ ಅಥವಾ ಇಬ್ಬರೋ ಅಷ್ಟೆ. ಜನರಲ್ಲಿ ದೇಶಭಕ್ತಿ ಮೂಡಿಸುವುದಕ್ಕೆ ಉದಾಹರಣೆಯಾದ ದೇಶಗಳು ಜಪಾನ್, ಇಸ್ರೇಲ್, ಅಮೇರಿಕಾ. ಈ ದೇಶಗಳು ಆರ್ಥಿಕವಾಗಿ ಇಷ್ಟು ಮುಂದೆ ಬರಲು ಕಾರಣ ಜನರ ಶ್ರಮ. ನಮ್ಮ ದೇಶದಲ್ಲಿ ನಾವುಗಳೆಲ್ಲ ಸರಿಯಾಗಿ ತೆರಿಗೆಯನ್ನು ಪಾವತಿಸಲು ಕಳ್ಳರಂತೆ ಮಾಡುತ್ತೇವೆ. ಇದು ಕೂಡ ಒಂದು ಉದಾಹರಣೆಯಾಗಿದೆ ನಮ್ಮ ದೇಶವನ್ನು ಉನ್ನತಿಯತ್ತ ಕೊಂಡೊಯ್ಯಲು. ರಾಷ್ಟ್ರಪ್ರೇಮ, ದೇಶಭಕ್ತಿಯು ಪ್ರತಿಯೊಬ್ಬರಲ್ಲಿ ಮೂಡಿ, ನಮ್ಮ ದೇಶಕ್ಕಾಗಿ ಶ್ರಮಿಸಬೇಕು. ಸೈನಿಕರು ಯಾವ ರೀತಿ ದೇಶದ ಬಾವುಟವನ್ನು ಗಡಿಪ್ರದೇಶದಲ್ಲಿ ಎತ್ತಿ ಹಿಡಿಯುತ್ತಾರೋ ಅದೇ ರೀತಿ ಪ್ರತಿಯೊಬ್ಬರೂ ದೇಶದ ಆಂತರಿಕ ಬೆಳವಣಿಗೆಗಾಗಿ ಶ್ರಮಿಸಬೇಕು.

ಜಪಾನ್ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ನೈಸರ್ಗಿಕ ಸಂಪನ್ಮೂಲವೇ ಇಲ್ಲವಂತೆ. ಅವರು ತಂತ್ರಜ್ಞಾನದಿಂದ ಬೇರೆ ಬೇರೆ ಸಂಪನ್ಮೂಲಗಳನ್ನು ಆಮದು ಮಾಡಿಕೊಂಡು ಅದನ್ನು ಕಡಿಮೆ ಬೆಲೆಯಲ್ಲಿ ತಯರಿಸಿ ಮಾರುಕಟ್ಟೆ ಮತ್ತು ರಫ್ತು ಕೂಡ ಮಾಡಿ ತನ್ನ ದೇಶದ ಆರ್ಥಿಕತೆಯನ್ನು ಎತ್ತಿಹಿಡಿದು ಸುಧಾರಿಸಿಕೊಂಡಿದೆ. ಅವುಗಳು ತಮ್ಮ ಆರ್ಥಿಕ ಸ್ಥಿತಿಯನ್ನು ಉನ್ನತಿಯತ್ತ ಕೊಂಡೊಯ್ದವು. ಕೆಲವು ದೇಶಗಳ ಆರ್ಥಿಕ ಸ್ಥಿತಿಯು ಕೆಳಮುಖವಾಗಿ ಹೋಗುತ್ತಿದೆ ಎಂದರೆ ಅದಕ್ಕೆ ನೈಸರ್ಗಿಕ ಸಂಪನ್ಮೂಲ ಕಾರಣವಲ್ಲ. ಅದಕ್ಕೆ ಮುಖ್ಯ ಕಾರಣ ಅಲ್ಲಿನ ರಾಜಕೀಯ ಅವ್ಯವಹಾರದಿಂದಾಗಿ ಅವು ಅವನತಿಯತ್ತ ಹೋಗುತ್ತಿವೆ. ಒಂದು ದೇಶದ ಆರ್ಥಿಕ ಸ್ಥಿತಿಗತಿಯನ್ನು ಮುಖ್ಯವಾಗಿ ನಡೆಸಿಕೊಂಡೊಯ್ಯುವುದು ರಾಜಕೀಯ.

ನಮ್ಮ ಭಾರತ ದೇಶವು ಸ್ವಾತಂತ್ರ್ಯ ಸಿಕ್ಕಿದಂದಿನಿಂದ ಇಲ್ಲಿಯವರೆಗೂ ಆರ್ಥಿಕ ಸ್ಥಿತಿ ಸ್ವಲ್ಪ ಮಟ್ಟಿಗೆ ಮಾತ್ರ ಸುಧಾರಿಸಿಕೊಂಡು ಬಂದಿದೆ. ಒಂದು ಹೆಮ್ಮೆಯ ವಿಚಾರವೆಂದರೆ 2016–17ನೆ ಇಸವಿಯಲ್ಲಿ ನಮ್ಮ ದೇಶವು ಜಿಡಿಪಿಯಲ್ಲಿ 6ನೇ ಸ್ಥಾನ ಗಳಿಸಿಕೊಂಡಿದೆ. ಈಗ ನಮ್ಮ ದೇಶ ಕೂಡ ಆರ್ಥಿಕವಾಗಿ ಎಲ್ಲರಿಗೂ ಗುರುತಿಸಿಕೊಂಡಿದೆ. ನಮ್ಮ ದೇಶದ ಯುವಕರಿಗೆ ಉದ್ಯೋಗವನ್ನು ದೊರಕಿಸಿಕೊಡುವುದನ್ನು ಸರಕಾರದ ಕೈಯಲ್ಲಿದೆ. ಆ ಸರಕಾರವನ್ನು ನಿರ್ಮಿಸುವವರು ನಾವೆಲ್ಲರು ಒಳ್ಳೆಯ ಸರಕಾರ ನಿರ್ಮಿಸಿದರೆ ಉನ್ನತಿಯತ್ತ ಹೋಗುತ್ತದೆ. ಅಲ್ಲದೆ ಕೆಟ್ಟ ಅಥವಾ ಭ್ರಷ್ಟ ಸರ್ಕಾರ ನಿರ್ಮಿಸಿದರೆ ಅವನತಿಯತ್ತ ಹೋಗುತ್ತದೆ.

ಅವಮಾನ, ಸಾಧಿಸುವ ಛಲವನ್ನು ಹುಟ್ಟುಹಾಕುತ್ತದೆ.

– ನಮಿತಾ
ಪ್ರಥಮ ಬಿ.ಕಾಂ. 'ಬಿ1'

"ನನಗಿಂತ ನೀನು ಕೀಳು, ನಿನಗೆ ಸಾಮರ್ಥ್ಯವಿಲ್ಲ, ಬುದ್ಧಿ ಇಲ್ಲ, ನಿನ್ನಲ್ಲಿ ಹಣವಿಲ್ಲ, ಅದೆಲ್ಲಾ ನನ್ನಲ್ಲಿದೆ" ಎನ್ನುವುದು ಅವಮಾನಿಸುವವರ ಉದ್ದೇಶ. ನೋವು ತಿಂದು ಸುಮ್ಮನೆ ಕೂರದೆ ಅವರ ಮೇಲೆ ಕೋಪ, ಪ್ರತೀಕಾರಕ್ಕೆ ಹೋಗಿ ಮುಗ್ಗರಿಸದೆ ಅವಮಾನವನ್ನು ಎದೆಯೊಳಗೆ ಇಟ್ಟುಕೊಂಡು ಅದನ್ನು ಸವಾಲಾಗಿ ತೆಗೆದುಕೊಳ್ಳಬೇಕು. ಸಾಧನೆಗೆ ಅದೇ ದಾರಿ ದೀಪ!

ಬಹಳಷ್ಟು ಜನ ಮೇಲೆ ಬರಬೇಕಾದರೆ, ಅವರಿಂದ ಏನಾದರೂ ಉನ್ನತವಾದ ಸಾಧನೆ ಆಗಬೇಕಾದರೆ ಅವರಿಗೆ ಅವಮಾನವಾಗಬೇಕು. ಅವರ ಮನಸ್ಸನ್ನು ಘಾಸಿಗೊಳಿಸಬೇಕು. ಆ ಉರಿಯ ನೋವಿನಲ್ಲಿ ಅವರು ಬೆಳೆಯುತ್ತಾರೆ. ಒಂದು ಗುರಿ ಇಟ್ಟುಕೊಂಡು ಮುಂದುವರಿಯಲು ಅದು ಕಾರಣವಾಗುತ್ತದೆ.

ಅವಮಾನ ಮಾಡಿದವರು ಅವರನ್ನು ಅವಮಾನಿಸಿ ತಾವೇನನ್ನೋ ಸಾಧಿಸಿದೆವೆಂದು ಬೀಗುತ್ತಾರೆ. ಖಂಡಿತವಾಗಿಯೂ ಅವರು ಸಾಧಿಸಿರುತ್ತಾರೆ. ತಾವು ಯಾರನ್ನು ಅವಮಾನಿಸಿರುತ್ತಾರೋ ಅವರಲ್ಲಿ ಬೆಳೆಯಬೇಕೆಂಬ ಹಂಬಲದ ಬೀಜ ತಮಗೇ ತಿಳಿಯದಂತೆ ಬಿತ್ತಿ ಬೆಳೆಸಿದ ಮಹತ್ತರ ಸಾಧನೆ ಅದು. ಅವರೊಳಗಿನ ಚೇತನವನ್ನು ಬಡಿದೆಬ್ಬಿಸಿ, ಅವರು ಮೇಲೇಳಲು, ಸಾಧಿಸಲು ತೀರಾ ಅವಶ್ಯಕವಾಗಿ ಬೇಕಾದ್ದನ್ನು ಇವರೇ

ಮಾಡಿರುತ್ತಾರೆ. ಅದು ಆ ಘಳಿಗೆಯಲ್ಲಿಲ್ಲದೆ ನಂತರವೂ ನೆನೆದಾಗಲೆಲ್ಲಾ ನೋವು ಕೊಡುತ್ತಿರುತ್ತದೆ. ಕೆಲವರಲ್ಲಿ ಅದು ಪ್ರತೀಕಾರ ಭಾವನೆ ಹುಟ್ಟುಹಾಕಿದರೆ, ಕೆಲವರಿಗೆ ಅದೇ ಸಾಧನೆಯ ಮೆಟ್ಟಿಲು. ಸಾಧನೆಯೇ ಅವಮಾನಿಸಿದವರ ಮನದಲ್ಲಿ ಕಿಚ್ಚು ಹಚ್ಚುವ ಪರಿ!

ಅವರು ಮಾಡಿದ ಅವಮಾನವನ್ನು ಎದೆಯೊಳಗೆ ಇಟ್ಟುಕೊಂಡು ಅದನ್ನು ಸವಾಲಾಗಿ ಸ್ವೀಕರಿಸಬೇಕು. ಸಾಧನೆಗೆ ಅದೇ ದಾರಿದೀಪವಾಗುತ್ತದೆ. ಅದಕ್ಕಾಗಿ ಅವಮಾನಿಸಿದವರನ್ನು ನೆನಪಿಸಿಕೊಳ್ಳೋಣ. ಸಾಧನೆಯನ್ನು ಮಾಡಿ ನಮ್ಮ ಏಳಿಗೆ ಅವರ ಗಮನಕ್ಕೆ ಬರುವಂತೆ ಮಾಡುತ್ತಾ ಹೋಗುವುದೇ ನಮ್ಮ ಪ್ರತೀಕಾರವಾಗಿರಲಿ.

ಕೊನೆಯ ಮಾತು, ಅವಮಾನಕ್ಕೆ ತಕ್ಷಣ ಕೋಪ, ಪ್ರತೀಕಾರ ಉತ್ತರವಲ್ಲ. ಅವರೆದುರು ನಾವು ಬೆಳೆಯುವುದೇ ನಿಜವಾದ ಪ್ರತೀಕಾರ.

ಪ್ರಸ್ತುತ ಸಮಾಜದ ಸ್ಥಿತಿಗತಿ

– ರಾಧಿಕಾ ಉಡುಪ
ದ್ವಿತೀಯ ಬಿ.ಎಸ್ಸಿ.

ಸಮಾಜ ಎಂದರೆ ನಮ್ಮ ಸುತ್ತಮುತ್ತಲಿನ ಪ್ರದೇಶ, ಸುತ್ತಮುತ್ತಲಿರುವ ಜನಸಮೂಹ, ವಿವಿಧ ಜಾತಿಧರ್ಮಗಳು, ಇವೆಲ್ಲವುಗಳನ್ನು ಒಟ್ಟಾಗಿ ಸಮಾಜ ಎನ್ನಬಹುದಾಗಿದೆ. ನಮ್ಮ ದೇಶ, ನಮ್ಮ ರಾಜ್ಯ ಸುಸಂಸ್ಕೃತರಾಗಿರವೇಕಾದರೆ ಮೊದಲು ಈ ನಮ್ಮ ಸಮಾಜ ಪರಿಶುದ್ಧದಿಂದ ಕೂಡಿರಬೇಕು. ಅದರಿಂದಲೇ ನಮ್ಮ ಮನಸ್ಸು, ನಮ್ಮ ನಡೆ–ನುಡಿಗಳೂ ಉತ್ತಮವಾಗಿರುತ್ತವೆ. ಅದಕ್ಕಾಗಿ ಆಗಬೇಕಿರುವುದೊಂದೇ, ಸಮಾಜದ ಏಳ್ಗೆ. ಇದು ಯಾರಿಂದಲೋ ಅಥವಾ ನಮ್ಮ ಮಂತ್ರಿಗಳಿಂದ ಆಗಬೇಕಾಗಿರುವುದಿಲ್ಲ. ನಮ್ಮಿಂದ. ಅಂದರೆ, ಈ ಸಮಾಜದ ಪ್ರಜೆಗಳಿಂದಲೇ ಆಗಬೇಕಾಗಿರುವ ಕಾರ್ಯ. ನಮ್ಮಿಂದಲೇ ಈ ಸಮಾಜ ಅಂದಮೇಲೆ ನಾವೇ ತಾನೇ ಈ ಸಮಾಜದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಬೇಕಾದವರು.

ಪರಿಶುದ್ಧ ಸಮಾಜ, ಸಮಾಜದ ಏಳ್ಗೆ ಎಂದರೇನು? ಎಂಬ ಪ್ರಶ್ನೆ ಕಾಡಬಹುದು. ಅಂದರೆ ನಮ್ಮ ಸಮಾಜದಲ್ಲಿ ಈಗ ಹಲವು ಪಿಡಿಗುಗಳು, ಹಲವು ದಿಷ್ಕಾರ್ಯಗಳು ಅತಿಯಾಗುತ್ತಿವೆ. ಇದರಿಂದಾಗಿ ನಮ್ಮ ಪೀಳಿಗೆಗೂ ಅಲ್ಲದೆ ನಮ್ಮ ಮುಂದಿನ ಪೀಳಿಗೆಯ ಮೇಲೂ ಪ್ರಭಾವ ಬೀರುವಂತಾಗಿದೆ. ಅಂದರೆ ವರದಕ್ಷಿಣೆಯ ಕಿರುಕುಳ, ಜಾತಿ ಮತ ಧರ್ಮದ ಕುರಿತು ಜಗಳ, ಕೊಲೆ, ಸುಲಿಗೆ ಮುಂತಾದವುಗಳು. ಪ್ರಮುಖವಾಗಿ ಸ್ತ್ರೀಯರ ಮೇಲಿನ ದೌರ್ಜನ್ಯಗಳು ಈ ಸಮಾಜದ ಅತಿದೊಡ್ಡ ಪಿಡುಗು. ಇಂದು ನಮ್ಮ ದೇಶದ ಹಲವಾರು ಪ್ರದೇಶಗಳಲ್ಲಿ ಇಂತಹ ಹೀನ ಕೆಲಸಗಳು ನಡೆಯುತ್ತಲೇ ಇದೆ. ಜನರಲ್ಲಿ ಯಾವುದೇ ರೀತಿಯ ಪ್ರೀತಿ ನಂಬಿಕೆ ಇಲ್ಲದಂತಾಗಿದೆ. ಇದರಿಂದ ಈ ಸ್ವಸ್ಥ ಸಮಾಜ ಹಾಳಾಗುತ್ತಿದೆ.

ಇದಕ್ಕೆ ಪ್ರಮುಖ ಕಾರಣಗಳೆಂದರೆ ನಮಗೆ ಸಿಗುತ್ತಿರುವ ಅತಿಯಾದ ಅನುಕೂಲಗಳು. ಅದು ಮೊಬೈಲ್ ಅಥವಾ ಇಂದಿನ ಮುಂದುವರಿದ ತಂತ್ರಜ್ಞಾನವೇ ಆಗಿರಬಹುದು. ನಮ್ಮ ಇಂದಿನ ಮಕ್ಕಳು ಅತಿಯಾದ ಮೊಬೈಲ್ ಬಳಕೆಯಿಂದ ನಮ್ಮ ಸಂಸ್ಕೃತಿಯನ್ನು ಮರೆತುಬಿಡುತ್ತಿದ್ದಾರೆ ಮೊಬೈಲ್ ಬಳಕೆ ಕೆಟ್ಟದ್ದು ಎಂದು ಹೇಳುತ್ತಿರುವುದಲ್ಲ, ಅದನ್ನು ಸರಿಯಾದ ರೀತಿಯಲ್ಲಿ ಬಳಸಬೇಕು. ಇಂದಿನ ತಂತ್ರಜ್ಞಾನ, ವಿಜ್ಞಾನ ಬಹಳ ಮುಂದುವರಿದಿದೆ. ಇದನ್ನು ಸದುಪಯೋಗಪಡಿಸಿಕೊಂಡಲ್ಲಿ ನಾವು ಅತ್ಯುತ್ತಮ ಸ್ಥಾನಕ್ಕೆ ಏರಬಹುದು. ಇದರಿಂದ ಇಂದಿನ ಮಕ್ಕಳು ಹಾಗೂ ಪೋಷಕರೂ ಎಚ್ಚೆತ್ತುಕೊಳ್ಳಬೇಕು. "ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು" ಎಂಬ ಮಾತಿದೆ. ಅಂತೆಯೇ ಈ ಸಮಾಜದಲ್ಲಿನ ಪಿಡಿಗುಗಳನ್ನು ಯಾವುದಾದರೊಂದು ದಾರಿಯಲ್ಲಿ ನಾವೆಲ್ಲರೂ ಒಟ್ಟಾಗಿ ಸೇರಿ ಒದ್ದೋಡಿಸಬಹುದು.

ಮಾಡುವ ಛಲವೊಂದಿದ್ದರೆ ಏನನ್ನೂ ಸಾಧಿಸಬಹುದು. ಮೊದಲು ಸುಸಂಸ್ಕೃತರಾಗೋಣ. ನಮ್ಮನ್ನು ನಾವು ಸರಿಪಡಿಸಿಕೊಳ್ಳೋಣ. ಈ ಸಮಾಜದ ಪ್ರತಿಯೊಂದು ಪ್ರಜೆಯೂ ಇಂತಹ ಮನಸ್ಸು ಮಾಡಬೇಕು. ಹಣದ ವ್ಯಾಮೋಹವನ್ನು ಬಿಟ್ಟು ಇತರರೊಡನೆ ಪ್ರೀತಿ, ಸೌಹಾರ್ದ, ನಂಬಿಕೆಯಿಂದ ಜೀವನ ನಡೆಸೋಣ. ಜಾತಿ–ಧರ್ಮಗಳ ಭೇದಭಾವ ಮರೆತು ಎಲ್ಲರೂ ಭಾರತೀಯರು ಎಂದು ಈ ಸಮಾಜದ ಏಳ್ಗೆಗಾಗಿ ದುಡಿದು, ಸಮಾಜದ ಸ್ವಾಸ್ಥತೆಗಾಗಿ ಶ್ರಮ ಪಡಬೇಕು. ಆಗ ಮಾತ್ರ ಈಗಿನ ಸಮಾಜದಿಂದ ಮುಕ್ತರಾಗಿ ರಾಮರಾಜ್ಯ ಕಾಣಬಹುದು. ಇದಕ್ಕಾಗಿ ನಾವೆಲ್ಲರೂ ಒಂದಾಗಿ ಶ್ರಮಪಡಬೇಕು.

ಸಕೃತ್ಕಂದುಕಪಾತೇನ ನೋತ್ಪತತ್ಯಾರ್ಯಃ ಪತನ್ನಪಿ ।
ತಥಾ ತ್ವನಾರ್ಯಃ ಪತತಿ ಮ್ರುತ್ಪಿಂಡಪತನಂ ಯಥಾ ॥

ಒಳ್ಳೆಯ ವ್ಯಕ್ತಿಯು ಒಂದು ಬಾರಿ ಬಿದ್ದರೂ ಪುನಃ ಮೇಲೆದ್ದು ಬರುತ್ತಾನೆ. ಆದರೆ ಕೆಟ್ಟ ವ್ಯಕ್ತಿ ಮಾತ್ರ ಮಣ್ಣಿನ ಹೆಂಟೆ ಬೀಳುವಂತೆ ಬಿದ್ದುಬಿಡುತ್ತನೆ. ಪುನಃ ಮೇಲೆ ಬರುವ ಪ್ರಶ್ನೆಯೇ ಇಲ್ಲ.

ಮೂಢ ನಂಬಿಕೆಗಳು

– ಕೃತಿಕಾ
ದ್ವಿತೀಯ ಬಿ.ಎಸ್ಸಿ.

ಇತ್ತೀಚಿನ ಸಮಾಜದಲ್ಲಿ ಮೂಢ ನಂಬಿಕೆಗಳು ಹೆಚ್ಚಾಗುತ್ತಿರುವುದು ವಿಶೇಷ ಏಕೆಂದರೆ ಅಕ್ಷರಸ್ಥ ಜನರು ಈ ಮೂಢನಂಬಿಕೆಗಳನ್ನು ನಂಬುವಂತಹ ಸ್ಥಿತಿ ಈ ಸಮಾಜದಲ್ಲಿ ನಿರ್ಮಾಣವಾಗಿದೆ. ಜನರು ಕೆಲವು ಮೂಢನಂಬಿಕೆಗಳನ್ನು ನಂಬುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ದಾರಿಯಲ್ಲಿ ಒಬ್ಬ ವ್ಯಕ್ತಿ ಹೋಗುತ್ತಿರಬೇಕಾದರೆ ಒಂದು ಬೆಕ್ಕು ಅಡ್ಡ ಬಂದರೆ ನಾವು ಪುನಃ ಹಿಂದೆ ಬರಬೇಕು, ಹಾಗೆಯೇ ಹಲ್ಲಿ ಮೈ ಮೇಲೆ ಬಿದ್ದಾಗ ನಾವು ಪುನಃ ಸ್ನಾನ ಮಾಡಬೇಕು. ಇದು ಯಾವುದೋ ಒಂದು ಅಪಶಕುನದ ಸಂಕೇತ ಎಂದು ಭಾವಿಸುತ್ತಿದ್ದರು.

ಮೂಢನಂಬಿಕೆಯಿಂದ ಹಿಂದಿನ ಕಾಲದಲ್ಲಿ ಮಹಿಳೆಯರು ವಿದ್ಯೆಯನ್ನು ಪಡೆಯಲೇ ಇಲ್ಲ. ಅವರು ಮನೆಯಲ್ಲಿ ಮನೆಗೆಲಸ ಮಾಡಿಕೊಂಡೇ ತಮ್ಮ ಜೀವನ ಸಾಗಿಸಬೇಕು ಎಂದು ಪುರುಷರು ಅನೇಕ ಕಟ್ಟುನಿಟ್ಟು ಕ್ರಮಗಳನ್ನು ಹಾಕಿದ್ದರು. ಆದ್ದರಿಂದ ಹಿಂದಿನ ಕಾಲದಲ್ಲಿ ಜನರು ಅನಕ್ಷರಸ್ಥರಾಗಿಯೇ ಉಳಿದಿದ್ದರು. ಹಾಗೆಯೇ ಎಲ್ಲಾ ದೇವರುಗಳ ಬಗ್ಗೆ ನಂಬಿದ್ದರು. ಇದಕ್ಕೋಸ್ಕರ ಅನೇಕ ಜ್ಯೋತಿಷ್ಯರ ಬಳಿಗೆ ಹೋಗಿ ಅವರ ಮಾತುಗಳನ್ನು ಕೂಡ ನಂಬುತ್ತಿದ್ದರು.

ಮೂಢನಂಬಿಕೆಗಳಿಂದ ಅನೇಕ ಜನರು ಇನ್ನೂ ಮೂಢರಾಗಿಯೇ ಉಳಿದಿದ್ದಾರೆ. ಪ್ರತಿಯೊಂದು ವಿಷಯದಲ್ಲಿ ಈ ಮೂಢನಂಬಿಕೆಗಳನ್ನು ಅಳವಡಿಸುತ್ತಿದ್ದರು. ಹಿಂದಿನ ಕಾಲದಲ್ಲಿ ಜನರು ದೆವ್ವ, ದೇವರು ಹೀಗೆ ಎಲ್ಲಾ ವಿಷಯಗಳನ್ನು ನಂಬುತ್ತಿದ್ದರು. ಮನೆಯಲ್ಲಿ ಏನೇ ತೊಂದರೆ ಆದರೂ ಕೂಡ ಅದು ದೆವ್ವದಿಂದ, ದೇವರಿಂದ ಎಂದು ನಂಬುತ್ತಿದ್ದರು. ಒಂಟಿ ಸೀನಿದಾಗ ಏನೋ ಅಪಶಕುನವಾಗುತ್ತದೆ. ಇದರಿಂದ ಮುಂದಿನ ಕೆಲಸಕ್ಕೆ ತೊಂದರೆ ಉಂಟಾಗುತ್ತದೆ. ಹೀಗೆ ಅನೇಕ ವಿಷಯಗಳನ್ನು ನಂಬುತ್ತಿದ್ದರು. ಹಾಗೆ ದಾರಿಯಲ್ಲಿ ಹೋಗುವಾಗ ಹಾವು ಎದುರಿಗಡೆ ಬಂದರೆ ಅಪಶಕುನ ಎಂದು ಭಾವಿಸುತ್ತಿದ್ದರು. ಹಲ್ಲಿ ಕೂಗುವುದು, ಕೆಲವು ಪಕ್ಷಿಗಳು ಕೂಗುವುದು ಅಪಕುನ ಎಂದು ಭಾವಿಸುತ್ತಿದ್ದರು. ಹೀಗೆ ಅನೇಕ ವಿಷಯಗಳನ್ನು ನಂಬುತ್ತಿದ್ದರು.

ಈ ಮೂಢನಂಬಿಕೆಗಳು ಅಲ್ಲಿಯೇ ಕೊನೆಯಾಗದೆ ಅದು ಮುಂದುವರಿಯುತ್ತಾ ಬಂದಿವೆ. ಇಂದಿನ ಕಾಲದಲ್ಲಿಯೂ ಕೂಡ ಮೂಢನಂಬಿಕೆಗಳನ್ನು ನಂಬುವಂತಹ ಪರಿಸ್ಥಿತಿಗಳು ನಿರ್ಮಾಣವಾಗುತ್ತಿದೆ.

ಸಕಾರಾತ್ಮಕ ಚಿಂತನೆ

– ಶೋಭಿತಾ
ದ್ವಿತೀಯ ಬಿ.ಕಾಂ.

ಸಕಾರಾತ್ಮಕ ಚಿಂತನೆ ಎಂಬುದು ಮನುಷ್ಯನಲ್ಲಿ ಇರಬೇಕಾದ ಅತ್ಯಂತ ಅಮೂಲ್ಯವಾದ ಗುಣ. ನಮ್ಮಲ್ಲಿ ಸಕಾರಾತ್ಮಕ ಚಿಂತನೆ ಇದ್ದಲ್ಲಿ ನಕಾರಾತ್ಮಕ ಚಿಂತನೆಗಳು ನಮ್ಮಿಂದ ದೂರವಿರುತ್ತದೆ. ನಮ್ಮೆಲ್ಲರ ಚಿಂತನೆಗಳು ಸಕಾರಾತ್ಮಕವಾಗಿದ್ದಲ್ಲಿ, ಜೀವನವೆಂಬುದು ಸಂತಸ, ಆತ್ಮತೃಪ್ತಿಯ ಗೂಡಾಗುತ್ತದೆ. ಈ ವಿಷಯವು ನನ್ನ ಮನಸ್ಸಿನಲ್ಲಿ ಬಂದಾಗ ಒಂದು ಕಥೆಯು ನೆನಪಿಗೆ ಬಂದಿತು.

ಒಂದು ದಿವಸ ತರಗತಿಯಲ್ಲಿ ಪ್ರಾಧ್ಯಾಪಕರು ಪರೀಕ್ಷೆ ಮಾಡುತ್ತಾರೆಂದು ಹೇಳಿದ್ದರು. ಎಲ್ಲಾ ವಿದ್ಯಾರ್ಥಿಗಳು ಚೆನ್ನಾಗಿ ತಮಗಾದ ಪಾಠವನ್ನು ಓದಿಕೊಂಡು ಬಂದರು. ಆದರೆ ಪ್ರಾಧ್ಯಾಪಕರು ಒಂದು ಖಾಲಿ ಪ್ರಶ್ನೆಪತ್ರಿಕೆಯಲ್ಲಿ ಒಂದು ಚಿಕ್ಕ ಕಪ್ಪು ಚುಕ್ಕೆಯನ್ನು ನೀಡಿದರು. ಹಾಗೂ ಆ ಹಾಳೆಯ ಬಗ್ಗೆ ವಾಕ್ಯಗಳನ್ನು ಬರೆಯಲು ಹೇಳಿದರು. ಎಲ್ಲರೂ ತಲೆಕೆಡಿಸಿಕೊಂಡು ಬರೆದರು. ಪ್ರಾಧ್ಯಾಪಕರು ಎಲ್ಲರ ಉತ್ತರ ಪತ್ರಿಕೆಗಳನ್ನು ತೆಗೆದುಕೊಂಡು ಓದಿದಾಗ ವಿದ್ಯಾರ್ಥಿಗಳೆಲ್ಲರೂ 'ಹಾಳೆಯ ಮುಂಭಾಗದಲ್ಲಿ ಒಂದು ಚುಕ್ಕಿಯಿದೆ. ಆ ಚುಕ್ಕಿಯು ಕಪ್ಪು ಬಣ್ಣದ್ದಾಗಿದೆ. ಅದು ಒಂದು ಸಣ್ಣ ಚುಕ್ಕೆಯಾಗಿದೆ' ಎಂದು ಬರೆದಿದ್ದರು. ಆಗ ಅಧ್ಯಾಪಕರು, 'ನಾನು ಈ ಪರೀಕ್ಷೆಯನ್ನು ನಡೆಸಲು ಕಾರಣವೇನೆಂದರೆ ನಿಮ್ಮ ಯೋಚನಾಲಹರಿಯನ್ನು ತಿಳಿಯಲು. ನೀವೆಲ್ಲರೂ ಕಪ್ಪು ಚುಕ್ಕೆಯ ಬಗ್ಗೆ ಬರೆದಿದ್ದೀರಿ ಹೊರತು ಯಾರೂ ವಿಶಾಲವಾದ ಆ ಬಿಳಿ ಹಾಳೆಯ ಬಗ್ಗೆ ಬರೆಯಲಿಲ್ಲ. ಜೀವನವೂ ಹಾಗೆಯೇ ಮಕ್ಕಳೇ, ಪ್ರತಿಯೊಬ್ಬನೂ ತನ್ನ ಬದುಕಿನಲ್ಲಿ ಆಗಿಹೋದ ಕಪ್ಪುಚುಕ್ಕೆಯ ಬಗೆಗೇ ಯೋಚಿಸುತ್ತಾನೆಯೇ ಹೊರತು ಆತನಲ್ಲಿರುವ ಸ್ವಚ್ಛವಾದ ಗುಣಗಳನ್ನೋ, ಅಥವ ಘಟನೆಗಳನ್ನು ಯೋಚಿಸುವುದಿಲ್ಲ' ಎಂದು ವಿದ್ಯಾರ್ಥಿಗಳಿಗೆ ಯಾವಾಗಲೂ ನಾವು ಸಕಾರಾತ್ಮಕವಾಗಿ ಚಿಂತಿಸಬೇಕು, ನಕಾರಾತ್ಮಕ ಚಿಂತನೆ ಎಂಬುದು ಬದುಕಿನ ಅಳಿವಿಗೆ ಕಾರಣವಾಗುತ್ತದೆ ಎಂಬ ಸಂದೇಶವನ್ನು ನೀಡಿದರು.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಒಂದು ಸಂದೇಶವನ್ನು ನೀಡಿದ್ದಾನೆ. ಅದೇನೆಂದರೆ 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂದು ಅದರಂತೆಯೇ ನಾವು ಫಲಾಪೇಕ್ಷೆಯನ್ನು ಬಯಸದೆ ನಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಬೇಕು. ಆದ್ದರಿಂದ ನಾವು ಜೀವನದಲ್ಲಿರುವ ಕಪ್ಪುಚುಕ್ಕೆಗಳ ಬಗ್ಗೆ ಚಿಂತಿಸದೆ ನಮ್ಮ ಬದುಕನ್ನು ಹಸನಾಗಿಸಬೇಕು ಹಾಗೂ ಸಕಾರಾತ್ಮಕವಾಗಿ ಯೋಚಿಸುತ್ತಾ ಬದುಕಿನ ಅಮೂಲ್ಯ ಕ್ಷಣಗಳನ್ನು ಸಂಪೂರ್ಣವಾಗಿ ಅನುಭವಿಸಬೇಕು.

ತಾಯಿ ಮತ್ತು ನಾವು

– ಜೇಷ್ಮಾ
ಪ್ರಥಮ ಬಿ.ಕಾಂ. 'ಬಿ'

ತಾಯಿ – ಈ ಶಬ್ದವೇ ಒಂದು ಅದಮ್ಯ ಚೇತನ. ಪ್ರತಿಯೊಬ್ಬ ವ್ಯಕ್ತಿಗೆ ಅವನ ತಾಯಿ ಎಂದರೆ ಪ್ರೀತಿ ಮಮತೆ ವಾತ್ಸಲ್ಯದ ಭಂಡಾರವಾಗಿದ್ದಾಳೆ. ತಾಯಿ ಎಲ್ಲರ ಜೀವನದಲ್ಲಿ ಬಹುಮಹತ್ತರವಾದ ಪಾತ್ರ ವಹಿಸುತ್ತಾಳೆ. ಪ್ರತಿಯೊಬ್ಬನು ಹುಟ್ಟುತ್ತಲೇ ನೋಡುವುದು ಅವನ ತಾಯಿಯನ್ನೇ. ಹುಟ್ಟಿದ ಮಗುವಿಗೆ ತಂದೆಯನ್ನು ಪರಿಚಯಿಸುವವಳು ಕೂಡಾ ತಾಯಿಯೇ. ಮಗುವಿಗೆ ಎಲ್ಲರನ್ನು ಪರಿಚಯಿಸುವ, ಮಾತನಾಡುವ ಕಲಿಸುವ ತಾಯಿಯೇ ಮೊದಲ ಗುರು. ತಾಯಿ–ಮಗು ಸಂಬಂಧವು ಈ ಜಗತ್ತಿಗೆ ಎಲ್ಲ ಸಂಬಂಧಗಳಿಗಿಂತ ಬಹಳ ಅಮೂಲ್ಯವಾದುದಾಗಿದೆ. ಸ್ತ್ರೀ ಜೀವನದ ಎಲ್ಲ ಪಾತ್ರಗಳಿಗಿಂತ ತಾಯಿ ಪಾತ್ರವು ಅದ್ಭುತವಾದುದು. ತನ್ನೆದೆಯ ಅಮೃತವನ್ನು ಕುಡಿಸಿ, ಮಗುವಿನ ಮಂದಹಾಸದಲ್ಲಿ ತನ್ನೆಲ್ಲಾ ನೋವನ್ನು ಮರೆತು, ಮಗು ಗಂಡಾಗಲಿ, ಹೆಣ್ಣಾಗಲಿ ಅದಕ್ಕೆ ತನ್ನ ಪ್ರೀತಿ ವಾತ್ಸಲ್ಯವನ್ನು ಧಾರೆ ಎರೆದು, ಅದರ ಬೆಳವಣಿಗೆಯಲ್ಲಿ ತನ್ನ ಸುಖವನ್ನು ಕಾಣುತ್ತಾಳೆ.

ತಾಯಿ ಎಂಬ ಪದಕ್ಕೆ ಎಲ್ಲಾ ಭಾಷೆಗಳಲ್ಲಿ ಬಹು ಸುಂದರವಾದ ಹೆಸರುಗಳಾಗಿವೆ. ಅಮ್ಮ, ಅವ್ವ, ತಾಯಿ, ಮಾ, ಮಮ್ಮಿ, ಇತ್ಯಾದಿ ಹೆಸರುಗಳನ್ನು ನಾವು ಬಳಸುತ್ತೇವೆ. ಒಟ್ಟಿನಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ತಾಯಿಯ ಸ್ಥಾನ ಬಹು ದೊಡ್ಡದು. ತಾಯಿಯ ಋಣವನ್ನು ಎಷ್ಟು ತೀರಿಸಿದರೂ ಕಡಿಮೆಯೇ. ಏಕೆಂದರೆ ಮಾಂಸದ ಮುದ್ದೆಯಾಗಿ ಈ ಭೂಮಿಗೆ ಬಂದ ನಮ್ಮನ್ನು ಎದೆಗವಚಿಕೊಂಡು ಬೆಚ್ಚನೆಯ ಹಿತವನ್ನು ನೀಡಿ, ಚಳಿಗಾಳಿಯಿಂದ ರಕ್ಷಿಸಿ ಪಾಲನೆ ಪೋಷಣೆ ಮಾಡಿ ಬೆಳೆಸುತ್ತಾಳೆ. ತನಗೆ ಏನಾದರೂ ಸರಿ, ತನ್ನ ಮಗುವಿಗೆ ಮಾತ್ರ ಏನೂ ಆಗಬಾರದು. ತಾನು ಹಸಿದಿದ್ದರೂ ಸರಿ, ಮೊದಲು ಮಗುವಿಗೆ ಉಣಿಸಬೇಕೆಂದು ಹಾತೊರೆಯುವ ತಾಯಿಯ ಮಮತೆಗೆ ಬೆಲೆ ಕಟ್ಟಲಾದೀತೇ? ಈ ತಾಯಿಯ ಮಮತೆಯೆಂಬುದನ್ನು ಈ ಸೃಷ್ಟಿಯ ಸಕಲ ಪ್ರಾಣಿ, ಪಕ್ಷಿಗಳಲ್ಲೂ ನಾವು ಕಾಣಬಹುದಾಗಿದೆ.

ಆದರೆ ಇಂದು ಎಷ್ಟೋ ಜನರು ಮದುವೆಯಾದ ನಂತರ ತ್ಯಾಗಮಯಿ ತಾಯಿಯನ್ನೇ ಮರೆತು ಬಿಡುತ್ತಾರೆ. ಸಾಲದಕ್ಕೆ ಈಗ ತಾಯಿಯ ದಿನ ಎಂದು ವರ್ಷಕ್ಕೊಮ್ಮೆ ಆಚರಿಸುತ್ತಾರೆ. ಅಂದರೆ ತಾಯಿಯನ್ನು ಜ್ಞಾಪಿಸಿಕೊಳ್ಳಲು ಒಂದು ದಿನಾಚರಣೆ ಬೇಕೆ? ಮತ್ತು ಕೊಡುವ ಮಡದಿ ಬಂದ ನಂತರ ತುತ್ತು ನೀಡಿದ ತಾಯಿಯನ್ನೇ ವೃದ್ಧಾಶ್ರಮಕ್ಕೆ ತಳ್ಳುವ ನಾವು ಮಾನವರೇ? ವಿದ್ಯೆ ಬುದ್ಧಿ ನೀಡಿ ಮಕ್ಕಳಿಗಾಗಿ ತನ್ನ ಜೀವನವನ್ನೇ ಗಂಧದಂತೆ ತೇಯ್ದು ತಾಯಿಗೆ ಕೆಲವು ಜನರು ನೀಡುವ ಉಡುಗೊರೆಯೇ ವೃದ್ಧಾಶ್ರಮ. ದೇವಗ್ರಂಥಗಳಲ್ಲಿ ತಾಯಿಗೆ ನೀಡಿದ ಸ್ಥಾನವೇನು ಎಂಬುವುದನ್ನೇ ನಾವು ಮರೆತು ಬಿಟ್ಟಿದ್ದೇವೆ. ಮದುವೆಯಾಗುವವರೆಗೆ ಅವಳ ಕೈಯ ತುತ್ತು ತಿಂದು ಅಮ್ಮ ಅಮ್ಮ ಎಂದು ಓಡಾಡುತ್ತಿದ್ದ ನಾವು ಮದುವಯಾದ ನಂತರ ತಾಯಿಗೆ ಮುದುಕಿ ಎಂಬ ಪಟ್ಟ ನೀಡಿ ಅವಳನ್ನು ಮೂಲೆ ಗುಂಪು ಮಾಡಿಬಿಡುತ್ತೇವೆ.

ಇಂತಹ ಮಮತೆ ಕರುಣೆಯ ಭಂಡಾರವಾದ ತಾಯಿಗೆ ವೃದ್ಧಾಶ್ರಮ ಎಂಬ ಉಡುಗೊರೆ ತನ್ನ ಮಕ್ಕಳಿಂದ ದೊರೆಯಬಾರದೆಂದು ನಾವೆಲ್ಲ ಆಶಿಸೋಣವೇ?

ಭಾರತ ಮತ್ತು ಯುವಜನತೆ

– ಶ್ರೀವಾಸುಕಿ ಕೆ. ಎಸ್.
ದ್ವಿತೀಯ ಬಿ.ಕಾಂ.

ಭಾರತ ಒಂದು ಶ್ರೇಷ್ಠ ರಾಷ್ಟ್ರ. ತನ್ನ ಅದಮ್ಯ ಪರಂಪರೆಯಿಂದಾಗಿ ವಿಶ್ವದಾದ್ಯಂತ ಗೌರವಮಾನ್ಯವಾದ ರಾಷ್ಟ್ರ. ವಿಶ್ವದ ಹಲವಾರು ದೇಶಗಳಲ್ಲಿ ಓದಿಸಲ್ಪಟ್ಟ ಜನರು ಆಶ್ರಯ ಅರಿಸಿ ಬಂದಾಗ ನೆರವಿಗೆ ಬಂದ ಏಕೈಕ ರಾಷ್ಟ್ರ. ಇಡೀ ವಿಶ್ವವನ್ನೇ ಗೆದ್ದ ಅಲೆಕ್ಸಾಂಡರನ್ನೂ ಸೋಲಿಸಿದ ಪೂರೂರವರಂತಹ ವೀರರಿಂದ ಕೂಡಿದ ರಾಷ್ಟ್ರ. ಸ್ವಾಮಿ ವಿವೇಕಾನಂದರಂತಹ ಮುತ್ತುಗಳನ್ನು ಹೊಂದಿದ ರಾಷ್ಟ್ರ ಭಾರತ. ತನ್ನ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 60ರಷ್ಟು ಯುವಕರನ್ನು ಹೊಂದಿದ ರಾಷ್ಟ್ರ ಭಾರತ. ಇಂತಹ ಶ್ರೇಷ್ಠ ಇತಿಹಾಸ ಪರಂಪರೆ ಹೊಂದಿದ ರಾಷ್ಟ್ರದ ಯುವಕರು ಹೇಗಿರಬೇಕಿತ್ತು? ಯೋಚಿಸಿ.....ಆದರೆ ವಾಸ್ತವ ಹೇಗಿದೆ ಎಂದರೆ, ಆ ಶೇಕಡ 60 ರಷ್ಟು ಯುವಕರಲ್ಲಿ ನಿಜವಾದ ಯುವಕರು ಎಷ್ಟಿದ್ದಾರೆ ಎಂದು ಸರ್ವೆ ಮಾಡುವ ಪರಿಸ್ಥಿತಿ ಇದೆ. ಏಕೆಂದರೆ ಆ ಶೇಕಡ 60ರಲ್ಲಿ ಅರ್ಧಕ್ಕಿಂತ ಹೆಚ್ಚು ಯುವಕರು ಸತ್ತಂತೆಯೇ ಇರುತ್ತಾರೆ. ಅಂದರೆ ಕ್ರಿಯಾಶೀಲತೆ ಎನ್ನುವ ಪದ ಆಸುಪಾಸಿನಲ್ಲಿಯೂ ಕಾಣಸಿಗಲಿಕ್ಕಿಲ್ಲ. ಅದರೊಟ್ಟಿಗೆ ನಮ್ಮ ಶಿಕ್ಷಣ ವ್ಯವಸ್ಥೆಯೂ ಕೂಡ ಹದೆಗೆಟ್ಟು ಹೋಗಿದೆ. ಈಗಿನ ಶಿಕ್ಷಣ ವ್ಯವಸ್ಥೆ ಹೇಗಿದೆ ಎಂದರೆ ನಮ್ಮನ್ನು ಕೂಲಿ ಮಾಡಲು ಏನು ಅರ್ಹತೆ ಬೇಕೋ ಅಷ್ಟಕ್ಕೆ ನಮ್ಮನ್ನು ತಯಾರು ಮಾಡುತ್ತಿದ್ದಾರೆ. ನೀವೇ ಯೋಚಿಸಿ ಹೌದಾ ಅಲ್ವಾ ಅಂತ. ಆ ಕೂಲಿ ಶಿಕ್ಷಣ ಬಿಟ್ಟರೆ ಒಂದಿಂಚು ಸ್ವಂತ ಯೋಚನೆ ಇಲ್ಲ. ಉದಾ: ಕರವಸ್ತ್ರದ ಉಪಯೋಗ ಕೇಳಿದ್ರೆ, ನಮ್ಮ ಯುವಕರು ಒರೆಸಿಕೊಳ್ಳುವ ಉತ್ತರ ಬಿಟ್ಟರೆ ಬೇರೆ ಉತ್ತರ ಕೊಡುವುದು ಕಷ್ಟಸಾಧ್ಯ. ಅರ್ಥಾತ್ ನಮ್ಮ

ಚಿಂತನಾ ಶಕ್ತಿ ನಶಿಸಿ ಹೋಗಿದೆ ಎಂದರ್ಥ. ಸ್ವಾಮಿ ವಿವೇಕಾನಂದರು ಹೇಳ್ತಾರೆ, 'ಆಶಿಷ್ಠೋ ಧೃಢಿಷ್ಠೋ ಬಲಿಷ್ಠೋ ಭವೇತ್.' ಅಂದರೆ ಕಬ್ಬಿಣದ ಮಾಂಸಖಂಡ, ಉಕ್ಕಿನ ನರಮಂಡಲ, ಮಿಂಚಿನ ಮೇಧಾಶಕ್ತಿಯನ್ನು ಹೊಂದಿದ ಯುವಕರನ್ನು ಕೊಡಿ ಎಂದು. ಹಾಗೆ ಮುಂದುವರೆಸಿ ಹೇಳ್ತಾರೆ, ನೂರೇ ನೂರು ಇಂತಹ ತರುಣರನ್ನು ಕೊಡಿ, ಅವರು ಎದ್ದು ಬಂದರೆ ಸಿಂಹ ಬಂದ ಹಾಗೆ ಇರಬೇಕು. ಹೊರತು ನಾಯಿ ನರಿಗಳಂತೆ ಅಲ್ಲ ಎಂದು. ಅಂದರೆ ಸಿಂಹಗಳಂತಹ ಯುವಕರಿಂದ ಮಾತ್ರ ರಾಷ್ಟ್ರ ನಿರ್ಮಾಣಗಳಂತಹ ಉತ್ಕೃಷ್ಟ ಕಾರ್ಯ ನಿರ್ವಹಿಸಲು ಸಾಧ್ಯ. ಆದರೆ ಈ ಎಲ್ಲಾ ಅಪವಾದಗಳ ಹೊರತಾಗಿ ಈಗಿನ ಪರಿಸ್ಥಿತಿಯನ್ನು ಅವಲೋಕಿಸಿದರೆ ಬಹಳಷ್ಟು ಯುವಕರು ನಾಯಿನರಿಗಳಿಗಿಂತ ಕೆಳಮಟ್ಟಕ್ಕಿಳಿದಿದ್ದಾರೆ. ಅಂದರೆ ತಮ್ಮ ಮನೋಬಲ ಮತ್ತು ಆತ್ಮಬಲಗಳನ್ನೇ ಶೂನ್ಯವಾಗಿಸಿಕೊಂಡು ಬದುಕಿದ್ದರೂ ಸತ್ತಂತೆ ಬದುಕುತ್ತಿರುತ್ತಾರೆ. ತಮ್ಮ ತನವನ್ನು ಬಿಟ್ಟು ಬೇರೆಡೆಗೆ ಸಾಗುತ್ತಿದ್ದಾರೆ. ಈಗಿನ ನಮ್ಮ, ಅಂದರೆ, ಯುವಜನತೆ ಹೀಗಿರಲು ನಾವೇ ಕಾರಣೀಭೂತರು. ಹಾಗೆಯೇ ಮುಂದೆ ಏನಾಗುತ್ತೇವೆಯೋ ಅದಕ್ಕೂ ನಾವೇ ಕಾರಣ. ನಾಯಿನರಿಗಳಂತೆ ನೂರು ವರ್ಷ ಬದುಕುವುದಕ್ಕಿಂತ ಸಿಂಹಗಳಂತೆ ಒಂದು ವರ್ಷ ಬದುಕಿದರೆ ಅದೇಶ್ರೇಷ್ಠ ಆದ್ದರಿಂದ ನಮ್ಮನ್ನು ನಾವೇ ತಿದ್ದಿಕೊಳ್ಳೋಣ. ಈ ರಾಷ್ಟ್ರದ ಪರಂಪರೆ, ಗೌರವವನ್ನು ಉಳಿಸಿ ಬೆಳೆಸುವಂತಹ ಕಾರ್ಯಗಳನ್ನು ಕೈಗೊಳ್ಳೋಣ.

ನಮ್ಮೊಂದಿಗೆ ನೀವೂ ಕೈಜೋಡಿಸುತ್ತೀರಲ್ಲವೇ?

ಕನ್ನಡಿ ಒರೆಸುವುದರಲ್ಲಿ ಜೀವನ ಕಳೆದ ಧೂಳು ನನ್ನ ಮುಖದ ಮೇಲೆಯೇ ಇತ್ತು.....

– ದಿನೇಶ್ ಜಿ. ಹೆಬ್ಬಾರ್
ಪ್ರಥಮ ಬಿ.ಎಸ್ಸಿ.

